ಮಂಗಳೂರು ಶುಕ್ರವಾರ, 20 ಫೆಬ್ರವರಿ 2026 ಸಂಪುಟ 47, ಸಂಚಿಕೆ 323, ಪುಟಗಳು 14+6 hosadigantha.com
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily ₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಎಐ ನಮ್ಮ ಕೈಯಲ್ಲಿ ಇರಲಿ ▸ಪುಟ ೩

ರಾಜಕಾರಣದಲ್ಲಿ 50 ವರ್ಷ ಪೂರೈಸಿದ ಯಡಿಯೂರಪ್ಪಗೆ ಸನ್ಮಾನ

ಬಿಎಸ್‌ವೈ ಸುವರ್ಣ ಸಂಭ್ರಮ

“ ಬಿ.ಎಸ್. ಯಡಿಯೂರಪ್ಪ ಕರ್ನಾಟಕ ಬಿಜೆಪಿಯ ಭೀಷ್ಮ, ಪಕ್ಷ ಮುನ್ನಡೆಸುವ ವಿಚಾರದಲ್ಲಿ ಕರ್ನಾಟಕದಲ್ಲಿ ಯಡಿಯೂರಪ್ಪ ಅವರು ದೊಡ್ಡ ಕೊಡುಗೆ ನೀಡಿದ್ದಾರೆ. ಅವರ ಭದ್ರ ಅಡಿಪಾಯದಲ್ಲಿ ಬಿಜೆಪಿ ಇಷ್ಟೊಂದು ಬೆಳೆದುನಿಂತಿದೆ.

■ ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ಸಚಿವ



ಬೆಂಗಳೂರು: ಸಕ್ರಿಯ ರಾಜಕಾರಣದಲ್ಲಿ 50 ವರ್ಷಗಳ ಯಾನ ಪೂರೈಸಿದ ಮಾಜಿ ಮುಖ್ಯಮಂತ್ರಿ, ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ಅರಮನೆ ಮೈದಾನದಲ್ಲಿ ಗುರುವಾರ ನಡೆದ ರಾಜ್ಯ ಕಾರ್ಯಕಾರಿಣಿಯಲ್ಲಿ ಗೌರವಿಸಲಾಯಿತು.

ಗೌರವ ಸ್ವೀಕರಿಸಿ ಮಾತನಾಡಿದ ಯಡಿಯೂರಪ್ಪ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ವಂತ ಶಕ್ತಿಯ ಮೇಲೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಹಾಗೂ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ಸಂಕಲ್ಪ ಮಾಡಬೇಕಿದೆ. ಈ ಭ್ರಷ್ಟ ಸರ್ಕಾರವನ್ನು ಕಿತ್ತೊಗೆದು ಅಭಿವೃದ್ಧಿಪರ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು. ರಾಜ್ಯದಲ್ಲಿ ಅಂತಹ ವಾತಾವರಣ ಇದೆ. ಇದಕ್ಕೆ ನೀವೆಲ್ಲರೂ ಸಿದ್ಧರಿದ್ದೀರಿ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಾಧನೆ ಮಾತಾಡಬೇಕು, ಮಾತಾಡುವುದೇ ಸಾಧನೆಯಾಗಬಾರದು. ನಮಗೆ ಪ್ರಧಾನಿ ಮೋದಿ ಅವರು ಆದರ್ಶ, ಅವರ ನಾಯಕತ್ವದಲ್ಲಿ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಯಾವುದೇ ಕಷ್ಟವಿಲ್ಲ. ಮುಂದಿನ ಐದಾರು ವರ್ಷಗಳ ಕಾಲ ರಾಜ್ಯಾದ್ಯಂತ ಓಡಾಡುವುದಕ್ಕೆ ಸಿದ್ಧನಿದ್ದೇನೆ. ಈ ಸರ್ಕಾರ ಎಸ್‌ಸಿ-ಎಸ್‌ಟಿ ಸಮುದಾಯದ ಜನರಿಗೆ ಸ್ಪಂದಿಸುತ್ತಿಲ್ಲ, ಯಾವುದೇ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ. ಎಲ್ಲರೂ ಸೇರಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಬೇಕಿದೆ ಎಂದು ಹೇಳಿದರು. ➡ಪುಟ ೪

ಕರ್ನಾಟಕದಲ್ಲಿ ಬಿಜೆಪಿ ಉತ್ತುಂಗಕ್ಕೆ ಏರಿಸಿದವರು ಬಿ.ಎಸ್.ಯಡಿಯೂರಪ್ಪ

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಮಾತನಾಡಿ, ಯಡಿಯೂರಪ್ಪ ಅವರು ನಮ್ಮ ಪಕ್ಷವನ್ನು ಕರ್ನಾಟಕದಲ್ಲಿ ಉತ್ತುಂಗಕ್ಕೆ ಏರಿಸಿದವರು. ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಪ್ರಥಮ ರಾಜ್ಯವಾಗಿ ಬಿಜೆಪಿ ಆಡಳಿತಕ್ಕೆ ತಂದವರು. ದೂರದೃಷ್ಟಿ ಚಿಂತನೆಯ ಮನೋಭಾವ, ಸಮರ್ಪಕ ಯೋಚನೆ, ಯೋಜನೆ ಅನುಷ್ಠಾನದ ತಾಕತ್ತು, ಜೀವನದ ಒಳಿತು ಕೆಡುಕುಗಳನ್ನು ಸ್ಥಿತಪ್ರಜ್ಞನಂತೆ ಕರ್ತವ್ಯ ನಿರ್ವಹಿಸಿದ ಸಮರ್ಥ ರಾಜಕೀಯ ನಾಯಕ ಯಡಿಯೂರಪ್ಪ ಎಂದು ವಿಶ್ಲೇಷಿಸಿದರು. ಬೂಕನಕೆರೆಯಿಂದ ಹೊರಟು ಶಿಕಾರಿಪುರಕ್ಕೆ ಹೋಗಿ ಅಲ್ಲಿಂದ ಬೆಂಗಳೂರು, ದಿಲ್ಲಿಯವರೆಗೆ ತೆರಳುವ ಎಲ್ಲ ಸಂದರ್ಭದಲ್ಲೂ ದೊಡ್ಡ ಸಂಘರ್ಷವನ್ನು ಅವರು ಎದುರಿಸಿದ್ದರು. ಹೋರಾಟ, ಸಂಘಟನೆಯ ಅದ್ಭುತ ಹಾದಿಯಲ್ಲಿ ಅವರು ನಡೆದು ಬಂದಿದ್ದಾರೆ. ಕಾರ್ಯಕರ್ತರು, ಮುಖಂಡರ ಬೆನ್ನು ತಟ್ಟಿ ಅವರು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದುದನ್ನು ಉದಾಹರಣೆಗಳೊಂದಿಗೆ ತಿಳಿಸಿದರು.

ಕಿರು ಸುದ್ದಿ

ಬಿಜೆಪಿ ಪಕ್ಷದ ಶಿಸ್ತು ಉಲ್ಲಂಘನೆ: ಉಚ್ಚಾಟನೆ

• **ಮಂಗಳೂರು:** ಕೋಟೆಕಾರು ಪಟ್ಟಣ ಪಂಚಾಯತ್ ಬಿಜೆಪಿ ಸದಸ್ಯ ಸುಜೀತ್ ಮಾಡೂರು ಅವರನ್ನು ಪಕ್ಷದಿಂದ 6 ವರ್ಷಗಳ ಕಾಲ ಉಚ್ಚಾಟಿಸಲಾಗಿದೆ. ಬಿಜೆಪಿ ಚಿಹ್ನೆಯಿಂದ ಸ್ಪರ್ಧಿಸಿ ಕೋಟೆಕಾರು ಪಟ್ಟಣ ಪಂಚಾಯತ್ ಸದಸ್ಯರಾಗಿರುವ ಸುಜೀತ್ ಮಾಡೂರು ಅವರು ಪಾರ್ಟಿಯ ವಿರುದ್ಧ ಚಟುವಟಿಕೆ ಮಾಡಿ ಪಕ್ಷದ ಶಿಸ್ತು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಪಾರ್ಟಿಯಿಂದ ತಕ್ಷಣಕ್ಕೆ ಜಾರಿಗೆ ಬರುವಂತೆ ಉಚ್ಚಾಟಿಸಲಾಗಿದೆ ಎಂದು ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ತಿಳಿಸಿದ್ದಾರೆ.

ಫಿಲ್ಮ್ ಮ್ಯೂಸಿಕ್ ಆನ್‌ಲೈನ್ ಗಾಯನ ಸ್ಪರ್ಧೆಯಲ್ಲಿ ನಿನಾದ ದ್ವಿತೀಯ

• **ಮಂಗಳೂರು:** ವೀಣಾಧರಿ ಇನ್‌ಸ್ಟಿಟ್ಯೂಟ್ ಆಫ್ ಮ್ಯೂಸಿಕ್ ಮತ್ತು ಫೈನ್ ಆರ್ಟ್ಸ್ ಕಲಾ ಸೌರಭ 2025–26ನೇ ಸಾಲಿನ ಅಂತಾರಾಷ್ಟ್ರೀಯ ಮಟ್ಟದ ಫಿಲ್ಮ್ ಮ್ಯೂಸಿಕ್ ಆನ್‌ಲೈನ್ ಗಾಯನ ಸ್ಪರ್ಧೆಯಲ್ಲಿ ನಿನಾದ ಕೆ. ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾಳೆ. ಈಕೆ ಅತ್ತಾವರದ ರಾಜೇಶ್ ಕೆ. ಮತ್ತು ಡಾ. ಮಮತಾಕುಮಾರಿ ದಂಪತಿಯ ಪುತ್ರಿ. ಕೊಡಿಯಾಲಬೈಲ್‌ನ ಶಾರದಾ ವಿದ್ಯಾಲಯದ 9ನೇ ತರಗತಿಯ ವಿದ್ಯಾರ್ಥಿನಿ.



ರಾಜ್ಯ ಮಾಸ್ಟರ್ಸ್ ಬ್ಯಾಡ್ಮಿಂಟನ್: ರಾಷ್ಟ್ರಮಟ್ಟಕ್ಕೆ ಅರ್ಹತೆ



• **ಕುಂದಾಪುರ:** ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಶನ್ ಇದರ ವತಿಯಿಂದ ಬೆಂಗಳೂರಿನ ವಸಂತ ನಗರದ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಶನ್ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ಫೆ.14 ಮತ್ತು 15ರಂದು ನಡೆದ ಕರ್ನಾಟಕ ರಾಜ್ಯ ಮಾಸ್ಟರ್ಸ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಪುರುಷರ ಡಬಲ್ಸ್ ವಿಭಾಗದಲ್ಲಿ ಗೌತಮ್ ಶೆಟ್ಟಿ ಮತ್ತು ಡಾ. ಸತೀಶಚಂದ್ರ ಜೋಡಿ ಉತ್ತಮ ಪ್ರದರ್ಶನ ನೀಡಿ ಬೆಳ್ಳಿ ಪದಕವನ್ನು ತಮ್ಮದಾಗಿಸಿಕೊಂಡರು. ಈ ಸಾಧನೆಯೊಂದಿಗೆ ಅವರು ಮಾರ್ಚ್ ತಿಂಗಳಲ್ಲಿ ಗೋವಾದಲ್ಲಿ ನಡೆಯಲಿರುವ ರಾಷ್ಟ್ರೀಯ ಮಾಸ್ಟರ್ಸ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದಿದ್ದಾರೆ. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧಿಕಾರಿಗಳು ವಿಜೇತರಿಗೆ ಅಭಿನಂದನೆ ಸಲ್ಲಿಸಿ, ಮುಂದಿನ ರಾಷ್ಟ್ರಮಟ್ಟದ ಸ್ಪರ್ಧೆಗೆ ಶುಭಾಶಯಗಳನ್ನು ಕೋರಿದರು.

ಚಾತಮ್ಮೆ ಕೊಳದಲ್ಲಿ ಮೀನು ಉದ್ಯಾನವನ ನಿರ್ಮಿಸುವ ಯೋಜನೆ ಸಮಾರಂಭ



• **ಕಾಸರಗೋಡು:** ನೀಲೇಶ್ವರ ನಗರಸಭೆಯ 2025–26ನೇ ವಾರ್ಷಿಕ ಯೋಜನೆಯ ಭಾಗವಾಗಿರುವ ಮುಟ್ಟತ್ತೂರು ಮೀಂತೋಟ್ಟಂ ಯೋಜನೆಯ ಅಂಗವಾಗಿ ಭಂಡಾರಪ್ಪುರದ ಚಾತಮ್ಮೆ ಕೊಳದಲ್ಲಿ ಮೀನಿನ ಮರಿಗಳನ್ನು ಸಾಕುವ ಗುರಿಯೊಂದಿಗೆ ಉದ್ಯಾನವನ ನಿರ್ಮಿಸಲಾಗಿದೆ. ಈ ಯೋಜನೆಯಂತೆ ಕೊಳದಲ್ಲಿ ಮೀನು ಮರಿಗಳನ್ನು ಅಳವಡಿಸುವ ಸಮಾರಂಭವನ್ನು ನಗರಸಭಾ ಅಧ್ಯಕ್ಷ ಪಿ.ಪಿ.ಮುಹಮ್ಮದ್ ರಫಿ ಬುಧವಾರ ಉದ್ಘಾಟಿಸಿದರು. ಪ್ರದೇಶದ ನೀರಿನ ಸಂಪನ್ಮೂಲಗಳನ್ನು ಬಳಸಿಕೊಂಡು ಮೀನು ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ಈ ಯೋಜನೆಯ ಮೂಲಕ ಜನರಿಗೆ ಗುಣಮಟ್ಟದ ಮೀನುಗಳನ್ನು ಒದಗಿಸುವುದು ನಗರಸಭೆಯ ಗುರಿಯಾಗಿದೆ. ವಾರ್ಡ್ ಕೌನ್ಸಿಲರ್ ಪಿ.ಯು.ರಾಮಕೃಷ್ಣನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೆ.ವಿ.ವೇಣುಗೋಪಾಲ್, ವಿಜೇಶ್ ಮತ್ತು ಇತರರು ಹಾಜರಿದ್ದರು. ನೀಲೇಶ್ವರ ನಗರಸಭೆಯ ಜನರ ಕಲ್ಯಾಣಕ್ಕಾಗಿ ಮತ್ತು ಮುಂದಿನ ದಿನಗಳಲ್ಲಿ ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವ ಹೆಚ್ಚಿನ ಯೋಜನೆಗಳನ್ನು ನಗರಸಭಾ ಆಡಳಿತವು ಜಾರಿಗೊಳಿಸಲಿದೆ ಎಂದು ಅಧ್ಯಕ್ಷರು ಮಾಹಿತಿ ನೀಡಿದರು.



ಮಂಗಳೂರಿನ ಮಾತಾ ಅಮೃತಾನಂದಮಯಿ ಮಠದ ಶ್ರೀ ಬ್ರಹ್ಮಸ್ಥಾನಂ ಕ್ಷೇತ್ರದಲ್ಲಿ ಪ್ರತಿಷ್ಠಾ ವರ್ಧಂತಿ ಉತ್ಸವವನ್ನು ಮಠದ ಮುಖ್ಯಸ್ಥರಾದ ಸ್ವಾಮಿನಿ ಮಂಗಳಾಮೃತ ಪ್ರಾಣ, ಅವರ ಉಪಸ್ಥಿತಿಯಲ್ಲಿ ಹಾಗೂ ಪ್ರಧಾನ ಅರ್ಚಕ ಬ್ರಹ್ಮಚಾರಿ ರತೀಶ್ ಅವರ ನೇತೃತ್ವದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸೇವಾಸಮಿತಿಯ ಅಧ್ಯಕ್ಷ ಸುರೇಶ್ ಅಮಿನ್, ಗೌರವಾಧ್ಯಕ್ಷ ಡಾ. ಜೀವರಾಜ್ ಸೊರಕೆ, ಡಾ. ವೈ. ಸನತ್ ಹೆಗ್ಡೆ, ಡಾ. ವಸಂತ ಕುಮಾರ್ ಪೆರ್ಲ, ಉಡುಪಿ ಸಮಿತಿಯ ಅಧ್ಯಕ್ಷ ಯೋಗೀಶ್ ಕೆ., ಕುಂದಾಪುರದ ಕಲ್ಪನಾ ಭಾಸ್ಕರ್ ಹಾಗೂ ವಿವಿಧ ಸಮಿತಿಗಳ ಪದಾಧಿಕಾರಿಗಳು ಮತ್ತು ಅಮ್ಮನ ಭಕ್ತರು ಉಪಸ್ಥಿತರಿದ್ದರು.

ಹಿರಿಯ ವೇಷಧಾರಿ ಲಕ್ಷ್ಮಣ ಶೆಟ್ಟಿ ತಾರೆಮಾರ್ ಆಯ್ಕೆ
ಇಂದು ಬೊಂಡಾಲ ಪ್ರಶಸ್ತಿ ಪ್ರದಾನ

• **ಮಂಗಳೂರು:** ಅರ್ಥಧಾರಿ, ಶಿಕ್ಷಕ ಮತ್ತು ಶಂಭೂರು ಗ್ರಾಮದ ಪಟೇಲ ದಿ.ಬೊಂಡಾಲ ಜನಾರ್ದನ ಶೆಟ್ಟಿ ಮತ್ತು ಅವರ ಪುತ್ರ ಹವ್ಯಾಸಿ ಯಕ್ಷಗಾನ ಕಲಾವಿದ, ನಿವೃತ್ತ ಭೂಮಾಪನ ಅಧಿಕಾರಿ ದಿ.ಬೊಂಡಾಲ ರಾಮಣ್ಣ ಶೆಟ್ಟಿ ಅವರ ಹೆಸರಿನಲ್ಲಿ ನೀಡಲಾಗುವ ಬೊಂಡಾಲ ಪ್ರಶಸ್ತಿಗೆ ಕಟೀಲು ಮೇಳದ ಹಿರಿಯ ವೇಷಧಾರಿ ಲಕ್ಷ್ಮಣ ಶೆಟ್ಟಿ ತಾರೆಮಾರ್ ಆಯ್ಕೆಯಾಗಿದ್ದಾರೆ. ಬೊಂಡಾಲ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಕಟೀಲು ಮೇಳದಲ್ಲಿ ಸೇವೆಸಲ್ಲಿಸಿದ ಕಲಾವಿದರಿಗಾಗಿಯೇ ಉದ್ಯಮಿ ಬೊಂಡಾಲ ಸಚ್ಚಿದಾನಂದ ಶೆಟ್ಟಿ ಅವರು ನೀಡುತ್ತಿರುವ ವಾರ್ಷಿಕ ಪ್ರಶಸ್ತಿಗೆ ಯಕ್ಷಗಾನ ಅಕಾಡೆಮಿ ಮಾಜಿ ಸದಸ್ಯ ಭಾಸ್ಕರ ರೈ ಕುಕ್ಕುವಳ್ಳಿ ಸಂಚಾಲಕರಾಗಿರುವ ಆಯ್ಕೆ ಸಮಿತಿ 2025–26ನೇ ಸಾಲಿಗೆ ಲಕ್ಷ್ಮಣ ಶೆಟ್ಟಿ ಅವರ ಹೆಸರನ್ನು ಶಿಫಾರಸು ಮಾಡಿದೆ.



ಲಕ್ಷ್ಮಣ ಶೆಟ್ಟಿ ತಾರೆಮಾರ್

ತೆಂಕುತಿಟ್ಟು ಯಕ್ಷಗಾನ ರಂಗದ ಪ್ರತಿಭಾನ್ವಿತ ಕಲಾವಿದರಾದ ಲಕ್ಷ್ಮಣ ಶೆಟ್ಟಿ ಅವರು ಬೆಳ್ತಂಗಡಿ ತಾಲೂಕಿನ ತಾರೆಮಾರಿನಲ್ಲಿ ಕೋಚಪ್ಪ ಶೆಟ್ಟಿ ಮತ್ತು ತುಂಗಮ್ಮ ದಂಪತಿಯ ಪುತ್ರ. ಐದನೇ ತರಗತಿಗೆ ಓದು ನಿಲ್ಲಿಸಿ ಯಕ್ಷಗಾನದತ್ತ ಆಕರ್ಷಿತರಾದ ಅವರು ಪ್ರಸಿದ್ಧ ಕಲಾವಿದ ಸುಣ್ಣಂಬಳ ವಿಶ್ವೇಶ್ವರ ಭಟ್ ಅವರಿಂದ ಯಕ್ಷಗಾನದ ಹೆಜ್ಜೆಗಾರಿಕೆಯನ್ನು ಕಲಿತರು. ಕಟೀಲು ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿಗೆ ಪಾದಾರ್ಪಣೆ ಮಾಡಿ ಪ್ರಸ್ತುತ ಕಟೀಲು ಐದನೇ ಮೇಳದ ಕಲಾವಿದರಾಗಿದ್ದಾರೆ.

ಬಂಟ್ವಾಳ ತಾಲೂಕು ಶಂಭೂರು ಗ್ರಾಮದ ಬೊಂಡಾಲದಲ್ಲಿ ಬೊಂಡಾಲ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಫೆ. 20 ರಂದು ಕಟೀಲು ಮೇಳದ 'ಶ್ರೀದೇವಿ ಮಹಾತ್ಮೆ' ಯಕ್ಷಗಾನ ನಡೆಯಲಿದ್ದು, ಗಣ್ಯರ ಸಮ್ಮುಖ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಬೊಂಡಾಲ ಸಚ್ಚಿದಾನಂದ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರಶಸ್ತಿ 10,000 ರೂ. ನಗದು ಒಳಗೊಂಡಿದೆ.

ದಿಲ್ಲಿಯ ಗಣರಾಜ್ಯೋತ್ಸವದಲ್ಲಿ ಶಾರದಾ ವಿದ್ಯಾಲಯದ ವಿದ್ಯಾರ್ಥಿ
ಉಜ್ವಲ ಭವಿಷ್ಯಕ್ಕೆ ಎನ್‌ಸಿಸಿ

• **ಮಂಗಳೂರು:** ಹೊಸದಿಲ್ಲಿಯಲ್ಲಿ ನಡೆದ ಈ ಬಾರಿಯ ಗಣರಾಜ್ಯೋತ್ಸವ ಶಿಬಿರದಲ್ಲಿ (ಆರ್.ಡಿ.ಸಿ) ಪಾಲ್ಗೊಂಡ ಮಂಗಳೂರಿನ ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದ ವಾಯುದಳ ಎನ್.ಸಿ.ಸಿ. ಘಟಕದ ವಿದ್ಯಾರ್ಥಿ ಕೆಡೆಟ್ ಕಾರ್ಪೊರಲ್ ನಂದನ ರಾಮ ಲಷ್ಕರಿಗೆ ಶಾರದಾ ವಿದ್ಯಾ ಸಂಸ್ಥೆ ಹಾಗೂ ಶಾರದಾ ವಿದ್ಯಾಲಯದ ಎನ್.ಸಿ.ಸಿ. ವಾಯುದಳ ಘಟಕದ ವತಿಯಿಂದ ವಿದ್ಯಾಲಯದ ಸಭಾಂಗಣದಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದ ಮುಖ್ಯಅತಿಥಿ ಎನ್.ಸಿ.ಸಿ.ಯ ಕಮಾಂಡಿಂಗ್ ಆಫೀಸರ್ ವಿಂಗ್ ಕಮಾಂಡರ್ ಪ್ರವೀಣ್ ಕಾವೇರಿಯಪ್ಪ ಮಾತನಾಡಿ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ, ಶಿಸ್ತುಬದ್ಧ ಜೀವನಕ್ರಮಕ್ಕೆ ಮತ್ತು ಉಜ್ವಲ ಭವಿಷ್ಯ ನಿರ್ಮಾಣಕ್ಕೆ ಎನ್.ಸಿ.ಸಿ.ಯ ಚಟುವಟಿಕೆಗಳು ಸಹಕಾರಿಯಾಗಿದೆ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕರು ಮಾತನಾಡಿ, ತಮ್ಮ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳ ಹಾಗೂ ಎನ್.ಸಿ.ಸಿ. ವಿದ್ಯಾರ್ಥಿಗಳ ಶಿಸ್ತುಬದ್ಧತೆ ಹಾಗೂ ಸಾಧನೆ ವಿದ್ಯಾಲಯಕ್ಕೆ ಕೀರ್ತಿ ತಂದಿದೆ. ನಂದನ್ ರಾಮ್ ಲಷ್ಕರಿಯ ಪರಿಶ್ರಮ, ಸಾಧನೆ ಇತರರಿಗೂ ಪ್ರೇರಣೆಯಾಗಿದೆ ಎಂದರು.

ನಂದನ್‌ರಾಮ್ ಲಷ್ಕರಿಯ ತಂದೆ ಡಾ। ಹರ್ಷಪ್ರಸಾದ ಲಷ್ಕರಿ ಮತ್ತು ಸಹೋದರ ನಿನಾದಕೃಷ್ಣ ಲಷ್ಕರಿಯವರು ಈ ಸಂದರ್ಭದಲ್ಲಿ ಮಾತನಾಡಿ, ಶಾರದಾ ವಿದ್ಯಾಲಯದಲ್ಲಿ ದೊರೆತ ಶಿಕ್ಷಣ, ತರಬೇತಿ ಹಾಗೂ ಪ್ರೋತ್ಸಾಹವೇ ನಂದನ್‌ರಾಮನ ಸಾಧನೆಗೆ ಕಾರಣವೆಂಬುದಾಗಿ ನುಡಿದು ಕೃತಜ್ಞತೆ ಸಲ್ಲಿಸಿದರು.



ಸನ್ಮಾನ, ಅಭಿನಂದನೆ

ಇದೇ ಸಂದರ್ಭ ಎನ್.ಸಿ.ಸಿ. ವತಿಯಿಂದ ನಡೆದ ಪ್ರಿ–ಐ.ಜಿ.ಸಿ., ಆರ್.ಡಿ.ಸಿ. ಶಿಬಿರಗಳಲ್ಲಿ ಪಾಲ್ಗೊಂಡ ವಿದ್ಯಾಲಯದ ಪ್ರತಿಭಾನ್ವಿತ ಎನ್.ಸಿ.ಸಿ. ಕೆಡೆಟ್‌ಗಳನ್ನು ವೇದಿಕೆಯಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.

ಬಳಿಕ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ನಂದನರಾಮ ಲಷ್ಕರಿಗೆ ಶಾಲು ಹೊದಿಸಿ, ಸ್ಮರಣಿಕೆಯೊಂದಿಗೆ ಸನ್ಮಾನಿಸಲಾಯಿತು. ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ನಂದನರಾಮ ಲಷ್ಕರಿಯು ಆರ್.ಡಿ.ಸಿ. ಶಿಬಿರದಲ್ಲಿ ಭಾಗವಹಿಸುವ ತಯಾರಿಯ ಹಾದಿಯಲ್ಲಿ ತಾನು ಎದುರಿಸಿದ ಸವಾಲುಗಳು, ಅಡೆತಡೆಗಳು ಮತ್ತು ತನ್ನ ಪರಿಶ್ರಮದ ಬಗ್ಗೆ ಉಲ್ಲೇಖಿಸುತ್ತಾ ತನ್ನ ಸಾಧನೆಗೆ ಸಹಕರಿಸಿದ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಗುರುವೃಂದ, ಎನ್‌ಸಿಸಿ ಅಧಿಕಾರಿ ವೃಂದದವರ ಪ್ರೋತ್ಸಾಹಗಳನ್ನು ನೆನಪಿಸಿಕೊಂಡು ಜ್ಯೂನಿಯರ್ ಕೆಡೆಟ್‌ಗಳಿಗೆ ಪ್ರೇರಣಾದಾಯಕ ಮಾತುಗಳನ್ನು ಹೇಳಿದರು.

ಶಾರದಾ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಪ್ರದೀಪಕುಮಾರ ಕಲ್ಕೂರ, ವಿಶ್ವಸ್ಥರಾದ ಸುಧಾಕರ ರಾವ್ ಪೇಜಾವರ, ಸಂಸ್ಥೆಯ ಆಡಳಿತ ನಿರ್ದೇಶಕ ಸಮೀರ್ ಪುರಾಣಿಕ್, ವಿದ್ಯಾಲಯದ ಪ್ರಾಂಶುಪಾಲ ದಯಾನಂದ ಕಟೀಲ್, ಉಪ–ಪ್ರಾಂಶುಪಾಲರಾದ ಲಕ್ಷ್ಮೀಉಡುಪ, ಕೆ. ಲಕ್ಷ್ಮೀ ಪೈ, ನಂದನರಾಮ ಲಷ್ಕರಿಯ ಅಜ್ಜ ಎಸ್. ಜಿ. ಕೃಷ್ಣ ಲಷ್ಕರಿ ಮತ್ತು ತಾಯಿ ಶೋಭಾ ಪ್ರಸಾದ್, ವಿದ್ಯಾಲಯದ ಎನ್.ಸಿ.ಸಿ ಸೆಕೆಂಡ್ ಆಫೀಸರ್ ರತ್ನಾಕರ ಸಮಾರಂಭದ ವೇದಿಕೆಯಲ್ಲಿದ್ದರು. ವಿದ್ಯಾಲಯದ ಎನ್.ಸಿ.ಸಿ. ಕೆಡೆಟ್‌ಗಳು ಸಾಂದರ್ಭಿಕ ದೇಶಭಕ್ತಿಗೀತೆಯನ್ನು ಹಾಡಿದರು.

ಕೆಡೆಟ್ ಜನ್ಯ ಭಂಡಾರಿ ನಂದನರಾಮ ಲಷ್ಕರಿಯ ಸಾಧನೆಗಳ ಬಗ್ಗೆ ಪರಿಚಯವಿತ್ತಳು. ಕೆಡೆಟ್ ಅಭಯ ಎಸ್. ರಾವ್ ಸ್ವಾಗತಿಸಿದಳು. ಕೆಡೆಟ್ ರೋಚಿಕಾ ಎ.ಬಿ. ಧನ್ಯವಾದ ಸಮರ್ಪಣೆಗೈದಳು. ಕೆಡೆಟ್ ಸಾನ್ವಿ ಡಿ.ಕೆ. ಕಾರ್ಯಕ್ರಮ ನಿರ್ವಹಣೆಗೈದಳು.

ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ
ಪ್ರತಿ ಲೀಟರ್‌ಗೆ ರೂ.1 ಹೆಚ್ಚಳ

• **ಮಂಗಳೂರು:** ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಹಾಲು ಹಾಕುವ ಸದಸ್ಯರಿಗೆ ಒಕ್ಕೂಟದ ವತಿಯಿಂದ ಹೆಚ್ಚುವರಿ ಪ್ರೋತ್ಸಾಹಧನವನ್ನು ಫೆ. 21 ರಿಂದ ಮೇ 31ರವರೆಗೆ ಅನ್ವಯವಾಗುವಂತೆ ಪ್ರತಿ ಲೀಟರ್ ಹಾಲಿಗೆ ರೂ.1ರಂತೆ ನೀಡಲು ಒಕ್ಕೂಟದ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.



ಇದರಿಂದಾಗಿ ಒಕ್ಕೂಟವು ದಿನವಹಿ ಅಂದಾಜು ರೂ.4.1 ಲಕ್ಷ ಹೆಚ್ಚುವರಿ ಮೊತ್ತವನ್ನು ಹಾಗೂ ಈ ಅವಧಿಗೆ ಒಟ್ಟು ಅಂದಾಜು ರೂ.4 ಕೋಟಿ ವಿಶೇಷ ಪ್ರೋತ್ಸಾಹಧನವನ್ನು ರೈತರಿಗೆ ಪಾವತಿಸಲಿದೆ.

ಉಭಯ ಜಿಲ್ಲೆಗಳಲ್ಲಿ ಹಸಿರು ಹುಲ್ಲು, ಒಣಹುಲ್ಲುಕೊರತೆಯಿಂದಮತ್ತುಸೈಲೇಜ್‌ಗೆ ಅಧಿಕ ಬೆಲೆ ನೀಡಬೇಕಾಗಿರುವುದರಿಂದ ಹೈನುಗಾರರಿಗೆ ಪಶು ಸಂಗೋಪನೆ ನಡೆಸಲು ಸಹಾಯಕವಾಗಲು ಮತ್ತು ಆರ್ಥಿಕವಾಗಿ ಸಹಕರಿಸಲು ಹಾಲು ಉತ್ಪಾದಕರಿಗೆ ವಿಶೇಷ ಪ್ರೋತ್ಸಾಹ ನೀಡಲು ನಿರ್ಧರಿಸಲಾಗಿದೆ. ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ಪ್ರಸ್ತುತ ಒಕ್ಕೂಟವು ನೀಡುತ್ತಿರುವ ರೂ.1.50 ಪ್ರೋತ್ಸಾಹಧನ ಸೇರಿ ಗುಣಮಟ್ಟದ ದರ ರೂ. 40.76ಕ್ಕೆ ಮತ್ತೆ ರೂ.1 ಪ್ರೋತ್ಸಾಹಧನ ಹೆಚ್ಚಿಸಿ ಹಾಲಿನ ಪರಿಷ್ಕೃತ ಗುಣಮಟ್ಟದ ದರ ರೂ. 41.76 ನೀಡಲಾಗುವುದು.



ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಹಾಕುವ ಸದಸ್ಯ ರೈತರು ಸದರಿ ಪ್ರೋತ್ಸಾಹಧನ ಹೆಚ್ಚಳದ ಪ್ರಯೋಜನ ಪಡೆದು ಮತ್ತು ಉತ್ತಮ ಗುಣಮಟ್ಟದ ಅಧಿಕ ಹಾಲನ್ನು ಉತ್ಪಾದಿಸಿ ತಮ್ಮ ಸಂಘಕ್ಕೆ ನೀಡುವಂತೆ ದಕ್ಷಿಣ ಕನ್ನಡ ಹಾಲು ಒಕ್ಕೂಟದ ಅಧ್ಯಕ್ಷ ರವಿರಾಜ್ ಹೆಗ್ಡೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಅನುಷಾ ಹೆಗ್ಡೆಯಿಂದ ಕಲ್ಲುರ್ಟಿ ದೈವಕ್ಕೆ ಕೋಲ

• **ಪುತ್ತೂರು:** ಪುತ್ತೂರಿನವರಾದ ಬಹುಭಾಷಾ ಕಿರುತೆರೆ ನಟಿ ಅನುಷಾ ಹೆಗ್ಡೆ ಅವರು ತಮ್ಮ ಮನೆಯಲ್ಲಿ ತುಳುನಾಡಿನ ಪ್ರಮುಖ ದೈವ ಎಂದು ಗುರುತಿಸಿಕೊಂಡಿರುವ ಕಲ್ಲುರ್ಟಿ ದೈವದ ನೇಮೋತ್ಸವದಲ್ಲಿ ಭಾಗವಹಿಸಿದರು.

ಪುತ್ತೂರು ನಗರದ ಉರ್ಲಾಂಡಿ ನಿವಾಸಿ ಸ್ವರ್ಣಲತಾ ಮತ್ತು ಉಮೇಶ್ ಹೆಗ್ಡೆ ದಂಪತಿ ಪುತ್ರಿಯಾಗಿರುವ ಅನುಷಾ ಇಂದು ಕಿರುತೆರೆಯಲ್ಲಿ ಮಿಂಚುತ್ತಿರುವ ಅಸಾಧಾರಣ ಪ್ರತಿಭೆ. ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ಬಳಿಕ ತನ್ನ ನೆಚ್ಚಿನ ನಟನೆಯ ಅವಕಾಶವನ್ನು ಹುಡುಕಿಕೊಂಡು ರಾಜಧಾನಿ ಬೆಂಗಳೂರು ಕಡೆಗೆ ಪಯಣ ಬೆಳೆಸಿದ್ದ ಅನುಷಾ ತನ್ನ ಪ್ರತಿಭೆಯಿಂದ ತನ್ನದೇ ಆದ ಅಭಿಮಾನಿ ಬಳಗವನ್ನು ಹೊಂದಿದ್ದಾರೆ.

ಮುಟ್ಟಿದ್ದೆಲ್ಲವೂ ಚಿನ್ನ ಎನ್ನುವ ಮಾತಿನಂತೆ ಅಭಿನಯಿಸಿದ ಎಲ್ಲಾ ಧಾರಾವಾಹಿಗಳು ಫುಲ್ ಹಿಟ್ ಆಗಿ ಮಿಂಚುತ್ತಿರುವ ಈ ಯುವ ಪ್ರತಿಭೆ ಇಂದು ತಮಿಳು, ತೆಲುಗು, ಕನ್ನಡ ಕಿರುತೆರೆಯ ಬಹು ಬೇಡಿಕೆಯ ನಟಿ. ರಾಧಾ ರಮಣ, ಉದಯದಲ್ಲಿ ಅನು ಪಲ್ಲವಿ, ಚೊಕ್ಕ ತಂಗಮ್ಮ ಹೀಗೆ ಹತ್ತಕ್ಕೂ ಮಿಕ್ಕಿದ ಪ್ರಾಜೆಕ್ಟ್‌ಗಳಲ್ಲಿ ವರ್ಕ್ ಮಾಡಿರುವ ಅನುಷಾಳಿಗೆ ಇನ್ನಷ್ಟು ಆಫರ್‌ಗಳು ಬರುತ್ತಿದ್ದರೂ, ತನ್ನ ಬ್ಯುಸಿ ಷೆಡ್ಯೂಲ್ ಕಾರಣಕ್ಕಾಗಿ ಹೊಸ ಪ್ರಾಜೆಕ್ಟ್‌ಗಳನ್ನು ಸದ್ಯಕ್ಕೆ ಸಹಿ ಹಾಕದಿರಲು ನಿರ್ಧರಿಸಿದ್ದಾರೆ.



ತುಳುನಾಡಿನ ಅಪ್ಪಟ ಹುಡುಗಿಯಾಗಿರುವ ಅನುಷಾ ತುಳುನಾಡಿನ ಪ್ರಮುಖ ಆರಾಧನೆಯಾದ ದೈವಾರಾಧನೆಯಲ್ಲಿ ನಿರಂತರವಾಗಿ ಭಾಗಿಯಾಗುತ್ತಾರೆ. ತನ್ನ ಕಲಾ ಜೀವನದಲ್ಲಿ ಇಷ್ಟೊಂದು ಸಾಧನೆ ತೋರಲು ಕಾರಣವಾದ ದೈವಗಳಿಗೆ ಕೋಲ ಸೇವೆ ಕೊಡಬೇಕು ಎನ್ನುವ ಆಸೆ ಇಟ್ಟುಕೊಂಡಿದ್ದ ಅನುಷಾ ಈ ಬಾರಿ ಕಲ್ಲುರ್ಟಿ ದೈವಕ್ಕೆ ಕೋಲ ಸೇವೆ ಕೊಡುವ ಮೂಲಕ ತನ್ನ ಹರಕೆಯನ್ನು ತೀರಿಸಿಕೊಂಡಿದ್ದಾರೆ. ತುಳು ಚಿತ್ರರಂಗದಿಂದಲೂ ಸಾಕಷ್ಟು ಆಫರ್‌ಗಳು ಬಂದಿದ್ದರೂ ಸಮಯಾವಕಾಶದ ಕೊರತೆಯಿಂದಾಗಿ ನಟನೆ ಸಾಧ್ಯವಾಗಿಲ್ಲ ಎನ್ನುವ ಬೇಸರವೂ ಅನುಷಾರಲ್ಲಿದೆ.

ಫೆ.22ರಂದು 'ಸ್ಫೂರ್ತಿದಾಯಿನೀ ಕಥಾಮಾಲಾ' ಲೋಕಾರ್ಪಣೆ

• **ಮಂಗಳೂರು:** ವಾಗೀಶ್ವರೀ ಪ್ರಕಾಶನ ಅಧ್ಯಕ್ಷ ಡಾ. ವಾಗೀಶ್ವರೀ ಶಿವರಾಮ ಅವರು ರಚಿಸಿರುವ 'ಸ್ಫೂರ್ತಿದಾಯಿನೀ ಕಥಾಮಾಲಾ' ಕೃತಿ ಕೊಡಿಯಾಲ್‌ಬೈಲ್‌ನ ಬೆಸೆಂಟ್ ವಿದ್ಯಾ ಸಂಸ್ಥೆಯ ಸಭಾಂಗಣದಲ್ಲಿ ಫೆ.22ರಂದು ಸಂಜೆ 4.30ಕ್ಕೆ ಲೋಕಾರ್ಪಣೆಗೊಳ್ಳಲಿದೆ. ಸಂಸ್ಕೃತ ಸುಭಾಷಿತಗಳ ಜೊತೆಗೆ ಜೀವನಸ್ಫೂರ್ತಿಯ ಅಪೂರ್ವ ಕಥೆಗಳಿರುವ ಈ ಕೃತಿಯನ್ನು ಮಂಗಳೂರಿನ ಕನ್ಸಲ್ಟಿಂಗ್ ಇಂಜಿನಿಯರ್ ಸುರೇಶ್ ಪೈ ಕೃತಿಯನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ನಗರದ ನೇತ್ರತಜ್ಞ ಡಾ. ಯು. ಆರ್. ಶೆಣೈ ಸಮಾರಂಭದ ಮುಖ್ಯ ಅತಿಥಿಯಾಗಿರುತ್ತಾರೆ. ವಿಶ್ರಾಂತ ಸಂಸ್ಕೃತ ಪ್ರೊಫೆಸರ್ ಡಾ. ಶಿಕಾರಿಪುರ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸದ್ಬೋಧ ಗುರುಕುಲದ ನಿರ್ದೇಶಕ ಕೃಷ್ಣದೇವ ನಾವಡ ತಿಳಿಸಿದ್ದಾರೆ.

ಆಡಳಿತ ಮೊಕ್ತೇಸರ ಮಹೇಶ್ ಠಾಕೂರ್ ಮುಂದಾಳತ್ವದಲ್ಲಿ ಕಾರ್ಯಕ್ರಮ
ಅದ್ದೂರಿಯಾಗಿ ಸಂಪನ್ನಗೊಂಡ ಶಿವಪಾಡಿ ವೈಭವ

• **ಉಡುಪಿ:** ಶ್ರೀ ಉಮಾಮಹೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಮಹೇಶ್ ಠಾಕೂರ್ ಮುಂದಾಳತ್ವದಲ್ಲಿ ಶಿವರಾತ್ರಿ ಪ್ರಯುಕ್ತ ನಡೆದ ಶಿವಪಾಡಿ ಮಹೋತ್ಸವ ಯಶಸ್ವಿಯಾಗಿ ಸಂಪನ್ನಗೊಂಡಿತು. ಮಹಾಶಿವರಾತ್ರಿಯನ್ನು ವಿಶೇಷವಾಗಿ ಆಚರಿಸಿ ಮಹೋತ್ಸವವನ್ನು ಜನಮಾನಸದಲ್ಲಿ ಅಚ್ಚಳಿಯದ ಕಾರ್ಯಕ್ರಮವಾಗಿ ರೂಪಿಸಲಾಗಿತ್ತು.

ಶಿವಪಾಡಿ ಶ್ರೀ ಉಮಾಮಹೇಶ್ವರ ದೇವಸ್ಥಾನದ ಮಹಾಶಿವರಾತ್ರಿ ಮಹೋತ್ಸವ ಅಂಗವಾಗಿ ಶ್ರೀ ಉಮಾಮಹೇಶ್ವರ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್, ಶಿವಪಾಡಿ ವೈಭವ ಆಚರಣ ಸಮಿತಿ ಆಶ್ರಯದೊಂದಿಗೆ ದೇವಸ್ಥಾನ ವಠಾರದಲ್ಲಿ ವಿವಿಧ ಕಾರ್ಯಕ್ರಮ, ಮೇಳಗಳು ನಡೆದವು. ಆಧ್ಯಾತ್ಮಿಕ, ಆರೋಗ್ಯ, ಸಾಹಿತ್ಯ, ಯಕ್ಷಗಾನ, ಆಹಾರ ಮೇಳಗಳ ಮಹಾಸಂಗಮದಲ್ಲಿ ಲಕ್ಷಕ್ಕೂ ಮೀರಿದ ಭಕ್ತರು ಪಾಲ್ಗೊಂಡು ಸಾವಿರಾರು ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು.

ದೇವಸ್ಥಾನದಲ್ಲಿ ಪೂಜಾ ವಿಧಿವಿಧಾನಗಳು, ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದರೆ, ದೇವಸ್ಥಾನದ ವಠಾರದಲ್ಲಿ ಸಾಂಪ್ರದಾಯಿಕ ವಾದ್ಯಗಳೊಂದಿಗೆ ರುಚಿಕಟ್ಟಾದ ಅನ್ನಸಂತರ್ಪಣೆ ನಡೆದಿದೆ. ಅನ್ನದಾನದಿಂದ ಏಕಕಾಲದಲ್ಲಿ ಭಗವಂತ ಮತ್ತು ಭಗವದ್ಭಕ್ತರನ್ನು ಪ್ರಸನ್ನೀಕರಿಸಬಹುದು ಎಂಬುದಕ್ಕೆ 'ಶಿವಪಾಡಿ ವೈಭವ' ಸಾಕ್ಷಿಯಾಗಿದೆ.



ಈ ಯಶಸ್ಸಿನ ಹಿಂದೆ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಆಚರಣ ಸಮಿತಿ, ಕಾರ್ಯಕರ್ತರು, ಸ್ವಯಂಸೇವಕರು ಮತ್ತು ಭಕ್ತರ ಪೂರ್ಣ ಸಹಾಯ ಸಹಕಾರ ಅಡಗಿತ್ತು. ದೇವತಾ ಕಾರ್ಯದೊಂದಿಗೆ ಆರೋಗ್ಯ, ಸಾಹಿತ್ಯ, ಯಕ್ಷಗಾನ, ಆಹಾರ ಮೇಳಗಳ ಸಾಕಾರಗೊಂಡಿರುವುದು ಕಾರ್ಯಕರ್ತರ ಅವಿರತ ಶ್ರಮದ ಫಲವಾಗಿದೆ.

ಮಿಶ್ರ ಡಬಲ್ಸ್‌ನಲ್ಲಿ ಗೌತಮ್ ಶೆಟ್ಟಿ– ಶಾಲಿನಿ ಶೆಟ್ಟಿ ಚಿನ್ನ; ರಾಷ್ಟ್ರ ಮಟ್ಟಕ್ಕೆ ಅರ್ಹತೆ

• **ಕುಂದಾಪುರ:** ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಶನ್ ಇದರ ವತಿಯಿಂದ ಬೆಂಗಳೂರಿನ ವಸಂತ ನಗರದ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಶನ್ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ಫೆ.14 ಮತ್ತು 15ರಂದು ನಡೆದ ಕರ್ನಾಟಕ ರಾಜ್ಯ ಮಾಸ್ಟರ್ಸ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಮಿಶ್ರ ಡಬಲ್ಸ್ ವಿಭಾಗದಲ್ಲಿ ಗೌತಮ್ ಶೆಟ್ಟಿ ಹಾಗೂ ಶಾಲಿನಿ ಶೆಟ್ಟಿ ಜೋಡಿ ಉತ್ತಮ ಪ್ರದರ್ಶನ ನೀಡಿ ಚಿನ್ನದ ಪದಕವನ್ನು ತಮ್ಮದಾಗಿಸಿ ಕೊಂಡರು. ಈ ಸಾಧನೆಯೊಂದಿಗೆ ಅವರು ಮಾರ್ಚ್ ತಿಂಗಳಲ್ಲಿ ಗೋವಾದಲ್ಲಿ ನಡೆಯಲಿರುವ ರಾಷ್ಟ್ರೀಯ ಮಾಸ್ಟರ್ಸ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿದ್ದಾರೆ. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್‌ನ ಅಧಿಕಾರಿಗಳು ವಿಜೇತರಿಗೆ ಅಭಿನಂದನೆ ಸಲ್ಲಿಸಿ, ರಾಷ್ಟ್ರ ಮಟ್ಟದ ಸ್ಪರ್ಧೆಗೆ ಶುಭ ಹಾರೈಸಿದರು.



ಮಂಗಳೂರು
ಶುಕ್ರವಾರ, 20 ಫೆಬ್ರವರಿ 2026
ಸಂಪುಟ 47, ಸಂಚಿಕೆ 323, ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಚಾರ್ಲ್ಸ್ ಸಹೋದರ ಆಂಡ್ರ್ಯೂ ಬಂಧನ | ೦೭
2047ಕ್ಕೆ ವಿಕಸಿತ ಭಾರತ: ಶೇಖಾವತ್ ವಿಶ್ವಾಸ | ೦೫
ರಣಜಿ ಫೈನಲ್‌ಗೆ ಕರ್ನಾಟಕ | ೧೨

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಬೇರೆಯವರ ಮನಸ್ಸನ್ನು ಅರಿತು ವರ್ತಿಸುವುದು ಒಂದು ಅದ್ಭುತ ಕಲೆ.
▲ಲೋಕೋಕ್ತಿ

ಎರಡು ಹೊತ್ತಗೆ- ಎರಡು ನಾಲಗೆ! ಏನಿದು ತಮಾಷೆ?

ಉಘೇ ವೀರ ಭೂಮಿಗೆ
• ಸಂತೋಷ್ ತಮ್ಮಯ್ಯ
• ಪುಟ ೬

ಕಿರುಸುದ್ದಿ

ಷೇರುಪೇಟೆಗೆ ಯುದ್ಧ ಭೀತಿ

• **ಮುಂಬೈ:** ಅಮೆರಿಕ ಮತ್ತು ಇರಾನ್ ನಡುವೆ ಯುದ್ಧ ನಡೆಯುವ ಸಂಭವ ಹೆಚ್ಚಾಗಿದ್ದು, ಇದರ ಪರಿಣಾಮ ಭಾರತೀಯ ಷೇರುಮಾರುಕಟ್ಟೆಗಳ ಮೇಲೂ ಬೀರಿತು. ಗುರುವಾರ ಬಿಎಸ್‌ಇ ಸೆನ್ಸೆಕ್ಸ್ 1,236.11 ಅಂಕಗಳು (ಶೇ.1.48) ಇಳಿದು 82,498.14ಕ್ಕೆ ಮುಕ್ತಾಯಗೊಂಡರೆ, ಎನ್‌ಎಸ್‌ಇ ನಿಫ್ಟಿ 365 ಅಂಕಗಳು (ಶೇ.1.41) ಕುಸಿದು 25,454.35ಕ್ಕೆ ತಲುಪಿತು.
• ಪುಟ ೭

ನಕ್ಸಲಿಸಂ ವಿರುದ್ಧ ಕಾರ್ಯಾಚರಣೆ ಯಶ

• **ಗುವಾಹಟಿ:** ನಕ್ಸಲಿಸಂ ವಿರುದ್ಧದ ಹೋರಾಟ ಕೊನೆ ಹಂತದಲ್ಲಿದ್ದು, ಗೃಹ ಸಚಿವ ಅಮಿತ್ ಶಾ ಘೋಷಿಸಿದಂತೆ ಮಾರ್ಚ್ ವೇಳೆಗೆ ದೇಶದಿಂದ ಈ ಪಿಡುಗನ್ನು ನಿರ್ಮೂಲನೆ ಮಾಡಲಾಗುವುದು ಎಂದು ಸಿಆರ್‌ಪಿಎಫ್ ಮಹಾನಿರ್ದೇಶಕ ಜಿ. ಪಿ. ಸಿಂಗ್ ಗುರುವಾರ ಹೇಳಿದ್ದಾರೆ.
• ಪುಟ ೭

ಸರ್ಕಾರಿ ಆಸ್ಪತ್ರೆಯಲ್ಲಿ ತಾಯಿ-ಮಗು ಸಾವು

• ಪುಟ ೫

ಕೃತಕ ಬುದ್ಧಿಮತ್ತೆಗಿರಲಿ ಮುಕ್ತ ಅವಕಾಶ, ಅದು ಭಾರತದ ಭವಿಷ್ಯ
ಆದರೆ, ತಂತ್ರಜ್ಞಾನ ಮಾನವ ನಿಯಂತ್ರಿತವಾಗಿರಬೇಕು: ಮೋದಿ

ಎಐ ನಮ್ಮ ಕೈಯಲ್ಲಿರಲಿ



• **ಹೊಸದಿಲ್ಲಿ:** ತಂತ್ರಜ್ಞಾನಗಳು ಮಾನವ ನಿಯಂತ್ರಿತವಾಗಿರಬೇಕು ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ಇದೇ ಹಿನ್ನೆಲೆಯಲ್ಲಿ ಮಾನವ್ ವಿಷನ್ ಅನ್ನು ಗುರುವಾರ ಅನಾವರಣಗೊಳಿಸಿದ್ದಾರೆ. ಸಾರ್ವಭೌಮತೆ ಮತ್ತು ಅಂತರ್ಗತತೆಗೆ ಪ್ರಾಧಾನ್ಯತೆಯಿರುವಂತೆ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆಯಾಗಬೇಕೆಂದು ಪ್ರಧಾನಿ ಸಲಹೆ ನೀಡಿದ್ದಾರೆ. ಕೃತಕ ಬುದ್ಧಿಮತ್ತೆಯ ಕೋಡ್‌ಗಳು ಮುಕ್ತವಾದಲ್ಲಿ ಮತ್ತು ಎಐ ಜ್ಞಾನ ಪರಸ್ಪರ ಹಂಚಿಕೆಯಾದಲ್ಲಿ ಜಗತ್ತಿಗೇ ಒಳಿತಾಗಲು ಸಾಧ್ಯವೆಂಬುದು ನನ್ನ ನಂಬಿಕೆ. ರಾಷ್ಟ್ರವು ಎಐ ಬಗ್ಗೆ ಆತಂಕಪಟ್ಟಿಲ್ಲ, ಬದಲಾಗಿ ಅದರಲ್ಲೇ ಅದೃಷ್ಟ ಮತ್ತು ನಾಳೆಯ ಭವಿಷ್ಯವನ್ನು ಮನಗಂಡಿದೆ ಎಂದು ಪ್ರಧಾನಿ ಮೋದಿ ಅರ್ಥಗರ್ಭಿತವಾಗಿ ನುಡಿದರು. ಎಐ ಇಂಪ್ಯಾಕ್ಟ್ ಸಮ್ಮಿಟ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಜನರಾಗಕೂಡದು ಎಐ ಕಚ್ಚಾವಸ್ತು: ಎಐನಿಂದ ಸಮಸ್ತರಿಗೆ ನೆಮ್ಮದಿ ಸಿಗಬೇಕು, ಸಮಸ್ತರ ಪ್ರಗತಿಯಾಗಬೇಕು. ಏಕಕಾಲಕ್ಕೆ ಜನರು ಆಧುನಿಕ ತಂತ್ರಜ್ಞಾನಗಳ ಡಾಟಾ ಪಾಯಿಂಟ್ ಅಥವಾ ಕಚ್ಚಾವಸ್ತುಗಳಾಗಕೂಡದು ಎಂದು ಮೋದಿ ಎಚ್ಚರಿಸಿದರು.

ಎಐ ಬಳಕೆಯ ರೀತಿ ಮುಖ್ಯ: ಎಐಗೆ ಮುಕ್ತಾವಕಾಶವಿರಬೇಕು ಖಂಡಿತ. ಆದರೆ ಇದರ ಹಿಡಿತ ಮಾತ್ರ ಮಾನವರ ಕೈಗಳಲ್ಲೇ ಇರಬೇಕು. ಈ ನಿಟ್ಟಿನಲ್ಲಿ ಜಿಪಿಎಸ್ ನಿದರ್ಶನವಿತ್ತ ಪ್ರಧಾನಿ ಮೋದಿ, ನೌಕಾಯಾನದ ಪರಿಕರಗಳು ನೌಕೆ ಸಾಗಬೇಕಾದ ದಿಕ್ಕಿನ ಬಗ್ಗೆ ಮಾಹಿತಿ ನೀಡಬಲ್ಲುವು.
➡ಪುಟ ೪

ಏನಿದು ಮಾನವ್ ವಿಷನ್

ಭಾರತದ ಎಐಗಾಗಿ ಪ್ರಧಾನಿ ಮೋದಿ 'M.A.N.A.V.' (ಮಾನವ್) ದೃಷ್ಟಿಕೋನವನ್ನು ಮಂಡಿಸಿದರು. 'M.A.N.A.V.' ಎಂದರೆ:

- **M-ನೈತಿಕ ಮತ್ತು ನೀತಿಬದ್ಧ ವ್ಯವಸ್ಥೆಗಳು:** ಎಐ ನೈತಿಕ ಮಾರ್ಗಸೂಚಿಗಳನ್ನು ಆಧರಿಸಿರಬೇಕು.
- **A-ಹೊಣೆಗಾರಿಕೆಯ ಆಡಳಿತ:** ಪಾರದರ್ಶಕ ನಿಯಮಗಳು ಮತ್ತು ದೃಢವಾದ ಮೇಲ್ವಿಚಾರಣೆ.
- **N-ರಾಷ್ಟ್ರೀಯ ಸಾರ್ವಭೌಮತ್ವ:** ದತ್ತಾಂಶವು ಅದರ ಹಕ್ಕುದಾರರಿಗೆ ಸೇರಿದ್ದು.
- **A -ಸುಲಭ ಲಭ್ಯತೆ ಮತ್ತು ಒಳಗೊಳ್ಳುವಿಕೆ:** ಎಐ ಏಕಸ್ವಾಮ್ಯವಾಗಬಾರದು, ಬದಲಾಗಿ ಗುಣಕವಾಗಬೇಕು.
- **V-ಮಾನ್ಯತೆ ಮತ್ತು ಕಾನೂನುಬದ್ಧತೆ:** ಎಐ ಕಾನೂನುಬದ್ಧ ಮತ್ತು ಪರಿಶೀಲಿಸುವಂತಿರಬೇಕು.

ಭಾರತದ ಮಾನವ ದೃಷ್ಟಿಕೋನವು 21ನೇ ಶತಮಾನದ ಎಐ ಚಾಲಿತ ಜಗತ್ತಿನಲ್ಲಿ ಮನುಕುಲದ ಕಲ್ಯಾಣಕ್ಕಾಗಿ ನಿರ್ಣಾಯಕ ಸೇತುವಾಗಲಿದೆ ಎಂದು ಮೋದಿ ಪ್ರತಿಪಾದಿಸಿದರು.

ಮೋದಿ ಭಾಷಣ 11 ಭಾಷೆಗೆ ಡಬ್

ಎಐ ಶೃಂಗದಲ್ಲಿ ಪ್ರಧಾನಿ ಮೋದಿಯವರ ಭಾಷಣದ ವೇಳೆ ಭಾರತದ ಕೃತಕ ಬುದ್ಧಿಮತ್ತೆ ಕ್ಷೇತ್ರದ ಸಾಧನೆಗಳು ಪ್ರದರ್ಶಿತವಾದವು. ಅವರ ಭಾಷಣ ವನ್ನು 11 ಭಾಷೆಗಳಿಗೆ ನೇರವಾಗಿ ಮಾರ್ಪಡಿಸು ವುದರ ಜತೆಗೆ ಎಐ ಆಧಾರಿತ ಸಂಜ್ಞಾ ಭಾಷೆ ಅನುವಾದವನ್ನೂ ಒದಗಿಸಲಾಯಿತು. ಭಾರತ ಮಂಟಪಂ ಸಭಾಂಗಣದಲ್ಲಿ ಮೋದಿಯವರ ಹಿಂದಿನ ದೊಡ್ಡ ಪರದೆ ಮೇಲೆ ಎಐ ಆಧಾರಿತ ಸಂಜ್ಞಾ ಭಾಷೆ ಅನುವಾದವನ್ನು ಪ್ರದರ್ಶಿಸಲಾಯಿತು. ಇದರಿಂದ ಭಾಷಣ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಮಾಡಲಾಯಿತು.
➡ಪುಟ ೪

ಸರ್ಕಾರಕ್ಕೆ ಯೋಜನಾ ಆಯೋಗ ಶಿಫಾರಸು

ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕ ಪದ್ಧತಿ ರದ್ದು



• **ಬೆಂಗಳೂರು:** ಸರ್ಕಾರಿ ಇಲಾಖೆಗಳಲ್ಲಿನ ಹೊರಗುತ್ತಿಗೆ/ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಗೊಳಿಸಿ, ಹೊರಗುತ್ತಿಗೆ ಮೂಲಕ ಮಾಡಲಾಗು ತ್ತಿರುವ ಎಲ್ಲಾ ಕೆಲಸಗಳನ್ನು ನೇರ ಪಾವತಿ ವ್ಯವಸ್ಥೆಯಲ್ಲಿ ತರಬೇಕು ಹಾಗೂ ಆ ಮೂಲಕ ಎಲ್ಲ ಕಾರ್ಮಿಕರಿಗೆ ನೇರ ವೇತನ ಪಾವತಿ ವ್ಯವಸ್ಥೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.



ಗುರುವಾರ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಯೋಗದ ವರದಿಯನ್ನು ಸಲ್ಲಿಸಿದರು. ಈ ವರದಿಯಲ್ಲಿ ಹಲವಾರು ಅಂಶಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಸೇರಿದಂತೆ ಸಮಾನ ಸ್ವರೂಪದ ಸೇವೆ ನಿರ್ವಹಿಸುವ ಕಾರ್ಮಿಕರನ್ನು ಗೌರವಧನ ಆಧಾರಿತ ವ್ಯವಸ್ಥೆಯಿಂದ ಹೊರತಂದು, ನ್ಯಾಯಸಮ್ಮತ ವೇತನದೊಂದಿಗೆ ಖಾಯಂ ಕಾರ್ಮಿಕರಾಗಿ ಪರಿಗಣಿಸಬೇಕು. ಇವರಿಗೆ ಕನಿಷ್ಠ 24,000 ರೂ. ಮಾಸಿಕ ವೇತನ ನಿಗದಿಪಡಿಸಬೇಕು ಅಥವಾ ಇತರ ಕಾರ್ಮಿಕರಿಗೆ ಸಮಾನವಾಗಿ ಅನ್ವಯಿಸುವ ಕನಿಷ್ಠ ವೇತನವನ್ನು ಅಧಿಸೂಚನೆಯ ಮೂಲಕ ನಿಗದಿಗೊಳಿಸಬೇಕು ಎಂದು ಶಿಫಾರಸು ಮಾಡಿದೆ.
➡ಪುಟ ೪

ಇತರೇ ಶಿಫಾರಸುಗಳು

- 3 ರಿಂದ 16 ವರ್ಷದ ಮಕ್ಕಳನ್ನು ಆರ್‌ಟಿಇನಲ್ಲಿ ಸೇರಿಸಲು ವ್ಯಾಪ್ತಿಯನ್ನು ವಿಸ್ತರಿಸಿ
- ಅತಿಥಿ ಶಿಕ್ಷಕರನ್ನು ಕೊನೆಗೊಳಿಸಿ ಆದ್ಯತೆಯ ಮೇಲೆ ಎಲ್ಲಾ ಮಂಜೂರಾದ ಖಾಲಿ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡುವುದು
- ಶಿಕ್ಷಣದಲ್ಲಿ ತಂತ್ರಜ್ಞಾನದ ನಿಯಂತ್ರಣ ಮತ್ತು ನೈತಿಕ ಬಳಕೆಗಾಗಿ ಉನ್ನತ ಅಧ್ಯಯನ ಸಮಿತಿ
- ಸರ್ಕಾರಿ ಶಾಲೆಗಳ ದೃಢವಾದ ಮೇಲ್ವಿಚಾರಣೆ ಮತ್ತು ಅಭಿವೃದ್ಧಿಗಾಗಿ ಸರ್ಕಾರಿ ಶಾಲಾ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸುವುದು

ಸ್ಲಂಗಳ ಮೂಲಭೂತ ಸೌಕರ್ಯಕ್ಕೆ 1 ಸಾವಿರ ಕೋಟಿ ರೂ. ನೀಡಿ

• ಪುಟ ೪

ಬಾಲಕಿಯರಿಗೆ ಬೈಸಿಕಲ್ ಯೋಜನೆ ಜಾರಿಗೆ ತನ್ನಿ

ಈ ಹಿಂದೆ ಬಿ.ಎಸ್. ಯಡಿಯೂರಪ್ಪ ಸಿಎಂ ಆಗಿದ್ದ ಸಂದರ್ಭದಲ್ಲಿ ಜಾರಿಗೆ ತಂದಿದ್ದ ವಿದ್ಯಾರ್ಥಿನಿಯರಿಗೆ ಉಚಿತ ಬೈಸಿಕಲ್ ಯೋಜನೆಯನ್ನು ಪುನಃ ಸ್ಥಾಪಿಸಲು ಆಯೋಗ ಶಿಫಾರಸು ಮಾಡಿದೆ. ಇದರಿಂದ ಪರೀಕ್ಷೆಯಲ್ಲಿ ದಾಖಲಾತಿ ಹೆಚ್ಚಿಸಲು ಅನುಕೂಲವಾಗಲಿದೆ ಎಂದು ತಿಳಿಸಿದೆ.

41.3 ಲಕ್ಷ ಯೂನಿಟ್ ಉತ್ಪಾದನೆ, ₹2.61 ಕೋಟಿ ಉಳಿತಾಯ

ಸೌರ ಬಳಕೆ, ನೈಋತ್ಯ ರೈಲ್ವೆ ಮುಂದು

▶ ಅನುಷಾ ಕೆ.

• **ಬೆಂಗಳೂರು:** ಭಾರತೀಯ ರೈಲ್ವೆಯಲ್ಲಿ ನವೀಕರಿಸಬಹುದಾದ ಇಂಧನ ಅಳವಡಿಸಿಕೊಳ್ಳುವಲ್ಲಿ ನೈಋತ್ಯ ರೈಲ್ವೆ ಪ್ರಮುಖ ವಲಯಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಅದರಲ್ಲೂ 2025ರಲ್ಲಿ ಸುಮಾರು 41.3 ಲಕ್ಷ ಯೂನಿಟ್ ಸೌರಶಕ್ತಿ ಉತ್ಪಾದಿಸಿದ್ದು, ಇದರಿಂದ ನೈಋತ್ಯ ರೈಲ್ವೆಗೆ ಸುಮಾರು 2.61 ಕೋಟಿ ರೂ. ಉಳಿತಾಯವಾಗಿದೆ.

2030ರ ವೇಳೆಗೆ ನಿವ್ವಳ-ಶೂನ್ಯ ಇಂಗಾಲದ ಹೊರಸೂಸುವಿಕೆ ಸಾಧಿಸುವ ರಾಷ್ಟ್ರೀಯ ಗುರಿ ತಲುಪುವುದಕ್ಕೆ ನೈಋತ್ಯ ರೈಲ್ವೆ ಕಾರ್ಯನಿರತವಾಗಿದೆ. ತನ್ನ ಕಾರ್ಯಾಚರಣೆ ಮತ್ತು ವಸತಿ ಮೂಲಸೌಕರ್ಯಗಳಲ್ಲಿ ಮೇಲ್ಛಾವಣಿ ಸೌರಶಕ್ತಿ ವ್ಯವಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ



ನಿಯೋಜಿಸುವ ಮೂಲಕ, ನೈಋತ್ಯ ರೈಲ್ವೆಯು ಹಸಿರು ಇಂಧನ ಉತ್ತೇಜಿಸುವುದರೊಂದಿಗೆ ಇಲಾಖೆಯ ವಾರ್ಷಿಕ ವಿದ್ಯುತ್ ಶುಲ್ಕದಲ್ಲಿ ಗಣನೀಯ ಉಳಿತಾಯ ಕಂಡಿದೆ. ನೈಋತ್ಯ ರೈಲ್ವೆ ಸಂಬಂಧಿಸಿದ ರೈಲ್ವೆ ನಿಲ್ದಾಣ, ಸೇವಾ, ಆಡಳಿತ ಕಟ್ಟಡ, ಕಾರ್ಯಾಗಾರ, ಲೆವೆಲ್ ಕ್ರಾಸಿಂಗ್ ಗೇಟ್ ಮತ್ತು ನೀರು ಪಂಪಿಂಗ್ ವ್ಯವಸ್ಥೆಗಳಲ್ಲಿ ಸೌರ ವಿದ್ಯುತ್ ವ್ಯವಸ್ಥೆ ಹೊಂದಿದೆ.
➡ಪುಟ ೪

ತ.ನಾಡಲ್ಲಿ ಎಲ್ಲರಿಗೂ ಫ್ರೀ ವಿದ್ಯುತ್ ಉಡುಗೊರೆ : ಸುಪ್ರೀಂ ಕಳವಳ

ದೇಶದ ಪ್ರಗತಿಗೆ ಉಚಿತ ಕೊಡುಗೆ ಅಡ್ಡಿ

• **ಹೊಸದಿಲ್ಲಿ:** ದೇಶದಲ್ಲಿ ಹೆಚ್ಚುತ್ತಿರುವ 'ಉಚಿತ ಕೊಡುಗೆ' (ಫ್ರೀಬೀಸ್ ಕಲ್ಚರ್) ಭಾರತದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗು ತ್ತಿದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೊಯ್ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ನೇತೃತ್ವದ ಪೀಠವು ಈ ಕುರಿತು ಮಹತ್ವದ



ಟೀಕೆಗಳನ್ನು ಮಾಡಿದೆ. ಅಂತೆಯೇ ಈ ಸಂಬಂಧ ಕೇಂದ್ರ ಸರ್ಕಾರ ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಿದೆ.

ದೇಶದ ಬಹುತೇಕ ರಾಜ್ಯಗಳು ಆದಾಯ ಕೊರತೆ ಸ್ಥಿತಿಯಲ್ಲಿ ಇರುವುದರ ನಡುವೆಯೇ ಉಚಿತ ಯೋಜನೆಗಳನ್ನು ಘೋಷಿಸುತ್ತಿರುವುದು ಚಿಂತಾಜನಕ ಎಂದು ಪೀಠ ಹೇಳಿದೆ. ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡುವ ಬದಲು ರಾಜ್ಯಗಳು ವೇತನ ಪಾವತಿ, ಉಚಿತ ವಿತರಣೆಗಳಿಗೆ ಹೆಚ್ಚು ವೆಚ್ಚ ಮಾಡುತ್ತಿವೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.
➡ಪುಟ ೪

ಇದು ಓಲೈಕೆ ಅಲ್ಲವೇ?

ರಾಜ್ಯ ಸರ್ಕಾರಗಳು ಗ್ಯಾರಂಟಿ ಯೋಜನೆಗಳಲ್ಲಿ ಅನೇಕ ಸೌಲಭ್ಯಗಳನ್ನು ಉಚಿತವಾಗಿ ನೀಡುತ್ತಿರುವುದು ಸಮಂಜಸವೇ? ಇದು ಜನೋಪಯೋಗಿ ಕಲ್ಯಾಣ ನೀತಿಯೇ ಅಥವಾ ರಾಜಕೀಯ ಓಲೈಕೆಯ ರೂಪವೇ? ಆರ್ಥಿಕವಾಗಿ ಬಲಹೀನರನ್ನು ನೆರವಾಗುವುದು ಅಗತ್ಯವೇ ಸರಿ; ಆದರೆ, ಆರ್ಥಿಕ ಸ್ಥಿತಿಯನ್ನು ಪರಿಗಣಿಸದೆ ಎಲ್ಲ ವರ್ಗದ ಜನರಿಗೆ ಉಚಿತ ಸೌಲಭ್ಯಗಳನ್ನು ನೀಡುವುದರಿಂದ ರಾಜ್ಯದ ಆರ್ಥಿಕ ಸ್ಥಿರತೆಗೆ ಹೊಡೆತ ಬೀಳುವುದಿಲ್ಲವೇ? ಇದರಿಂದ ಜನರ ದುಡಿವ ಮನೋಭಾವ ಹಾಗೂ ಸ್ವಾವಲಂಬನೆಯ ಮನಸ್ಥಿತಿ ಕುಗ್ಗುವ ಸಾಧ್ಯತೆಯಿಲ್ಲವೇ? ಎಂದು ನ್ಯಾಯಪೀಠ ಪ್ರಶ್ನಿಸಿದೆ.

ಸಾರಿಗೆ ಮುಷ್ಕರ ತಾತ್ಕಾಲಿಕ ವಾಪಸ್

• **ಬೆಂಗಳೂರು:** 38 ತಿಂಗಳ ಹಿಂಬಾಕಿ ಹಾಗೂ ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಸಾರಿಗೆ ನೌಕರರು ಸರ್ಕಾರದ ಮನವೊಲಿಕೆಗೆ ಒಪ್ಪಿ, ಮುಷ್ಕರದ ನಿರ್ಧಾರವನ್ನು ತಾತ್ಕಾಲಿಕವಾಗಿ ಹಿಂಪಡೆದಿದ್ದಾರೆ. ಅಂತೆಯೇ ಬೇಡಿಕೆಗಳನ್ನು ಈಡೇರಿಸಲು ಮಾ.2ರವರೆಗೆ ಸರ್ಕಾರಕ್ಕೆ ಗಡುವು ನೀಡಿದ್ದಾರೆ. ದೀರ್ಘಕಾಲದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಾಲ್ಕು ನಿಗಮದ ಸಾವಿರಾರು ನೌಕರರು ಗುರುವಾರ ಬೆಳಗ್ಗೆಯಿಂದಲೇ ಸ್ವಾತಂತ್ರ್ಯ ಉದ್ಯಾನವನದಲ್ಲಿ ಜಮಾಯಿಸಿದ್ದರು. ರಾಜ್ಯದ ವಿವಿಧ ಮೂಲೆಗಳಿಂದ ಬಂದಿದ್ದ ನೌಕರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.
➡ಪುಟ ೪

ರಾಜ್ಯದಲ್ಲಿ ಏಪ್ರಿಲ್‌ಗೆ ಎಸ್‌ಐಆರ್ ಸಾಧ್ಯತೆ



• **ಹೊಸದಿಲ್ಲಿ:** ಕರ್ನಾಟಕ ಸೇರಿದಂತೆ ಉಳಿದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆಯನ್ನು ಏಪ್ರಿಲ್‌ನಿಂದ ಆರಂಭಿಸುವ ಬಗ್ಗೆ ಚುನಾವಣಾ ಆಯೋಗ(ಇಸಿ) ಮುನ್ಸೂಚನೆ ನೀಡಿದೆ.
• ವಿವರ ಪುಟ ೪

ರಾಜ್ಯದಲ್ಲಿ ಏಪ್ರಿಲ್‌ಗೆ ಎಸ್‌ಐಆರ್ ಸಾಧ್ಯತೆ

ಹೊಸದಿಲ್ಲಿ: ಕರ್ನಾಟಕ ಸೇರಿದಂತೆ ಉಳಿದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಏಪ್ರಿಲ್‌ನಿಂದ ಆರಂಭಿಸುವ ಬಗ್ಗೆ ಚುನಾವಣಾ ಆಯೋಗ(ಇಸಿ) ಮುನ್ಸೂಚನೆ ನೀಡಿದೆ.

ಈ ಕುರಿತು ಮುಖ್ಯ ಚುನಾವಣಾಧಿಕಾರಿಗಳಿಗೆ(ಸಿಇಒಗಳು) ಕಳುಹಿಸಿರುವ ಪತ್ರದಲ್ಲಿ, ಎಸ್‌ಐಆರ್‌ಗೆ ಸಂಬಂಧಿಸಿದ ಪೂರ್ವ ಸಿದ್ಧತಾ ಕಾರ್ಯಗಳನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ಇಸಿ ಕಾರ್ಯದರ್ಶಿ ಪವನ್ ದಿವಾನ್ ತಿಳಿಸಿದ್ದಾರೆ. ದೇಶವ್ಯಾಪಿ ಎಸ್‌ಐಆರ್ ಕೈಗೊಳ್ಳುವ ಬಗ್ಗೆ ಕಳೆದ ವರ್ಷದ ಜೂ.24ರಂದು ನೀಡಿದ್ದ ಆದೇಶವನ್ನು ಆಯೋಗ ಪತ್ರದಲ್ಲಿ ಸ್ಮರಿಸಿದೆ. 2025ರ ಜೂನ್‌ನಲ್ಲಿ ಪ್ರಕ್ರಿಯೆ ಆರಂಭಗೊಂಡಿದ್ದ ಬಿಹಾರವನ್ನು ಹೊರತುಪಡಿಸಿ, ಉಳಿದ ರಾಜ್ಯಗಳಲ್ಲಿ ಪೂರ್ವ-ಪರಿಷ್ಕರಣೆ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಈಗಾಗಲೇ ನಿರ್ದೇಶಿಸಲಾಗಿತ್ತು.

ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಜನಗಣತಿಯ ಮೊದಲ ಹಂತ ನಡೆಯಲಿದೆ. ಆದರೂ, ಈ ಎರಡು ಪ್ರಕ್ರಿಯೆಗಳ ನಡುವೆ ಘರ್ಷಣೆಯಾಗುವುದಿಲ್ಲ ಎಂದು ಇಸಿ ಅಧಿಕಾರಿಗಳು ಹೇಳಿದ್ದಾರೆ. ಬಿಹಾರ ಬಳಿಕ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ 12 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಘೋಷಿಸಲಾಗಿತ್ತು. ಗುಜರಾತ್, ಪುದುಚೇರಿ ಮತ್ತು ಲಕ್ಷದ್ವೀಪದಲ್ಲಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಸ್ಸಾಂ ಸೇರಿದಂತೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇತರ ರಾಜ್ಯಗಳಲ್ಲಿ ಪರಿಷ್ಕರಣೆ ವಿವಿಧ ಹಂತಗಳಲ್ಲಿ ಮುಂದುವರಿದಿದೆ. ಈಗ ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ದಿಲ್ಲಿ ಸೇರಿದಂತೆ ಉಳಿದ ರಾಜ್ಯಗಳಲ್ಲಿ ಪ್ರಕ್ರಿಯೆ ಕೈಗೆತ್ತಿಕೊಳ್ಳಲಾಗುತ್ತಿದೆ. ಪೂರ್ವ ಸಿದ್ಧತಾ ಕಾರ್ಯಗಳಲ್ಲಿ 2002-2004ರ ಚುನಾವಣಾ ಪಟ್ಟಿಗಳೊಂದಿಗೆ ಪ್ರಸ್ತುತ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವುದೂ ಸೇರಿದೆ. ಈ ಕಾರ್ಯಕ್ಕಾಗಿ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒಗಳು) ವ್ಯಾಪಕ ತರಬೇತಿ ನೀಡಲಾಗುತ್ತದೆ ಎಂದು ಆಯೋಗ ತಿಳಿಸಿದೆ.

ಯಾವ ರಾಜ್ಯಗಳಲ್ಲಿ ಬಾಕಿ?

ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಚಂಡೀಗಡ, ದಾದ್ರಾ, ನಗರ ಹವೇಲಿ, ದಮನ್ ಮತ್ತು ದಿಯು, ಹರ್ಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಕರ್ನಾಟಕ, ಲಡಾಕ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ದಿಲ್ಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರ, ತೆಲಂಗಾಣ ಮತ್ತು ಉತ್ತರಾಖಂಡ.

- ಪೂರ್ವ ಸಿದ್ಧತಾ ಕೆಲಸ ಮುಗಿಸಿಕೊಳ್ಳಲು ಸೂಚನೆ
- ಕರ್ನಾಟಕ ಸೇರಿ ಇನ್ನೂ 22 ರಾಜ್ಯಗಳಲ್ಲಿ ಬಾಕಿ

ಛತ್ರಪತಿ ಶಿವಾಜಿ ಒಂದು ಧರ್ಮಕ್ಕೆ ಸೀಮಿತ ಅಲ್ಲ: ತಂಗಡಗಿ



ಬೆಂಗಳೂರು: ಛತ್ರಪತಿ ಶಿವಾಜಿ ಮಹಾರಾಜರು ಒಂದು ಧರ್ಮಕ್ಕೆ ಮಾತ್ರ ಸೀಮಿತರಲ್ಲ, ಅವರ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವುದು ಸರಿಯಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ, ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ, ಶಿವಾಜಿ ಮಹಾರಾಜ ಅವರ ಆಡಳಿತ ಅವಧಿಯಲ್ಲಿ ಎಲ್ಲಾ ಧರ್ಮದವರಿಗೂ ಧಾರ್ಮಿಕ ಸ್ವಾತಂತ್ರ್ಯ ಇತ್ತು. ರಾಜರಾಗಿ ಅವರು ಎಲ್ಲಾ ಧರ್ಮಗಳ ಪರ ನಿಂತಿದ್ದರು. ಸರ್ವ - ಧರ್ಮ ಸಹಿಷ್ಣುತೆಗೆ ಶಿವಾಜಿಯ ಆಡಳಿತ ಮಾದರಿಯಾಗಿತ್ತು. ಎಲ್ಲಾ ಸಮುದಾಯದ ಗೌರವಾನ್ವಿತ ವ್ಯಕ್ತಿಗಳಿಗೆ ಅವರು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ತೊಡಗಿಸಿದ್ದರು. ಇಂದು ಅವರ ಹೆಸರನ್ನು ರಾಜಕೀಯಕ್ಕೆ ಬಳಕೆ ಆಗುತ್ತಿರುವುದು ಸರಿಯಲ್ಲ ಎಂದರು.

ಪ್ರತಿಯೊಬ್ಬರು ಶಿವಾಜಿ ಅವರ ಇತಿಹಾಸವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಇಡೀ ದೇಶದಲ್ಲಿ ಶಿವಾಜಿ ಮಹಾರಾಜರು ತನ್ನದೇ ಆದ ಇತಿಹಾಸವನ್ನು ಸೃಷ್ಟಿ ಮಾಡಿದ್ದರು. ಕರ್ನಾಟಕ ಭಾಷೆ ಹಾಗೂ ರಾಜ್ಯದ ಮೇಲೆ ಅಪಾರವಾದ ಪ್ರೇಮವನ್ನಿರಿಸಿಕೊಂಡಿದ್ದರು. ವಿಜಯನಗರ ಸಾಮ್ರಾಜ್ಯ ಪತನವೇಳೆ ಅದರ ಅವಶೇಷಗಳನ್ನು ಕಂಡು, ಔರಂಗಜೇಬನ ವಿರುದ್ಧ ಧಿಕ್ಕಾರ ಕೂಗಿದ್ದರು ಎಂದು ನೆನೆದರು.

ಮೊದಲ ಬಾರಿಗೆ ಮೀಸಲಾತಿ ಪರಿಚಯಿಸಿದ್ದು ಸಾಹು ಮಹಾರಾಜರು. ಇನ್ನು ಇಂತಹ ಸಂದರ್ಭದಲ್ಲಿ ಸಾಹು ಮಹಾರಾಜರನ್ನು ನಾವು ನೆನೆಯುವ ಅಗತ್ಯವಿದೆ. ದೇಶದಲ್ಲಿ ಮೊದಲ ಬಾರಿಗೆ ಮೀಸಲಾತಿಯನ್ನು ಜಾರಿಗೆ ತಂದವರು ಸಾಹು ಮಹಾರಾಜರು. ತುಳಿತಕ್ಕೆ ಒಳಗಾದ ಸಮಾಜವನ್ನು ಮೇಲೆತ್ತಿದ್ದ ಮೊಟ್ಟ ಮೊದಲ ರಾಜ ಸಾಹು ಮಹಾರಾಜರು. ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ವಿದೇಶಿ ವ್ಯಾಸಂಗ ಮಾಡಲು ನೆರವು ನೀಡಿದ್ದರು. ಹೀಗಾಗಿ ಬಡವರ ಮಕ್ಕಳು ವಿದೇಶಿ ವ್ಯಾಸಂಗಕ್ಕೆ ಮಾಡಲು ನೀಡಲಾಗುತ್ತಿದ್ದ ಮೊತ್ತವನ್ನು 25 ಲಕ್ಷ ರೂ.ದಿಂದ 50 ರೂ. ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಮರಾಠ ಕಲ್ಯಾಣ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಪಾಗೋಜಿ ಇತರರಿದ್ದರು.

> ಸಾಂಬಾಜಿ ಅವರ ಸಮಾಧಿ ನಾನು ಪ್ರತಿನಿಧಿಸುವ ಕನಕಗಿರಿ ಕ್ಷೇತ್ರದಲ್ಲಿಯಿದೆ ಎಂಬುದನ್ನು ನನ್ನ ಗಮನಕ್ಕೆ ಬಂದಿದೆ. ಖಾಸಗಿ ಸ್ಥಳದಲ್ಲಿ ಸಾಂಬಾಜಿ ಅವರ ಸಮಾಧಿ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾನೂನು ತೊಡಕನ್ನು ಬಗೆಹರಿಸಿಕೊಂಡು ಸಮಾಧಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.
> ■ ಶಿವರಾಜ್ ಎಸ್.ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಹಿಂದುಗಳು ಯಾರ ಮೇಲೂ ಆಕ್ರಮಣ ಮಾಡುವುದಿಲ್ಲ, ಆದರೆ ತಮ್ಮ ಮೇಲೆ ಆಕ್ರಮಣವಾದರೆ ಬಿಡುವುದೂ ಇಲ್ಲ
- ಗೋಪಾಲ ನಾಗರಕಟ್ಟೆ

- ಆಕ್ರಮಣ ಮಾಡುವುದಿಲ್ಲ ಅಂತ ಕುಳಿತರೆ ಕೆಲವರು ಹೇಡಿಗಳು ಅಂತ ಭಾವಿಸುತ್ತಾರೆ, ಆಕ್ರಮಣ ಕ್ಕೆ ಪ್ರತ್ಯಾಕ್ರಮಣ ಮಾಡಿದರೆ ಕೇಡಿಗಳು ಅಂತ ಅದೇ ಮಂದಿ ಪ್ರಚಾರ ಮಾಡುತ್ತಾರೆ!

ದಿನ ಭವಿಷ್ಯ

ಮೇಷ ನಿಮ್ಮ ಸುತ್ತ ನಯವಂಚಕರಿದ್ದಾರೆ, ಎಚ್ಚರವಿರಿ. ಅಧಿಕ ಒತ್ತಡದ ಕಾರಣ ಮಾನಸಿಕ ಬಳಲಿಕೆ. ಇದು ದೇಹದ ಮೇಲೂ ಪರಿಣಾಮ ಬೀರಲಿದೆ.

ವೃಷಭ ಕೆಲಸದ ಮೇಲೆ ಏಕಾಗ್ರತೆ ಮೂಡದು. ಹೊಸ ಸಮಸ್ಯೆಯೇ ತಲೆ ಕೊರೆಯುವುದು. ಕಾದು ನೋಡಿ, ಪರಿಹಾರ ಗೋಚರಿಸಲಿದೆ.

ಮಿಥುನ ಮುಂಜಾನೆ ಉದ್ವಿಗ್ನ ಮನಸ್ಥಿತಿ. ಅಪರಾಹ್ನದ ವೇಳೆ ಎಲ್ಲವೂ ನಿರಾಳ. ಚಿಂತೆಗೆ ಕಾರಣವಾದ ವಿಷಯ ಇತ್ಯರ್ಥ. ಭಾವನಾತ್ಮಕ ಏರುಪೇರು.

ಕಟಕ ನಿಮ್ಮ ಕಾರ್ಯಶೈಲಿ ಇತರರಿಗೆ ಮಾದರಿ. ಆದರೂ ವೃತ್ತಿಕ್ಷೇತ್ರದಲ್ಲಿ ಪ್ರತಿಕೂಲ ಪರಿಸ್ಥಿತಿ. ತಪ್ಪಿಗೆ ಅವಕಾಶ ಕೊಡಬೇಡಿ. ಎಚ್ಚರದಿಂದಿರಿ.

ಸಿಂಹ ವೃತ್ತಿಯಲ್ಲಿ ನಿಮ್ಮ ಕಾರ್ಯಕ್ಕೆ ಶ್ಲಾಘನೆ. ಕಠಿಣ ಕಾರ್ಯವೂ ನಿಮ್ಮಿಂದ ಸುಲಭವಾಗಲಿದೆ. ಮನೆಯಲ್ಲೂ ಹರ್ಷದ ವಾತಾವರಣ.

ಕನ್ಯಾ ಸ್ಪರ್ಧಾತ್ಮಕ ವಾತಾವರಣದಲ್ಲಿ ಚಡಪಡಿಸುವಿರಿ. ಸವಾಲಿಗೆ ಮುದುಡದಿರಿ. ಸೂಕ್ತ ಸಹಕಾರ, ನೆರವು ನಿಮಗೆ ಸಿಕ್ಕಿಯೇ ಸಿಗುವುದು.

ತುಲಾ ಅನುಚಿತ ಮಾತಿನಿಂದ ಬಿಕ್ಕಟ್ಟಿಗೆ ಸಿಲುಕುವಿರಿ. ನಿಯಂತ್ರಣ ಇರಲಿ. ವೃತ್ತಿಯಲ್ಲಿ ಪ್ರತಿಕೂಲ ಪರಿಸ್ಥಿತಿ. ಒತ್ತಡ, ಹೊಣೆ ಅಧಿಕ.

ವೃಶ್ಚಿಕ ನಿಮ್ಮ ಕಾರ್ಯಶೈಲಿ ಬದಲಿಸಬೇಕು. ಇಲ್ಲವಾದರೆ ಪ್ರಗತಿ ಕುಂಠಿತ. ಆತ್ಮೀಯರೆ ನಿಮ್ಮ ವಿರುದ್ಧ ತಿರುಗಿ ಬಿದ್ದಾರು. ದೃಢ ಮನಸ್ಕರಾಗಿರಿ.

ಧನು ಎಂದಿನಂತಿಲ್ಲ ಇಂದು. ಕೆಲಸದಲ್ಲಿ ಮನಸ್ಸು ನಿಲ್ಲದು. ಏನೇನೋ ಚಿಂತೆಗಳು. ಮೋಸ ಮಾಡುವ ವ್ಯಕ್ತಿಗಳ ಬಗ್ಗೆ ಎಚ್ಚರವಿರಲಿ.

ಮಕರ ಹೊಸ ವ್ಯವಹಾರಕ್ಕೆ ಕೈಹಾಕಲು ಯೋಜಿಸಿದ್ದರೆ ಇನ್ನೊಮ್ಮೆ ಯೋಚಿಸಿ. ಅಡ್ಡಿ ನಿವಾರಿಸಿಕೊಳ್ಳಿ. ಆತ್ಮೀಯರೇ ವಿರೋಧ ಸೂಚಿಸಬಹುದು.

ಕುಂಭ ಆರೋಗ್ಯ ಸಮಸ್ಯೆ, ಮನಸ್ಸಿಗೆ ಉದಾಸ ಭಾವ. ಆಹಾರದಲ್ಲಿ ಎಚ್ಚರ ವಹಿಸಿ. ಅಜೀರ್ಣ ಸಮಸ್ಯೆ ಬಾಧಿಸಬಹುದು. ವೃತ್ತಿಯಲ್ಲಿ ಒತ್ತಡ ಹೆಚ್ಚು.

ಮೀನ ಸಂವಹನ ಕೊರತೆ, ಬಾಂಧವ್ಯದಲ್ಲಿ ಬಿಕ್ಕಟ್ಟು. ಕಾರ್ಯ ವಿಳಂಬ. ತಪ್ಪಿನಿಂದ ಪಾಠ ಕಲಿಯಿರಿ, ಅದನ್ನೆ ಪುನರಾವರ್ತನೆ ಮಾಡಬೇಡಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 0,7,4,2

ಭರವಸೆ ಬಳಿಕ ಬೆಳ್ಳಹಳ್ಳಿ ಗ್ರಾಮಸ್ಥರಿಂದ ಪ್ರತಿಭಟನೆ ವಾಪಸ್

₹90 ಕೋಟಿ ಅನುದಾನ

ಬೆಂಗಳೂರು: ಸರ್ಕಾರ ಬಾಕಿ ಮಾಡಿದ್ದ ಗ್ರಾಮಾಭಿವೃದ್ಧಿ ನಿಧಿ 90 ಕೋಟಿ ರೂ.ಅನುದಾನ ಬಿಡುಗಡೆ ಮಾಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ ಹಿನ್ನೆಲೆಯಲ್ಲಿ ಕಸದ ಲಾರಿಗಳನ್ನು ತಡೆದು ಪ್ರತಿಭಟನೆ ನಡೆಸುತ್ತಿದ್ದ ಬೆಳ್ಳಹಳ್ಳಿ ಗ್ರಾಮಸ್ಥರು, ಪ್ರತಿಭಟನೆಯನ್ನು ವಾಪಸ್ ಪಡೆದಿದ್ದಾರೆ.

ಕಳೆದ ಎರಡು ವರ್ಷಗಳಿಂದ ಬೆಳ್ಳಹಳ್ಳಿ ಗ್ರಾಮದ ಅಭಿವೃದ್ಧಿ ಹಣ ಸರ್ಕಾರ ಬಿಡುಗಡೆ ಮಾಡಿಲ್ಲ ಎಂದು ಗ್ರಾಮಸ್ಥರು ಎರಡು ದಿನಗಳಿಂದ ಪಟ್ಟುಹಿಡಿದಿದ್ದರು. ರಾಜಧಾನಿಯಿಂದ ತಂದ ಕಸಗಳನ್ನು ವಿಲೇವಾರಿ ಮಾಡದಂತೆ ಕಸದ ಲಾರಿಗಳನ್ನು ತಡೆಗಟ್ಟಿ ಪ್ರತಿಭಟಿಸಿದ್ದರು. ಇದರಿಂದ ಕಸ ವಿಲೇವಾರಿ ಸಮಸ್ಯೆ ಎದುರಾಗಿತ್ತು. ನಗರದ ವಿವಿಧೆಡೆ ಗುರುವಾರ, ಶುಕ್ರವಾರ ಕಸದ ರಾಶಿಗಳು ಕಂಡುಬಂದಿದೆ. ಗಾಡಿಗಳಲ್ಲಿ ಕಸ ತುಂಬಿಕೊಂಡು ವಿಲೇವಾರಿ ಮಾಡಲು ದಿಕ್ಕಿಲ್ಲದೆ ಸ್ಥಗಿತವಾಗಿತ್ತು.

ಸಂಧಾನ ಯಶಸ್ವಿ: ನಗರದ ಕಸದ ಲಾರಿ ತಡೆದು ಪ್ರತಿಭಟನೆ ನಡೆಸಿದ ಬೆಳ್ಳಹಳ್ಳಿ ಗ್ರಾಮಸ್ಥರು ಅನುದಾನ ಬಿಡುಗಡೆ ಮಾಡುವವರೆಗೆ ಯಾವುದೇ ಕಾರಣಕ್ಕೂ ಕಸ ವಿಲೇವಾರಿಗೆ ಅನುಮತಿ ನೀಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು. ಹದಗೆಟ್ಟ ಪರಿಸ್ಥಿತಿ ಅವಲೋಕಿಸಿ ಸರ್ಕಾರ ಬುಧವಾರ ರಾತ್ರಿ ಘನತ್ಯಾಜ್ಯ ಘಟಕದ ಅಧಿಕಾರಿಗಳನ್ನು ಸಂಧಾನಕ್ಕೆ ಕಳುಹಿಸಿದ್ದರು. ಅಧಿಕಾರಿಗಳು ಸ್ಥಳೀಯ ಜನಪ್ರತಿನಿಧಿ ಹಾಗೂ ಗ್ರಾಮಸ್ಥರ ಜತೆ ಸಭೆ ನಡೆಸಿ 90 ಕೋಟಿ ರೂ. ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ಹಾಗಾಗಿ ಭರವಸೆ ನೀಡಿದ ಬಳಿಕ ಗ್ರಾಮಸ್ಥರು ಪ್ರತಿಭಟನೆ ವಾಪಸ್ ಪಡೆದರು.

ಜಿಬಿಎ ಅಧಿಕಾರಿಗಳು ಶಾಸಕಿ ಮಂಜುಳಾ ಲಿಂಬಾವಳಿ ಹಾಗೂ ಸ್ಥಳೀಯರೊಂದಿಗೆ ಮಾತುಕತೆ ನಡೆಸಿ ಸಂಧಾನವಾಗಿದ್ದು, ಕಸ ವಿಲೇವಾರಿ ಘಟಕ ಪುನಃ ಆರಂಭಗೊಂಡಿದೆ. ಮಿಟ್ಟಗಾನಹಳ್ಳಿ ತ್ಯಾಜ್ಯ ಸಂಸ್ಕರಣೆ ಘಟಕ ಬಳಿ ಸ್ಥಳೀಯರು ಕಸ ವಿಲೇವಾರಿಗೆ ಅಡ್ಡಿಪಡಿಸಿದ್ದರಿಂದ 70ಕ್ಕೂ ಹೆಚ್ಚು ಕಸದ (ಲಾರಿ) ಕಂಪ್ಯಾಕ್ಟರ್‌ಗಳು ನಿಂತಲ್ಲೇ ನಿಂತಿದ್ದರಿಂದ ಕಸದ ರಾಶಿ ಬಿದ್ದು ದುರ್ನಾತ ಬಿರುತ್ತಿತ್ತು. ಗುರುವಾರದಂದು ಬೆಳಗ್ಗೆಯಿಂದ 450ಕ್ಕೂ ಹೆಚ್ಚು ಲಾರಿಗಳು ತ್ಯಾಜ್ಯವನ್ನು ವಿಲೇವಾರಿ ಮಾಡಿವೆ. ಪ್ರತಿದಿನ 300 ಲಾರಿಗಳು ಮಾತ್ರ ಕಸ ವಿಲೇವಾರಿ ಮಾಡುತ್ತಿದ್ದವು. ಈಗ ಕಸ ಸಂಗ್ರಹಣೆ ಹೆಚ್ಚಾಗಿರುವುದರಿಂದ ಹೆಚ್ಚುವರಿಯಾಗಿ 150ಕ್ಕೂ ಹೆಚ್ಚು ಲಾರಿ ಕಸ ವಿಲೇವಾರಿ ಮಾಡಿವೆ. 2 ದಿನಗಳೊಳಗಾಗಿ ನಗರದಲ್ಲಿ ಸಂಗ್ರಹಣೆಗೊಂಡಿದ್ದ ಕಸವನ್ನು ವಿಲೇವಾರಿ ಮಾಡಲು ಹೆಚ್ಚುವರಿ ಕೆಲಸದಲ್ಲಿ ನಿರತರಾಗಿವೆ.



ನಾವು ಅಭಿವೃದ್ಧಿಗೆ ಹಣ ಕೊಟ್ಟಿದ್ದೇವೆ: ಡಿಕೆಶಿ

ನಾವು ಅಭಿವೃದ್ಧಿಗೆ ಹಣ ಕೊಟ್ಟಿದ್ದೇವೆ. ಸಾವಿರಾರು ಕೋಟಿಯನ್ನು ಎಷ್ಟು ಎಂದು ಕೊಡಲು ಆಗುತ್ತದೆ. 20, 30 ಕೋಟಿ ಸೇರಿದಂತೆ 50-100 ಕೋಟಿ ಹಣವನ್ನು ಅಭಿವೃದ್ಧಿಗೆ ಕೊಡುತ್ತಾ ಬಂದಿದ್ದೇವೆ. ನಾವು ಕೊಡುತ್ತೇವೆ. ಅವರು ಅರ್ಥ ಮಾಡಿಕೊಳ್ಳಬೇಕು. ಮಹದೇವಪುರದಲ್ಲಿ ಕಸ ವಿಲೇವಾರಿ ನಿಲ್ಲಿಸಲಾಗಿದೆ. ನಾವು ಸಹ ಅಲ್ಲಿನ ಕಸ ಮೂರು ದಿನ ತೆಗೆಯಬೇಡಿ ಎಂದರೆ ಏನಾಗಬಹುದು. ಕಸ ವಿಲೇವಾರಿಗೆ ನಾಲ್ಕು ಕಡೆ ಜಮೀನುಗಳನ್ನು ನೋಡಿದ್ದೆವು. ಭೂಮಿ ಸಮಸ್ಯೆ ಬಂದ ಕಾರಣಕ್ಕೆ ಎರಡು ಕಡೆ ಅಂತಿಮ ಮಾಡಿದ್ದೇವೆ. ಟೆಂಡರ್ ಕೂಡ ಕರೆಯಲಾಗಿದೆ. ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎಂದರು.

ಗ್ರಾಮಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ: ಮಹೇಶ್ವರ ರಾವ್

ಸ್ಥಳೀಯ ಶಾಸಕರೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ. ಅವರನ್ನು ಮನವೊಲಿಸುವ ಕಾರ್ಯ ನಡೆಯುತ್ತಿದೆ. ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತದೆ. ಗ್ರಾಮಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಇನ್ನೂ ಹೆಚ್ಚಿನ ಕೆಲಸ ಆಗಬೇಕೆಂಬ ಬೇಡಿಕೆ ಇದೆ. ಅದನ್ನು ಪರಿಶೀಲಿಸಲಾಗುತ್ತಿದೆ. ನಗರದಲ್ಲಿ ಎಲ್ಲ ಜನರೂ ತ್ಯಾಜ್ಯವನ್ನು ವಿಂಗಡಿಸಿ ಕೊಟ್ಟರೆ ಭೂಭರ್ತಿಗೆ ಹೋಗುವ ಪ್ರಮಾಣ ಬಹುತೇಕ ನಿಲ್ಲುತ್ತದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ.

ಸಾರಿಗೆ ಮುಷ್ಕರ ತಾತ್ಕಾಲಿಕ ವಾಪಸ್

ಪುಟ ೩ ಮುಷ್ಕರದ ತೀವ್ರತೆ ಅರಿತು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ನೌಕರರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಬಳಿಕ ಮಾತನಾಡಿದ ಅವರು, ಸರ್ಕಾರವು 38 ತಿಂಗಳ ಬಾಕಿ ಪೈಕಿ 26 ತಿಂಗಳ ಹಿಂಬಾಕಿ(ಸುಮಾರು 1,271 ಕೋಟಿ ರೂ.) ನೀಡಲು ಒಪ್ಪಿಕೊಂಡಿದೆ ಹಾಗೂ ವೇತನ ಪರಿಷ್ಕರಣೆಗೂ ಸಕಾರಾತ್ಮಕವಾಗಿ ಸ್ಪಂದಿಸಿದೆ, ಹೀಗಾಗಿ ನೌಕರರು ಪ್ರತಿಭಟನೆಯನ್ನು ವಾಪಸ್ ಪಡೆಯಬೇಕೆಂದು ಮನವಿ ಮಾಡಿದರು.

ಸಾರಿಗೆ ನೌಕರರ ಆಕ್ಷೇಪ: ನಮಗೆ ಪೂರ್ಣ 38 ತಿಂಗಳ ಬಾಕಿ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು ಎಂದು ನೌಕರರು ಘೋಷಣೆ ಕೂಗಿದರು. ಆಗ ಸ್ಥಳದಲ್ಲಿ ಸ್ವಲ್ಪ ಮಟ್ಟಿನ ಬಿಗುವಿನ ವಾತಾವರಣ ನಿರ್ಮಾಣವಾಯಿತು. ನೌಕರರ ಸಂಘದ ಮುಖಂಡರು ಮತ್ತು ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಅಂತಿಮವಾಗಿ ವಿದ್ಯಾರ್ಥಿಗಳ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು, ಮಾ.2ರೊಳಗೆ ಬೇಡಿಕೆ ಈಡೇರದಿದ್ದರೆ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಎಚ್ಚರಿಕೆ ನೀಡಿ ಪ್ರತಿಭಟನೆ ಕೊನೆಗೊಳಿಸಲಾಯಿತು.

ಬೇಡಿಕೆಗಳ ಈಡೇರಿಕೆಗೆ ಮಾ.2ರವರೆಗೆ ಗಡುವು: ಪ್ರತಿಭಟನೆಯ ಸ್ಥಳದಲ್ಲಿಯೇ ಸಂಜೆ ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿಗಳೆಲ್ಲರೂ ಒಟ್ಟಾಗಿ ಸಭೆ ನಡೆಸಿ ಮಾ.2ರವರೆಗೆ ಅಂತಿಮ ಗಡುವು ನೀಡಲು ತೀರ್ಮಾನ ಕೈಗೊಂಡರು. ಬಳಿಕ ಮಾತನಾಡಿದ ಜಂಟಿ ಕ್ರಿಯಾ ಸಮಿತಿ ಸಂಚಾಲಕ ಬಿ.ಜಯದೇವರಾಜೇ ಅರಸು, ತಾತ್ಕಾಲಿಕವಾಗಿ ನಮ್ಮ ಮುಷ್ಕರವನ್ನು ವಾಪಸ್ ಪಡೆಯುವ ನಿರ್ಧಾರವನ್ನು ಮಾಡಿದ್ದೇವೆ. ಸರ್ಕಾರದ ನಿರ್ಧಾರಗಳು ನಮಗೆ ಸಂಪೂರ್ಣವಾಗಿ ಸಮ್ಮತವಿಲ್ಲದಿದ್ದರೂ ಸಹ, ಮಾತುಕತೆಗೆ ಮತ್ತೊಂದು ಅವಕಾಶ ನೀಡುವ ಉದ್ದೇಶದಿಂದ ಈ ತೀರ್ಮಾನಕ್ಕೆ ಬರಲಾಗಿದೆ. ಆದರೆ, ನಮ್ಮ ಹೋರಾಟ ಇಲ್ಲಿಗೆ ನಿಂತಿಲ್ಲ, ಇದರ ಮುಂದುವರಿದ ಭಾಗವಾಗಿ ಮಾ.2ರಿಂದ ಉಪವಾಸ ಸತ್ಯಾಗ್ರಹವನ್ನು ನಡೆಸಲಾಗುವುದು ಎಂದು ತಿಳಿಸಿದರು.



> ಸಾರಿಗೆ ನೌಕರರ ಬೇಡಿಕೆಗಿಂತ ಕಡಿಮೆ ಹಿಂಬಾಕಿ ನೀಡಲು ಸರ್ಕಾರ ಒಪ್ಪಿಕೊಂಡಿದ್ದು, ಸದ್ಯ ಅಷ್ಟು ಕೊಟ್ಟಿರುವುದಕ್ಕೆ ಸಂತೋಷ ಪಡಬೇಕು. ಸರ್ಕಾರದ ಪರಿಸ್ಥಿತಿಯನ್ನು ಅವರು ಅರ್ಥ ಮಾಡಿಕೊಳ್ಳಬೇಕು.
> ■ ಡಿ.ಕೆ.ಶಿವಕುಮಾರ್, ಡಿಸಿಎಂ

> ಸರ್ಕಾರದಿಂದ ಏನು ಸಾಧ್ಯವೋ ಆ ಪ್ರಯತ್ನವನ್ನು ಮಾಡಲಾಗಿದೆ. ವೇತನ ಪರಿಷ್ಕರಣೆ 2025 ಏ.1ರಿಂದ ಜಾರಿಗೆ ಬರುವಂತೆ ನೀಡಬೇಕೆಂದು ಹೇಳಿದ್ದೇವೆ, ಅದರಲ್ಲಿ ಎಷ್ಟು ಮೊತ್ತವನ್ನು ನೀಡಬೇಕೆನ್ನುವುದರ ಬಗ್ಗೆ ಸಂಘಟನೆಯೊಂದಿಗೆ ಮಾತನಾಡಿ ತೀರ್ಮಾನ ಮಾಡಲಾಗುವುದು ಎನ್ನುವ ಆಯ್ಕೆಯನ್ನು ನೀಡಿದ್ದೇವೆ.
> ■ ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಸೌರ ಬಳಕೆ, ನೈಋತ್ಯ ರೈಲ್ವೆ ಮುಂದು

ಪುಟ ೩ **148 ನಿಲ್ದಾಣಗಳ ಛಾವಣಿಯಲ್ಲಿ ಸೌರ ಸ್ಥಾವರ:** ಕೆಎಸ್‌ಆರ್ ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಧಾರವಾಡ, ಬೆಳಗಾವಿ, ಹೊಸಪೇಟೆ, ಗದಗ ಮತ್ತು ಬಳ್ಳಾರಿ ಸೇರಿದಂತೆ 148 ರೈಲು ನಿಲ್ದಾಣಗಳಲ್ಲಿ ಮೇಲ್ಛಾವಣಿಯ ಸೌರ ಸ್ಥಾವರಗಳನ್ನು ನಿಯೋಜಿಸಲಾಗಿದೆ. ಇದರ ಜತೆಗೆ ರೈಲ್ ಸೌಧ, ವಿಭಾಗೀಯ ಕಚೇರಿ, ರೈಲ್ವೆ ಆಸ್ಪತ್ರೆ ಮತ್ತು ತರಬೇತಿ ಸಂಸ್ಥೆಗಳಂತಹ 38 ಸೇವಾ ಕಟ್ಟಡಗಳಲ್ಲಿ ಸೌರಶಕ್ತಿ ಹೊಂದಿವೆ.

ಪ್ರಸ್ತುತ ರೈಲ್ವೆ ನಿಲ್ದಾಣಗಳಲ್ಲಿ ಹೊಂದಿದ ಸೌರಶಕ್ತಿ ಸಾಮರ್ಥ್ಯವು 2,351.13 ಕೆಡಬ್ಲ್ಯೂಪಿ, ಸೇವಾ ಕಟ್ಟಡಗಳಲ್ಲಿ 4,877.25 ಕೆಡಬ್ಲ್ಯೂಪಿ, ಲೆವೆಲ್ ಕ್ರಾಸಿಂಗ್ ಗೇಟ್‌ಗಳಲ್ಲಿ 138.24 ಕೆಡಬ್ಲ್ಯೂಪಿ ಮತ್ತು ಸೌರ ಪಂಪ್‌ಗಳ ಮೂಲಕ 125 ಕೆಡಬ್ಲ್ಯೂಪಿ ಸಾಮರ್ಥ್ಯವನ್ನು ಹೊಂದಿದೆ. ಇದರ ಜತೆಗೆ ಒಟ್ಟು 13,187.65 ಕೆಡಬ್ಲ್ಯೂಪಿ ಸಾಮರ್ಥ್ಯವಿರುವ ಮೇಲ್ಛಾವಣಿಯ ಸೌರಶಕ್ತಿ ಯೋಜನೆಗಳು ಪ್ರಸ್ತುತ ಕಾರ್ಯಗತಗೊಳ್ಳುತ್ತಿವೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದರು.

ವಾರ್ಷಿಕವಾಗಿ 105 ಕೋಟಿ ರೂ. ಉಳಿತಾಯ ನಿರೀಕ್ಷೆ: ನೈಋತ್ಯ ರೈಲ್ವೆಯು 500 ಮೆಗಾ ವ್ಯಾಟ್ ಸೌರ ವಿದ್ಯುತ್ ಸ್ಥಾವರದಿಂದ 25 ವರ್ಷಗಳ ಅವಧಿಗೆ ದೀರ್ಘಾವಧಿಯ ಸೌರ ವಿದ್ಯುತ್ ಖರೀದಿ ವ್ಯವಸ್ಥೆಗಳನ್ನು ಐರ್‌ಕಾನ್ ನವೀಕರಿಸಬಹುದಾದ ವಿದ್ಯುತ್ ಲಿಮಿಟೆಡ್‌ನಿಂದ ಪಡೆದುಕೊಂಡಿದೆ. ಮೊದಲಿಗೆ 50 ಮೆಗಾ ವ್ಯಾಟ್‌ನ ಆರಂಭಿಕ ಕಾರ್ಯಾರಂಭವಾಗಿದೆ. ಪ್ರತಿ ಕೆಡಬ್ಲ್ಯೂಎಚ್‌ಗೆ 1.93 ರೂ. ದರದಲ್ಲಿ ಸಂಪೂರ್ಣ 500 ಮೆಗಾ ವ್ಯಾಟ್ ಸಾಮರ್ಥ್ಯದ ಕಾರ್ಯಾರಂಭ ಪೂರ್ಣಗೊಂಡ ನಂತರ, ಯೋಜನೆಯ ಕಾರ್ಯಾರಂಭದಿಂದ 25 ವರ್ಷಗಳವರೆಗೆ ಸೌರಶಕ್ತಿಯನ್ನು ಪ್ರತಿ ಕೆಡಬ್ಲ್ಯೂಎಚ್‌ಗೆ 2.57 ರೂ.ದರದಲ್ಲಿ ಖರೀದಿಸಲಾಗುತ್ತದೆ.

ಕಳೆದ 4 ವರ್ಷದಲ್ಲಿ ಸೌರಶಕ್ತಿ ಉತ್ಪಾದನೆ, ಉಳಿತಾಯ ವಿವರ

ವರ್ಷ	ಸೌರಶಕ್ತಿ ಉತ್ಪಾದನೆ (ಯುನಿಟ್‌ಗಳಲ್ಲಿ)	ವಿದ್ಯುತ್ ಬಿಲ್ ಉಳಿತಾಯ
2022-23	4.90 ಲಕ್ಷ	2.06 ಕೋಟಿ
2023-24	5.69 ಲಕ್ಷ	2.81 ಕೋಟಿ
2024-25	6.86 ಲಕ್ಷ	4.07 ಕೋಟಿ
2025-26	4.13 ಲಕ್ಷ	2.61 ಕೋಟಿ

ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕ ಪದ್ಧತಿ ರದ್ದು

ಪುಟ ೩ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಸಮಗ್ರ ಸಮೀಕ್ಷೆ ನಡೆಸಿ, ಅವರಿಗೆ ಸಮಗ್ರ ಪುನರ್ವಸತಿ ಯೋಜನೆಯನ್ನು ರೂಪಿಸಬೇಕು. ಈ ಯೋಜನೆ ಪರ್ಯಾಯ ಉದ್ಯೋಗ, ಶಿಕ್ಷಣ, ಗೌರವಯುತ ವಸತಿ, ಜೀವನೋಪಾಯ ಮತ್ತು ಕೌಶಲ ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಕುಟುಂಬಗಳ ನಿರಂತರ ನೆರವನ್ನು ಒಳಗೊಂಡಿರಬೇಕು ಎಂದು ಶಿಫಾರಸು ಮಾಡಿದೆ. ಅಲ್ಲದೇ, ಎಲ್ಲಾ ಸ್ಥಳೀಯ ಸಂಸ್ಥೆಗಳು ಅಗತ್ಯ ಪ್ರಮಾಣದಲ್ಲಿ ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸುವಂತೆ ಹಾಗೂ ಯಾವುದೇ ಸಂದರ್ಭದಲ್ಲಿಯೂ ಕೈಯಾರೆ ಮಲಮೂತ್ರ ಸ್ವಚ್ಛತೆ ನಡೆಯದಂತೆ ಖಾತರಿಪಡಿಸಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸ್ಲಂಗಳ ಮೂಲ ಸೌಕರ್ಯಕ್ಕೆ ₹1 ಸಾವಿರ ಕೋಟಿ ನೀಡಿ

ಎಲ್ಲಾ ಸ್ಲಂಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ ಮತ್ತು ಸ್ವಚ್ಛತಾ ಸೌಲಭ್ಯಗಳು, ಒಳಚರಂಡಿ ವ್ಯವಸ್ಥೆ, ಪಕ್ಕಾ ರಸ್ತೆ ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ಸಮಗ್ರವಾಗಿ ಒದಗಿಸುವ ಉದ್ದೇಶದಿಂದ 1000 ಕೋಟಿ ರೂ. ಮೊತ್ತದ ಏಕಕಾಲಿಕ ವಿಶೇಷ ಅನುದಾನವನ್ನು ಮಂಜೂರು ಮಾಡಬೇಕು. ಅಲ್ಲದೇ, ಭೂ ರಹಿತ ಸ್ಲಂ ನಿವಾಸಿಗಳ ವಸತಿ, ಪುನರ್ವಸತಿ ಹಾಗೂ ದೀರ್ಘಾವಧಿ ಭದ್ರತೆಯನ್ನು ಖಚಿತಪಡಿಸುವ ಉದ್ದೇಶದಿಂದ ಭೂಮಿಯನ್ನು ಮೀಸಲಿಟ್ಟು ಹಂಚಿಕೆ ಮಾಡಲು ಸ್ಲಂ ಭೂಮಿ ಬ್ಯಾಂಕ್ ಯೋಜನೆಯನ್ನು ಸ್ಥಾಪಿಸಬೇಕು ಎಂದು ವರದಿಯಲ್ಲಿ ಹೇಳಿದ್ದಾರೆ. ಅತ್ಯಾಚಾರಗಳನ್ನು ತಡೆಗಟ್ಟುವ ಉದ್ದೇಶದಿಂದ, ಅಗತ್ಯ ಮೂಲಸೌಕರ್ಯ, ಸಿಬ್ಬಂದಿ ಹಾಗೂ ಲಾಜಿಸ್ಟಿಕ್ ಬೆಂಬಲವನ್ನು ಒದಗಿಸಿ ವಿಶೇಷ ಪೊಲೀಸ್ ಠಾಣೆಗಳನ್ನು ಬಲಪಡಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ.

ಬಿ.ಎಸ್. ಯಡಿಯೂರಪ್ಪ ಸುವರ್ಣ ಸಂಭ್ರಮ

ಪುಟ ೧ **ಆರ್‌ಎಸ್‌ಎಸ್‌ನ ಮಾರ್ಗದರ್ಶನ:** ತಮ್ಮ ರಾಜಕೀಯ ಬದುಕಿನ ನೆನಪುಗಳನ್ನು ಮೆಲುಕು ಹಾಕಿದ ಅವರು, 1974ರಲ್ಲಿ ಶಿವಮೊಗ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದು, 1980ರಲ್ಲಿ ಜೀತಮುಕ್ತ ಸಮಾಜಕ್ಕಾಗಿ ಒಂದು ತಿಂಗಳು ಧರಣಿ ನಡೆಸಿದ್ದು ಹಾಗೂ ಶಿಕಾರಿಪುರದಾದ್ಯಂತ 1987ರಲ್ಲಿ ಸೈಕಲ್ ಜಾಥಾ ಮಾಡಿದ್ದನ್ನು ಸ್ಮರಿಸಿದರು.

ಬಗರ್‌ಹುಕುಂಗಾಗಿ ಶಿಕಾರಿಪುರದಿಂದ ಬೆಂಗಳೂರಿಗೆ ಪಾದಯಾತ್ರೆ, ಕರ್ನಾಟಕ ಪರಿವರ್ತನಾ ಯಾತ್ರೆ ಇತ್ಯಾದಿ ತಮ್ಮ ಹೋರಾಟದ ಬದುಕನ್ನು ನೆನಪಿಸಿಕೊಂಡರು. ಶಿಕಾರಿಪುರ ಪುರಸಭೆ ಸದಸ್ಯನಾಗಿ ಈ ಹಂತದವರೆಗೆ ಬಂದಿದ್ದೇನೆ. ಇವೆಲ್ಲದಕ್ಕೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮಾರ್ಗದರ್ಶನ ಮಹತ್ವದ್ದಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೇರಲು ಅನಂತಕುಮಾರ್ ಅವರ ಸಹಕಾರವನ್ನೂ ಯಡಿಯೂರಪ್ಪ ನೆನೆದರು.

ಇದೇವೇಳೆ ಯಡಿಯೂರಪ್ಪ ಅವರು ನಡೆದುಬಂದ ದಾರಿಯ ಕುರಿತ ವಿಡಿಯೋ ಪ್ರದರ್ಶಿಸಲಾಯಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್, ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಪ್ರತಿಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ ಉಸ್ತುವಾರಿ ಪಿ.ಸುಧಾಕರ್ ರೆಡ್ಡಿ ಮುಂತಾದವರಿದ್ದರು.

ಎಐ ನಮ್ಮ ಕೈಯಲ್ಲಿರಲಿ

ಪುಟ ೩ ಆದರೆ ಯಾವ ದಿಕ್ಕಿಗೆ ತೆರಳಬೇಕೆಂಬ ಅಂತಿಮ ನಿರ್ಧಾರ ಕೈಗೊಳ್ಳಬೇಕಾದ್ದು ನೌಕೆಯ ಬಳಕೆದಾರ. ಇದೇ ರೀತಿ ಎಐಯನ್ನು ಮಾನವ ಸಮುದಾಯ ಯಾವ ರೀತಿ ಬಳಸುತ್ತೆ ಎಂಬುದರ ಮೇಲೆ ನಮ್ಮ ಭವಿಷ್ಯ ನಿರ್ಧಾರವಾಗುವುದು ಎಂದು ಪ್ರಧಾನಿ ಮೋದಿ ಎಚ್ಚರಿಸಿದರು.

ಎಐಯಲ್ಲಿ ಕಾಣುತ್ತಿದ್ದಾರೆ ಅದೃಷ್ಟ ಮತ್ತು ಭವಿಷ್ಯ: ಎಐ ಬಳಕೆಯಲ್ಲಿ ಮಕ್ಕಳ ಸುರಕ್ಷೆಗೆ ಪ್ರಾಧಾನ್ಯತೆಯಿರಬೇಕು. ಶಾಲಾ ಪಠ್ಯಕ್ರಮಗಳ ಕ್ರಮಬದ್ಧಗೊಳಿಸುವಂತೆ ಎಐ ಬಳಕೆ ವಿಚಾರದಲ್ಲೂ ಮಕ್ಕಳ ಸುರಕ್ಷೆಗೆ ಪ್ರಾಧಾನ್ಯತೆ ನೀಡಬೇಕು ಮತ್ತು ಕುಟುಂಬಗಳ ಹಿತರಕ್ಷಣೆಗೆ ಎಐ ಪೂರಕವಾಗಿರಬೇಕು. ಇಂದಿಲ್ಲಿ ಎರಡು ಬಗೆಯ ಜನರಿದ್ದಾರೆ. ಎಐ ಅಂದರೆ ಹೆದರುವವರು ಮತ್ತು ಎಐಯಲ್ಲೇ ಅದೃಷ್ಟ ಕಾಣುವವರು. ಭಾರತವು ಪ್ರತಿಭೆ, ಶಕ್ತಿ ಸಾಮರ್ಥ್ಯ ಮತ್ತು ಸ್ಪಷ್ಟ ನೀತಿಗಳ ಬೆಂಬಲದೊಂದಿಗೆ ಎಐಯಲ್ಲಿ ಅದೃಷ್ಟ ಮತ್ತು ಭವಿಷ್ಯ ಎರಡನ್ನೂ ಕಾಣುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಮೋದಿ ಭಾಷಣ 11 ಭಾಷೆಗೆ ಡಬ್

ಪುಟ ೩ ಅವರ ಭಾಷಣದ ವೇಳೆ ಎಐ ತಂತ್ರಜ್ಞಾನ ಬಳಸಿ ನೇರ ಸಮಯದಲ್ಲಿ ಸಂಜ್ಞಾ ಭಾಷೆಗೆ ಅನುವಾದ ವ್ಯವಸ್ಥೆ ಕಲ್ಪಿಸಲಾಯಿತು. ಇದರಿಂದ ವಿಶಿಷ್ಟಚೇತನರು ಕಾರ್ಯಕ್ರಮದ ಎಲ್ಲ ಅಂಶಗಳಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು. ಈ ಭಾಷಣವನ್ನು ಅಸ್ಸಾಮಿ, ಬೆಂಗಾಳಿ, ಇಂಗ್ಲಿಷ್, ಗುಜರಾತಿ, ಕನ್ನಡ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು ಮತ್ತು ತೆಲುಗು ಸೇರಿದಂತೆ ಒಟ್ಟು 11 ಭಾಷೆಗಳಿಗೆ ನೇರವಾಗಿ ಮಾರ್ಪಡಿಸಲಾಯಿತು. ಬಹುಭಾಷಾ ಮತ್ತು ಸಂಜ್ಞಾ ಭಾಷೆಯ ಅನುವಾದಗಳ ವಿಡಿಯೋಗಳನ್ನು ಪ್ರಧಾನಮಂತ್ರಿಯವರ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಳ್ಳಲಾಯಿತು. ಎಐ ಶೃಂಗದಲ್ಲಿ ನನ್ನ ಭಾಷಣವನ್ನು ಎಐ ಬಳಸಿ ನೇರ ಸಮಯದಲ್ಲಿ ಸಂಜ್ಞಾ ಭಾಷೆಗೆ ಅನುವಾದಿಸಲಾಯಿತು. ಇದು ಎಐ ಕ್ಷೇತ್ರದಲ್ಲಿ ಸುಲಭ ಪ್ರಾಪ್ಯತೆ ಮತ್ತು ಸಮಾವೇಶದತ್ತ ನಮ್ಮ ಬದ್ಧತೆಯನ್ನು ತೋರಿಸುತ್ತದೆ. ತಂತ್ರಜ್ಞಾನ ಮತ್ತು ಸಾರ್ವಜನಿಕ ಸಂವಾದವು ವಿಶಿಷ್ಟಚೇತನರಿಗೆ ಸದಾ ಸುಲಭವಾಗಿ ಲಭ್ಯವಾಗುವಂತೆ ನಾವು ಕೆಲಸ ಮಾಡುತ್ತೇವೆ ಎಂದು ಅವರು ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಯುವಶಕ್ತಿಯ ಪ್ರತಿಭೆ ವ್ಯಕ್ತ

ಶೃಂಗಸಭೆಯಲ್ಲಿ ಮೂರು ಭಾರತೀಯ ಕಂಪನಿಗಳು ತಮ್ಮ ಎಐ ಮಾದರಿಗಳು ಮತ್ತು ಆ್ಯಪ್‌ಗಳನ್ನು ಅನಾವರಣಗೊಳಿಸಿವೆ. ಇವು ದೇಶದ ಯುವಶಕ್ತಿಯ ಪ್ರತಿಭೆಯನ್ನು ಪ್ರತಿಬಿಂಬಿಸಿದೆ ಹಾಗೂ ಜಾಗತಿಕ ಎಐ ಜಾಲಕ್ಕೆ ಭಾರತ ಕೊಡುಗೆಯಾಗಿ ನೀಡುತ್ತಿರುವ ಪರಿಹಾರಗಳ ಗಹನತೆ ಮತ್ತು ವೈವಿಧ್ಯತೆಗಳನ್ನು ಪ್ರತಿಫಲಿಸಿವೆ. ಎಐಯು ನಮ್ಮ ವ್ಯವಸ್ಥೆಗಳ ಕ್ರಿಯಾಶೀಲಗೊಳಿಸಲಿವೆ ಹಾಗೂ ಇವನ್ನು ಹೆಚ್ಚು ದಕ್ಷ ಮತ್ತು ಪ್ರಭಾವಿಯಾಗಿ ಪರಿವರ್ತಿಸಲಿವೆ. ಕ್ರಿಯಾತ್ಮಕ ಪಾತ್ರಗಳ ವಹಿಸುವಲ್ಲಿ ಜನರಿಗೆ ತುಂಬು ಅವಕಾಶಗಳ ಸೃಜಿಸಲಿವೆ. ಆವಿಷ್ಕಾರಗಳು, ಉದ್ಯಮಶೀಲತೆ ಮತ್ತು ಹೊಸ ಉದ್ಯಮಗಳ ಸೃಜನೆಗೆ ಇದೊಂದು ಮಹತ್ತ್ವದ ಅವಕಾಶ ಕೂಡ ಎಂದು ಪ್ರಧಾನಿ ಮೋದಿ ಗಮನ ಸೆಳೆದರು.

ಜ್ಞಾನ ಹಂಚಿಕೆಯಿಂದ ಜಗತ್ತಿಗೆ ಒಳಿತಾಗಲಿದೆ

ಎಐಯನ್ನು ಬಲು ರಹಸ್ಯವಾಗಿ ಅಭಿವೃದ್ಧಿಪಡಿಸಬೇಕೆಂಬುದು ಕೆಲವು ರಾಷ್ಟ್ರಗಳ ಅಭಿಮತ. ಆದರೆ ಈ ವಿಚಾರದಲ್ಲಿ ಭಾರತದ ನಿಲುವು ವಿಭಿನ್ನ. ಎಐ ಜ್ಞಾನ ಹಂಚಿಕೆಯಾದಾಗ, ಅದರ ಕೋಡ್‌ಗಳು ಮುಕ್ತವಾದಲ್ಲಿ ಇಡೀ ಜಗತ್ತಿಗೇ ಒಳಿತಾಗಲಿದೆ ಎಂಬುದು ಭಾರತದ ನಂಬುಗೆ. ಹೀಗಾದರೆ ಮಾತ್ರ ಮಿಲಿಯಂತರ ಯುವ ಮನಸ್ಸುಗಳು ಈ ಅತ್ಯಾಧುನಿಕ ತಂತ್ರಜ್ಞಾನದಲ್ಲಿ ಮತ್ತಷ್ಟು ಸುಧಾರಣೆಗಳ ದಾಖಲಿಸಲು ಸಾಧ್ಯವಾಗುವುದು ಎಂದು ಪ್ರಧಾನಿ ಮೋದಿ ನುಡಿದರು.

ಭಾರತದ ನೇತೃತ್ವ

ಮಾನವ ಸಮುದಾಯದ ಆರನೇ ಒಂದರಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ, ಜಗತ್ತಿನಲ್ಲೇ ಅತ್ಯಧಿಕ ಯುವಶಕ್ತಿ ಸಂಪನ್ನ ಮತ್ತು ಬೃಹತ್ ಪ್ರಮಾಣದಲ್ಲಿ ತಂತ್ರಜ್ಞಾನ ಪ್ರತಿಭೆಗಳ ಆಗರವಾಗಿರುವ ಭಾರತದಲ್ಲಿ ಎಐ ಶೃಂಗಸಭೆ ನಡೆಯುತ್ತಿರುವುದು ತೀರಾ ಹೆಮ್ಮೆಯ ವಿಚಾರ. ಮಾನವ ಚರಿತ್ರೆಯಲ್ಲಿ ಪರಿವರ್ತನಾತ್ಮಕ ಅಧ್ಯಾಯವನ್ನು ಎಐ ದಾಖಲಿಸಿದೆ. ಭಾರತವು ಎಐ ಕ್ರಾಂತಿಯ ಭಾಗವಷ್ಟೇ ಅಲ್ಲ, ಕ್ರಾಂತಿಯ ನೇತೃತ್ವ ವಹಿಸಿಕೊಂಡು ಎಐಗೆ ನಿರ್ದಿಷ್ಟ ರೂಪುರೇಷೆ ನೀಡುತ್ತಿದೆ. ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಮಾತ್ರವಲ್ಲ, ಇದನ್ನು ಅಭೂತಪೂರ್ವ ರೀತಿಯಲ್ಲಿ ಬಳಸುತ್ತಿರುವುದು ಕೂಡ ಭಾರತದ ಹೆಗ್ಗಳಿಕೆ ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ಯುವಪೀಳಿಗೆಯ ಕುತೂಹಲ ಅದ್ಭುತ

ಹೊಸ ತಂತ್ರಜ್ಞಾನ ಬಗ್ಗೆ ಕೆಲವರಿಗೆ ಅನುಮಾನಗಳಿವೆ. ಆದರೆ, ಯುವಪೀಳಿಗೆ ಎಐಯನ್ನು ಅಪ್ಪಿಕೊಳ್ಳುತ್ತಿರುವ ಪರಿ ಮಾತ್ರ ಅಭೂತಪೂರ್ವ. ಎಐ ಶೃಂಗಸಭೆ ಪ್ರದರ್ಶನ ಬಗ್ಗೆ ಇಲ್ಲೀಗ ಸಾಕಷ್ಟು ಜನರು ಕುತೂಹಲಭರಿತರಿದ್ದಾರೆ. ಮಾನವ ಇತಿಹಾಸದ ವಿವಿಧ ಘಟ್ಟಗಳಲ್ಲಿ ಎದುರಾದ ನಿರ್ದಿಷ್ಟ ತಿರುವುಗಳು ಸಮಗ್ರ ಶತಮಾನಗಳಿಗೆ ಆಯಾಮ ನೀಡಿವೆ. ಈ ತಿರುವುಗಳು ನಾಗರಿಕತೆಯ ದಿಕ್ಕನ್ನು ನಿರ್ಧರಿಸಿದವು ಮತ್ತು ಅಭಿವೃದ್ಧಿಯ ಗತಿಯನ್ನು ಪರಿವರ್ತಿಸಿದವು. ಚರಿತ್ರೆಯಲ್ಲಿ ಕೃತಕ ಬುದ್ಧಿಮತ್ತೆ ಕೂಡ ಇದೇ ತೆರನಾದ ಒಂದು ಪರಿವರ್ತನೆಯಾಗಿದೆ ಎಂದು ಪ್ರಧಾನಿ ಮೋದಿ ಗಮನಸೆಳೆದರು.

ದೇಶದ ಪ್ರಗತಿಗೆ ಉಚಿತ ಕೊಡುಗೆ ಅಡ್ಡಿ

ಪುಟ ೩ ತಮಿಳುನಾಡು ಪವರ್ ಡಿಸ್ಟ್ರಿಬ್ಯೂಷನ್ ಕಾರ್ಪೊರೇಷನ್ ಲಿಮಿಟೆಡ್ ಸಲ್ಲಿಸಿದ ಮನವಿಯನ್ನು ಪರಿಗಣಿಸುತ್ತಿದ್ದ ವೇಳೆ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಎಲ್ಲ ಗ್ರಾಹಕರಿಗೂ ಅವರ ಆರ್ಥಿಕ ಸ್ಥಿತಿ ಪರಿಗಣಿಸದೆ ಉಚಿತ ವಿದ್ಯುತ್ ನೀಡುವ ಪ್ರಸ್ತಾವನೆ ಕುರಿತು ನ್ಯಾಯಪೀಠ ಪ್ರಶ್ನಿಸಿದೆ. ವಿದ್ಯುತ್ ಶುಲ್ಕ ಅಧಿಸೂಚನೆ ಹೊರಬಂದ ತಕ್ಷಣವೇ ಈ ರೀತಿಯ ನಿರ್ಧಾರ ಕೈಗೊಳ್ಳಲು ಕಾರಣವೇನು ಎಂದು ನ್ಯಾಯಾಲಯ ಕೇಳಿದೆ.

ರಾಜ್ಯಗಳು ಉದ್ಯೋಗಾವಕಾಶಗಳನ್ನು ಸೃಷ್ಟಿಸುವತ್ತ ಗಮನ ಹರಿಸಬೇಕಾದರೆ, ಉಚಿತ ಆಹಾರ, ಸೈಕಲ್, ವಿದ್ಯುತ್ ಹಂಚುವ ಮೂಲಕ ಕೆಲಸದ ಸಂಸ್ಕೃತಿಗೆ ಧಕ್ಕೆಯುಂಟಾಗುವ ಸಾಧ್ಯತೆ ಇದೆ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ. ಬೆಳಗ್ಗೆಯಿಂದ ಸಂಜೆವರೆಗೆ ಉಚಿತ ಆಹಾರ, ನಂತರ ಉಚಿತ ಸೈಕಲ್, ನಂತರ ಉಚಿತ ವಿದ್ಯುತ್ ನೀಡಿದರೆ, ಜನರು ಕೆಲಸ ಮಾಡಲು ಪ್ರೇರಣೆಯನ್ನು ಕಳೆದುಕೊಳ್ಳುವುದಿಲ್ಲವೇ? ಎಂದು ಪೀಠವು ಪ್ರಶ್ನಿಸಿದೆ. ಆದಾಗ್ಯೂ, ಆರ್ಥಿಕವಾಗಿ ಹಿಂದುಳಿದ ಮತ್ತು ವಿದ್ಯುತ್ ಶುಲ್ಕ ಪಾವತಿಸಲು ಅಸಮರ್ಥರಾದವರಿಗೆ ಕಲ್ಯಾಣ ಕ್ರಮಗಳಲ್ಲಿ ನೆರವು ನೀಡುವುದು ಸಮಂಜಸವೇ ಸರಿ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಆದರೆ, ಪಾವತಿಸಲು ಸಾಮರ್ಥ್ಯವಿರುವವರಿಗೂ ಯಾವುದೇ ಭೇದವಿಲ್ಲದೆ ಉಚಿತ ವಿತರಣೆ ಮಾಡುವುದು ಸಮಂಜಸವಲ್ಲ ಮತ್ತು ಅದು ಸಮಾಧಾನ ನೀತಿಯಂತಾಗುವುದಿಲ್ಲವೇ? ಎಂಬುದರ ಬಗ್ಗೆ ನ್ಯಾಯಾಲಯ ಆತಂಕ ವ್ಯಕ್ತಪಡಿಸಿದೆ.

ಮುಂದೆ ದುಡಿಯುವ ಸಂಸ್ಕೃತಿ ಕುಗ್ಗಲ್ಲವೇ?

ರಾಜ್ಯಗಳ ವೆಚ್ಚದಲ್ಲಿ ದೊಡ್ಡ ಭಾಗ ನೌಕರರ ಸಂಬಳ ಹಾಗೂ ಉಚಿತ ಯೋಜನೆಗಳಿಗೆ ಹೋಗುತ್ತಿರುವಾಗ, ಮೂಲಸೌಕರ್ಯ ಮತ್ತು ಅಭಿವೃದ್ಧಿ ಹೂಡಿಕೆಗಳಿಗೆ ಕಡಿಮೆ ಅವಕಾಶ ಸಿಗುವುದಿಲ್ಲವೇ? ಎಲ್ಲವೂ ಉಚಿತವಾಗಿ ದೊರೆಯುವ ಪರಿಸ್ಥಿತಿ ನಿರ್ಮಾಣವಾದರೆ, ಮುಂದಿನ ಪೀಳಿಗೆಯಲ್ಲಿ ದುಡಿಯುವ ಸಂಸ್ಕೃತಿಯೇ ಕುಗ್ಗುವ ಅಪಾಯವಿಲ್ಲವೇ? ಎಂದು ಕೋರ್ಟ್ ಪ್ರಶ್ನಿಸಿದೆ.

ತಂತ್ರಜ್ಞಾನ ಯುಗದಲ್ಲಿ ವಿಪುಲ ಅವಕಾಶ: ವಿಜ್ಞಾನಿ ಶ್ರೀನಿವಾಸ್

ಚಿಕ್ಕಮಗಳೂರು: ಗಗನ್‌ಯಾನ್ ಮಿಷನ್ ಭಾರತ ದೇಶದ ಭವಿಷ್ಯದ ಅಂತರಿಕ್ಷ ಕೇಂದ್ರದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಇಸ್ರೋ ಕೇಂದ್ರದ ವಿಜ್ಞಾನಿ ಎಚ್. ಎಲ್. ಶ್ರೀನಿವಾಸ್ ತಿಳಿಸಿದರು.

ನಗರದ ಸಹ್ಯಾದ್ರಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್‌ನ ಬಿಸಿಎ ವಿದ್ಯಾರ್ಥಿಗಳಿಗಾಗಿ ಸಂಸ್ಥೆ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಆರ್ಬಿಟ್ ಟಾಕ್ಸ್–ಅಂತರಿಕ್ಷ ತಂತ್ರಜ್ಞಾನ, ವೃತ್ತಿ ಅವಕಾಶಗಳು ಎಂಬ ಜ್ಞಾನವರ್ಧಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಇಸ್ರೋ ಸ್ಪೇಸ್ ಸ್ಟೇಷನ್ ಪರಿಕಲ್ಪನೆ ಹಾಗೂ ಭವಿಷ್ಯದ ಯೋಜನೆಗಳನ್ನು ವಿವರಿಸಿದರು. ಇಂದಿನ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಿರುವ ಅವಕಾಶಗಳು, ಅಂತರಿಕ್ಷ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವೃತ್ತಿ ನಿರ್ಮಾಣಕ್ಕೆ ಅಗತ್ಯವಾದ ಕೌಶಲ್ಯಗಳ ಬಗ್ಗೆ ವಿವರಿಸಿ, ಇಸ್ರೋ ಉಪಗ್ರಹಗಳ ವಿಭಿನ್ನ ವಿಧಗಳು, ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಅವುಗಳು ಮಹತ್ವದ್ದಾಗಿದೆ ಎಂದು ತಿಳಿಸಿದರು. ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಪ್ರಾಂಶುಪಾಲ ಇ.ಜಿ.ಉಲ್ಲಾಸ್ ತಂತ್ರಜ್ಞಾನದ ಮಹತ್ವ, ಉದ್ಯಮಕ್ಕೆ ಅಗತ್ಯವಾದ ಕೌಶಲ್ಯಾಭಿವೃದ್ಧಿ ಹಾಗೂ ಭವಿಷ್ಯದ ಸಿದ್ಧತೆಯ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಸ್ಪಷ್ಟ ಮಾರ್ಗದರ್ಶನ

ಅಂತರಿಕ್ಷದ ತಾಪಮಾನ ಪರಿಸ್ಥಿತಿ ಮತ್ತು ಉಪಗ್ರಹ ಉಡಾವಣೆಯ ಸಮಯದಲ್ಲಿ ಕಾಪಾಡಬೇಕಾದ ತಾಪಮಾನ ನಿಯಂತ್ರಣದ ಬಗ್ಗೆ ವೈಬ್ರೇಶನ್ ಟೆಸ್ಟ್ ಸೇರಿದಂತೆ ಉಡಾವಣೆಗೆ ಮುನ್ನ ನಡೆಯುವ ವಿವಿಧ ಪರೀಕ್ಷೆಗಳ ಹಾಗೂ ಚಂದ್ರಯಾನ್–3 ಸಾಧನೆಗಳ ದೃಶ್ಯಾವಳಿಗಳ ವಿಡಿಯೋ ಪ್ರದರ್ಶನವನ್ನು ನೀಡಿದರು. ಮುಂದಿನ ಎರಡು ವರ್ಷಗಳಲ್ಲಿ ಇಸ್ರೋದಲ್ಲಿ ಹೆಚ್ಚಾಗುವ ಉದ್ಯೋಗಾವಕಾಶಗಳು ಹಾಗೂ ಇಸ್ರೋ ಉದ್ಯೋಗಗಳಿಗೆ ಅರ್ಜಿ ಸಲ್ಲಿಸುವ ವಿಧಾನಗಳ ಕುರಿತು ಸ್ಪಷ್ಟ ಮಾರ್ಗದರ್ಶನ ನೀಡಿದರು.



ಅಸ್ಸಾಂನ ಗುವಾಹಟಿಯ ಕಾಮಾಕ್ಯ ದೇಗುಲದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ, ಸಂಸದೆ ಪ್ರಿಯಾಂಕಾ ವಾದ್ರಾ ಅವರ ಜತೆ ಡಿಸಿಎಂ ಡಿ. ಕೆ. ಶಿವಕುಮಾರ್ ಅವರು ಗುರುವಾರ ಪೂಜೆ ಸಲ್ಲಿಸಿದರು.

ನಂದಿನಿ ಹಾಲಿನ ಉತ್ಪನ್ನಗಳ ಕುರಿತು ಅಪಪ್ರಚಾರ
ವೈದ್ಯೆಯೊಬ್ಬರ ವಿರುದ್ಧ ದೂರು

ಬೆಂಗಳೂರು: ಕರ್ನಾಟಕದ ಹೆಮ್ಮೆಯ ನಂದಿನಿ ಹಾಲಿನ ಉತ್ಪನ್ನಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಾಗೂ ಅಪಪ್ರಚಾರ ಮಾಡಿದ ಆರೋಪದ ಮೇಲೆ ಮಲ್ಲೇಶ್ವರದ ಖಾಸಗಿ ಆಸ್ಪತ್ರೆಯ ವೈದ್ಯೆಯೊಬ್ಬರ ವಿರುದ್ಧ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲ್ಲೇಶ್ವರದಲ್ಲಿರುವ ಖಾಸಗಿ ಆಸ್ಪತ್ರೆ ಹಾಗೂ ಮಾಲೂರು ಬಾಲಾಜಿ ಕ್ಲಿನಿಕ್‌ನಲ್ಲಿ ಚರ್ಮರೋಗ ತಜ್ಞರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಶರಣ್ಯ ಎಂಬವರು ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ನಂದಿನಿ ಉತ್ಪನ್ನಗಳ ಬಗ್ಗೆ ವಿಡಿಯೋ ಒಂದನ್ನು ಹಂಚಿಕೊಂಡಿದ್ದರು. ಈ ವಿಡಿಯೋದಲ್ಲಿ ನಂದಿನಿ ಕ್ರೀಮ್ ಬನ್, ಸ್ಟ್ರಾಬೆರಿ ಫ್ಲೇವರ್ಡ್ ಮಿಲ್ಕ್ ಹಾಗೂ ಸ್ಲಾಶ್ ಪಾನೀಯಗಳು ವಿಷಕಾರಿ ಅಂಶಗಳಿಂದ ಕೂಡಿದ್ದು, ಇವುಗಳ ಸೇವನೆಯಿಂದ ಕ್ಯಾನ್ಸರ್ ಹಾಗೂ ಆಟೋಇಮ್ಯೂನ್ ಕಾಯಿಲೆಗಳು ಬರುತ್ತವೆ ಎಂದು ಆಧಾರರಹಿತವಾಗಿ ಆರೋಪಿಸಿದ್ದರು.

ಅಲ್ಲದೆ, ಈ ಉತ್ಪನ್ನಗಳಿಗೆ ಎಫ್‌ಎಸ್‌ಎಸ್‌ಎಐ ಅನುಮತಿ ನೀಡಿರುವುದರ ಬಗ್ಗೆಯೂ ಅವರು ಆಕ್ಷೇಪ ವ್ಯಕ್ತಪಡಿಸಿದ್ದರು. ಅವರು ಮಾಡಿದ್ದ ವಿಡಿಯೋ ನಂದಿನಿ ಬ್ರಾಂಡ್‌ನ ವಿಶ್ವಾಸಾರ್ಹತೆಗೆ ಧಕ್ಕೆ ತರುವಂತಿದೆ ಎಂದು ಕರ್ನಾಟಕ ಹಾಲು ಮಹಾಮಂಡಳಿ ಗಂಭೀರವಾಗಿ ಪರಿಗಣಿಸಿದೆ.

ಈ ಕುರಿತು ಕೆಎಂಎಫ್‌ನ ಆಡಳಿತ ನಿರ್ದೇಶಕಿ ಪದ್ಮಾವತಿ ಆರ್. ಅವರು ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನಂದಿನಿ ಉತ್ಪನ್ನಗಳು ಎಫ್‌ಎಸ್‌ಎಸ್‌ಎಐ ನಿಯಮಾವಳಿಗಳ ಪ್ರಕಾರವೇ ತಯಾರಾಗುತ್ತಿದ್ದು, ಅತ್ಯಂತ ಸುರಕ್ಷಿತವಾಗಿವೆ. ಸಾರ್ವಜನಿಕರಲ್ಲಿ ಗೊಂದಲ ಮೂಡಿಸಿ, ಬ್ರಾಂಡ್ ಹೆಸರಿಗೆ ಕಪ್ಪುಚುಕ್ಕೆ ತರುವ ಉದ್ದೇಶದಿಂದಲೇ ಈ ರೀತಿ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ದೂರಿನ ಅನ್ವಯ ಪೊಲೀಸರು ಡಾ. ಶರಣ್ಯ ವಿರುದ್ಧ ಬಿಎನ್‌ಎಸ್‌ಎಸ್ ಕಾಯ್ದೆಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಕಿರುಸುದ್ದಿ

ದರೋಡೆ ಪ್ರಕರಣ: ಆರೋಪಿಗಳಿಬ್ಬರ ಬಂಧನ

ವಿಜಯಪುರ: ಹಲಸಂಗಿ ಗ್ರಾಮದ ಚಿನ್ನಾಭರಣ ಅಂಗಡಿ ಮಾಲೀಕರಿಗೆ ಪಿಸ್ತೂಲ್ ತೋರಿಸಿ, 205 ಗ್ರಾಂ ಚಿನ್ನಾಭರಣ, 22 ಲಕ್ಷ ರೂ.ಗಳ 1 ಕೆಜಿ ಬೆಳ್ಳಿ ದರೋಡೆ ಮಾಡಿದ ಇಬ್ಬರು ಅಂತರ್ ರಾಜ್ಯ ಆರೋಪಿಗಳನ್ನು ಬಂಧಿಸಿದ್ದು, 205 ಗ್ರಾಂ ಚಿನ್ನಾಭರಣ, 1 ಕೆಜಿ ಬೆಳ್ಳಿ ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಹೇಳಿದರು.ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಂಧಿತ ಆರೋಪಿಗಳು ಮೂಲತಃ ಸಂಖ ಗ್ರಾಮಕ್ಕೆ ಸೇರಿದರೂ ಹಾಲಿ ಜತ್ತ ನಿವಾಸಿ ಹಣಮಂತ ಮಲ್ಲಪ್ಪ ವಾಘೋಲೆ (28), ಪುಣೆಯಲ್ಲಿ ನೆಲೆಸಿದ್ದ ಶಿವರಾಜ್ ಉರ್ಫ್ ಗೌಡಪ್ಪ ರಾವುಸಾಹೇಬ ನಾವಿ (28) ಎಂದು ಹೇಳಿದರು. ಆರೋಪಿಗಳಿಂದ 205 ಗ್ರಾಂ ಚಿನ್ನಾಭರಣ, 1 ಕೆಜಿ ಬೆಳ್ಳಿ ಸೇರಿದಂತೆ 22 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಕೃತ್ಯದ ವೇಳೆ ಬಳಸಿದ ಕಂಟ್ರಿ ಪಿಸ್ತೂಲ್ ಸೇರಿದಂತೆ 3 ಕಂಟ್ರಿ ಪಿಸ್ತೂಲ್, 26 ಜೀವಂತ ಗುಂಡು, ಒಂದು ಏರ್‌ಗನ್, ಮೋಟಾರ್ ಸೈಕಲ್ ಜಪ್ತು ಮಾಡಿಕೊಳ್ಳಲಾಗಿದೆ ಎಂದರು. ಕಳೆದ ಜ.26ರಂದು ಹಲಸಂಗಿ ಗ್ರಾಮದಲ್ಲಿ ಈ ಘಟನೆ ನಡೆದಿತ್ತು. ಸಾಲಬಾಧೆ ಹಾಗೂ ಷೋಕಿ ಆಸೆ, ದುಬಾರಿ ಲೈಫ್ ಸ್ಟೈಲ್ ಮೋಹದಿಂದಾಗಿ ಆರೋಪಿಗಳು ಈ ಕೃತ್ಯ ಎಸಗಿದ್ದಾರೆ. ಮೊದಲು ಸೊಲ್ಲಾಪುರದ ಬಂಗಾರ ಅಂಗಡಿ ದೋಚುವ ಕಾರ್ಯಯೋಜನೆ ರೂಪಿಸಿದ್ದು, ನಂತರ ಅಲ್ಲಿ ಜನಸಂದಣಿ ಅಧಿಕವಾಗಿರುವುದರಿಂದ ಗಡಿ ಭಾಗದ ಹಲಸಂಗಿಯನ್ನು ಆಯ್ಕೆ ಮಾಡಿ ದರೋಡೆ ಮಾಡಿದ್ದಾರೆ ಎನ್ನುವುದು ತಿಳಿದು ಬಂದಿದೆ ಎಂದರು. ಆರೋಪಿಗಳು ಉತ್ತರ ಪ್ರದೇಶದ ಗೋರಖಪುರ್‌ದಿಂದ ಪಿಸ್ತೂಲ್ ತಂದಿರುವ ಮಾಹಿತಿ ವಿಚಾರಣೆ ವೇಳೆ ತಿಳಿದು ಬಂದಿದೆ ಎಂದರು. ಎಎಸ್‌ಪಿ ರಾಮಗೌಡ ಹಟ್ಟಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಇಸ್ಪೀಟ್ ಜೂಜಾಟ: ಇಬ್ಬರು ಪೊಲೀಸರ ಅಮಾನತು



ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲೂಕಿನ ದಿಗ್ಗಾಂವ ಗ್ರಾಮದ ಹೊರವಲಯದಲ್ಲಿ ಜೂಜಾಟವಾಡುತ್ತಿದ ವೇಳೆ ಪೊಲಿಸರ ದಾಳಿ ವೇಳೆ ಪರಾರಿಯಾದ ಇಬ್ಬರು ಕಾನ್ಸ್ಟೇಬಲ್‌ಗಳಾದ ನಗರದ ಎಂ.ಬಿ ನಗರ ಪೊಲೀಸ್ ಠಾಣೆ ಸಿಬ್ಬಂದಿ ಗುರುನಾಥ ಸಿಪಿಸಿ 76 ಹಾಗೂ ಸಿಎಆರ್ ಘಟಕದ ಸಿಬ್ಬಂದಿ ಮಡಿವಾಳಪ್ಪ ಎಪಿಸಿ 297 ಇಬ್ಬರನ್ನು ಸೇವೆಯಿಂದ ಅಮಾನತು ಮಾಡಿ ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಗುರುವಾರ ಆದೇಶ ಹೊರಡಿಸಿದ್ದಾರೆ. ಚಿತ್ತಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ದಿಗ್ಗಾಂವ್ ಗ್ರಾಮದಿಂದ ಬೆನಕನಹಳ್ಳಿ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಸಾರ್ವಜನಿಕ ಸ್ಥಳದಲ್ಲಿ ಇಸ್ಪೀಟ್ ಜೂಜಾಟ ಆಡುತ್ತಿದ್ದಾರೆ ಎಂಬ ಮಾಹಿತಿಯ ಮೇರೆಗೆ ಪಿಎಸ್‌ಐ ದಾಳಿ ನಡೆಸಿ ಸಿಬ್ಬಂದಿಯನ್ನು ವಶಕ್ಕೆ ಪಡೆದುಕೊಂಡಿದ್ದು, ಪೊಲೀಸ್ ಅಧೀಕ್ಷಕರ ವರದಿಯ ಅನ್ವಯ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್ ಡಿ ಇಲಾಖಾ ಶಿಸ್ತಿನ ಕ್ರಮ ಬಾಕಿಯಿರಿಸಿ ಸಿಬ್ಬಂದಿಯನ್ನು ಅಮಾನತ್ತಿನಲ್ಲಿರಿಸಿ ಆದೇಶ ಹೊರಡಿಸಿದ್ದಾರೆ.

ಏನಿದು ಪ್ರಕರಣ? ಜಿಲ್ಲೆಯ ಚಿತ್ತಾಪುರ ತಾಲೂಕಿನ ದಿಗ್ಗಾಂವ ಗ್ರಾಮದ ಹಳ್ಳದ ಪಕ್ಕದಲ್ಲಿ ಹಣಪಿಟ್ಟು ಜೂಜಾಟ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಚಿತ್ತಾಪುರ ಪಿಎಸ್‌ಐ ಮಂಜುನಾಥ ರೆಡ್ಡಿ ನೇತೃತ್ವದ ತಂಡ ಮಂಗಳವಾರ ಸಂಜೆ 5 ಗಂಟೆ ಸುಮಾರಿಗೆ ಅನಿರೀಕ್ಷಿತ ದಾಳಿ ನಡೆಸಿತು.

ಕೇಂದ್ರ ಸಚಿವ ಗಜೇಂದ್ರಸಿಂಗ್ ಶೇಖಾವತ್ ವಿಶ್ವಾಸ
2047ಕ್ಕೆ ವಿಕಸಿತ ಭಾರತ

ಬೆಂಗಳೂರು: ನಮ್ಮ ದೇಶವು 2047ರಲ್ಲಿ ವಿಕಸಿತ ಭಾರತ ಆಗಬೇಕಿದೆ, ಇದಕ್ಕಾಗಿ 2028ರಲ್ಲಿ ಕರ್ನಾಟಕದಲ್ಲಿ ಬಹುಮತದೊಂದಿಗೆ ಬಿಜೆಪಿ ಅಧಿಕಾರ ಪಡೆಯಬೇಕು ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಗುರುವಾರ ನಡೆದ ರಾಜ್ಯ ಕಾರ್ಯಕಾರಿಣಿಯನ್ನು ಉದ್ಘಾಟಿಸಿದ ಅವರು, ಭಾರತದ ಗೌರವ ಮತ್ತು ಸಂಸ್ಕೃತಿಯು ಈ ಮಣ್ಣಿನಲ್ಲಿ ಬೆರೆತುಹೋಗಿದೆ. ಅದನ್ನು ಕಾಪಾಡುವುದಕ್ಕಾಗಿ ಇಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಅಗತ್ಯವಾಗಿದೆ ಎಂದರು.

ಇದು ಕೇವಲ ಸಂಘಟನಾತ್ಮಕ ಸಭೆಯಲ್ಲ; ಆತ್ಮ ಮಂಥನದ ಸಭೆಯೂ ಆಗಿದೆ. ಪಕ್ಷ ಸಂಘಟನೆ ಹಾಗೂ ಭ್ರಷ್ಟ ಸರ್ಕಾರವನ್ನು ಅಧಿಕಾರದಿಂದ ತೊಲಗಿಸಿ ಅಧಿಕಾರ ಮರಳಿ ಪಡೆಯುವ ಸಂಕಲ್ಪದ ಸಭೆ ಇದಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ವಿಚಾರಧಾರೆಯ ಮನನ ಮಾಡುವ ಸಭೆ ಇದು ಎಂದು ತಿಳಿಸಿದರು.

ತಮ್ಮ ಮತಗಳ ಧ್ರುವೀಕರಣಕ್ಕಾಗಿ ಕಾಂಗ್ರೆಸ್ ಪಕ್ಷ ಮುಸ್ಲಿಮರ ತುಷ್ಟೀಕರಣ ಮಾಡುತ್ತಿದೆ. ಹಿಂದುಗಳಿಗೆ ಅಪಮಾನ ಮಾಡಲಾಗುತ್ತಿದೆ. ರಾತ್ರೋ ರಾತ್ರಿ ಆರ್‌ಟಿಸಿಗಳಲ್ಲಿ ರೈತರ ಭೂಮಿಯನ್ನು ವಕ್ಫ್ ಆಸ್ತಿ ಎಂದು ನಮೂದಿಸಲಾಯಿತು. ಆದರೆ, ರೈತರ ಒಂದಿಂಚು ಭೂಮಿ ಕೂಡ ವಕ್ಫ್‌ಗೆ ಹೋಗುವುದಕ್ಕೆ ನಾವು ಬಿಡುವುದಿಲ್ಲ. ಈ ಬಾರಿ ರಾಜ್ಯಕ್ಕೆ ಹೆಚ್ಚುವರಿ ಅನುದಾನ ಬಂದಿದೆ. ಅದನ್ನು ಭ್ರಷ್ಟಾಚಾರಕ್ಕೆ ಬಳಕೆಯಾಗುವುದಕ್ಕೆ ಬಿಡಬಾರದು, ಅದಕ್ಕಾಗಿ ಜಾಗರೂಕರಾಗಿರಬೇಕು ಎಂದು ಹೇಳಿದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಹಾಗೂ ಜಿಬಿಎ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸುವ ಸಂಕಲ್ಪ ನಮ್ಮದಾಗಬೇಕು. ಬಿಜೆಪಿಯನ್ನು ತಳಮಟ್ಟದಲ್ಲಿ ಬಲಪಡಿಸಬೇಕು. ಇದು ಪರೀಕ್ಷೆಯ ಕಾಲ; ಕಾರ್ಯಕರ್ತರು ಜನರ ಮನೆ ಮನೆಗೆ ತೆರಳಿ ಕಾಂಗ್ರೆಸ್ಸಿನ ವೈಫಲ್ಯಗಳನ್ನು ತಿಳಿಸಬೇಕು ಎಂದು ಕರೆ ನೀಡಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ ಉಸ್ತುವಾರಿ ಪಿ.ಸುಧಾಕರ್ ರೆಡ್ಡಿ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಪ್ರತಿಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಜಗದೀಶ್ ಶೆಟ್ಟರ್, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಸಚಿವರು ಮತ್ತು ಕಾರ್ಯಕಾರಿಣಿಯ ಆಪೇಕ್ಷಿತರು ಉಪಸ್ಥಿತರಿದ್ದರು.



ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಗೆಲುವು ಖಚಿತ

ಇದೊಂದು ಭ್ರಷ್ಟ ಸರ್ಕಾರ, ಮೊಕದ್ದಮೆಗಳ ನೇತಾರರ ಸರ್ಕಾರವಾಗಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವುದು ಖಚಿತ ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗ್ರವಾಲ್ ವಿಶ್ವಾಸ ವ್ಯಕ್ತಪಡಿಸಿದರು. ಸಮಾಜದಲ್ಲಿರುವ ಪ್ರತಿಯೊಂದು ಸಮುದಾಯದವರನ್ನು ಒಳಗೊಂಡು ಸಂಘಟನೆ ಮಾಡಿ ಮುಂದಿನ ಚುನಾವಣೆಯಲ್ಲಿ ಹೋರಾಡಿ ವಿಜಯಶಾಲಿಗಳಾಗಬೇಕು ಎಂದರು. ವಕ್ಫ್ ಅತಿಕ್ರಮಣ ವಿರುದ್ಧ ಹೋರಾಟವೂ ಸೇರಿದಂತೆ ಬಿಜೆಪಿ ನಿರಂತರ ಹೋರಾಟದಲ್ಲಿ ತೊಡಗಿಸಿಕೊಂಡ ಕುರಿತು ಅವರು ಮೆಚ್ಚುಗೆ ಸೂಚಿಸಿದರು. ಬಿ.ವೈ. ವಿಜಯೇಂದ್ರ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆಯಲ್ಲಿ ಬಹುಮತದೊಂದಿಗೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂದು ಅಗ್ರವಾಲ್ ಹೇಳಿದರು.

> ರಾಜ್ಯ ಸರ್ಕಾರದ ಚಳಿ ಬಿಡಿಸುವ ಕೆಲಸವನ್ನು ಪ್ರತಿಪಕ್ಷವಾದ ಬಿಜೆಪಿ ರಾಜ್ಯ ಘಟಕ ಮಾಡುತ್ತಲೇ ಬಂದಿದೆ. ಮುಂದಿನ ದಿನಗಳದ್ದು ಅನೇಕ ಚುನಾವಣೆಗಳ ದಿನಗಳು. ಕಾರ್ಯಕರ್ತರ ಚುನಾವಣೆ ಮುಂದೆ ಬರಲಿದೆ. ಗ್ರಾ.ಪಂ., ತಾ.ಪಂ., ಜಿ.ಪಂ. ಚುನಾವಣೆಗಳಲ್ಲಿ ನಮ್ಮ ಕಾರ್ಯಕರ್ತರನ್ನು ಗೆಲ್ಲಿಸಬೇಕು.
> ■ ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಏಳು–ಬೀಳು ನಡುವೆ ಯಶಸ್ಸು: ಸತೀಶ್

ಬೆಂಗಳೂರು: ರಾಜಕೀಯದಲ್ಲಿ ಹಲವಾರು ಏಳು–ಬೀಳುಗಳನ್ನು ಕಂಡು ಇಂದು ಯಶಸ್ವಿಯಾಗಿದ್ದೇವೆ. ಯಾವತ್ತೂ ಜನರನ್ನು ಸರಿ ದಾರಿಗೆ ತರಲು ಹೆಚ್ಚು ಒತ್ತು ನೀಡಿದ್ದೇವೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಗುರುವಾರ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ವಾರ್ಷಿಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ನಾವು ರಾಜಕೀಯಕ್ಕಿಂತ ಹೆಚ್ಚಿನ ಸಮಯವನ್ನು ಸಾಮಾಜಿಕ ಕಾರ್ಯಗಳಿಗೆ ನೀಡುತ್ತೇವೆ ಎಂದರು. 30 ವರ್ಷಗಳ ಸಮಾಜ ಸೇವೆ ಮತ್ತು ರಾಜಕೀಯ ಹಿನ್ನೆಲೆಯಲ್ಲಿ ಪ್ರೆಸ್ ಕ್ಲಬ್ ಪ್ರಶಸ್ತಿ ನೀಡಲಾಗಿದೆ. ಸುಮಾರು ಪ್ರಶಸ್ತಿಗಳು ಬಂದಿದ್ದರೂ ಸ್ವೀಕರಿಸಿಲ್ಲ, ಆದರೆ ಈ ಪ್ರಶಸ್ತಿಯನ್ನು ಸ್ವೀಕರಿಸಿದ್ದೇನೆ. ಈ ಬಾರಿ ನನ್ನನ್ನು ಆಯ್ಕೆ ಮಾಡಿದಕ್ಕೆ ಧನ್ಯವಾದಗಳು ಎಂದು ಹೇಳಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ ಪ್ರಭಾಕರ್ ಮಾತನಾಡಿ, ಸತೀಶ್ ಜಾರಕಿಹೊಳಿ ಅವರು, ಮೌನಿಯಾಗಿದ್ದರೂ ಪರವಾಗಿಲ್ಲ, ನನ್ನ ಕೆಲಸ ಮಾತನಾಡಬೇಕು ಎನ್ನುವರು, ಕೆಲಸದಲ್ಲಿ ತಮ್ಮ ಶಕ್ತಿ ಸಾಮರ್ಥ್ಯ ತೋರಿಸುವರು. ಜನರಿಗೆ ಹೇಳಬೇಕಾದನ್ನು ಸ್ಪಷ್ಟವಾಗಿ ಹೇಳುತ್ತಾರೆ. ಅವರಲ್ಲಿ ಸ್ಪಷ್ಟತೆ ಖಚಿತತೆ ಕಾಣಬಹುದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಅಡ್ವೋಕೆಟ್ ಜನರಲ್ ರವಿವರ್ಮಕುಮಾರ್, ಶಾಸಕ ರಿಜ್ವಾನ್ ಅರ್ಷದ್, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಉಪಾಧ್ಯಕ್ಷ ಮೋಹನ್ ಕುಮಾರ್ ಬಿ.ಎನ್. ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಅಧಿಕಾರ ಬರುತ್ತೆ ಹೋಗುತ್ತೆ

ಜೀವನದಲ್ಲಿ ಹಣ, ಅಧಿಕಾರ ಬರುತ್ತೆ ಹೋಗುತ್ತೆ ಆದರೆ, ಮಾಡಿದ ಕಾರ್ಯಗಳನ್ನು ಅಳಿಸಲು ಸಾಧ್ಯವಿಲ್ಲ. ಯಾವ ಕೆಲಸ ಅಸಾಧ್ಯ ಎನ್ನುತ್ತಾರೆಯೋ ಅಂತಹ ಕೆಲಸಗಳನ್ನು ಮಾಡುವ ಹವ್ಯಾಸ ಇದೆ. ಬಂಗಾರಪ್ಪ ಅವರು ಕ್ಷೇತ್ರಕ್ಕೆ ಹೋಗದೆ ಗೆದ್ದಿದ್ದರು, ಅದೇ ರೀತಿ ನಾನು ಒಂದು ಚುನಾವಣೆಯಲ್ಲಿ ಕ್ಷೇತ್ರಕ್ಕೆ ಹೋಗದೆ ಗೆಲುವು ಸಾಧಿಸಿದ್ದೆ ಎಂದರು.ನಮಗೆ ಯಾರು ಯಾವುದೇ ಕೆಲಸಕ್ಕೆ ಅರ್ಜಿ ಕೊಟ್ಟ ಪದೇ ಪದೇ ಅಲೆಯಬೇಕಿಲ್ಲ, ಇದು ಜನಪರ ಕೆಲಸ ಎಂದರೆ ನಾವೇ ಕಾರ್ಯ ಕೈಗೊಳ್ಳುತ್ತೇವೆ. ಕನಿಷ್ಠ 10 ವರ್ಷ ರಾಜಕಾರಣದಲ್ಲಿ ಇರುತ್ತೇನೆ. ಅಲ್ಲಿಯವರೆಗೂ ರಾಜ್ಯದ ಜನರ ಅಭಿವೃದ್ಧಿಗೆ ಪೂರಕವಾಗಿ ಖಂಡಿತವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಪ್ರಮುಖ ಜಿಲ್ಲೆಗಳಲ್ಲಿ ವಾಯುಗುಣ ಮಟ್ಟ

ಬೆಂಗಳೂರು	ಬೆಳಗಾವಿ	ಚಾ.ನಗರ	ಬಳ್ಳಾರಿ	ಉಡುಪಿ
157	277	45	146	185
ಮಂಗಳೂರು	ಮೈಸೂರು	ಶಿವಮೊಗ್ಗ	ಹುಬ್ಬಳ್ಳಿ	ವಿಜಯಪುರ
178	85	187	160	144

ಬೆಳಗಾವಿಯಲ್ಲಿ ವಾಯು ಗುಣಮಟ್ಟ ಕಳಪೆ
ಗಾಳಿ ಮಟ್ಟ 277 ದಾಖಲು: ಆತಂಕ

ಬೆಳಗಾವಿ: ಕರ್ನಾಟಕದ ಪ್ರಮುಖ ನಗರಗಳಲ್ಲಿ ವಾಯು ಗುಣಮಟ್ಟವು ಹದಗೆಟ್ಟಿದ್ದು, ಅದರಲ್ಲೂ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಆತಂಕಕಾರಿ ಮಟ್ಟಕ್ಕೆ ತಲುಪಿದೆ.

ನಗರದ ಸರಾಸರಿ ಗಾಳಿಯ ಮಟ್ಟ 117ರಿಂದ 157ರ ನಡುವೆ ದಾಖಲಾಗಿದ್ದು, ಇದು ಕಳಪೆ ಮತ್ತು ಕೆಲವು ಭಾಗಗಳಲ್ಲಿ ಅನಾರೋಗ್ಯಕರ ಮಟ್ಟಕ್ಕೆ ತಲುಪಿದೆ. ಸಿಲ್ಕ್ ಬೋರ್ಡ್, ವೈಟ್‌ಫೀಲ್ಡ್ ಮತ್ತು ಬಿಟಿಎಂ ಲೇಔಟ್‌ನಂತಹ ಪ್ರದೇಶಗಳಲ್ಲಿ ಮಾಲಿನ್ಯದ ಮಟ್ಟ ಹೆಚ್ಚಿದೆ.

ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ವಾಯು ಗುಣಮಟ್ಟ ಕಳಪೆಯಾಗಿದ್ದು, ಗಾಳಿಯ ಮಟ್ಟ 277 ದಾಖಲಾಗಿದೆ. ಇದು ಅನಾರೋಗ್ಯಕರ ಹಂತ ಎಂದು ಹೇಳಲಾಗಿದೆ. ಹಾಗಾಗಿ ಶ್ವಾಸಕೋಶದ ಸಮಸ್ಯೆ ಇರುವವರಿಗೆ ಹಾನಿಕಾರಕವಾಗಿದೆ. ಕರಾವಳಿ ಭಾಗದಲ್ಲೂ ವಾಯು ಗುಣಮಟ್ಟ ಕುಸಿತ ಕಂಡಿದ್ದು, ವಾಹನ ದಟ್ಟಣೆ, ಒಣ ಹವೆಯಿಂದಾಗಿ ಗಾಳಿಯಲ್ಲಿ ಧೂಳಿನ ಪ್ರಮಾಣ ಹೆಚ್ಚಾಗಿದೆ.

ರಾಜ್ಯದಲ್ಲಿ ತಾಪಮಾನದ ಏರಿಳಿತ (ಬೆಳಗ್ಗೆ ಚಳಿ, ಮಧ್ಯಾಹ್ನ ಬಿಸಿಲು) ಮತ್ತು ವಾಯು ಮಾಲಿನ್ಯದ ಕಾರಣದಿಂದಾಗಿ ಕೆಮ್ಮು, ನೆಗಡಿ ಮತ್ತು ಉಸಿರಾಟದ ತೊಂದರೆಗಳು ಹೆಚ್ಚಾಗುತ್ತಿವೆ ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ.

ಮಾಲಿನ್ಯ ಹೆಚ್ಚಿರುವ ಪ್ರದೇಶಗಳಲ್ಲಿ ಸಂಚರಿಸುವಾಗ ಎನ್95 ಮಾಸ್ಕ್ ಬಳಸುವುದು ಉತ್ತಮ. ಉಸಿರಾಟದ ತೊಂದರೆ ಇರುವವರು ಮತ್ತು ಮಕ್ಕಳು ಬೆಳಗ್ಗೆ ಅಥವಾ ಸಂಜೆ ಹೊರಗೆ ಹೋಗುವುದನ್ನು ಕಡಿಮೆ ಮಾಡುವುದು ಸೂಕ್ತ ಹಾಗೂ ಒಣ ಹವೆಯಿರುವುದರಿಂದ ಸಾಕಷ್ಟು ನೀರು ಕುಡಿಯಿರಿ ಎಂದು ಸಲಹೆ ನೀಡಿದ್ದಾರೆ.

ಇನ್ನು ಈ ಗಾಳಿ ಗುಣಮಟ್ಟ ಮಧ್ಯಾಹ್ನ ಅಥವಾ ಸಂಜೆ ಹೊತ್ತಿಗೆ ಬದಲಾಗಬಹುದು ಎಂದು ಹೇಳಲಾಗಿದೆ. ಗಾಳಿಯಲ್ಲಿ ಪ್ರಮುಖವಾಗಿ ಪಿಎಂ 2.5 ಮತ್ತು ಪಿಎಂ 10 ಕಣಗಳ ಪ್ರಮಾಣ ಹೆಚ್ಚಾಗಿದೆ. ಇದು ಒಣ ಹವೆಯಿಂದಾಗಿ ಗಾಳಿಯಲ್ಲಿ ಧೂಳು ಸುಲಭವಾಗಿ ಹರಡುತ್ತದೆ.

ಪೂರ್ವ ಸಿದ್ಧತಾ ಪರೀಕ್ಷೆ: ಸಮಯ ಬದಲಾವಣೆ

ಬೆಂಗಳೂರು: ಫೆ.28ಕ್ಕೆ ನಿಗದಿಯಾಗಿರುವ ಎಸ್‌ಎಸ್‌ಎಲ್‌ಸಿ ಮೂರನೇ ಪೂರ್ವ ಸಿದ್ಧತಾ ಪರೀಕ್ಷೆಯ ಒಂದು ವಿಷಯದ ಸಮಯವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬದಲಾವಣೆ ಮಾಡಿದೆ.

ಫೆ. 28ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ರವರೆಗೆ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವುದರಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ನಿಗದಿಯಾಗಿದ್ದ ಸಮಾಜ ವಿಜ್ಞಾನ ಪರೀಕ್ಷೆಯನ್ನು ಬೆಳಗ್ಗೆ 10 ರ ಬದಲು ಮಧ್ಯಾಹ್ನ 2 ಗಂಟೆಗೆ ಪ್ರಾರಂಭಿಸುವಂತೆ ಸೂಚನೆ ನೀಡಿದೆ. ಅಂದು ಮಧ್ಯಾಹ್ನ 12.30ರ ಬಳಿಕ ಪ್ರಶ್ನೆ ಪತ್ರಿಕೆಯನ್ನು ಶಾಲಾ ಲಾಗಿನ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷೆ ನಡೆಸುವಂತೆ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಪರೀಕ್ಷಾ ಮಂಡಳಿ ಸೂಚಿಸಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿ–ಮಗು ಸಾವು

ಸಿಂದಗಿ: ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿ ಹಾಗೂ ಮಗು ಮೃತಪಟ್ಟಿದ್ದು, ಮಹಿಳೆ ಮತ್ತು ಮಗುವಿನ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಕುಟುಂಬದವರು ಆರೋಪಿಸುತ್ತಿದ್ದಾರೆ.

ಸಿಂದಗಿಯ ವಿದ್ಯಾ ನಗರದ 4ನೇ ಕ್ರಾಸ್ ನಿವಾಸಿ ಮೈತ್ರಾ ರವಿಚಂದ್ರ ಸುಂಗಠಾಣ (26) ಮೃತಪಟ್ಟವರು. ಮೈತ್ರಾ ಫೆ.18ರಂದು ಸಿಂದಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದು, ಫೆ.18ರಂದು ಮಗುವಿಗೆ ಜನ್ಮ ನೀಡಿದ್ದರು. ಅತೀ ರಕ್ತ ಸ್ರಾವದಿಂದ ಬಳಲುತ್ತಿದ್ದರು ಚಿಕಿತ್ಸೆ ನೀಡದೇ ಇದ್ದುದ್ದರಿಂದ ಮೃತಪಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.



ಬಾಣಂತಿ ಸಾವಿಗೆ ಸಿಂದಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿಗಳ ನಿರ್ಲಕ್ಷ್ಯವೇ ಕಾರಣ ಎಂದು ಮೃತರ ತಾಯಿ ಶೀತಮ್ಮ ಆರೋಪಿಸಿ, ತಾಯಿ ಮತ್ತು ಮಗುವಿನ ಸಾವಿನ ಸತ್ಯಾಂಶ ತಿಳಿದುಕೊಳ್ಳಲು ಕಾರಣರಾದ ವೈದ್ಯ ಮತ್ತು ಸಿಬ್ಬಂದಿ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಈ ಕುರಿತು ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಆರ್‌ಸಿಎಚ್‌ಒ ಡಾ.ಪರಶುರಾಮ ಹಿಟ್ನಾಳ ಸುದ್ದಿ ಮಾಧ್ಯಮದವರೊಂದಿಗೆ ಮಾತನಾಡಿ, ಆಸ್ಪತ್ರೆಯಲ್ಲಿ ಕರ್ತವ್ಯದ ವೈದ್ಯರು ಇರಲಿಲ್ಲ. ನೋವು ಹೆಚ್ಚಾದ ಕಾರಣ ಸ್ಟಾಫ್ ನರ್ಸ್‌ಗಳು ಹೆರಿಗೆ ಮಾಡಿಕೊಂಡಿದ್ದಾರೆ. ಈ ವೇಳೆ ತೀವ್ರ ರಕ್ತಸ್ರಾವ ಉಂಟಾಗಿದೆ. ಹೆಚ್ಚಿನ ಚಿಕಿತ್ಸೆಗೆ ವಿಜಯಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದಾರೆ. ರಕ್ತಸ್ರಾವ ಹೆಚ್ಚಾದ ಕಾರಣ ತಾಯಿ ಮತ್ತು ಮಗು ಮೃತಪಟ್ಟಿದೆ. ಇಲ್ಲಿರುವ ವೈದ್ಯರ ಕೊರತೆಯ ಸಮಸ್ಯೆಯ ಕುರಿತಾಗಿ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.



> ಬಾಣಂತಿ ಹಾಗೂ ಮಗು ಮೃತಪಟ್ಟಿದ್ದು, ಖೇದಕರ ಸಂಗತಿ. ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿರುವ ನ್ಯೂನತೆಗಳ ಬಗ್ಗೆ ಪರಿಶೀಲಿಸುತ್ತೇನೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಶಿಫಾರಸು ಮಾಡುತ್ತೇನೆ.
> ■ ಅಶೋಕ ಮನಗೂಳಿ, ಶಾಸಕ

ಅಕ್ಕ ಕೆಫೆಗಳ ಸ್ಥಾಪನೆಗೆ 25 ಕೋಟಿ ರೂಪಾಯಿ ಮಂಜೂರು
ಮಹಿಳಾ ಸ್ವಾವಲಂಬನೆಗೆ ಕಾಫಿ ಉದ್ಯಮ ಸಹಕಾರಿ

ಮಡಿಕೇರಿ: ರಾಜ್ಯದಲ್ಲಿ ಕಾಫಿಯನ್ನು ಜನಪ್ರಿಯಗೊಳಿಸುವುದರೊಂದಿಗೆ ಮಹಿಳೆಯರಿಗೆ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ 200ಕ್ಕೂ ಅಧಿಕ 'ಅಕ್ಕ ಕೆಫೆ'ಗಳನ್ನು ಆರಂಭಿಸಲು ರಾಜ್ಯ ಸರಕಾರ 25 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ.

ರಾಜ್ಯ ಸರಕಾರ 2024–25ನೇ ಸಾಲಿನ ಬಜೆಟ್'ನಲ್ಲೇ ಇದನ್ನು ಘೋಷಿಸಿದ್ದರೂ, ಮಹಿಳೆಯರಿಂದ ಅಥವಾ ಮಹಿಳಾ ಸ್ವಸಹಾಯ ಗುಂಪುಗಳಿಂದ ಇದಕ್ಕೆ ಪೂರಕ ಸ್ಪಂದನ ದೊರಕಿಲ್ಲ ಎನ್ನಲಾಗಿದೆ. ಈ ಯೋಜನೆ ಸಫಲತೆ ಕಾಣದಿರಲು ಪ್ರಚಾರದ ಕೊರತೆಯೂ ಕಾರಣ ಎಂದು ಹೇಳಲಾಗುತ್ತಿದೆ. ಇತ್ತೀಚೆಗೆ (ಫೆ.12) ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಕಾಫಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಇದನ್ನು ಪುನರುಚ್ಚರಿಸಿದ್ದು, ಈ ಯೋಜನೆಯು ಕರ್ನಾಟಕದ ಬಲಿಷ್ಠ ಕಾಫಿ ಪರಿಸರ ವ್ಯವಸ್ಥೆಯೊಂದಿಗೆ ತಳಮಟ್ಟದ ಉದ್ಯಮಿಗಳನ್ನು ಸಂಪರ್ಕಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದ್ದಾರೆ.

'ಅಕ್ಕ ಕೆಫೆ' ಕರ್ನಾಟಕ ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ, ವಿಶೇಷವಾಗಿ ಸ್ವಸಹಾಯ ಗುಂಪುಗಳ ಮಹಿಳೆಯರಿಗಾಗಿ ಪ್ರಾರಂಭಿಸಿರುವ ಒಂದು ಅನನ್ಯ ಕೆಫೆ ಉಪಕ್ರಮವಾಗಿದೆ. ಸಂಪೂರ್ಣವಾಗಿ ಮಹಿಳೆಯರಿಂದಲೇ ನಿರ್ವಹಿಸಲ್ಪಡುವ ಈ ಕೆಫೆಗಳು, ಕೈಗೆಟುಕುವ ದರದಲ್ಲಿ ಉತ್ತಮ ಗುಣಮಟ್ಟದ ಕಾಫಿ ಮತ್ತು ಆಹಾರವನ್ನು ಒದಗಿಸಲಿವೆ.



ರಾಜ್ಯದ ಧಾರವಾಡ ಹಾಗೂ ಬೆಳಗಾವಿ ಸೇರಿದಂತೆ ವಿವಿಧ ಭಾಗಗಳಲ್ಲಿ ಈಗಾಗಲೇ ಅಕ್ಕ ಕೆಫೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳನ್ನು ರಾಜ್ಯಾದ್ಯಂತ ವಿಸ್ತರಿಸಲು ಅವಕಾಶಗಳಿವೆ. ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಮತ್ತು ಕೌಶಲ್ಯಾಭಿವೃದ್ಧಿ ಅವಕಾಶಗಳನ್ನು ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದ್ದು, ರಾಜ್ಯ ಸರಕಾರದ ಕೌಶಲ್ಯ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರಮೋಷನ್ ಸೊಸೈಟಿ ಅಥವಾ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ / ಸಂಜೀವಿನಿ ಅಡಿಯಲ್ಲಿ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರಿಂದ ಸಂಪೂರ್ಣ ನಿರ್ವಹಿಸಲ್ಪಡಲಿದೆ. ಸರ್ಕಾರವು ಪ್ರತಿ ಕೆಫೆ ಸ್ಥಾಪನೆಗೆ ಅಗತ್ಯವಿರುವ ಮೂಲಸೌಕರ್ಯ ಮತ್ತು ಅನುದಾನವನ್ನು ಒದಗಿಸಲಿದ್ದು, ಅಕ್ಕ ಕೆಫೆ ಸ್ಥಾಪನೆಗೆ ಆಯ್ಕೆಯಾಗುವ ಸ್ಥಳದ ಒಡೆತನ ಹಾಗೂ ಸ್ವಸಹಾಯ ಸಂಘಗಳ ನಡುವೆ ಒಡಂಬಡಿಕೆ ಮಾಡಿಕೊಳ್ಳಬೇಕಿದೆ.

ಈ ಯೋಜನೆಯು ಮಹಿಳೆಯರನ್ನು ಬಾಣಸಿಗರಿಂದ ಉದ್ಯಮಿಗಳನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿದೆ.

ಕರ್ನಾಟಕವು 2.2 ಲಕ್ಷ ಹೆಕ್ಟೇರ್‌ಗಳಲ್ಲಿ ಹರಡಿರುವ ತೋಟಗಳೊಂದಿಗೆ ಕಾಫಿ ಕೃಷಿಯಲ್ಲಿ ದೇಶವನ್ನು ಮುನ್ನಡೆಸುತ್ತಿದೆ. ಭಾರತದ ಉತ್ಪಾದನೆಯ ಶೇ. 75ರಷ್ಟು ಕಾಫಿಯನ್ನು ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಬೆಳೆಯುತ್ತಿವೆ. ಆದರೆ ರಾಜ್ಯದಲ್ಲಿ ಬೆಳೆಯುವ ಕಾಫಿಗೆ ಆಂತರಿಕ ಮಾರುಕಟ್ಟೆಯ ಕೊರತೆಯಿದ್ದು, ಬೆಳೆಗಾರರು ಅಂತರರಾಷ್ಟ್ರೀಯ ಮಾರುಕಟ್ಟೆಯನ್ನೇ ಅವಲಂಬಿಸಬೇಕಿದೆ.

ಗ್ರಾಮ ಪಂಚಾಯಿತಿ ತೆರಿಗೆ ಸಂಗ್ರಹ ಶೇ.71.39 ಪ್ರಗತಿ
ಕರ ವಸೂಲಾತಿಗೆ ಕ್ರಮ: ಖರ್ಗೆ

ಬೆಂಗಳೂರು: ರಾಜ್ಯದ ಗ್ರಾಮ ಪಂಚಾಯ್ತಿಗಳಲ್ಲಿ 2025–26ನೇ ಸಾಲಿನಲ್ಲಿ ಫೆ.18 ರವರೆಗೆ ಶೇ.71.39ರಷ್ಟು ತೆರಿಗೆ ಸಂಗ್ರಹವಾಗಿದ್ದು, ಈ ವರ್ಷಾಂತ್ಯಕ್ಕೆ ಗುರಿ ತಲುಪುವ ಸಾಧ್ಯತೆಗಳು ನಿಚ್ಚಳವಾಗಿವೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆ ತಿಳಿಸಿದ್ದು, ಕಳೆದ ವರ್ಷಗಳಲ್ಲಿ ಉಳಿದಿರುವ ಬಾಕಿ ಕರ ಸಂಗ್ರಹಣೆಗೂ ತೀವ್ರ ಕ್ರಮ ಕೈಗೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ.



ಹಿಂದಿನ ಸಾಲುಗಳ ತೆರಿಗೆ ಬಾಕಿ 3352.4 ಕೋಟಿಗಳಿದ್ದು ಆಸ್ತಿ ವರ್ಗೀಕರಣವಾರು ತೆರಿಗೆ ಬಾಕಿ ಪ್ರತ್ಯೇಕಿಸಿ ಸಂಗ್ರಹಿಸಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ತೆರಿಗೆ ಬೇಡಿಕೆ ದ್ವಿಗುಣವಾಗಿದ್ದು, ತೆರಿಗೆ ವಸೂಲಾತಿಯ ಮೊತ್ತ ಕೂಡ ಹೆಚ್ಚಳವಾಗಿದೆ. ಆದ್ದರಿಂದ 2024–25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ವಸೂಲಾತಿ ಮಾಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನ ಬಾಕಿಯನ್ನು ಮಾರ್ಚ್ 2026ರ ಅಂತ್ಯದೊಳಗೆ ವಸೂಲಾತಿ ಮಾಡಿ ಪ್ರಗತಿ ಸಾಧಿಸಲಾಗುವುದು. ಸಾರ್ವಜನಿಕರು ತಾವಿರುವಲ್ಲಿಯೇ ತಮ್ಮ ಆಸ್ತಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಗಾಗಿ ಕ್ಯೂಆರ್‌ನಿಂದ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ತೆರಿಗೆ ಪಾವತಿ ಬಗ್ಗೆ ಅವಕಾಶ ಕಲ್ಪಿಸಲಾಗಿದೆ ಹಾಗೂ ಆಸ್ತಿ ತೆರಿಗೆ ಸಂಬಂಧ ಪಾವತಿಸಬೇಕಾದ ತೆರಿಗೆಯ ವಿವರಗಳನ್ನು ವೀಕ್ಷಿಸಲು ಪಂಚಮಿತ್ರ ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ ಎಂದೂ ಸಚಿವರು ವಿವರಿಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯ್ತಿ ಸಿಇಒಗಳು ತೆರಿಗೆ ವಸೂಲಾತಿ ಆಂದೋಲನಗಳನ್ನು ವಿನೂತನವಾಗಿ ಹಮ್ಮಿಕೊಂಡು ಸಾಮಾಜಿಕ ಜಾಲತಾಣ ಮತ್ತು ವೃತ್ತ ಪತ್ರಿಕೆಗಳು ಸೇರಿ ಇತರೆ ಮಾಧ್ಯಮಗಳ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಪಾವತಿ ಬಗ್ಗೆ, ವಿನಾಯಿತಿಗಳ ಬಗ್ಗೆ ಸಾಕಷ್ಟು ಪ್ರಚಾರಗಳನ್ನು ಮಾಡಿ, ತೆರಿಗೆ ವಸೂಲಾತಿ ಹೆಚ್ಚಳಕ್ಕೆ ಕ್ರಮವಹಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ತೆರಿಗೆ ವಸೂಲಾತಿ ವಿವರ

ವರ್ಷ	ಬೇಡಿಕೆ	ವಸೂಲಾತಿ	ಬಾಕಿ	ಶೇಕಡಾ
2023-24	1377.10	764.20	612.90	55.49
2024-25	1582.50	1270.50	312.00	80.28
2025-26	1623.40	1159.10	464.34	71.39

ಸಂಪಾದಕೀಯ

ದೇಶ ಮೊದಲು ಎಂಬುದು ಶ್ರೇಷ್ಠ ಧ್ಯೇಯ

ರಾಜಕಾರಣದಲ್ಲಿ ಪಕ್ಷಗಳ ವೈಖರಿ, ನಡವಳಿಕೆಗಳು, ನಿರ್ಧಾರಗಳು ಟೀಕೆಯ ವಸ್ತುಗಳಾಗಬೇಕೇ ಹೊರತು ಟೀಕೆಯ ಭರದಲ್ಲಿ ದೇಶದ ಹೆಸರಿಗೆ ಭಂಗ ತರುವಂಥ ಕೆಲಸ ಆಗಬಾರದು. ದುರಂತವೆಂದರೆ, ಸಾಮಾಜಿಕ ಜಾಲತಾಣಗಳ ಯುಗದಲ್ಲಿ ನಾವು ಯಾರಿಗೆ ಏಕೆ ಬಯ್ಯುತ್ತಿದ್ದೇವೆ ಎಂಬುದರ ಸ್ಪಷ್ಟ ಕಲ್ಪನೆಯೇ ಮರೆಯಾಗುತ್ತಿದೆ. ಸದ್ಯ ದಿಲ್ಲಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಎಐ ಇಂಪ್ಯಾಕ್ಟ್ ಸಮಾವೇಶ ನಡೆಯುತ್ತಿದೆ. ಸುಮಾರು 20ಕ್ಕೂ ಹೆಚ್ಚು ದೇಶಗಳ ಅಧ್ಯಕ್ಷರು, ಪ್ರಧಾನಿಗಳು, 80ಕ್ಕೂ ಹೆಚ್ಚು ಸರ್ಕಾರದಲ್ಲಿನ



ವಿವಿಧ ಸಚಿವರು, ಅಧಿಕಾರಿಗಳು, ನೂರಾರು ಎಐಗೆ ಸಂಬಂಧಿಸಿದ ತಾಂತ್ರಿಕ ಕಂಪನಿಗಳ ಮುಖ್ಯಸ್ಥರು, ಹಿರಿಯ ಅಧಿಕಾರಿಗಳು, ಸಾವಿರಾರು ಪ್ರತಿನಿಧಿಗಳು ಇದರಲ್ಲಿ ಭಾಗಿಯಾಗಿದ್ದಾರೆ. ಕಳೆದ ವರ್ಷ ಇದೇ ಶೃಂಗಸಭೆ ಫ್ರಾನ್ಸ್‌ನಲ್ಲಿ ನಡೆದಿದ್ದು, ಇದು ಎರಡನೇ ಚರಣವಾಗಿದ್ದು ಭಾರತ ಆತಿಥ್ಯ ವಹಿಸಿಕೊಂಡಿದೆ.

ಎಐ ಅನ್ನು ಸರಿದಾರಿಗೆ ತರುವ ವಿಚಾರದಲ್ಲಿ ಇಂಥ ಶೃಂಗಸಭೆಗಳು ಮಹತ್ವದ್ದಾಗಿವೆ. ಹಾಗೆಯೇ, ನಮ್ಮ ಜನಜೀವನದಲ್ಲಿ ಹೇಗೆ ಎಐ ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು, ಅಪಾಯಕ್ಕೆ ದಾರಿ ಮಾಡಿಕೊಡದೇ ಅದನ್ನು ನಿಯಂತ್ರಿಸುವ ಬಗ್ಗೆಯೂ ಚರ್ಚೆಗಳಾಗುತ್ತಿವೆ. ಕೆಲವೊಮ್ಮೆ ದೊಡ್ಡ ಕಾರ್ಯಕ್ರಮಗಳಾಗುವ ವೇಳೆ ಸಣ್ಣ ಪುಟ್ಟ ತಪ್ಪುಗಳಾಗುವುದು ಸಹಜ. ಹಾಗೆಯೇ, ಈ ಶೃಂಗಕ್ಕೆ ಬಂದದ್ದ ನೋಯ್ಡಾ ಮೂಲದ ವಿಶ್ವವಿದ್ಯಾನಿಲಯವೊಂದು ತಪ್ಪು ಮಾಡಿದೆ. ಚೀನಾ ನಿರ್ಮಿತ ರೋಬೋ ನಾಯಿಯೊಂದನ್ನು ಇಲ್ಲಿ ಪ್ರದರ್ಶಿಸಿ, ಅತೀವ ಹುಮ್ಮಸ್ಸಿನಲ್ಲಿ ತನ್ನದು ಎಂದು ಹೇಳಿ ವಿವಾದ ಮೈಮೇಲೆ ಎಳೆದುಕೊಂಡಿದೆ. ಇಂಥ ವಿಚಾರಗಳನ್ನು ಶೃಂಗಸಭೆ ಆರಂಭವಾಗುವ ಮುನ್ನವೇ ನಿರೀಕ್ಷಿಸಲು ಸಾಧ್ಯವಿಲ್ಲ. ಇವರು ತಮ್ಮ ಮಳಿಗೆಯಲ್ಲಿ ಈ ರೋಬೋ ನಾಯಿಯನ್ನು ಪ್ರದರ್ಶಿಸಿದ್ದು, ಜನರೇ ಅವರ ತಪ್ಪು ತೋರಿಸಿದ್ದಾರೆ. ಇದಾದ ಮೇಲೆ ಸಂಘಟಕರು, ಇಡೀ ವಿವಿಯ ಮಳಿಗೆಯನ್ನೇ ಅಲ್ಲಿಂದ ಖಾಲಿ ಮಾಡಿಸಿದೆ.

ಆದರೆ, ಇದೇ ಸಂಗತಿಯನ್ನು ಮುಂದಿಟ್ಟುಕೊಂಡು ಕೆಲವರು ಸಾಮಾಜಿಕ ಜಾಲತಾಣದಲ್ಲಿ ಭಾರತದ ವರ್ಚಸ್ಸಿಗೇ ಭಂಗ ಉಂಟು ಮಾಡುವ ಯತ್ನ ನಡೆಸುತ್ತಿದ್ದಾರೆ. ಇದು ಒಂದು ವಿವಿಯ ತಪ್ಪೇ ವಿನಃ ಅದು ಸಂಪೂರ್ಣವಾಗಿ ಭಾರತದ್ದಲ್ಲ. ಹಾಗೆಯೇ, ಎಐ ಎಂಬುದೇ ಈಗ ಎಲ್ಲ ಕಡೆಗಳಲ್ಲೂ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವೇದಿಕೆ. ಈಗಷ್ಟೇ ಜನರಿಗೆ ಇದು ಏನು ಮಾಡಬಲ್ಲದು ಎಂಬ ಬಗ್ಗೆ ಒಂದು ರೀತಿಯ ಕುತೂಹಲ, ಆತಂಕಗಳ ಜತೆಗೆ ತಿಳಿವಳಿಕೆಯಾಗುತ್ತಿದೆ. ಇಂಥ ಹೊತ್ತಲ್ಲಿ, ಒಂದು ವಿವಿಯ ಅಧ್ಯಾಪಕರು ಮಾಡಿದ ತಪ್ಪಿಗೆ ದೇಶವನ್ನೇ ಹೊಣೆ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಅಲ್ಲದೆ, ಇದೇ ಘಟನೆಯನ್ನು ಇರಿಸಿಕೊಂಡು ಟ್ರೋಲ್ ಮಾಡಲು ಯತ್ನಿಸುವುದು, ಸರ್ಕಾರದ ಸಚಿವರು, ಪ್ರಧಾನಿಗಳನ್ನೇ ಅಪಹಾಸ್ಯಕ್ಕೆ ಗುರಿಮಾಡುವುದು ಸಭ್ಯತೆಯ ಲಕ್ಷಣವೇ ಎಂಬ ಪ್ರಶ್ನೆಗಳನ್ನೂ ಕೇಳಬೇಕಾಗುತ್ತದೆ.

ಪಶ್ಚಾತ್ತಾಪ ಪಡುವವರು ಯಾರು?

ಸತಾಂ ಮತಮತಿಕ್ರಮ್ಯ ಯೋಧಿಸತಾಂ ವರ್ತತೇ ಮತೇ ।
ಕಾಲೇನ ವ್ಯಸನಂ ಪ್ರಾಪ್ಯ ಪಶ್ಚಾತ್ತಾಪಂ ಸ ಗಚ್ಛತಿ ॥ -ಪಂಚತಂತ್ರ

ಸಜ್ಜನರ ಅಭಿಪ್ರಾಯವನ್ನು ಮೀರಿ ದುಷ್ಟರ ಅಭಿಪ್ರಾಯದಲ್ಲಿರುವವರು ಕಾಲಕ್ರಮವಾಗಿ ದುಃಖವನ್ನು ಹೊಂದಿ ಪಶ್ಚಾತಾಪವನ್ನೂ ಹೊಂದುತ್ತಾರೆ- ಎಂಬುದು ಶ್ಲೋಕಾರ್ಥ.



ಲೋಕ ವ್ಯವಹಾರ ಚೆನ್ನಾಗಿ ನಡೆಯಬೇಕು, ಜನಜೀವನ ಸುಗಮವಾಗಿ ಸಾಗಬೇಕು. ಎಲ್ಲರ ಬದುಕು ಸುಖಮಯವಾಗಬೇಕು ಎಂದು ಆಶಿಸುವುದು ಸುಲಭ. ಕೇವಲ ಆಶಯವನ್ನು ಇಟ್ಟುಕೊಂಡ ಮಾತ್ರಕ್ಕೆ ಯಾವುದು ಸಾಧಿತವಾಗುವುದಿಲ್ಲ. ಆ ನಿಟ್ಟಿನಲ್ಲಿ ಅನ್ವೇಷಣೆ ಹಾಗೂ ಪ್ರಯತ್ನವಿರಬೇಕು. ಇದಕ್ಕಾಗಿ ನಮಗೆ ತೋರಿಸುವುದು ಸಜ್ಜನರನ್ನು, ಸಾಧುಸಂತರನ್ನು. ಬೋಧಿಸುವುದು ಮಹಾತ್ಮರ ಜೀವನವನ್ನು ಹಾಗೂ ಸತ್ವಪೂರ್ಣ ಬೋಧನೆಯನ್ನು. ಅವರು ನಡೆಯುವುದು ಉತ್ತಮ ಮಾರ್ಗದಲ್ಲಿ. ನಡೆಸುವುದು ಉತ್ತಮ ಚಿಂತನೆಯನ್ನು. ಕಾಯೇನ ವಾಚಾ ಮನಸಾ ಜೀವನ ನಡೆಸುವುದು ಲೋಕಹಿತಕ್ಕಾಗಿ. ಇದೆಂದೂ ಲೋಕ ಮೆಚ್ಚಿಸುವುದಕ್ಕಲ್ಲ.

ಈ ಕಾರಣಕ್ಕಾಗಿಯೇ ಸಜ್ಜನರ ಸಹವಾಸಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಅವರ ಸಂಘವೇ ಅತ್ಯಂತ ಪವಿತ್ರ. 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎಂದಿದ್ದಾರೆ. ತಾವು ಒಪ್ಪಿ ಆಯ್ದುಕೊಂಡ ಕೆಲಸವನ್ನು ಕರ್ತವ್ಯಬುದ್ಧಿಯಿಂದ ಸರಿಯಾಗಿ ಪೂರೈಸುವುದು ಅವರ ಬದ್ಧತೆ. 'ಸಜ್ಜನಾನಾಂ ಹಿ ಶ್ರೈಲೀಯಂ ಸಕ್ರಮಾರಂಭಶಾಲಿತಾ'- ಈ ಸೂಕ್ತಿಯು ಮೇಲಿನ ಅರ್ಥವನ್ನೇ ಧ್ವನಿಸುತ್ತದೆ. ಯಾವುದೇ ಕೆಲಸವನ್ನು ಆರಂಭಿಸುವಾಗ ಸರಿಯಾಗಿ ಯೋಚಿಸಿ ಸರಿಯಾದ ಕ್ರಮದಲ್ಲಿ ಆರಂಭಿಸಿ ಸರಿಯಾದ ಫಲವನ್ನೇ ಕಾಣುತ್ತಾರೆ. ಈ ಕಾರಣಕ್ಕಾಗಿ ಸಜ್ಜನರು ನಮಗೆ ಆದರ್ಶಪ್ರಾಯರು. ಅವರಂತೆ ಬದುಕಬೇಕೆಂದು ಹಂಬಲಿಸುತ್ತೇವೆ ಹಾಗೂ ಇತರರಿಗೂ ಬೋಧಿಸುತ್ತೇವೆ. ಅವರ ಅಭಿಪ್ರಾಯವನ್ನು ಮೀರಿ ನಡೆಯುವುದನ್ನು ಬಯಸುವುದಿಲ್ಲ. ಒಂದೊಮ್ಮೆ ಮೀರಿ ನಡೆದರೆ ದುಃಖ ಕಟ್ಟಿಟ್ಟ ಬುತ್ತಿ. ಅದರಲ್ಲೂ ಸಜ್ಜನರ ಮಾತನ್ನು ಮೀರುವುದರ ಜೊತೆಗೆ ದುಷ್ಟರ ಅಭಿಪ್ರಾಯ ಸ್ವೀಕರಿಸಿದರೆ ಕಥೆ ಮುಗಿದಂತೆ. ಅದಕ್ಕೆ ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ. ಪಶ್ಚಾತಾಪ ಪಡಬೇಕಾಗುತ್ತದೆ. ದುಃಖವನ್ನು ಪಡಬೇಕಾಗಿ ಬರುತ್ತದೆ.

ಇಂತಹ ಅನುಭವ ನಮಗೂ ಇರಬಹುದು ಅಥವಾ ಇನ್ನೊಬ್ಬರನ್ನು ನೋಡಿ ತಿಳಿದಿರಲೂಬಹುದು. ಒಟ್ಟಿನಲ್ಲಿ ಸಜ್ಜನರ ಮಾತನ್ನು ಮೀರಿ ವ್ಯವಹರಿಸಬಾರದು. ಸೀತೆಯು ಲಕ್ಷ್ಮಣನ ಮಾತನ್ನು ಮೀರಿ, ಕಪಟ ಸನ್ಯಾಸಿಯ ಮಾತನ್ನು ನಂಬಿ ಅವನು ಬರೆದ ಲಕ್ಷ್ಮಣ ರೇಖೆಯನ್ನು ಮೀರಿ ನಡೆದಳು. ಅನಂತರ ಅವಳು ಅನುಭವಿಸಿದ ಕಷ್ಟ ಪರಂಪರೆ ನಮಗೆಲ್ಲಾ ಗೊತ್ತು. ಧರ್ಮದ ಪ್ರತಿಮೂರ್ತಿಯಾದ ಧರ್ಮರಾಜ ಇತರರ ಮಾತನ್ನು ಮೀರಿ ದ್ಯೂತವಾಡಿದ ಪರಿಣಾಮವಾಗಿ ತಾನಷ್ಟೇ ಅಲ್ಲ , ಇಡೀ ಕುಟುಂಬದ ದುಃಖಕ್ಕೆ ಕಾರಣನಾದ. ಭಾರತ ವಿಭಜನೆಯ ಸಂದರ್ಭದಲ್ಲಿ ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರವನ್ನು ನೀಡಿದ ಮೇಲೆ ಇಲ್ಲಿರುವ ಮುಸ್ಲಿಮರನ್ನು ಅಲ್ಲಿಗೇ ಕಳುಹಿಸಬೇಕು. ಅವರೊಂದಿಗೆ ಹೊಂದಿಕೊಂಡು ಬದುಕುವುದು ಹಿಂದೂಗಳಿಗೆ ಸಾಧ್ಯವಿಲ್ಲ ಎಂದು ಡಾ। ಅಂಬೇಡ್ಕರರು ಬಲವಾಗಿ ಪ್ರತಿಪಾದಿಸಿದರೂ, ಗಾಂಧಿ, ನೆಹರು ಮೊದಲಾದ ಮಹಾ ಪ್ರಭೃತಿಗಳು ಸುತಾರಂ ಒಪ್ಪಲಿಲ್ಲ. ಅದು ದೇಶದ ಮೇಲೆ ಬೀರಿದ ದುಷ್ಪರಿಣಾಮ ಈಗ ಎಲ್ಲರಿಗೂ ಅರಿವಾಗಿದೆ.

ಎರಡು ಹೊತ್ತಗೆ-ಎರಡು ನಾಲಗೆ! ಏನಿದು ತಮಾಷೆ?




ಉಘೇ ವೀರಭೂಮಿಗೆ
• ಸಂತೋಷ್ ತಮ್ಮಯ್ಯ
santoshthammaiah@gmail.com


ತಿಳಿಯದವರಿಗೆ ತಿಳಿಯುವಂತೆ ಆಡುವುದು ದರ್ಶನಭಾಷೆ. ಒಗಟುಗಳನ್ನಿಟ್ಟು ಆಡುವುದು ಗುಹ್ಯಭಾಷೆ. ಭಾವಸಮಾಧಿಯಲ್ಲಿದ್ದಾಗ ಆಡುವುದು ಸಮಾಧಿ ಭಾಷೆ-ಹೀಗೆ ತತ್ತ್ವಶಾಸ್ತ್ರದಲ್ಲಿ ಬಗೆಬಗೆಯ ಭಾಷಿಕ ಚರ್ಯೆಗಳನ್ನು ಬಳಸಲಾಗುತ್ತದಂತೆ! ಸಮಾಜವನ್ನು ಪ್ರೇರೇಪಿಸಲು ಇವು ಕೆಲವು ತಂತ್ರಗಳು. ಈ ಗುಟ್ಟನ್ನು ನಾವು ತತ್ತ್ವಶಾಸ್ತ್ರದ ನೆಲೆಗಟ್ಟಿನಲ್ಲಿ ಮಾತ್ರ ನೋಡಬೇಕೇ ಹೊರತು, ತಮ್ಮನ್ನು ತಾವು ಸಮಾಜವನ್ನು ಉದ್ಧರಿಸಲು ಬಂದವರು ಎನ್ನುವ ಎಲ್ಲರ ಮಾತುಗಳಿಗೆ ಆರೋಪಿಸಿದರೆ ಕೆಟ್ಟೆವು. ಸಮಾಜವೂ ಕೆಡುವುದು. ಅಂದರೆ ಒಂದು ಕಾಲದಲ್ಲಿ ಅನುಭಾವಿಗಳು, ದಾರ್ಶನಿಕರು ಆಡುತ್ತಿದ್ದ ಮಾತುಗಳೀಗ ಚಾಲಾಕಿಗಳು ಬಳಸುವ ಮಾತುಗಳಾಗಿ ಬದಲಾಗಿವೆ. ಜೊತೆಗೆ ದಿಕ್ಕು ತಪ್ಪಿಸುವವರು ಬಳಸುವ ತಂತ್ರವೂ ಆಗಿದೆ. ಮಾತಿನ ಆಕರ್ಷಣೆಗಳೇ ಒಮ್ಮೊಮ್ಮೆ ಸತ್ಯವಾಗಿ ಕಾಣುವ ಅಪಾಯವೂ ಆಗಿರುತ್ತದೆ.

ಕಳೆದ ವಾರ ಸಂಸತ್ ಅಧಿವೇಶನದುದ್ದಕ್ಕೂ ವಿರೋಧಪಕ್ಷದ ನಾಯಕರು ಬಳಸಿದ್ದು ಇಂಥದ್ದೇ ಮಾತುಗಳು! ಅದರಲ್ಲೂ ಮಾಜಿ ಸೇನಾ ಮುಖ್ಯಸ್ಥ. ಜ. ಎಂ.ಎಂ ನರವಣೆಯವರ ಪುಸ್ತಕದ ಕುರಿತು ವಿರೋಧಪಕ್ಷಗಳಾಡಿದ್ದು ಚಾಲಾಕಿತನದ ಮಾತುಗಳನ್ನೇ ಆದರೂ ಕೆಲವರಿಗದು ದರ್ಶನಭಾಷೆ, ಗುಹ್ಯಭಾಷೆ, ಸಮಾಧಿಭಾಷೆಗಳಂತೆ ಕಂಡಿದೆ! "ನರವಣೆಯವರ ಪುಸ್ತಕದ ಪರಿಚಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಪೆಂಗ್ವಿನ್, ಪುಸ್ತಕದ ಒಂದೇ ಒಂದು ಪ್ರತಿ ಪ್ರಕಟವಾಗಿಲ್ಲ ಎಂದು ಹೇಳಿದೆ. ಒಂದೋ ಪೆಂಗ್ವಿನ್ ಸುಳ್ಳು ಹೇಳುತ್ತಿದೆ. ಇಲ್ಲವೇ ನರವಣೆ ಸುಳ್ಳು ಹೇಳುತ್ತಿದ್ದಾರೆ. ಆದರೆ ನಾನು ಮಾಜಿ ಸೇನಾ ಮುಖ್ಯಸ್ಥರು ಸುಳ್ಳು ಹೇಳಲಾರರೆಂದು ಭಾವಿಸುತ್ತೇನೆ" ಎಂದು ರಾಹುಲ್ ಗಾಂಧಿಯವರು ವಿಚಿತ್ರವಾದ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯ ಮೂಲಕ ಪುಸ್ತಕದಲ್ಲಿ ಉಲ್ಲೇಖವಾಗಿದೆ ಎನ್ನಲಾದ ವಿಷಯ, ಪ್ರಕಾಶಕರ ಪ್ರತಿಕ್ರಿಯೆ, ಅದರಿಂದ ಉಂಟಾದ ರಾಜಕೀಯ ಕೆಸರೆರಚಾಟಗಳಿಗೆ ಹೊಸ ವ್ಯಾಖ್ಯಾನ ಹುಟ್ಟಿಸುವುದರಲ್ಲಿ ರಾಹುಲ್ ಗಾಂಧಿ ಯಶಸ್ವಿಯಾಗಿದ್ದಾರೆ. ಭಾಷೆಯ ಮೂಲಕವೇ ಅವರು ಮಾಜಿ ಸೇನಾ ಮುಖ್ಯಸ್ಥರ ಹೆಗಲಿಗೆ ಬಂದೂಕಿಟ್ಟಿದ್ದಾರೆ. ಆ ಮೂಲಕ ವಿವಾದವನ್ನು ಮತ್ತೊಂದು ಸ್ತರಕ್ಕೆ ಕೊಂಡೊಯ್ಯುವ ತಂತ್ರ ಹೆಣೆದಿದ್ದಾರೆ. ಅಧಿವೇಶನ ಮುಗಿದರೂ, ಹೇಳಿಕೆ ಹಳಸಿದರೂ ಸಾಮಾನ್ಯ ಜನರ ಮನಸಿನಲ್ಲಿನ್ನೂ ಹುಳವೊಂದು ಗುಂಯಿಗುಡುತ್ತಿದೆ. ನರವಣೆ ಹಾಗೆಲ್ಲಾ ಬರೆದಿರುವುದು ನಿಜವಿರಬಹುದೇ? ಪುಸ್ತಕ ವಿವಾದದ ಸ್ವರೂಪ ಪಡೆಯುತ್ತಿರುವುದನ್ನು ಕಂಡು ಲೇಖಕ-ಪ್ರಕಾಶಕರು ಹೆದರಿರಬಹುದೇ? ಒಂದೆಡೆ ಪುಸ್ತಕ ಬಿಡುಗಡೆಯ ಪ್ರಕಟಣೆ ಮಾಡಿದ ನರವಣೆ, ಇನ್ನೊಂದೆಡೆ ಪುಸ್ತಕ ಅಚ್ಚಾಗಿಲ್ಲ ಎಂದ ಪ್ರಕಾಶಕರು! ಇಲ್ಲಿ ವಿರೋಧಾಭಾಸಗಳಿವೆಯಲ್ಲಾ? ಮುಂತಾದ ಪ್ರಶ್ನೆಗಳು ಕೆಲವರ ತಲೆ ಹಾಳುಮಾಡಿದೆ. ಪತ್ರಿಕೆಗಳಲ್ಲಿ ಪ್ರಕಟವಾದ ಭಾಗಗಳನ್ನೇ ಅಧಿಕೃತ ಎಂದು ನಂಬಿಸುವಲ್ಲಿ ಭಾಗಶಃ ಯಶಸ್ವಿಯಾಗಿರುವ ರಾಹುಲ್ ಚೀನಾ ಸಂಘರ್ಷದ ಸಮಯದಲ್ಲಿ ಕೇಂದ್ರ ಸರಿಯಾಗಿ ಸ್ಪಂದಿಸಲಿಲ್ಲ ಎನ್ನುವುದಕ್ಕೆ ಪುಸ್ತಕಪರಿಚಯವೇ ಸಾಕ್ಷಿ ಎಂದು ಸಂತೋಷ ಪಡುತಿದ್ದಾರೆ. ಅದೇ ಭ್ರಮೆಯಲ್ಲಿ ನರವಣೆಯವರನ್ನು ನಾನು ನಂಬುವೆ ಎಂದಿದ್ದಾರೆ. ಬಿಡುಗಡೆಯಾಗಲಿರುವ ಪುಸ್ತಕದಲ್ಲಿ ಮುಂದೆ ವಾಸ್ತವ ತಿಳಿದರೂ 'ತಿದ್ದಲಾಗಿದೆ' ಎನ್ನುವ ಪಲಾಯನಕಿಂಡಿಯನ್ನೂ ರಾಹುಲ್ ಈಗಾಗಲೇ ನಿರ್ಮಿಸಿಕೊಂಡಿದ್ದಾರೆ.

ಸತ್ಯ ಮುಂದೊಂದು ದಿನ ಹೊರಬಂದೇ ಬರುತ್ತದೆ. ಆದರೆ ಸರ್ಕಾರವನ್ನು ಟೀಕಿಸಲು ಕಾರಣವನ್ನು ಹುಡುಕುತ್ತಾ ರಾಹುಲ್ ಗಾಂಧಿ ಕಾಂಗ್ರೆಸಿನ ಪರಂಪರೆಯೊಂದನ್ನೇ ಅಲ್ಲಗೆಳೆದಿದ್ದಾರೆ ಎಂಬುದು ಇಲ್ಲಿ ಗಮನಿಸಬಹುದಾದ ಪ್ರಮುಖ ಸಂಗತಿ!

ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಎಂದೂ ಯಾವುದೇ ಸೇನಾಮುಖ್ಯಸ್ಥರ, ಯಾವುದೇ ಸೇನಾಧಿಕಾರಿಗಳ ಅಥವಾ ಸಾಮಾನ್ಯ ಸೈನಿಕನ ಮಾತನ್ನು ನಂಬಿದ ಉದಾಹರಣೆ ಇಲ್ಲ. ಸೇನಾಧಿಕಾರಿಗಳ ಅಭಿಪ್ರಾಯಗಳಿಗೆ ಮನ್ನಣೆ ನೀಡಿದ, ಸೇನಾಧಿಕಾರಿಗಳ ಪುಸ್ತಕಕ್ಕೆ ಗೌರವ ಕೊಟ್ಟ ಸಾಕ್ಷಿಗಳು ಇತಿಹಾಸದಲ್ಲಿಲ್ಲ. ನರವಣೆ ಪ್ರಕರಣದಲ್ಲಿ, ಸೇನಾಧಿಕಾರಿಗಳ ಮಾತನ್ನು ನಂಬುತ್ತೇವೆ ಎಂದವರು ಹಿಂದೆಂದೂ ಸೇನಾಧಿಕಾರಿಗಳ ಮಾತನ್ನು ನಂಬಿಲ್ಲ ಮಾತ್ರವಲ್ಲ, ಲೆಕ್ಕಿಸಲೂ ಇಲ್ಲ. ಕೆಲ ವರ್ಷಗಳ ಹಿಂದೆ ಜನರಲ್





ವಿ.ಕೆ ಸಿಂಗ್ ಮತ್ತು ಸರ್ಕಾರಕ್ಕೂ ಭಿನ್ನಾಭಿಪ್ರಾಯವಿದೆ, ಸೇನೆ ಸರ್ಕಾರದ ವಿರುದ್ಧವಿದೆ, ಸಿಂಗ್ ಸೇನೆಯನ್ನು ದೇಶದ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ ಎಂದು ಇದೇ ಕಾಂಗ್ರೆಸಿಗರು ಮುಗಿಬಿದ್ದಿದ್ದರು. ಜ. ವಿ.ಕೆ ಸಿಂಗ್ ನೇರವಾಗಿ ಸೇನಾಭವನದಿಂದ ಸಮವಸ್ತ್ರದಲ್ಲಿ ಧಾವಿಸಿ ಮಧ್ಯಮಗಳ ಮುಂದೆ ನಿಂತು, "ಸೈನ್ಯ ಬಲಿಷ್ಠವಾಗಿದೆ, ಸನ್ನದ್ಧ ಸ್ಥಿತಿಯಲ್ಲಿದೆ" ಎಂದಾಗಲೂ ಕಾಂಗ್ರೆಸಿಗರು ಸೇನಾಮುಖ್ಯಸ್ಥರ ಮಾತನ್ನು ನಂಬದೆ, ತಮ್ಮ ಪೂರ್ವಗ್ರಹಕ್ಕೇ ಬುದ್ಧಿ ಒಪ್ಪಿಸಿದ್ದರು. ಕಾಂಗ್ರೆಸಿನ ಟೀಕೆಗಳನ್ನು ಸುಳ್ಳೆಂದ ವಿ.ಕೆ ಸಿಂಗರನ್ನು ಮೋದಿ ಗುಲಾಮ ಎಂದು ಜರೆದಿದ್ದರು. ಆಗ ರಾಹುಲ್ ಮತ್ತವರ ಪಕ್ಷಕ್ಕೆ ಸೇನಾ ಮುಖ್ಯಸ್ಥರ ಮಾತುಗಳಿಗೆ ಗೌರವ ಕೊಡಬೇಕೆನಿಸಲಿಲ್ಲ. ಮುಂದೆ ಜನರಲ್ ಬಿಪಿನ್ ರಾವತ್ ಅವರನ್ನು ಸರ್ಕಾರ ಸೇನಾಮುಖ್ಯಸ್ಥರನ್ನಾಗಿ ನೇಮಿಸಿದಾಗ, "ಈ ಸೂಪರ್ ಸೀಡ್ ರಾಜಕೀಯ ಪ್ರೇರಿತವಾದದ್ದು, ಅಲ್ಪಸಂಖ್ಯಾತರು ಸೇನಾಮುಖ್ಯಸ್ಥರಾಗಬಾರದೆಂದು ಮಾಡಿದ ಹುನ್ನಾರ" ಎಂದು ಟೀಕಿಸಿದ್ದರು. ರಾವತ್ ಕಾಲದಲ್ಲಿ ಗಡಿಗಳು ಭದ್ರವಾಗುತ್ತಿದ್ದಾಗ, ಸೇನಾ ಬಜೆಟ್ ಹೆಚ್ಚಿಸಲು ಒತ್ತಾಯಿಸಿದಾಗ, "ಬಿಪಿನ್ ರಾವತ್ ಒಬ್ಬ ವಾರ್ ಜಂಕಿ(ಯುದ್ಧ ವ್ಯಸನಿ)" ಎಂದು ವೈಯಕ್ತಿಕ ಟೀಕಾಪ್ರಹಾರ ನಡೆಸಿದ್ದರು. ಅಧಿಕಾರ ಇರಲಿ, ಇಲ್ಲದಿರಲಿ ಕಾಂಗ್ರೆಸ್ ಯಾವಾಗಲೂ ಸೇನಾಧಿಕಾರಿಗಳನ್ನು ಟೀಕಿಸುತ್ತಲೇ ಬಂದಿದೆ. ಸೇನೆಯ ಎಲ್ಲಾ ಅಭಿಪ್ರಾಯಗಳಿಗೆ ಕಾಂಗ್ರೆಸಿನ ನಿಲುವು ಯಾವತ್ತೂ ವಿರುದ್ಧವಾಗಿಯೇ ಇರುತ್ತಿತ್ತು. ಅಂಥಲ್ಲಿ ಜನರಲ್ ನರವಣೆಯವರ ಮೇಲೆ ಏಕಾಏಕಿ ಪ್ರೀತಿ ಹುಟ್ಟುವುದೆಂದರೇನು?

ಜನರಲ್ ನರವಣೆಯವರ ಪುಸ್ತಕದಲ್ಲಿ ಸರ್ಕಾರವನ್ನು ಟೀಕಿಸಿದ ಸಂಗತಿಗಳಿವೆ ಎಂಬ ಊಹೆಯಿಂದ ಸೇನಾ ಸ್ವಾತಂತ್ರ್ಯ, ಭದ್ರತೆಯ ಚಿಂತೆ ಮತ್ತು ಅಭಿವ್ಯಕ್ತಿಯ ಆತಂಕ ಪಡುತ್ತಿರುವ ಕಾಂಗ್ರೆಸಿಗೆ ಬಹುಶ ತಮ್ಮ ಅಧಿಕಾರಾವಧಿಯಲ್ಲಿ ಜಿದ್ದಿಗೆ ಬಿದ್ದು ನಿಷೇಧ ಮಾಡಿದ ಬ್ರಿ. ಜಾನ್.ಪಿ. ದಳವಿಯವರ The Himalayan Blunder: The Angry Truth About India's Most Crushing Military Disaster ಪುಸ್ತಕ ನೆನಪಾಗಲಿಲ್ಲ! 1962ರ ಚೀನಾ ಯುದ್ಧದಲ್ಲಿ ಕೈದಿಯಾಗಿದ್ದ ದಳವಿ ಪುಸ್ತಕ ದೇಶದಲ್ಲಿ ಸಂಚಲನ ಸೃಷ್ಟಿಸಿತ್ತೆಂದು ಜನ ನಂಬಿದ್ದಾರೆ. ಆದರೆ ಪ್ರಕಟಣೆಯಾಗಿ ಅನೇಕ ದಶಕಗಳು ಕಳೆದರೂ ಪುಸ್ತಕ ಅಜ್ಞಾತವಾಗಿತ್ತು ಎಂಬ ಸಂಗತಿ ದೇಶಕ್ಕೆ ತಿಳಿದಿಲ್ಲ. ಮೊನ್ನೆ ನರವಣೆಯವರ ಪುಸ್ತಕ ಸಂಸತ್ತಿನಲ್ಲಿ ಚರ್ಚೆಯಾದಂತೆ 1969ರಲ್ಲೂ ದಳವಿಯವರ ಪುಸ್ತಕ ಚರ್ಚೆಯಾಗಿತ್ತು. ವಿಚಿತ್ರವೆಂದರೆ ಇಂದು ಸೇನಾಧಿಕಾರಿಗಳ ಮಾತು ಮುಖ್ಯ ಅಂದವರೇ ಅಂದು ಸೇನಾಧಿಕಾರಿಯೊಬ್ಬರನ್ನು ಕಟಕಟೆಯಲ್ಲಿ ನಿಲ್ಲಿಸಿದ್ದರು. ವಿರೋಧಪಕ್ಷಗಳ ನಾಯಕರು ದಳವಿಯವರ ಪುಸ್ತಕದ ಅಂಶಗಳನ್ನು ಸದನದಲ್ಲಿ ಮಂಡಿಸಲು ಒತ್ತಾಯಿಸಿದಾಗ ಕಾಂಗ್ರೆಸ್, "ದಳವಿ ಒಬ್ಬ ಯುದ್ಧಕೈದಿ, ಚೀನಾ ಆತನ ಮನಪರಿವರ್ತನೆ ಮಾಡಿಲ್ಲವೆಂದು ನಂಬುವುದು ಹೇಗೆ?" ಎಂದು ಕೀಳಾಗಿ ಆರೋಪಿಸಿತ್ತು. ಅದಕ್ಕೆ ವಿರೋಧಪಕ್ಷಗಳು, "ನಾವು ಚೀನಾಕ್ಕಿಂತಲೂ ನಮ್ಮ ಸೈನಿಕನನ್ನು ನಂಬುತ್ತೇವೆ" ಎಂದಿದ್ದವು. ಆದರೆ ಕಾಂಗ್ರೆಸ್ ಯೋಧನ ನಿಷ್ಠೆಯನ್ನೇ ಪ್ರಶ್ನಿಸಿತ್ತು. ಏಳು ತಿಂಗಳು ಚೀನಾ ಜೈಲಿನಲ್ಲಿ ಕಳೆದು ಮರಳಿದ ಮೊದಲ ದಿನದಿಂದಲೇ ಜಾನ್ ದಳವಿ ಮತ್ತು ತಂಡ ಮಾನಸಿಕ ಹಿಂಸೆಯನ್ನು ಎದುರಿಸಿದರು. ರಾಜಕಾರಣಿಗಳು ಅಲ್ಲಲ್ಲಿ ಕೈದಿಗಳು ಚೀನಾ ಪರ ವಾಲಿರುವ ಶಂಕೆಯನ್ನು ವ್ಯಕ್ತಪಡಿಸಲಾರಂಭಿಸಿದ್ದರು. ರಕ್ಷಣಾಸಚಿವಾಲಯದ ನೀರವ ಮೌನ ಅವರನ್ನು ಮತ್ತಷ್ಟು ಹತಾಶರನ್ನಾಗಿ ಮಾಡಿತ್ತು. ಆ ದಿನಗಳಲ್ಲೇ ದಳವಿ ಯುದ್ಧಕ್ಕೆ ಕಾರಣ ಮತ್ತು ಸೋಲಿನ ಪರಾಮರ್ಶೆ ಮಾಡಲಾರಂಭಿಸಿದರು. ಇವೆಲ್ಲಕ್ಕೆ ದಳವಿಯವರಿಗೆ ಗಾಢ ಅಧ್ಯಯನದ ಅವಶ್ಯಕತೆಯೇನೂ ಬೇಕಾಗಿರಲಿಲ್ಲ. ನೆಹರು ಎಡವಟ್ಟುಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿ ಮನಸ್ಸು ಕೆಡಿಸಿಕೊಂಡ ತಿಮ್ಮಯ್ಯನವರಿದ್ದರು. ದಿನೇದಿನೇ ದಳವಿಯವರಿಗೆ ಸೋಲಿನ ನೋವು ಎಷ್ಟು ಕಾಡತೊಡಗಿತ್ತೆಂದರೆ ಅವೆಲ್ಲವನ್ನೂ ಪುಸ್ತಕದಲ್ಲಿ ದಾಖಲಿಸಿದರು. ನಿವೃತ್ತಿಯ ಕೆಲವೇ ದಿನಗಳಲ್ಲಿ ಪುಸ್ತಕ ಪ್ರಕಟಣೆಗೆ ಪ್ರಯತ್ನಿಸಿದರು. ಆದರೆ ಯಾವ ಪ್ರಕಾಶಕರೂ ಮುಂದೆಬರಲಿಲ್ಲ. ಕೊನೆಗೆ ಈಸ್ಟ್ ಇಂಡಿಯಾ ಕಂಪನಿ ಕಾಲದ Thacker & Co. Ltd. ಪ್ರಕಟಣೆಗೆ ಮುಂದೆ ಬಂತು. ಅದೂ ಕೂಡ ಸರ್ಕಾರದ ಅಡ್ಡಿಗಳನ್ನೆದುರಿಸಕಾಯಿತು. ಕಾಂಗ್ರೆಸ್ ಬೆದರಿಕೆಯ ತರುವಾಯ Thacker & Co ಪುಸ್ತಕ ಬಿಡುಗಡೆ ಮಾಡಿತಾದರೂ ಪುಸ್ತಕ ಮಾರುಕಟ್ಟೆಗೆ ಬರಲಿಲ್ಲ. ನಂತರ Hind Pocket Books ಮತ್ತು Natraj Publishers ಪುಸ್ತಕವನ್ನು ಮರುಮುದ್ರಣ ಮಾಡಿದವು. ಆಗಲೂ ಪುಸ್ತಕ ಜನರಿಗೆ ಮುಟ್ಟಲಿಲ್ಲ. ಪುಸ್ತಕಗಳು ಮಳಿಗೆಗಳಲ್ಲಿ ಲಭ್ಯವಾಗದಂತೆ ನೋಡಿಕೊಳ್ಳಲಾಯಿತು. ಕೊನೆಗೆ ವಿರೋಧಪಕ್ಷಗಳ ಒತ್ತಡದಿಂದ ಸಂಸತ್ತಿನಲ್ಲಿ ಪುಸ್ತಕದ ಬಗ್ಗೆ ಚರ್ಚೆ ನಡೆಯಿತು. ಅಲ್ಲೂ ಕಾಂಗ್ರೆಸ್ ಕುಟಿಲ ತಂತ್ರಗಾರಿಕೆ ಮಾಡಿತು. ಚರ್ಚೆಯ ದಿಕ್ಕು ತಪ್ಪಿಸಲು ಸ್ವತಃ ಸರ್ಕಾರವೇ Summary of the main causes of the NEFA reverses as mentioned in Brigadier J. P. Dalvi's book Himalayan Blunder ಎಂಬ ವರದಿಯನ್ನು ಮಂಡಿಸಿ ಪುಸ್ತಕ ನಿಷೇಧಕ್ಕೆ ಯೋಜನೆ ಹಾಕಿತು. ಈ ವರದಿಯನ್ವಯ ಲೇಖಕರು ಚೀನಾವನ್ನು, 'first class land power' ಎಂದು ಬಣ್ಣಿಸಿದ್ದಾರೆ, ಹಿರಿಯ ಸೇನಾಧಿಕಾರಿಗಳಾದ ಜನರಲ್ ಥಾಪರ್, ಲೆ. ಜನರಲ್ ಕೌಲ್ ಮುಂತಾದವರನ್ನು ತಕ್ಕ ಸಿದ್ಧತೆಯಿಲ್ಲದೆ ಯುದ್ಧಕ್ಕೆ ನೂಕಿದವರೆಂದು ಜರೆಯಲಾಗಿದೆ, ಸೋಲನ್ನು "National Failure' ಎನ್ನಲಾಗಿದೆ, 62ರ ಸೋಲು ಸೇನೆ, ನಾಗರಿಕರು ಮತ್ತು ಮಾಧ್ಯಮಗಳ ಸೋಲು ಎನ್ನಲಾಗಿದೆ (1969 ಜುಲೈ 23ರ ಲೋಕಸಭೆ) ಎಂದು ಆರೋಪಿಸಲಾಯಿತು. ಪುಸ್ತಕವನ್ನು ನಿಷೇಧಿಸಲು ಇವಿಷ್ಟು ಕಾರಣಗಳೇ ಸಾಕು ಎಂದು ಸದನ ತೀರ್ಮಾನಿಸಿದೆ ಎಂದು ಸರ್ಕಾರ ಪುಸ್ತಕದ ಪ್ರಕಟಣೆ ಮತ್ತು ಮಾರಾಟವನ್ನು ಸಂಪೂರ್ಣ ನಿಷೇಧಿಸಿತು. ಅಂದರೆ ಓರ್ವ ಸೇನಾಧಿಕಾರಿ ತಾನು ಭಾಗವಹಿಸಿದ ಯುದ್ಧದಲ್ಲಿ ಏನನ್ನು ಅನುಭವಿಸಿದ್ದನೋ ಅದನ್ನು ದೇಶದ ಮುಂದೆ ಹೇಳಿಕೊಳ್ಳಬಾರದು ಎಂಬ ನಿರ್ಣಯಕ್ಕೆ ಸರ್ಕಾರ ಬಂತು. ಯುದ್ಧಕ್ಕೆ ಕಾರಣಗಳನ್ನು ಹುಡುಕುವುದನ್ನು ದೇಶದ್ರೋಹ ಎಂದು ಭಾವಿಸಿತು. ಆಗಲೂ ಕಾಂಗ್ರೆಸ್ ಇದೇ ರಾಹುಲ್ ಗಾಂಧಿ ಕುಟುಂಬದ ಕೈಯಲ್ಲೇ ಇತ್ತು. ಅವರ ಕುಟುಂಬಕ್ಕೆ ನಿಷ್ಠನಾಗಿದ್ದ, ಯುದ್ಧದ ಸೋಲಿಗೆ ಪ್ರಮುಖ ಕಾರಣನಾಗಿದ್ದ ಕೃಷ್ಣ ಮೆನನ್ ಸದನದಲ್ಲಿ ದಳವಿ ವಿರುದ್ಧ ರೋಷಾವೇಶದ ಭಾಷಣ ಮಾಡಿ ನಿಷೇಧವನ್ನು ಸಮರ್ಥಿಸಿಕೊಂಡರು. ಇವೆಲ್ಲದರ ತರುವಾಯ ಕೂಡ ಕಾಂಗ್ರೆಸ್ ನಾಯಕರು ನಾವು ಸೇನಾಧಿಕಾರಿಗಳ ಮಾತನ್ನು ನಂಬುತ್ತೇವೆ ಎನ್ನುತ್ತಿದ್ದಾರೆ! ಅದೂ ನರವಣೆಯವರು ಪುಸ್ತಕದಲ್ಲಿ ಏನು ಬರೆದಿದ್ದಾರೆಂಬ ಸುಳಿವಿಲ್ಲದಿದ್ದರೂ ನಂಬುತ್ತೇವೆ ಎನ್ನುತ್ತಿದ್ದಾರೆ! ಬಿಡುಗಡೆಯ ನಂತರ ಕೂಡ ಕಾಂಗ್ರೆಸಿನ ನಿಲುವು ಹೀಗೆಯೇ ಇರಲಿ.

ಪ್ರಧಾನಿ ವಿರುದ್ಧ ಮಹಿಳಾಸ್ತ್ರ: ಪಂಚ ರಾಜ್ಯ ಚುನಾವಣೆಯ ಸಂಚೇ?

▸ ಗೋವಿಂದ ಎನ್. ಎಸ್/ ಸುಪ್ರೀತಾ ಹೆಬ್ಬಾರ್

2025ರಲ್ಲಿ ಬಹುತೇಕ ಎಲ್ಲ ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯವಾಗಿ ಸೋತು ಪಾತಾಳಕ್ಕೆ ಕುಸಿದಿರುವ ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟದ ಹತಾಶೆ ಸಂಸತ್‌ನ ಬಜೆಟ್ ಅಧಿವೇಶನದಲ್ಲಿ ಢಾಳಾಗಿ ಗೋಚರಿಸಿತು. ಮುಂಬರುವ ಪಂಚ ರಾಜ್ಯ ಚುನಾವಣೆಗೆ ಮುನ್ನ ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸಿಗೆ ಮಸಿ ಬಳೆಯುವ ಷಡ್ಯಂತ್ರಕ್ಕೆ ಮುಂಚೂಣಿಯಲ್ಲಿ ನಿಲ್ಲಿಸಿದ್ದು ಮಹಿಳೆಯರನ್ನೇ!

ಬಜೆಟ್ ಅಧಿವೇಶನದ ಮುನ್ನಾ ರಾಷ್ಟ್ರಪತಿಯವರು ಉಭಯ ಸದನವನ್ನು ಉದ್ದೇಶಿಸಿ ಮಾತನಾಡುವುದು, ಅದರ ವಂದನಾ ನಿರ್ಣಯದ ಕುರಿತು ಸಂಸದರು ಚರ್ಚಿಸುವುದು ಮತ್ತು ಕೊನೆಯಲ್ಲಿ ಸದನದ ನಾಯಕರಾದ ಪ್ರಧಾನಿ ಚರ್ಚೆಗೆ ಉತ್ತರಿಸುವುದು ಮೊದಲಿನಿಂದಲೂ ನಡೆದು ಬಂದಿರುವ ಸಂಪ್ರದಾಯ. ಆದರೆ, ಫೆ. 5 ರಂದು ಲೋಕಸಭೆಯು ಈ ದಶಕಗಳ ಸಂಪ್ರದಾಯಕ್ಕೆ ವ್ಯತಿರಿಕ್ತವಾದ ಪದ್ಧತಿಗೆ ಸಾಕ್ಷಿಯಾಯಿತು.

ರಾಷ್ಟ್ರಪತಿಗಳ ವಂದನಾ ನಿರ್ಣಯದ ಕುರಿತ ಚರ್ಚೆಯು ಆರಂಭದಲ್ಲೇ ದಿಕ್ಕಾಪಾಲಾಗಿ, ಕೇವಲ ಗದ್ದಲದಲ್ಲೇ ಕೊನೆಗೊಂಡಿದ್ದರೂ,ಕೊನೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸದನವನ್ನು ಉದ್ದೇಶಿಸಿ ಮಾತನಾಡುವ ನಿರೀಕ್ಷೆಯಿತ್ತು. ಅದಕ್ಕಾಗಿ ಫೆ.5ರ ಸಂಜೆ 5 ಗಂಟೆಯ ಸಮಯವೂ ನಿಗದಿಯಾಗಿತ್ತು. ಪ್ರಧಾನಿ ಸಂಸತ್ತಿಗೆ ಆಗಮಿಸಿಯೂ ಇದ್ದರು. ಆದರೆ, ಸದನದೊಳಗೆ ಬಂದು ಭಾಷಣ ಮಾಡದೆ ಹಿಂದಿರುಗಬೇಕಾಯಿತು. ಇದು ಸಂಸತ್ತಿನ ಇತಿಹಾಸದಲ್ಲೇ ಒಂದು ಕಪ್ಪುಚುಕ್ಕೆ. ಸದನದಲ್ಲಿ ಸುಮಾರು 8 ಮಹಿಳಾ ಸದಸ್ಯರು ಪ್ರಧಾನಿ ಆಸನವನ್ನು ಸುತ್ತುವರಿದು ಪ್ರತಿಭಟನೆಗೆ ಮುಂದಾಗಿದ್ದರಿಂದ ಸುರಕ್ಷತಾ ದೃಷ್ಟಿಯಿಂದ ಪ್ರಧಾನಿಗೆ ಸದನಕ್ಕೆ ಬರದಂತೆ ಸಲಹೆ ನೀಡಬೇಕಾಯಿತು ಎಂದು ಸ್ಪೀಕರ್ ಸದನದಲ್ಲಿ ಸ್ಪಷ್ಟೀಕರಣ ನೀಡಿದ್ದಾರೆ. ಈ ಸನ್ನಿವೇಶಗಳು ದೇಶದ ಪ್ರಧಾನ ಮಂತ್ರಿಯ ಸುರಕ್ಷತೆಯ ಪ್ರಶ್ನೆಯನ್ನು ಮುಂದಿಟ್ಟಿವೆ.

ವಿಪಕ್ಷ ಕಾಂಗ್ರೆಸ್ ಈಗ ಪ್ರಧಾನಿಯ ವಿರುದ್ಧ 'ಮಹಿಳಾಸ್ತ್ರ' ಬಳಸಲು ಮುಂದಾಗಿರುವುದು ಇಲ್ಲಿ ಜಗಜ್ಜಾಹೀರಾಗಿದೆ. ವಿಪಕ್ಷಗಳಿಗೆ ಸರ್ಕಾರದ ವಿರುದ್ಧ ಸದನದ ಒಳಗೆ ಹಾಗೂ ಹೊರಗೆ ಪ್ರಶ್ನಿಸುವ ಹಾಗೂ ಪ್ರತಿಭಟಿಸುವ ಅಧಿಕಾರವಿದೆ. ಸದನದಲ್ಲಿ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಸಿಗದಿರುವುದನ್ನು ಪ್ರಶ್ನಿಸುವುದು ಸಂಸದರ ಸಾಂವಿಧಾನಿಕ ಹಕ್ಕು. ಆದರೆ, ತಮ್ಮ ಅಸಮಾಧಾನ, ಆಕ್ರೋಶ ವ್ಯಕ್ತಪಡಿಸಲು ವಿಪಕ್ಷಗಳು ಆಯ್ಕೆ ಮಾಡಿಕೊಂಡ ಮಾರ್ಗ ಮಾತ್ರ ಆಕ್ಷೇಪಾರ್ಹವಾಗಿದೆ. ಮಹಿಳಾ ಸಂಸದರನ್ನು ಬಳಸಿಕೊಂಡು ದೇಶದ ಪ್ರಧಾನಿಗೆ ಅವಮಾನಿಸಲು ಮುಂದಾಗಿರುವುದು ಸಂಸತ್ತಿನ ಇತಿಹಾಸದಲ್ಲೇ ಒಂದು ನಾಚಿಕೆಗೇಡಿನ ಸಂಗತಿಯಾಗಿ ದಾಖಲಾಗಲಿದೆ. ಈ ಘಟನೆಯ ಬೆನ್ನಲ್ಲೇ ವಿಪಕ್ಷ ಸದಸ್ಯರು ಸಂಸತ್ತಿನಲ್ಲಿನ ಸ್ಪೀಕರ್ ಕಚೇರಿಗೆ ನುಗ್ಗಿ ಗದ್ದಲ ಎಬ್ಬಿಸಿದ್ದಾರೆ. ಈ ವಿಡಿಯೋವನ್ನು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಇದರಲ್ಲಿ ಕೂಡ ಮಹಿಳೆಯರೇ ಮುನ್ನೆಲೆಯಲ್ಲಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇಲ್ಲಿ ಪ್ರತಿಭಟನೆಗೆ ಮುಂದಾಗಿರುವ ಮಹಿಳಾ ಸದಸ್ಯರು ಪರಾಮರ್ಶಿಸಬೇಕಾಗಿರುವುದೇನೆಂದರೆ, ಅವರು ವ್ಯವಸ್ಥೆಯ ವಿರುದ್ಧ ನಿಂತಿದ್ದಾರೆಯೇ ಅಥವಾ ದೊಡ್ಡದೊಂದು ಸಂಚಿನ ಆಟದ ದಾಳಗಳಾಗಿದ್ದಾರೆಯೇ ಎಂಬುದನ್ನು.

ಓರ್ವ ನಾಯಕ ಸಬಲನಾಗಿದ್ದಾಗ ಆತನನ್ನು ಹತ್ತಿಕ್ಕಲು ಮಹಿಳಾಸ್ತ್ರ ಬಳಸುವುದು ಇದೇನು ಹೊಸದಲ್ಲ. ಹಿಂದೆ ಇದೇ ತಂತ್ರವನ್ನು ಮಹಿಳಾ ಜನಪ್ರತಿನಿಧಿಗಳ ವಿರುದ್ಧ ಪುರುಷ ಜನಪ್ರತಿನಿಧಿಗಳು ಬಳಸಿದ ಉದಾಹರಣೆಗಳಿವೆ. 1959ರಲ್ಲಿ ತಮಿಳುನಾಡು ವಿಧಾನಸಭೆಯಲ್ಲಿ ವಿಪಕ್ಷದಲ್ಲಿದ್ದ ಕುಮಾರಿ ಜಯಲಲಿತಾ ಅವರ ಮೇಲೆ ಹಲ್ಲೆ ನಡೆಸಲಾಗಿತ್ತು. ಉತ್ತರಪ್ರದೇಶದಲ್ಲಿ ವಿಪಕ್ಷ ನಾಯಕಿ ಮಾಯಾವತಿ ಅವರನ್ನು 1995ರಲ್ಲಿ ದಿಗ್ಬಂಧನದಲ್ಲಿ ಇರಿಸಲಾಗಿತ್ತು. ಆಗ ಸದನದಲ್ಲಿ ಮಹಿಳಾ ಸುರಕ್ಷತೆಯ ಪ್ರಶ್ನೆ ಎದ್ದಿತ್ತು. ಈಗ ಲೋಕಸಭೆಯಲ್ಲೇ ಮಹಿಳಾ ಸಂಸದರ ವರ್ತನೆಯು ದೇಶದ ಪ್ರಧಾನಿಯ ಸುರಕ್ಷತೆಯ ಬಗೆಗಷ್ಟೇ ಅಲ್ಲದೆ, ಪ್ರಜಾತಂತ್ರದ ದೇಗುಲದ ಪಾವಿತ್ರ್ಯಕ್ಕೇ ಧಕ್ಕೆ ತರುವಂತಹ ಘಟನೆಯಾಗಿದೆ.

ಕೆಲ ಸಮಯದ ಹಿಂದೆ ಪಶ್ಚಿಮ ಬಂಗಾಳದ ಸಂಸದೆ ಮೊಹುವಾ ಮೈತ್ರಿ ಅವರು 'ಧೈರ್ಯ ಮತ್ತು ಹೇಡಿತನ'ದ ಕಥನವನ್ನು ಸಂಸತ್ತಿನಲ್ಲಿ ಹುಟ್ಟು ಹಾಕಿ ಪ್ರಧಾನಿಗೆ ನೇರ ಸವಾಲು ಒಡ್ಡಿದ್ದರು. ತಮ್ಮ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ಧೈರ್ಯಶಾಲಿ ಎಂದು ಬಿಂಬಿಸುವ ಮೂಲಕ ಪರೋಕ್ಷವಾಗಿ ಹೇಡಿತನವನ್ನು ಟೀಕಿಸಿದ್ದರು. ವಿಪಕ್ಷ ನಾಯಕ ರಾಹುಲ್ ಗಾಂಧಿ ಇದನ್ನೇ ಮುಂದುವರಿಸಿ, ಸದನಕ್ಕೆ ಆಗಮಿಸದ ಪ್ರಧಾನಿಯ ನಡೆಯನ್ನು ಹೇಡಿತನ ಎಂದು ಬಣ್ಣಿಸಿರುವುದು ಕೂಡ ಒಂದು ಹೊಸ ನಿರೂಪಣೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುವುದು ಮೇಲ್ನೋಟಕ್ಕೆ ಕಾಣಿಸುವಂತಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಸುರಕ್ಷತೆಗೆ ಧಕ್ಕೆ ಉಂಟಾಗಿರುವುದು ಇದೇ ಮೊದಲೇನಲ್ಲ. ಈ ಹಿಂದೆ ಮೂರು ಕೃಷಿ ಕಾಯ್ದೆ ವಿವಾದದ ಸಂದರ್ಭದಲ್ಲಿ ಪಂಜಾಬ್‌ಗೆ ಭೇಟಿ ನೀಡಿದ್ದ ಮೋದಿ ಅವರ ಬೆಂಗಾವಲು ಪಡೆಯನ್ನು ಅಡ್ಡಗಟ್ಟಲಾಗಿತ್ತು. ಇತ್ತೀಚೆಗೆ ಜೆಎನ್‌ಯು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮೋದಿಗೆ ಸಮಾಧಿ ತೋಡುವ ಘೋಷಣೆ ಕೂಗಿದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡ ಒಮ್ಮೆ ಪ್ರಧಾನಿಯ ಮೇಲೆ ಹಲ್ಲೆ ಪ್ರಯತ್ನ ನಡೆದಿರುವುದು ಸುದ್ದಿಯಾಗಿತ್ತು. ಈಗ ದೇಶದ ವಿಪಕ್ಷಗಳು ಅದರಲ್ಲೂ ದಶಕಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಈ ತಂತ್ರಕ್ಕೆ ಇಳಿದಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಇದೆಲ್ಲದರ ನಡುವೆ, ಬಿಜೆಪಿ ಸಂಸದ ನಿಶಿಕಾಂತ ದುಬೆ ಅವರು ವಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ವಸ್ತುನಿಷ್ಠತೆಯ ಗೊತ್ತುವಳಿ ನೋಟಿಸ್ ನೀಡಿರುವುದು ಮತ್ತೊಂದು ವಿವಾದಕ್ಕೆ ನಾಂದಿ ಹಾಡಿದೆ. ಸದನದಿಂದ ದೂರವುಳಿಯುವ ಸ್ಪೀಕರ್ ನಿರ್ಧಾರ ಮತ್ತು ಗೊತ್ತುವಳಿ ನೋಟಿಸ್ ಎರಡೂ ಮಾ.9ರಿಂದ ಆರಂಭವಾಗಲಿರುವ ಎರಡನೇ ಹಂತದ ಬಜೆಟ್ ಅಧಿವೇಶನಕ್ಕೆ ರಂಗತಾಲೀಮಿನಂತಿವೆ.

ನೋಟಿಸ್‌ನಲ್ಲಿ ರಾಹುಲ್ ಗಾಂಧಿ ವಿರುದ್ಧ 'ರಾಷ್ಟ್ರ ವಿರೋಧಿ' ಚಟುವಟಿಕೆಯ ಗಂಭೀರ ಆರೋಪ ಮಾಡಲಾಗಿದೆ. ಈ ಹಿಂದೆ 2005ರಲ್ಲಿ ಪ್ರಶ್ನೆಗಾಗಿ ಕಾಸು ಆರೋಪಕ್ಕೆ ಸಂಬಂಧಿಸಿದಂತೆ ಸಂಸದರ ವಿರುದ್ಧ ವಸ್ತುನಿಷ್ಠತೆಯ ಗೊತ್ತುವಳಿ ಮಂಡಿಸಲಾಗಿತ್ತು. ಆಗ ಆರೋಪಗಳ ಸತ್ಯಾಸತ್ಯತೆ ಪರಿಶೀಲನೆಗಾಗಿ ರಚನೆಯಾಗಿದ್ದ ತನಿಖಾ ಸಮಿತಿಯ ವರದಿಯ ಆಧಾರದ ಮೇಲೆ 10 ಸಂಸದರನ್ನು ವಜಾಗೊಳಿಸಲಾಗಿತ್ತು. ಇದೇ ರೀತಿ ಹಲವು ಸಂಸದರ ವಿರುದ್ಧ ವಸ್ತುನಿಷ್ಠತೆಯ ಗೊತ್ತುವಳಿ ಮಂಡನೆಯಾಗಿದ್ದು, ಹಲವು ಶಿಸ್ತುಕ್ರಮಗಳನ್ನು ಕೂಡ ಕೈಗೊಳ್ಳಲಾಗಿದೆ. ಈಗ ವಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ಮಂಡಿಸಿರುವ ಗೊತ್ತುವಳಿಯಲ್ಲಿ ನಿಯಮ 342ರ ಅಡಿಯಲ್ಲಿನ ಆರೋಪಗಳಲ್ಲಿ ಸತ್ಯಾಂಶ ಕಂಡುಬಂದಲ್ಲಿ ಸದಸ್ಯತ್ವಕ್ಕೆ ಕುಂದು ಬರುವ ಸಾಧ್ಯತೆಯಿದೆ. ಆದರೆ ಇದು ಯಾವ ತಿರುವು ಪಡೆದುಕೊಳ್ಳುತ್ತದೆ ಮತ್ತು ಪ್ರಧಾನಿ ಆಸನವನ್ನು ಸುತ್ತುವರಿದು ಭದ್ರತೆಯ ಅಪಾಯ ಉಂಟುಮಾಡಿರುವ ಮಹಿಳೆಯರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಪ್ರಶ್ನೆಗಳಿಗೆ ಮುಂದಿನ ಭಾಗದ ಬಜೆಟ್ ಅಧಿವೇಶನದಲ್ಲಿ ಉತ್ತರ ದೊರೆಯಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಈ ಗೊಂದಲ, ಗದ್ದಲಗಳು ಇಡೀ ಸದನದ ಕಲಾಪಗಳನ್ನು ನುಂಗಿ ನೀರು ಕುಡಿದ ನಡುವೆ ಮರುಭೂಮಿಯಲ್ಲಿ ಮಳೆ ಸುರಿದಂತೆ ಎರಡು ದಿನಗಳ ಕಾಲ ಬಜೆಟ್ ಕುರಿತು ಚರ್ಚೆ ನಡೆಯಿತು. ಪ್ರತಿಪಕ್ಷಗಳು ಬಜೆಟ್ ವಿರುದ್ಧ ಟೀಕಾ ಪ್ರಹಾರ ಮಾಡಿದವು. ಕಳೆದ ವರ್ಷ ದೇಶದ ಬಜೆಟ್ ಅನ್ನು ಬ್ರೇಕ್ ಹಾಳಾಗಿರುವ ಬೈಕಿಗೆ ಹೋಲಿಸಿದ್ದ ಕಾಂಗ್ರೆಸ್ ಸದಸ್ಯ ಶಶಿ ತರೂರು ಅವರು ಮೆಕ್ಯಾನಿಕ್ ಬೈಕ್‌ನ ಬ್ರೇಕ್ ಬದಲಿಸುವ ಬದಲು, ದೊಡ್ಡ ಧ್ವನಿಯ ಹಾರ್ನ್ ನೀಡಿದ್ದಾನೆ ಎಂಬ ಉಪಮೆಯನ್ನು ಬಳಸಿದ್ದರು. ಈಗ ಅದನ್ನೇ ಮುಂದುವರಿಸಿ, ದೊಡ್ಡ ಧ್ವನಿಯ ಹಾರ್ನ್ ದೊರೆತರೂ ಕೂಡ ಆ ಬೈಕ್ ಇನ್ನೂ ಮುಂದಕ್ಕೆ ಸಾಗಿಲ್ಲ ಎಂದು ವ್ಯಂಗ್ಯವಾಡಿದರು. ಇದು ಅಮೆರಿಕಕ್ಕೆ ಭಾರತ ಶರಣಾಗಿದೆ ಎಂಬುದನ್ನು ಸೂಚಿಸುವ ಬಜೆಟ್ ಎಂದು ಕೂಡ ಹಲವು ಸಂಸದರು ಬಣ್ಣಿಸಿದರು. ಒಟ್ಟಿನಲ್ಲಿ ದೇಶದ ವಾರ್ಷಿಕ ಬಜೆಟ್ ಕುರಿತ ಚರ್ಚೆಯೇ ಕೇಂದ್ರಬಿಂದುವಾಗಬೇಕಿದ್ದ ಅಧಿವೇಶನದಲ್ಲಿ ಇತರ ವಿಷಯಗಳೇ ಮೇಲ್ಪಂಕ್ತಿ ಪಡೆದುಕೊಂಡಿದ್ದು ಒಂದು ದುರದೃಷ್ಟಕರ ಬೆಳವಣಿಗೆಯಾಗಿತ್ತು.

ಸೇವಾತೀರ್ಥ: ಆಧುನಿಕ ಭಾರತದ ಸಾಂಸ್ಕೃತಿಕ ಪುನರುಜ್ಜೀವನ

▸ ಓಂಕಾರ್ ಯಾದವ್

2014ರ ಮೇ ತಿಂಗಳು ಭಾರತೀಯ ರಾಜಕೀಯ ಇತಿಹಾಸದಲ್ಲಿ ಒಂದು ತಿರುವಿನ ಕ್ಷಣ. ಆ ಸಂದರ್ಭದಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನರೇಂದ್ರ ಮೋದಿಯವರು ದೇಶಕ್ಕೆ ನೀಡಿದ ಮೊದಲ ಸಂದೇಶ ಕೇವಲ ಆಡಳಿತ ಬದಲಾವಣೆಯ ಘೋಷಣೆಯಲ್ಲ; ಅದು ಮನೋಭಾವದ ಪರಿವರ್ತನೆಯ ಘೋಷಣೆಯಾಗಿತ್ತು. ರಾಜಕೀಯ ಸ್ವಾತಂತ್ರ್ಯವು 1947ರಲ್ಲಿ ದೊರಕಿದ್ದರೂ, ಮಾನಸಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಸಾಧಿಸಬೇಕಾದ ಅವಶ್ಯಕತೆ ಇಂದಿಗೂ ಇದೆ ಎಂಬ ಅವರ ಅಭಿಪ್ರಾಯವು ಚರ್ಚೆಗೆ ಹೊಸ ದಿಕ್ಕು ನೀಡಿತು.

ಮಾನಸಿಕ ದಾಸ್ಯದಿಂದ ಆತ್ಮಗೌರವದತ್ತ

ಕಲೋನಿಯಲ್ ಆಡಳಿತದ ಪರಿಣಾಮವಾಗಿ ಭಾರತೀಯ ಸಮಾಜದಲ್ಲಿ ಒಂದು ರೀತಿಯ ಮನೋವೈಜ್ಞಾನಿಕ ದಾಸ್ಯ ನೆಲೆಸಿತ್ತು ಎಂಬ ವಾದವನ್ನು ಮೋದಿ ಅವರು ಪದೇಪದೇ ಉಲ್ಲೇಖಿಸಿದ್ದಾರೆ. ಬ್ರಿಟಿಷ್ ಆಳ್ವಿಕೆ ಕೇವಲ ರಾಜಕೀಯ ವ್ಯವಸ್ಥೆಯನ್ನು ಮಾತ್ರವಲ್ಲ, ಆಡಳಿತದ ಶೈಲಿ, ಶಿಕ್ಷಣದ ಧೋರಣೆ ಮತ್ತು ಇತಿಹಾಸದ ವ್ಯಾಖ್ಯಾನವನ್ನೂ ರೂಪಿಸಿತು. ಈ ಪ್ರಭಾವದಿಂದ ಹೊರಬಂದು ಸ್ವದೇಶಿ ಮೌಲ್ಯಗಳ ಆಧಾರದ ಮೇಲೆ ಹೊಸ ಭಾರತವನ್ನು ನಿರ್ಮಿಸುವ ಸಂಕಲ್ಪವೇ 'ಪರಂಪರೆ ಮತ್ತು ಅಭಿವೃದ್ಧಿ' ಎಂಬ ತತ್ವದಲ್ಲಿ ವ್ಯಕ್ತವಾಯಿತು. ಅಭಿವೃದ್ಧಿ ಎಂದರೆ ಕೇವಲ ಹೆದ್ದಾರಿಗಳು, ಭವನಗಳು, ಡಿಜಿಟಲ್ ಮೂಲಸೌಕರ್ಯಗಳ ನಿರ್ಮಾಣವಲ್ಲ; ಅದು ರಾಷ್ಟ್ರದ ಆತ್ಮಸಮ್ಮಾನವನ್ನು ಪುನರುಜ್ಜೀವಗೊಳಿಸುವ ಆಂತರಿಕ ಪ್ರಕ್ರಿಯೆ. ಈ ತತ್ವದ ಭೌತಿಕ ರೂಪವೇ 'ಸೇವಾ ತೀರ್ಥ'.

ಸೇವಾ ತೀರ್ಥ: ಕಟ್ಟಡವಲ್ಲ, ದರ್ಶನ



ರಾಜಧಾನಿ ನವದೆಹಲಿಯ ಹೃದಯಭಾಗದಲ್ಲಿ ನಿರ್ಮಿತವಾದ ಸೇವಾ ತೀರ್ಥ ಸಂಕೀರ್ಣವು ಐದು ಎಕರೆ ಪ್ರದೇಶದಲ್ಲಿ ವಿಸ್ತರಿಸಿದೆ. ಇಲ್ಲಿ ಕಾರ್ಯಾಲಯ ಭವನ, ಪ್ರಧಾನಮಂತ್ರಿಯ ಅಧಿಕೃತ ನಿವಾಸವಾದ 7 Lok Kalyan Marg, ರಾಷ್ಟ್ರೀಯ ಭದ್ರತಾ ಸಲಹೆಗಾರರ ಕಚೇರಿ, ಕೃಷಿ ಹಾಗೂ ಹಣಕಾಸು ಇಲಾಖೆಗಳ ಪ್ರಮುಖ ಕಚೇರಿಗಳು all in one integrated ecosystem ಕಲ್ಪನೆಯಡಿಯಲ್ಲಿ ಒಂದೇ ವಲಯದಲ್ಲಿ ಕಾರ್ಯನಿರ್ವಹಿಸುವಂತೆ ವಿನ್ಯಾಸಗೊಳಿಸಲಾಗಿದೆ. ಹಿಂದಿನ ದಶಕಗಳಲ್ಲಿ ಸರ್ಕಾರವು ವಿವಿಧ ಖಾಸಗಿ ಕಟ್ಟಡಗಳಲ್ಲಿ ಕಚೇರಿಗಳನ್ನು ಬಾಡಿಗೆಗೆ ಪಡೆದು ಕಾರ್ಯನಿರ್ವಹಿಸುತ್ತಿತ್ತು. ಪ್ರತಿ ವರ್ಷ ಸಾವಿರಾರು ಕೋಟಿಗಳ ವ್ಯಯವಾಗುತ್ತಿತ್ತು. ಸುಮಾರು 1200 ಕೋಟಿ ರೂಪಾಯಿಗಳವರೆಗೆ ಸರ್ಕಾರದ ಮೇಲೆ ಹೊರೆಯಾಗುತ್ತಿತ್ತು ಎಂಬ ಅಂಕಿ-ಅಂಶಗಳು ಚರ್ಚೆಗೆ ಬಂದಿದ್ದವು. ಆರ್ಥಿಕ ಶಿಸ್ತಿನೊಂದಿಗೆ ಆಡಳಿತದ ಸಮನ್ವಯತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಈ ಸಮಗ್ರ ಸಂಕೀರ್ಣ ರೂಪುಗೊಂಡಿದೆ. ಇದು ಕೇವಲ ಹಣ ಉಳಿಸುವ ಯೋಜನೆಯಲ್ಲ; ಅದು ರಾಷ್ಟ್ರೀಯ ಗೌರವದ ಪ್ರಶ್ನೆಯೂ ಹೌದು. ಸ್ವತಂತ್ರ ರಾಷ್ಟ್ರದ ಆಡಳಿತವು ಇನ್ನೂ ಬಾಡಿಗೆ ಕಟ್ಟಡಗಳಲ್ಲಿ ಸೀಮಿತವಾಗಿರಬೇಕೆ ಎಂಬ ಪ್ರಶ್ನೆಗೆ ಸೇವಾ ತೀರ್ಥವು ಉತ್ತರ ನೀಡುತ್ತದೆ.

ಸವಾಲುಗಳು ಮತ್ತು ವಿವಾದಗಳು

ಕೋವಿಡ್ ಮಹಾಮಾರಿಯ ನಡುವೆಯೇ ಕಾಮಗಾರಿ ಮುಂದುವರಿಯಿತು. ಲಾಕ್‌ಡೌನ್, ಕಾನೂನು ಸವಾಲುಗಳು, ಪರಿಸರ ಸಂಬಂಧಿತ ಚರ್ಚೆಗಳು-ಇವೆಲ್ಲವೂ ಈ ಯೋಜನೆಗೆ ತಡೆಗಳಾಗಿದ್ದವು. ಉದ್ಘಾಟನೆಯ ಸಂದರ್ಭದಲ್ಲಿ ಬಳಸಲಾದ ಪ್ರತೀಕಾತ್ಮಕ ಅಂಶಗಳ ಬಗ್ಗೆ ರಾಜಕೀಯ ಚರ್ಚೆಗಳು ಉಂಟಾದವು. ಆದರೆ ವಿರೋಧದ ನಡುವೆ ಯೋಜನೆ ಪೂರ್ಣಗೊಂಡಿತು. ಇದರಿಂದ ಸ್ಪಷ್ಟವಾಗುವುದು ಏನೆಂದರೆ, ಸೇವಾ ತೀರ್ಥವು ಕೇವಲ ನಿರ್ಮಾಣ ಕಾರ್ಯವಲ್ಲ; ಅದು ಚಿಂತನೆಗಳ ಸಂಘರ್ಷದ ವೇದಿಕೆಯೂ ಆಗಿತ್ತು.

ಇತಿಹಾಸದ ವ್ಯಾಖ್ಯಾನ ಮತ್ತು ಹೊಸ ಪಥ

ಸ್ವಾತಂತ್ರ್ಯಾನಂತರದ ಆಡಳಿತ ಮಾದರಿಯ ಕುರಿತು ನಡೆದ ಚರ್ಚೆಗಳಲ್ಲಿ, ವಿಶೇಷವಾಗಿ ನೆಹರು ಕಾಲಘಟ್ಟದಿಂದ ಮುಂದುವರಿದ ವ್ಯವಸ್ಥೆಯು ಬ್ರಿಟಿಷ್ ಆಡಳಿತದ ಕೆಲವು ಚೌಕಟ್ಟುಗಳನ್ನು ಉಳಿಸಿಕೊಂಡಿತೆಂಬ ಅಭಿಪ್ರಾಯ ಕೇಳಿಬರುತ್ತದೆ. ಇದು ಇತಿಹಾಸದ ವಿಮರ್ಶಾತ್ಮಕ ಅಧ್ಯಯನಕ್ಕೆ ಒಳಪಟ್ಟ ವಿಚಾರ. ಆದರೆ ಮೋದಿ ಅವರ ದೃಷ್ಟಿಯಲ್ಲಿ, ಆಡಳಿತವನ್ನು ಭಾರತೀಯ ಮೌಲ್ಯಗಳ ಆಧಾರದ ಮೇಲೆ ಮರುಸಂರಚಿಸುವ ಪ್ರಯತ್ನವೇ ಮುಖ್ಯ. ಸೇವಾ ತೀರ್ಥವು ಈ ಪ್ರಯತ್ನದ ಭೌತಿಕ ಸಂಕೇತವಾಗಿದೆ.

ಸಾಂಸ್ಕೃತಿಕ ಪುನರುಜ್ಜೀವನದ ಸಂಕೇತ

ಸೇವಾ ತೀರ್ಥವು ಕೇವಲ ಆಡಳಿತದ ಕೇಂದ್ರವಲ್ಲ; ಅದು ಭಾರತೀಯ ನಾಗರಿಕತೆಯ ವೈಭವವನ್ನು ಪ್ರತಿಬಿಂಬಿಸುವ ಸಂಕೇತ. ಸಾವಿರಾರು ವರ್ಷಗಳ ಇತಿಹಾಸ, ಆಧ್ಯಾತ್ಮಿಕ ಪರಂಪರೆ, ಸ್ಥಳೀಯ ಜ್ಞಾನ-ಇವುಗಳನ್ನೆಲ್ಲ ಒಳಗೊಂಡ ಸಂಸ್ಕೃತಿ ಭಾರತದ್ದು. ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ, ಯೋಗ, ಆಯುರ್ವೇದ, ದೇವಸ್ಥಾನ ಪುನರುಜ್ಜೀವನ, ರಾಷ್ಟ್ರೀಯ ಚಿಹ್ನೆಗಳ ಪುನರ್‌ಅರ್ಥೈಸಿಕೆಗಳೆಲ್ಲವೂ ಒಂದು ವಿಸ್ತೃತ ಸಾಂಸ್ಕೃತಿಕ ಚಳವಳಿಯ ಭಾಗವೆಂದು ಪರಿಗಣಿಸಲಾಗುತ್ತದೆ.

ನವಭಾರತದ ದೀಪಸ್ತಂಭ

'ಸೇವಾ ತೀರ್ಥ' ಉದ್ಘಾಟನೆ ಒಂದು ಕಟ್ಟಡದ ಉದ್ಘಾಟನೆಯಷ್ಟೇ ಅಲ್ಲ; ಅದು ರಾಷ್ಟ್ರದ ಮನೋಭಾವದ ಪರಿವರ್ತನೆಯ ಸಂಕೇತ. 2014ರಲ್ಲಿ ಉಚ್ಚರಿಸಲ್ಪಟ್ಟ ದೃಷ್ಟಿ, ಮಾನಸಿಕ ದಾಸ್ಯದಿಂದ ಮುಕ್ತವಾಗಿರುವ ಆತ್ಮವಿಶ್ವಾಸಿ ಭಾರತ ಇಂದು ಸ್ಪಷ್ಟ ರೂಪ ಪಡೆದುಕೊಳ್ಳುತ್ತಿರುವುದನ್ನು ಈ ಸಂಕೀರ್ಣ ಸೂಚಿಸುತ್ತದೆ. ಅಭಿವೃದ್ಧಿಯೊಂದಿಗೆ ಪರಂಪರೆಯನ್ನು ಕಾಪಾಡುವ ಪಥದಲ್ಲಿ ಸಾಗುತ್ತಿರುವ ಭಾರತ, ತನ್ನ ಇತಿಹಾಸವನ್ನು ಮರೆಯದೆ, ಅದರಿಂದ ಪಾಠಗಳನ್ನು ಕಲಿತು, ಭವಿಷ್ಯದತ್ತ ಆತ್ಮವಿಶ್ವಾಸದಿಂದ ಹೆಜ್ಜೆ ಇಡುತ್ತಿದೆ.



ಡಿಜಿಟಲ್ ಮೂಲಸೌಕರ್ಯ ಭಾರತ ಮುಂಚೂಣಿ: ಮೋದಿ | ಎಐ ಮಾನವಕಲ್ಯಾಣಕ್ಕಾಗಿ ಹಂಚಿಕೆಯ ಸಂಪನ್ಮೂಲವಾಗಬೇಕು

ಪ್ರಗತಿ ಯುಗಕ್ಕೆ ಕೃತಬುದ್ಧಿಮತ್ತೆ ನಾಂದಿ

ಹೊಸದಿಲ್ಲಿ: ಭಾರತವು ಅತ್ಯುತ್ತಮ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ನಿರ್ಮಿಸಿ, ಅದನ್ನು ವಿಶ್ವದೊಂದಿಗೆ ಹಂಚಿಕೊಳ್ಳುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ. ತಂತ್ರಜ್ಞಾನವು ಶಕ್ತಿಯ ಸಾಧನವಲ್ಲ, ಸೇವೆಯ ಸಾಧನವಾಗಿದೆ. ಇದು ಆಳಲು ಅಲ್ಲ, ಸಬಲಗೊಳಿಸಲು ಇದೆ ಎಂಬುದೇ ಭಾರತದ ದೃಷ್ಟಿಕೋನ ಎಂದು ಅವರು ಸ್ಪಷ್ಟಪಡಿಸಿದರು. ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯ ನಾಯಕರ ಪೂರ್ಣ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಕೃತಕ ಬುದ್ಧಿಮತ್ತೆ (ಎಐ) ಎಲ್ಲರಿಗೂ ಲಭ್ಯವಾಗುವಂತಾಗಬೇಕು. ಎಐ ಆಡಳಿತದಲ್ಲಿ ಗ್ಲೋಬಲ್ ಸೌತ್‌ನ ಆಶಯಗಳು ಮತ್ತು ಆದ್ಯತೆಗಳಿಗೆ ಕೇಂದ್ರಸ್ಥಾನ ನೀಡಬೇಕು ಎಂದು ಒತ್ತಿಹೇಳಿದರು.

ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್(ಯುಪಿಐ) ಕಠಿಣ ಪರಿಸ್ಥಿತಿಗಳಲ್ಲಿಯೂ ನಿರಂತರ ಆನ್‌ಲೈನ್ ವ್ಯವಹಾರಗಳನ್ನು ಸಾಧ್ಯಮಾಡಿ, ಡಿಜಿಟಲ್ ಅಂತರವನ್ನು ಕಡಿಮೆ ಮಾಡಿದೆ ಎಂದು ಪ್ರಧಾನಿ ಉಲ್ಲೇಖಿಸಿದರು. ಸ್ಟಾರ್ಟ್‌ಅಪ್‌ಗಳಿಗೆ ಕೈಗೆಟುಕುವ ದರದಲ್ಲಿ ವಿಶ್ವಮಟ್ಟದ ಕಂಪ್ಯೂಟಿಂಗ್ ಸಾಮರ್ಥ್ಯ ಒದಗಿಸಲಾಗುತ್ತಿದೆ ಎಂದರು.

ಎಐಕೋಶ್ ರಾಷ್ಟ್ರೀಯ ಡೇಟಾಸೆಟ್ ವೇದಿಕೆ ಮೂಲಕ ಸಾವಿರಾರು ಡೇಟಾಸೆಟ್‌ಗಳು ಮತ್ತು ಎಐ ಮಾದರಿಗಳನ್ನು ಹಂಚಲಾಗಿದೆ. ಎಐ ಮಾನವಕಲ್ಯಾಣಕ್ಕಾಗಿ ಹಂಚಿಕೆಯ ಸಂಪನ್ಮೂಲವಾಗಬೇಕು ಎಂಬ ಭಾರತದ ದೃಷ್ಟಿಕೋನ ಸ್ಪಷ್ಟವಾಗಿದೆ ಎಂದು ಹೇಳಿದರು. ಎಐ ಯುಗದಲ್ಲಿ ನೈತಿಕ ಮಾನದಂಡಗಳು ಅಸೀಮಿತವಾಗಿರಬೇಕು. ಡೇಟಾ ಸಾರ್ವಭೌಮತ್ವಕ್ಕೆ ಗೌರವ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಡೇಟಾ ಚೌಕಟ್ಟು, ಹಾಗೂ ಪಾರದರ್ಶಕ ಸುರಕ್ಷತಾ ನಿಯಮಗಳ ಅಗತ್ಯವಿದೆ ಎಂದು ಮೋದಿ ಅಭಿಪ್ರಾಯಪಟ್ಟರು. ಭಾರತದ ಎಐ ಮಿಷನ್ ಅಡಿಯಲ್ಲಿ ಈಗಾಗಲೇ 38,000 ಜಿಪಿಯುಗಳು ಲಭ್ಯವಿದ್ದು, ಮುಂದಿನ ಆರು ತಿಂಗಳಲ್ಲಿ 24,000 ಹೆಚ್ಚಿಸಲಾಗುವುದು ಎಂದು ಪ್ರಧಾನಿ ತಿಳಿಸಿದರು. ತಂತ್ರಜ್ಞಾನ ಮತ್ತು ಮಾನವ ವಿಶ್ವಾಸ ಒಂದಾಗುವಾಗ ಎಐಯ ನಿಜವಾದ ಪರಿಣಾಮ ಗೋಚರಿಸುತ್ತದೆ ಎಂದು ಹೇಳಿದರು.

ಎಐಯನ್ನು ಜವಾಬ್ದಾರಿಯುತವಾಗಿ ಬಳಸಿ

ಅತ್ಯುಚ್ಚ ಪ್ರಗತಿಯ ಯುಗಕ್ಕೆ ಕೃತಕ ಬುದ್ಧಿಮತ್ತೆ ನಾಂದಿ ಹಾಡಿದೆ ಎಂದು ಗೂಗಲ್ ಸಿಇಒ ಸುಂದರ್ ಪಿಚ್ಚೈ ಬಣ್ಣಿಸಿದ್ದಾರೆ. ಹೊಸ ವೈಜ್ಞಾನಿಕ ಆವಿಷ್ಕಾರಗಳ ತೆರೆದಿಡಲು ಸಮರ್ಥ ಎಐ , ಸಾಂಪ್ರದಾಯಿಕ ಅಭಿವೃದ್ಧಿ ಹಂತಗಳ ದಾಟಿ ಮುನ್ನಡೆಯುವಲ್ಲಿ ಉದಯೋನ್ಮುಖ ಆರ್ಥಿಕತೆಗಳಿಗೆ ಪ್ರೇರಣೆಯಾಗಿದೆ ಎಂದು ಹೇಳಿದ್ದಾರೆ. ಎಐ ವಿಜ್ಞಾನ, ಶಿಕ್ಷಣ, ಆರ್ಥಿಕ ಬೆಳವಣಿಗೆ ಸಹಿತ ಎಲ್ಲಾ ರಂಗಗಳಲ್ಲೂ ಪರಿವರ್ತನೆ ಸೃಷ್ಟಿಸುವ ಸಾಮರ್ಥ್ಯವುಳ್ಳದ್ದಾಗಿದೆ. ಎಐ ಹೊರತು ಯಾವುದೇ ತಂತ್ರಜ್ಞಾನಗಳೂ ಬೃಹತ್ ಕನಸು ಕಾಣಲು ನನ್ನನ್ನು ಪ್ರೇರೇಪಿಸಿದ್ದಿಲ್ಲ ಎಂದಿರುವ ಪಿಚ್ಚೈ , ಭಾರತ-ಅಮೆರಿಕ ನಡುವಿನ ಎಐ ಸಂಪರ್ಕ ಬಲಪಡಿಸಲು ಸಮುದ್ರದಾಳದಲ್ಲಿ ನಾಲ್ಕು ಹೊಸ ಫೈಬರ್‌ಆಪ್ಟಿಕ್ ಕೇಬಲ್ ಸಿಸ್ಟಮ್‌ಗಳನ್ನು ಗೂಗಲ್ ನಿರ್ಮಿಸಲಿದೆ. ವಿಸ್ತೃತ ಎಐ ಮತ್ತು ಡಿಜಿಟಲ್ ಮೂಲಸೌಕರ್ಯ ವಿಸ್ತರಣೆಗೆ ಪ್ರಸ್ತುತ ಯೋಜನೆ ಮೂಲಧಾರವಾಗಲಿದೆ ಎಂದಿದ್ದಾರೆ.

ನಮ್ಮ ಜೀವಿತಾವಧಿಯಲ್ಲಿ (ಭಾರೀ ಸೃಜನಾತ್ಮಕ ಸ್ಥಿತ್ಯಂತರ) ಸೃಜಿಸುವ ತಂತ್ರಜ್ಞಾನ ಎಐ ಎಂದು ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಬಣ್ಣಿಸಿದ ಗೂಗಲ್ ಹಾಗೂ ಆಲ್ಫಬೆಟ್ ಸಿಇಒ ಪಿಚ್ಚೈ, ಈ ತಂತ್ರಜ್ಞಾನವನ್ನು ಧೈರ್ಯದಿಂದ ಮತ್ತು ಜವಾಬ್ದಾರಿಯುತವಾಗಿ ಬಳಸಿಕೊಳ್ಳಿ ಎಂದು ಸರಕಾರಗಳು, ಕಂಪನಿಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಆಗ್ರಹಿಸಿದರು.



ಎಐಗೆ 10 ಲಕ್ಷ ಕೋಟಿ ರೂ. ಹೂಡಿಕೆ

ಮುಂದಿನ ಏಳು ವರ್ಷಗಳಲ್ಲಿ ಕೃತಕ ಬುದ್ಧಿಮತ್ತೆ ರಂಗದಲ್ಲಿ 10ಲಕ್ಷ ಕೋಟಿ ಹೂಡಿಕೆ ಹೂಡುವ ಮುಖೇನ, ದೇಶದ ಮೂಲೆಮೂಲೆಗಳಿಗೂ ಮೊಬೈಲ್, ಇಂಟರ್‌ನೆಟ್ ಡೇಟಾ ಮತ್ತಷ್ಟು ಸುಲಭವಾಗಿ, ಮತ್ತಷ್ಟು ವೇಗವಾಗಿ ಲಭಿಸಲು ಶ್ರಮಿಸುವುದಾಗಿ ಉದ್ಯಮಿ ಮುಖೇಶ್ ಅಂಬಾನಿ ಘೋಷಿಸಿದ್ದಾರೆ.

ಜಿಯೋದ ಡಿಜಿಟಲ್ ಕ್ರಾಂತಿಯ ಪರಿವರ್ತನಾತ್ಮಕ ಮಟ್ಟವನ್ನು ಪ್ರತಿಫಲಿಸುವ ತೆರ, ಪ್ರಸ್ತುತ ಯೋಜನೆ ಮುಖೇನ ಪ್ರತಿಯೋರ್ವ ಪ್ರಜೆ, ವ್ಯಾಪಾರ ವಹಿವಾಟುಗಳು ಹಾಗೂ ಸರಕಾರಿ ಸೇವೆಗಳನ್ನು ಎಐ ಜತೆ ಜೋಡಿಸಲಾಗುವುದು. ಭಾರತವನ್ನು ಇಂಟರ್‌ನೆಟ್ ಯುಗದೊಂದಿಗೆ ಸಂಪರ್ಕಿಸಿದ್ದು ಜಿಯೋ. ಇದೀಗ ಜಿಯೋ ಭಾರತವನ್ನು ಬುದ್ಧಿಮತ್ತೆ ಯುಗದೊಂದಿಗೆ ಜೋಡಿಸಲಿದೆ. ಬುದ್ಧಿಮತ್ತೆಯನ್ನು ಭಾರತ ಬಾಡಿಗೆಗೆ ಪಡೆಯಲಾಗದು. ಹಾಗಾಗಿ ಡಾಟಾ ವಿಚಾರದಲ್ಲಿ ವೆಚ್ಚ ಕುಗ್ಗಿಸಿದಂತೆ ಕೃತಕ ಬುದ್ಧಿಮತ್ತೆ ರಂಗದಲ್ಲೂ ವೆಚ್ಚ ಕುಗ್ಗಿಸಲಾಗುವುದು ಎಂದು ಅಂಬಾನಿ ಇಂಡಿಯಾ ಎಐ ಇಂಪ್ಯಾಕ್ಟ್ ಸಮ್ಮಿಟ್‌ನಲ್ಲಿ ಘೋಷಿಸಿದರು. ಜಿಯೊ ಮತ್ತು ರಿಲಯನ್ಸ್ ಕಂಪೆನಿಗಳು ಒಟ್ಟಾಗಿ ಮುಂದಿನ ಏಳು ವರ್ಷಗಳಿಗೆ ಅನ್ವಯಿಸುವಂತೆ ಎಐ ರಂಗದಲ್ಲಿ 10ಲಕ್ಷ ಕೋಟಿ ಹೂಡಿಕೆ ಹೂಡಲಿವೆ. ಜಾಮ್‌ನಗರದಲ್ಲಿ ಗಿಗಾವಾಟ್ ಮಟ್ಟದ ಎಐ –ರೆಡೀ ಡಾಟಾ ಕೇಂದ್ರಗಳ ಸ್ಥಾಪನೆ, 10 ಗಿಗಾವ್ಯಾಟ್‌ಗೆ ಗ್ರೀನ್ ಪವರ್ ಹೆಚ್ಚುವರಿಗಳ ನಿಯಂತ್ರಣ ಸಹಿತ ಮೂರು ಪ್ರಧಾನ ವಿಚಾರಗಳನ್ನು ಪ್ರಸ್ತಾವಿತ ಯೋಜನೆ ಕೇಂದ್ರೀಕರಿಸಿರುವುದು. ಜಿಯೋ ಎಐ ಭಾರತೀಯ ಭಾಷೆಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಇದರಿಂದ ರೈತರು, ಯುವಕರು, ವಿದ್ಯಾರ್ಥಿಗಳು ಮತ್ತು ಸಣ್ಣ ವ್ಯವಹಾರಗಳು ತಮ್ಮದೇ ಆದ ಭಾಷೆಗಳಲ್ಲಿ ಇದರ ಪ್ರಯೋಜನ ಪಡೆಯಬಹುದು ಎಂದು ಅಂಬಾನಿ ಒತ್ತಿ ಹೇಳಿದರು. ಶಿಕ್ಷಣಕ್ಕಾಗಿ ಜಿಯೋ ಶಿಕ್ಷಾ ಎಐ, ಆರೋಗ್ಯಕ್ಕಾಗಿ ಜಿಯೋ ಆರೋಗ್ಯ ಎಐ, ಕೃಷಿಗಾಗಿ ಜಿಯೋ ಕೃಷಿ ಮತ್ತು ಸಾಮಾನ್ಯ ಬಳಕೆಗಾಗಿ ಜಿಯೋ ಭಾರತ್ ಐಕ್ಯೂ ಮುಂತಾದ ಪ್ಲಾಟ್ ಫಾರ್ಮ್ ಗಳನ್ನು ಪರಿಚಯಿಸಲಾಗಿದೆ, ಇದು ಸ್ಥಳೀಯ ಭಾಷೆಗಳಲ್ಲಿ ಎಐ ಆಧಾರಿತ ಸಹಾಯವನ್ನು ಒದಗಿಸುತ್ತದೆ.

ಗ್ಲೋಬಲ್ ಸೌತ್ ಎಐ ಭಾರತ ಮುನ್ನಡೆ

- ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಅಭಿಪ್ರಾಯ
- ನ್ಯೂ ದಿಲ್ಲಿ ಫ್ರಾಂಟಿಯರ್ ಎಐ ಇಂಪ್ಯಾಕ್ಟ್ ಕಮಿಟ್‌ಮೆಂಟ್ಸ್ ಘೋಷಣೆ

ಜಾಗತಿಕ ಮುಂಚೂಣಿ ಎಐ ಕಂಪನಿಗಳು ಹಾಗೂ ಭಾರತದ ನವೋದ್ಯಮಿಗಳು ನ್ಯೂ ದಿಲ್ಲಿ ಫ್ರಾಂಟಿಯರ್ ಎಐ ಇಂಪ್ಯಾಕ್ಟ್ ಕಮಿಟ್‌ಮೆಂಟ್ಸ್ ಅಡಿಯಲ್ಲಿ ನೈಜ ಜಗತ್ತಿನ ಎಐ ಬಳಕೆಯ ಅರಿವು ಹೆಚ್ಚಿಸಲು ಹಾಗೂ ಉದ್ಯೋಗ, ಕೌಶಲ್ಯಾಭಿವೃದ್ಧಿ ಮತ್ತು ಆರ್ಥಿಕ ಪರಿವರ್ತನೆ ಕುರಿತ ಸಾಕ್ಷ್ಯಾಧಾರಿತ ನೀತಿಗಳಿಗೆ ಬೆಂಬಲ ನೀಡಲು ಬದ್ಧತೆ ವ್ಯಕ್ತಪಡಿಸಿದ್ದಾರೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ತಿಳಿಸಿದ್ದಾರೆ.

ಇಲ್ಲಿ ನಡೆದ ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್‌ನ ನಿರ್ಣಯವನ್ನು ಪ್ರಕಟಿಸಿದ ಅವರು, 'ಸರ್ವಂ, ಭಾರತ್ ಜನ್, ಯಾನಿ, ಸೋಕೆಟ್ ಮುಂತಾದ ಭಾರತೀಯ ನವೋದ್ಯಮಿಗಳೊಂದಿಗೆ ಪ್ರಮುಖ ಫ್ರಾಂಟಿಯರ್ ಎಐ ಕಂಪನಿಗಳು ಕೈಜೋಡಿಸಿ, ಸಮಾವೇಶಾತ್ಮಕ ಹಾಗೂ ಹೊಣೆಗಾರಿಕೆಯ ಎಐ ಅಭಿವೃದ್ಧಿಗೆ ಸ್ವಯಂಪ್ರೇರಿತ ಬದ್ಧತೆಗಳನ್ನು ಘೋಷಿಸಿವೆ' ಎಂದರು.

ಇದು ನಾವೀನ್ಯತೆ ಮತ್ತು ಸಮಾನತೆಯ ಸಮತೋಲನ ಸಾಧಿಸುವ ಮೂಲಕ ಗ್ಲೋಬಲ್ ಸೌತ್‌ನ ನೇತೃತ್ವದ ಎಐ ಆಡಳಿತದ ದೃಷ್ಟಿಕೋನಕ್ಕೆ ಭಾರತವನ್ನು ಮುಂಚೂಣಿಗೆ ತರುತ್ತದೆ ಎಂದು ಸಚಿವರು ಹೇಳಿದರು.

ಈ ಬದ್ಧತೆಗಳಡಿ ಎರಡು ಪ್ರಮುಖ ಅಂಶಗಳನ್ನು ಕಂಪನಿಗಳು ಒಪ್ಪಿಕೊಂಡಿವೆ. ಮೊದಲನೆಯದಾಗಿ, ಜಾಗತಿಕ ಆರ್ಥಿಕತೆಯಲ್ಲಿ ಎಐ ತಂತ್ರಜ್ಞಾನ ಹೇಗೆ ವ್ಯಾಪಿಸುತ್ತಿದೆ ಎಂಬುದರ ಕುರಿತಾಗಿ ಅನಾಮಧೇಯ ಮತ್ತು ಒಟ್ಟುಗೂಡಿಸಿದ ಮಾಹಿತಿಗಳ ಆಧಾರದ ಮೇಲೆ ವಿಶ್ಲೇಷಣೆ ನಡೆಸಲಾಗುತ್ತದೆ. ಇದು ಉದ್ಯೋಗ, ಕೌಶಲ್ಯಾಭಿವೃದ್ಧಿ ಮತ್ತು ಆರ್ಥಿಕ ಪರಿವರ್ತನೆ ಕುರಿತ ಸಾಕ್ಷ್ಯಾಧಾರಿತ ನೀತಿ ರೂಪಣೆಗೆ ನೆರವಾಗಲಿದೆ. ಜತೆಗೆ ಮಾನವ ಎಐ ಸಹಕಾರದ ಭವಿಷ್ಯ ಕುರಿತ ಅಧ್ಯಯನಕ್ಕೂ ದಾರಿ ಮಾಡಿಕೊಡಲಿದೆ. ಬಳಕೆದಾರರ ಗೌಪ್ಯತೆಯನ್ನು ಕಾಪಾಡುತ್ತ, ಮುಂದಿನ ಎಐ ಸಮಿಟ್‌ಗೆ ಮುನ್ನ ಅಂಕಿ–ಅಂಶಾಧಾರಿತ ವರದಿಯನ್ನು ಪ್ರಕಟಿಸಲಾಗುವುದು ಎಂದು ತಿಳಿಸಲಾಗಿದೆ.

ಎರಡನೇ ಬದ್ಧತೆಯಡಿ ಎಐ ವ್ಯವಸ್ಥೆಗಳ ಬಹುಭಾಷಾ ಹಾಗೂ ಪ್ರಾಸಂಗಿಕ ಮೌಲ್ಯಮಾಪನವನ್ನು ಬಲಪಡಿಸಲಾಗುತ್ತದೆ. ವಿವಿಧ ಭಾಷೆಗಳು, ಸಂಸ್ಕೃತಿಗಳು ಮತ್ತು ನೈಜ ಬಳಕೆ ಸಂದರ್ಭಗಳಲ್ಲಿ ಎಐ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲಾಗುವುದು. ವಿಶೇಷವಾಗಿ ಗ್ಲೋಬಲ್ ಸೌತ್ ದೇಶಗಳಲ್ಲಿ ಎಐ ಜನತಂತ್ರೀಕರಣಕ್ಕೆ ಇದು ನೆರವಾಗಲಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಬೆಂಗಳೂರಿನಲ್ಲಿ ಒಪನ್ ಎಐ ಕಚೇರಿ

ಹೊಸದಿಲ್ಲಿ: ಈ ವರ್ಷಾಂತ್ಯದೊಳಗೆ ಬೆಂಗಳೂರು ಮತ್ತು ಮುಂಬೈ ನಗರಗಳಲ್ಲಿ ಹೊಸ ಕಚೇರಿಗಳನ್ನು ತೆರೆಯುವುದಾಗಿ ಒಪನ್ ಎಐ ಸಿಇಒಸ್ಯಾಮ್ ಆಲ್ಟ್‌ಮನ್ ಘೋಷಿಸಿದ್ದಾರೆ. ಭಾರತದಂತಹ ಪ್ರಮುಖ ಮಾರುಕಟ್ಟೆಯಲ್ಲಿ ತಮ್ಮ ಉದ್ಯಮವನ್ನು ವಿಸ್ತರಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಹೇಳಿದ್ದಾರೆ.

ಹೊಸ ಕಚೇರಿಗಳು ಸಂಸ್ಥೆಯ ಈಗಿನ ದಿಲ್ಲಿ ಕಚೇರಿಗೆ ಸೇರ್ಪಡೆಯಾಗಲಿವೆ. ಈ ನಿರ್ಧಾರ ದೇಶವ್ಯಾಪಿ ಒಪನ್ ಎಐ ಫಾರ್ ಇಂಡಿಯಾ ಯೋಜನೆಯ ಭಾಗವಾಗಿದ್ದು, ಕೃತಕ ಬುದ್ಧಿಮತ್ತೆಗೆ ಪ್ರವೇಶ ವಿಸ್ತರಣೆ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಪರಿವರ್ತನೆಗೆ ವೇಗ ನೀಡುವುದು ಗುರಿಯಾಗಿದೆ.ಕೃತಕ ಬುದ್ಧಿಮತ್ತೆ ಅಳವಡಿಕೆಯಲ್ಲಿ ಭಾರತ ಮುಂಚೂಣಿಯಲ್ಲಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಯಾಮ್ ಆಲ್ಟ್‌ಮನ್ ತಿಳಿಸಿದ್ದಾರೆ.ಭಾರತವು ಚಾಟ್ ಜಿಪಿಟಿಯ ಪ್ರಮುಖ ಮಾರುಕಟ್ಟೆಗಳಲ್ಲೊಂದಾಗಿ ಹೊರಹೊಮ್ಮಿದ್ದು, ವಾರಕ್ಕೆ 100 ಮಿಲಿಯನ್‌ಕ್ಕಿಂತ ಹೆಚ್ಚು ಬಳಕೆದಾರರನ್ನು ಹೊಂದಿದೆ.

ಜಿನೀವಾದಲ್ಲಿ ಮುಂದಿನ ಎಐ ಶೃಂಗ

2027ರ ಎಐ ಶೃಂಗಕ್ಕೆ ಸ್ವಿಜರ್ಲೆಂಡ್‌ನ ಜಿನೀವಾ ಆತಿಥ್ಯ ವಹಿಸಲಿದೆ ಎಂದು ಸ್ವಿಜರ್ಲೆಂಡ್‌ನ ಅಧ್ಯಕ್ಷ ಗೈ ಪಾರ್ಮಲಿನ್ ಹೇಳಿದ್ದಾರೆ. ಎಐ ಇಂಪ್ಯಾಕ್ಟ್ ಶೃಂಗಸಭೆಯ ಅಂಗವಾಗಿ ಭಾರತ ಮಂಟಪಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪಾರ್ಮಲಿನ್, ಸ್ವಿಸ್ ಪೆವಿಲಿಯನ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಈ ವೇಳೆ ಅಲ್ಲೇ ಹಿಂದೆ ಹಾಕಲಾಗಿದ್ದ 2027ರಲ್ಲಿ ಜಿನೀವಾದಲ್ಲಿ ಸಿಗೋಣ ಎಂಬ ಬರಹ ಗಮನ ಸೆಳೆಯಿತು.

ಕಿರುಸುದ್ದಿ

ಡಿಎಂಕೆ ನೇತೃತ್ವದ ಮೈತ್ರಿ ಕೂಟಕ್ಕೆ ಸೇರಿದ ಡಿಎಂಡಿಕೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಮೈತ್ರಿಕೂಟವನ್ನು ಸೇರಿದೆ. ಈ ಮೂಲಕ ರಾಜಕೀಯ ಊಹಾಪೋಹಗಳಿಗೆ ಅಂತ್ಯ ಹಾಡಿದೆ. ಇಲ್ಲಿನ ಡಿಎಂಕೆ ಪ್ರಧಾನ ಕಚೇರಿ ಅಣ್ಣಾ ಅರಿವಳಿಯಂನಲ್ಲಿ ಮುಖ್ಯಮಂತ್ರಿ ಮತ್ತು ಪಕ್ಷದ ಅಧ್ಯಕ್ಷ ಎಂ. ಕೆ. ಸ್ಟಾಲಿನ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್ ಒಂದರಲ್ಲಿ, ಕ್ಯಾಪ್ಟನ್ ವಿಜಯಕಾಂತ್ ಸ್ಥಾಪಿಸಿದ ಡಿಎಂಡಿಕೆ ಮತ್ತು ಕಲೈಂಜರ್ (ಡಿಎಂಕೆ ಪಿತಾಮಹ ಎಂ ಕರುಣಾನಿಧಿ) ಅವರ ಮೇಲೆ ಅಚಲವಾದ ಪ್ರೀತಿಯನ್ನು ಹೊಂದಿದ್ದ ವ್ಯಕ್ತಿ ಜಾತ್ಯತೀತ ಪ್ರಗತಿಪರ ಮೈತ್ರಿಕೂಟವನ್ನು ಸೇರಿರುವುದು ನನಗೆ ಅಪಾರ ಸಂತೋಷವನ್ನು ತರುತ್ತದೆ ಎಂದು ಸ್ಟಾಲಿನ್ ಹೇಳಿದ್ದಾರೆ.

ವಂದೇ ಭಾರತ್ ಮೇಲೆ ಕಲ್ಲೆಸೆತ

ಹಾರ್ದೋಯಿ: ವಂದೇ ಭಾರತ್ ರೈಲಿನ ಮೇಲೆ ಉತ್ತರ ಪ್ರದೇಶದ ಹಾರ್ದೋಯಿ ಜಿಲ್ಲೆಯ ಕೌಡಾ ಗ್ರಾಮದ ಸಮೀಪ ಕಲ್ಲು ತೂರಾಟ ನಡೆದಿದೆ. ಇದರಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕ್ ಮೋಹನ್ ಭಾಗವತ್ ಪ್ರಯಾಣಿಸುತ್ತಿದ್ದರು. ಮಧ್ಯಾಹ್ನ ಸುಮಾರು 3.20ರ ವೇಳೆಗೆ ದಿಲ್ಲಿಯತ್ತ ಸಾಗುತ್ತಿದ್ದ ರೈಲಿನ ಮೇಲೆ ಕಲ್ಲು ಎಸೆಯಲಾಗಿದೆ. ಇದರಿಂದಾಗಿ ರೈಲಿನ ಒಂದು ಕಿಟಕಿಯ ಗಾಜು ಬಿರುಕುಬಿಟ್ಟಿದೆ ಎಂದು ರೈಲ್ವೆ ಮೂಲಗಳು ತಿಳಿಸಿವೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ರೈಲು ಹಳಿಯ ಸಮೀಪ ಕ್ರಿಕೆಟ್ ಆಡುತ್ತಿದ್ದ 8ರಿಂದ 13 ವರ್ಷದೊಳಗಿನ ಕೆಲ ಮಕ್ಕಳು ಸಾಗುತ್ತಿದ್ದ ರೈಲಿನತ್ತ ಕಲ್ಲು ತೂರಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಕುರಿತು ತನಿಖೆ ಮುಂದುವರಿದಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರಾಚಿ ಸಿಲಿಂಡರ್ ಸ್ಫೋಟ: 16 ಸಾವು

ಕರಾಚಿ: ಪಾಕಿಸ್ತಾನದ ಕರಾಚಿಯ ಅಪಾರ್ಟ್‌ಮೆಂಟ್ ಕಟ್ಟಡವೊಂದರಲ್ಲಿ ಗುರುವಾರ ಸಂಭವಿಸಿದ ಅನಿಲ ಸಿಲಿಂಡರ್ ಸ್ಫೋಟದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಠ 16 ಜನರು ಮೃತಪಟ್ಟಿದ್ದಾರೆ. ಕರಾಚಿಯ ವಸತಿ ಪ್ರದೇಶದಲ್ಲಿ ಜನರು ಮುಂಜಾನೆ ಆಹಾರ ಸಿದ್ಧಪಡಿಸುತ್ತಿದ್ದಾಗ ರಂಜಾನ್ ತಿಂಗಳ ಮೊದಲ ದಿನದಂದು ಸ್ಫೋಟ ಸಂಭವಿಸಿದೆ. ಸ್ಫೋಟದಲ್ಲಿ ಹಲವಾರು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸ್ ಮುಖ್ಯಸ್ಥರು ತಿಳಿಸಿದ್ದಾರೆ.

ಚಾರ್ಲ್ಸ್ ಸಹೋದರ ಆಂಡ್ರ್ಯೂ ಬಂಧನ

ಲಂಡನ್: ಎಪ್‌ಸ್ಟೀನ್ ಕಡತಗಳ ವಿವಾದಕ್ಕೆ ಸಂಬಂಧಿಸಿದಂತೆ ಬ್ರಿಟನ್ ರಾಜ ಕುಟುಂಬಕ್ಕೆ ಮತ್ತೊಮ್ಮೆ ಸಂಕಷ್ಟ ಎದುರಾಗಿದೆ. ರಾಜ ಚಾರ್ಲ್ಸ್ 3 ಸಹೋದರ ಹಾಗೂ ಮಾಜಿ ಪ್ರಿನ್ಸ್ ಆಂಡ್ರ್ಯೂ ಮೌಂಟ್‌ಬ್ಯಾಟನ್ ವಿಂಡ್ಸರ್ ಅವರನ್ನು ಸಾರ್ವಜನಿಕ ಹುದ್ದೆಯ ದುರುಪಯೋಗ ಶಂಕೆ ಮೇರೆಗೆ ಬಂಧಿಸಲಾಗಿದೆ. ಥೇಮ್ಸ್ ವ್ಯಾಲಿ ಪೊಲೀಸರು 2010ರಲ್ಲಿ ಜೆಫ್ರಿ ಎಪ್‌ಸ್ಟೀನ್‌ಗೆ ವ್ಯಾಪಾರ ಸಂಬಂಧಿತ ವರದಿಗಳನ್ನು ಕಳುಹಿಸಿದ್ದಾರೆ ಎಂಬ ಆರೋಪಗಳ ಕುರಿತು ತನಿಖೆ ನಡೆಸುತ್ತಿದ್ದಾರೆ. ಈ ತನಿಖೆಯ ಭಾಗವಾಗಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಆದರೆ, ತಾನು ಯಾವುದೇ ತಪ್ಪು ಮಾಡಿಲ್ಲ ಎಂದು ಆಂಡ್ರ್ಯೂ ಹೇಳಿದ್ದಾರೆ. ಈ ಸಂಬಂಧ ಮಾತನಾಡಿರುವ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್, ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂದಿದ್ದಾರೆ. ಎಪ್‌ಸ್ಟೀನ್ ಸಂಪರ್ಕಗಳ ಕುರಿತು ಅಮೆರಿಕ ಕಾಂಗ್ರೆಸ್ ಮುಂದೆ ಆಂಡ್ರ್ಯೂ ಸಾಕ್ಷ್ಯ ಹೇಳಬೇಕು ಎಂಬ ತಮ್ಮ ಹಿಂದಿನ ಅಭಿಪ್ರಾಯವನ್ನು ಪುನರಾವರ್ತಿಸಿದ್ದಾರೆ. ಈ ಹಿಂದೆ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೀನ್ ಜೊತೆಗಿನ ಸಂಬಂಧದ ಹಿನ್ನೆಲೆಯಲ್ಲಿ ಆಂಡ್ರ್ಯೂ ಅವರ ಪ್ರಿನ್ಸ್ ಪಟ್ಟವನ್ನು ಕಿತ್ತುಕೊಳ್ಳಲಾಗಿತ್ತು. ಅಮೆರಿಕ ಕಾನೂನು ಇಲಾಖೆ ಇತ್ತೀಚೆಗೆ ಎಪ್‌ಸ್ಟೀನ್ ಪ್ರಕರಣಕ್ಕೆ ಸಂಬಂಧಿಸಿದ ಸುಮಾರು 30 ಲಕ್ಷ ಪುಟಗಳ ದಾಖಲೆಗಳನ್ನು ಬಿಡುಗಡೆ ಮಾಡಿದ್ದು, ಹೊಸ ಸಂಗತಿಗಳು ಬೆಳಕಿಗೆ ಬಂದಿವೆ.

- ಎಪ್‌ಸ್ಟೀನ್‌ನಲ್ಲಿ ಕಡತಗಳಲ್ಲಿ ಹೆಸರು
- ಯುವತಿ ಜತೆ ಇರುವ ಫೋಟೋ ಬಹಿರಂಗ

ಹೈ-ಸೀ ಉಗ್ರವಾದ ತಡೆ: ರಾಜನಾಥ್ ಸಿಂಗ್ ಕರೆ

ವಿಶಾಖಪಟ್ಟಣಂ: ಸಮುದ್ರದಲ್ಲಿ ಭಯೋತ್ಪಾದನೆ ಮತ್ತು ಅಪರಾಧ ಚಟುವಟಿಕೆಗಳ ವಿರುದ್ಧ ಹೋರಾಟ ಬಲಪಡಿಸಲು ಹೊಸ ಜಾಗತಿಕ ನೌಕಾ ಸಂರಚನೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಕರೆ ನೀಡಿದ್ದಾರೆ. ಇಲ್ಲಿ, 74 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ ಬಹುರಾಷ್ಟ್ರೀಯ ನೌಕಾಭ್ಯಾಸ "ಮಿಲನ್ 2026"ರಲ್ಲಿ ಅವರು ಈ ಪ್ರಸ್ತಾಪ ಮಾಡಿದ್ದಾರೆ.

ಉದಯೋನ್ಮುಖ ಸಮಸ್ಯೆಗಳು: ಸಮುದ್ರದ ಕಾನೂನಿನ ಕುರಿತಾದ ವಿಶ್ವಸಂಸ್ಥೆಯ ಸಮಾವೇಶ ಕಾನೂನು ಚೌಕಟ್ಟಿದ್ದರೂ, ಮಾಹಿತಿ ಹಂಚಿಕೆಯನ್ನು ಆಧರಿಸಿದ ಹೆಚ್ಚುವರಿ ಕಾರ್ಯವಿಧಾನ ಕಡಲ ಭಯೋತ್ಪಾದನೆ ಮತ್ತು ಭದ್ರತಾ ಸವಾಲುಗಳ ವಿರುದ್ಧದ ಕ್ರಮವನ್ನು ಮತ್ತಷ್ಟು ಬಲಪಡಿಸುತ್ತದೆ ಎನ್ನಲಾಗಿದೆ. ಜಲಸಂಧಿಗಳು, ಕಾಲುವೆಗಳು ಮತ್ತು ನೀರೊಳಗಿನ ಅಪರೂಪದ ಸಂಪನ್ಮೂಲಗಳ ಮೇಲೆ ಹೆಚ್ಚುತ್ತಿರುವ ವಿವಾದಗಳನ್ನು ಉದಯೋನ್ಮುಖ ಸಮಸ್ಯೆಗಳೆಂದು ವ್ಯಾಖ್ಯಾನಿಸಲಾಗಿದೆ.

ಕಡಲ ಪಾತ್ರದ ವಿಸ್ತರಣೆ: ಕಡಲ ಭದ್ರತೆಯನ್ನು ಉತ್ತೇಜಿಸುವ 47 ರಾಷ್ಟ್ರಗಳ ಸಮೂಹವಾದ ಕಂಬೈನ್ಡ್ ಮ್ಯಾರಿಟೈಮ್ ಫೋರ್ಸ್‌ನಲ್ಲಿ ಕಂಬೈನ್ಡ್ ಟಾಸ್ಕ್ ಫೋರ್ಸ್ 154 ರ ಕಮಾಂಡ್ ಅನ್ನು ಭಾರತ ವಹಿಸಿಕೊಂಡಿದೆ. ಕಡಲ್ಗಳ್ಳತನ, ಕಳ್ಳಸಾಗಣೆ ಮತ್ತು ಸೈಬರ್ ಬೆದರಿಕೆಗಳನ್ನು ಎದುರಿಸುವಲ್ಲಿ ನೌಕಾಪಡೆಗಳ ಹೆಚ್ಚುತ್ತಿರುವ ಪಾತ್ರದ ಬಗ್ಗೆ ಬೆಳಕು ಚೆಲ್ಲಲಾಯಿತು. ನೌಕಾಪಡೆ ಮುಖ್ಯಸ್ಥ ದಿನೇಶ್ ತ್ರಿಪಾಠಿ ಭಾಗವಹಿಸಿದ್ದರು. ಈ ಮಧ್ಯೆ, ಐಒಎಸ್ ಸಾಗರ್‌ನ ವಿಸ್ತರಿತ ಎರಡನೇ ಆವೃತ್ತಿ ಏಪ್ರಿಲ್ ನಲ್ಲಿ ಬಿಡುಗಡೆಯಾಗಲಿದೆ ಎಂದು ತಿಳಿದುಬಂದಿದೆ.

ಭ್ರಷ್ಟಾಚಾರ :ಬಾಲುಗೆ ಅಣ್ಣಾಮಲೈ ಸವಾಲು

ಚೆನ್ನೈ: ತಮಿಳುನಾಡಿನ ಮಾಜಿ ರಾಜ್ಯಾಧ್ಯಕ್ಷ ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ, ಡಿಎಂಕೆ ಸಂಸದ ಮತ್ತು ಪಕ್ಷದ ಖಜಾಂಚಿ ಟಿ.ಆರ್ ಬಾಲು ಅವರನ್ನು ವೈಯಕ್ತಿಕವಾಗಿ ಪಾಟೀ ಸವಾಲಿಗೆ ಒಳಪಡಿಸಿದ್ದಾರೆ. ಭ್ರಷ್ಟಾಚಾರದ ಆರೋಪಗಳಲ್ಲಿ ಬೇರೂರಿರುವ ಉನ್ನತ ಮಟ್ಟದ ಮಾನನಷ್ಟ ಮೊಕದ್ದಮೆಯಲ್ಲಿ ಬಾಲು ಸೈದಾಪೇಟ್‌ನ 17 ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಸುಮಾರು ಮೂರು ಗಂಟೆಗಳ ಕಾಲ ಇದ್ದರು. ಡಿಎಂಕೆಯ ಉನ್ನತ ನಾಯಕರು ಭ್ರಷ್ಟಾಚಾರದ ಮೂಲಕ ಸಂಪತ್ತು ಸಂಗ್ರಹಿಸಿದ್ದಾರೆ ಮತ್ತು ಅದನ್ನು ಚುನಾವಣಾ ಅಫಿಡವಿಟ್‌ಗಳಲ್ಲಿ ಮರೆಮಾಡಿದ್ದಾರೆ ಎಂದು ಆರೋಪಿಸಿ ಅಣ್ಣಾಮಲೈ 2023ರಲ್ಲಿ ಡಿಎಂಕೆ ಫೈಲ್ಸ್‌ನ ಎಂಬ ಶೀರ್ಷಿಕೆಯ ದಾಖಲೆ ಬಿಡುಗಡೆ ಮಾಡಿದ ನಂತರ ಬಾಲು ಈ ಪ್ರಕರಣ ದಾಖಲಿಸಿದ್ದರು. 100 ಕೋಟಿ ರೂ. ಪರಿಹಾರ ಕೋರಿರುವ ಬಾಲು, ಆರೋಪಗಳನ್ನು ಸುಳ್ಳು, ಆಧಾರರಹಿತ ಮತ್ತು ಮಾನಹಾನಿಕರ ಎಂದು ಹೇಳಿದ್ದಾರೆ. ಬೇಷರತ್ತಾಗಿ ಕ್ಷಮೆಯಾಚಿಸಲು ಒತ್ತಾಯಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಬಾಲು ತನ್ನ ಪತ್ನಿಯ ಹೆಸರಿನಲ್ಲಿ 1.46 ಕೋಟಿ. ರೂ ವೈಯಕ್ತಿಕ ಸಾಲ ಮತ್ತು 6.60 ಕೋಟಿ.ರೂ ಸಾಲವಿರುವುದನ್ನು ಬಹಿರಂಗಪಡಿಸಿದ್ದಾರೆ. ಮತ್ತು ಸಾಲ ನೀಡುವ ಕಂಪನಿಯನ್ನು ತನ್ನ ಮಗ ನಡೆಸುತ್ತಿದ್ದಾನೆಯೇ ಎಂದು ತನಗೆ ತಿಳಿದಿಲ್ಲ ಎಂದು ಹೇಳಿದ್ದಾರೆ. ಮುಂದಿನ ವಿಚಾರಣೆಯನ್ನು 2026ರ ಏಪ್ರಿಲ್ 7ಕ್ಕೆ ಮುಂದೂಡಲಾಗಿದೆ. ವಿಚಾರಣೆಯ ಸಮಯದಲ್ಲಿ ತನ್ನ ಪತ್ನಿಯ ವಿರುದ್ಧ ಮಾಡಲಾದ ಆರೋಪಗಳ ಮೇಲೆ ಪ್ರತ್ಯೇಕ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಅಣ್ಣಾಮಲೈ ಘೋಷಿಸಿದ್ದಾರೆ.

ತಾಯಿಯಿಂದ ಅವಳಿ ಬೇರ್ಪಡಿಸಿದ್ದು ಕ್ರೌರ್ಯಕ್ಕೆ ಸಮ: ಸುಪ್ರೀಂ

ಹೊಸದಿಲ್ಲಿ: ವೈವಾಹಿಕ ವಿವಾದದಲ್ಲಿ ವಿಚ್ಛೇದಿತ ಪತಿ ಆರು ತಿಂಗಳ ಅವಳಿ ಮಕ್ಕಳನ್ನು ಅವರ ತಾಯಿಯಿಂದ ಬೇರ್ಪಡಿಸಿದ್ದು ಅತ್ಯುನ್ನತ ಕ್ರೌರ್ಯದ ಪ್ರಕರಣ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ. ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್. ವಿ. ಅಂಜಾರಿಯಾ ಅವರ ನ್ಯಾಯಪೀಠವು, ಸದ್ಯ ಒಂದೂವರೆ ವರ್ಷ ವಯಸ್ಸಿನ ಮಕ್ಕಳನ್ನು ತಮ್ಮ 6ತಿಂಗಳಲ್ಲಿ ತಾಯಿಯಿಂದ ಬೇರ್ಪಡಿಸಿದ್ದಕ್ಕಾಗಿ ಗಂಡನನ್ನು ತರಾಟೆಗೆ ತೆಗೆದುಕೊಂಡಿದೆ. ವಿಚ್ಛೇದಿತ ಸಂಗಾತಿಗಳಿಬ್ಬರೂ ಮುಂದಿನ ದಿನಾಂಕದಂದು ನ್ಯಾಯಮೂರ್ತಿಗಳ ಮುಂದೆ ಹಾಜರಾಗುವಂತೆ ಕೇಳಿಕೊಂಡಿತು. ಕೇವಲ ಆರು ತಿಂಗಳ ಮಕ್ಕಳನ್ನು ಅವರ ತಾಯಿಯಿಂದ ಬೇರ್ಪಡಿಸುವ ಮೂಲಕ ಪತಿ ತೀವ್ರ ಕ್ರೌರ್ಯವನ್ನು ಮಾಡಿದ್ದಾನೆ. ಮಕ್ಕಳ ಕಲ್ಯಾಣವೇ ಮುಖ್ಯ. ಇದು ನ್ಯಾಯದ ಅಪಹಾಸ್ಯವಾಗಿದೆ. ಆರು ತಿಂಗಳಷ್ಟು ಚಿಕ್ಕ ಮಕ್ಕಳನ್ನು ಅವರ ತಾಯಿಯಿಂದ ದೂರವಿಡಲು ಸಾಧ್ಯವಿಲ್ಲ. ಇದು ಅತ್ಯುನ್ನತ ಕ್ರಮದ ಕ್ರೌರ್ಯವಾಗಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಎಲ್ಲಾ ಪಡೆಗಳ ಜಂಟಿ ಕಾರ್ಯಾಚರಣೆಗಳ ಮೂಲಕ ಗುರಿ

ನಕ್ಸಲಿಸಂ ವಿರುದ್ಧದ ಕಾರ್ಯಾಚರಣೆ ಯಶ

ಗುವಾಹಟಿ: ನಕ್ಸಲಿಸಂ ವಿರುದ್ಧದ ಹೋರಾಟ ಕೊನೆ ಹಂತದಲ್ಲಿದ್ದು, ಗೃಹ ಸಚಿವ ಅಮಿತ್ ಶಾ ಘೋಷಿಸಿದಂತೆ ಮಾರ್ಚ್ ವೇಳೆಗೆ ದೇಶದಿಂದ ಈ ಪಿಡುಗನ್ನು ನಿರ್ಮೂಲನೆ ಮಾಡಲಾಗುವುದು ಎಂದು ಸಿಆರ್‌ಪಿಎಫ್ ಮಹಾನಿರ್ದೇಶಕ ಜಿ. ಪಿ. ಸಿಂಗ್ ಗುರುವಾರ ಹೇಳಿದ್ದಾರೆ.

ಗುವಾಹಟಿಯಲ್ಲಿ ದಳದ ಡಿಜಿ ಪಥಸಂಚಲನವನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ ವರ್ಷದಲ್ಲಿ ನಕ್ಸಲರ ವಿರುದ್ಧ ಇತರ ಭದ್ರತಾ ಸಂಸ್ಥೆಗಳೊಂದಿಗೆ ಜಂಟಿ ಕಾರ್ಯಾಚರಣೆಯಲ್ಲಿ ಸಿಆರ್‌ಪಿಎಫ್ ನಿರ್ಣಾಯಕ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದರು. ನಕ್ಸಲರ ವಿರುದ್ಧದ ಕಾರ್ಯಾಚರಣೆಯಲ್ಲಿ ನಾವು ಅಭೂತಪೂರ್ವ ಯಶಸ್ಸನ್ನು ಸಾಧಿಸಿದೆವು. ಇತರ ಭದ್ರತಾ ಸಂಸ್ಥೆಗಳೊಂದಿಗೆ ಜಂಟಿ ಕಾರ್ಯಾಚರಣೆಯಲ್ಲಿ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು. ಇದರಲ್ಲಿ ಸಿಆರ್‌ಪಿಎಫ್‌ನ ಜನರಲ್ ಡ್ಯೂಟಿ ಬೆಟಾಲಿಯನ್ ಮತ್ತು ಕೋಬ್ರಾ ಕಮಾಂಡೋಗಳ ಪಾತ್ರದ ಬಗ್ಗೆ ಉಲ್ಲೇಖಿಸಿದರು. ನಕ್ಸಲಿಸಂ ತನ್ನ ಕೊನೆಯ ಉಸಿರನ್ನು ತೆಗೆದುಕೊಳ್ಳುತ್ತಿದೆ. ನಮ್ಮ ಜಂಟಿ ಕಾರ್ಯಾಚರಣೆಗಳ ಮೂಲಕ, ನಕ್ಸಲಿಸಂ ಬಹುತೇಕ ಕೊನೆಗೊಂಡಿದೆ. ನಮ್ಮ ಕೇಂದ್ರ ಗೃಹ ಸಚಿವರು ಘೋಷಿಸಿದಂತೆ 2026ರ ಮಾರ್ಚ್ ವೇಳೆಗೆ ಇದನ್ನು ನಿರ್ಮೂಲನೆ ಮಾಡುವ ಹಾದಿಯಲ್ಲಿದೆ ಎಂದು ಸಿಂಗ್ ಹೇಳಿದರು.

ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆ

ಹೊಸದಿಲ್ಲಿ: ದೇಶದಲ್ಲಿ ನಕ್ಸಲ್ ಬಾಧಿತ ಜಿಲ್ಲೆಗಳ ಸಂಖ್ಯೆ ಎಂಟರಿಂದ ಏಳಕ್ಕೆ ಇಳಿಕೆಯಾಗಿದೆ ಎಂದು ನಕ್ಸಲ್ ಬಾಧಿತವಾದ ಪ್ರದೇಶಗಳ ಹೊಸ ಪರಿಶೀಲನೆಯಿಂದ ತಿಳಿದು ಬಂದಿದೆ. ಈ ಮೂಲಕ 2026ರ ಮಾರ್ಚ್ ಅಂತ್ಯದ ವೇಳೆಗೆ ನಕ್ಸಲ್ ಮುಕ್ತ ಭಾರತ ನಿರ್ಮಾಣಕ್ಕೆ ಹೊಸ ಬಲದೊರಕಿದೆ. ಗೃಹ ಸಚಿವಾಲಯವು ಇತ್ತೀಚೆಗೆ ಫೆಬ್ರವರಿ 9 ರಿಂದ ಜಾರಿಗೆ ಬರುವಂತೆ ಎಲ್ಲಾ ನಕ್ಸಲ್ ಪೀಡಿತ ರಾಜ್ಯಗಳಿಗೆ ಹೊಸ ವರ್ಗೀಕರಣವನ್ನು ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನು 10 ದಿನಗಳಲ್ಲಿ ನಿರ್ಧಾರ ಎಂದ ಟ್ರಂಪ್

ಅಮೆರಿಕ – ಇರಾನ್ ಯುದ್ಧ ನಿಶ್ಚಿತ?

ಹೊಸದಿಲ್ಲಿ/ವಾಷಿಂಗ್ಟನ್: ಅಮೆರಿಕ-ಇರಾನ್ ನಡುವಿನ ಉದ್ವಿಗ್ನತೆ ಮತ್ತಷ್ಟು ಗಂಭೀರವಾಗಿರುವ ನಡುವೆಯೇ, ಯುದ್ಧದ ಬಗ್ಗೆ ಮುಂದಿನ 10 ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ವಾಷಿಂಗ್ಟನ್ ಡಿಸಿಯಲ್ಲಿ ಹೊಸದಾಗಿ ರಚಿಸಲಾದ ಬೋರ್ಡ್ ಆಫ್ ಪೀಸ್‌ನ ಮೊದಲ ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಟ್ರಂಪ್, ಅಮೆರಿಕ ಮತ್ತು ಇರಾನ್ ನಡುವೆ ಒಪ್ಪಂದದ ಸಾಧ್ಯತೆಗಳನ್ನೂ ಉಲ್ಲೇಖಿಸಿದರು. ಇದನ್ನು ಇನ್ನೊಂದು ಹಂತಕ್ಕೆ ತೆಗೆದುಕೊಳ್ಳಬೇಕಾಗಬಹುದು ಅಥವಾ ಇಲ್ಲದಿರಬಹುದು. ಮುಂದಿನ 10 ದಿನಗಳಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ ಎಂದರು. ಇದೇ ವೇಳೆ, ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ಟ್ರಂಪ್ ನಿಗದಿಪಡಿಸಿದ ರೆಡ್ ಲೈನ್‌ಗಳನ್ನು ಇರಾನ್ ಇನ್ನೂ ಒಪ್ಪಿಕೊಂಡಿಲ್ಲ ಎಂದು ಹೇಳಿದ್ದಾರೆ. ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, "ಅಣ್ವಸ್ತ್ರ ಹೊಂದಬಾರದು ಎಂಬುದು ಅಧ್ಯಕ್ಷರ ಸ್ಪಷ್ಟ ನಿಲುವು. ಆದರೆ ಇರಾನ್ ಅದನ್ನು ಗಂಭೀರವಾಗಿ ಪರಿಗಣಿಸುತ್ತಿರುವ ಲಕ್ಷಣಗಳು ಕಾಣುತ್ತಿಲ್ಲ ಎಂದು ವ್ಯಾನ್ಸ್ ಅಭಿಪ್ರಾಯಪಟ್ಟರು. ಇದರ ನಡುವೆ, ಇರಾನ್ ಫೆ.17ರಂದು ಹಾರ್ಮುಜ್ ಜಲಸಂಧಿಯಲ್ಲಿ ಲೈವ್ ಫೈರ್ ಸೈನಿಕ ಅಭ್ಯಾಸ ನಡೆಸಿ, ಜಲಸಂಧಿಯನ್ನು ತಾತ್ಕಾಲಿಕವಾಗಿ ಮುಚ್ಚಿದ ಬೆಳವಣಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆತಂಕಕ್ಕೆ ಕಾರಣವಾಗಿದೆ.

ಷೇರುಪೇಟೆಗೆ ಯುದ್ಧದ ಭೀತಿ

ಮುಂಬೈ: ಅಮೆರಿಕ ಮತ್ತು ಇರಾನ್ ನಡುವೆ ಯುದ್ಧ ನಡೆಯುವ ಸಂಭವ ಹೆಚ್ಚಾಗಿದ್ದು, ಇದರ ಪರಿಣಾಮ ಭಾರತೀಯ ಷೇರುಮಾರುಕಟ್ಟೆಗಳ ಮೇಲೂ ಬೀರಿತು. ಗುರುವಾರ ಬಿಎಸ್‌ಇ ಸೆನ್ಸೆಕ್ಸ್ 1,236.11 ಅಂಕಗಳು (ಶೇ.1.48) ಇಳಿದು 82,498.14ಕ್ಕೆ ಮುಕ್ತಾಯಗೊಂಡರೆ, ಎನ್‌ಎಸ್‌ಇ ನಿಫ್ಟಿ 365 ಅಂಕಗಳು (ಶೇ.1.41) ಕುಸಿದು 25,454.35ಕ್ಕೆ ತಲುಪಿತು. ಮೂರು ದಿನಗಳ ಏರಿಕೆ ಸರಣಿಗೆ ತೆರೆ ಬಿದ್ದಿದ್ದು, ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 1,470 ಅಂಕಗಳವರೆಗೆ ಕುಸಿದು 82,264.20 ಎಂಬ ಕನಿಷ್ಠ ಮಟ್ಟ ತಲುಪಿತು. ನಿಫ್ಟಿ ಮಧ್ಯಂತರ ದಿನ ಅವಧಿಯಲ್ಲಿ 430 ಅಂಕಗಳಷ್ಟು ಇಳಿಕೆ ಕಂಡು 25,388.75 ಮಟ್ಟ ತಲುಪಿತು.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,51,000(2,44,000) ಅಪರಂಜಿ ಚಿನ್ನ: 15,480(15,132) ಆಭರಣ ಚಿನ್ನ: 14,415(14,135) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 82,498(1,236↓) ಎನ್‌ಎಸ್‌ಇ 25,454(365↓) $1 = ₹90.68

ಡ್ರಾ ಫಲಿತಾಂಶ

ಹಳೇ ವಿದ್ಯಾರ್ಥಿ ಸಂಘ ಕೊಡ್ಮಾಣ್
ಅದೃಷ್ಟ ಚೀಟಿ ಫಲಿತಾಂಶ
ಪ್ರಥಮ–8426, ದ್ವಿತೀಯ–9708, ತೃತೀಯ–4509
ಆಕರ್ಷಕ ಬಹುಮಾನಗಳು:
7815, 10158, 10721, 6087, 9371

Before the Principal Commercial Court/1ST Add. District and Sessions Judge at Mangaluru, D.K. District
Com.O.S.No.35/2026

Between:
The State Bank of India ...Plaintiff
AND
Mrs. Ayeshathil Mudipu ...Defendant

To,
Mrs. Ayshathil Mudipu.,
Aged 24 years,
W/o Mr.Mustak Kanyan,
R/at Alfaaz Burka Shop,
HIRA Tower, Near City Medical,
Vittal D.K. District 574 243.

Whereas the above-named plaintiff have filed a Civil suit before this Hon'ble Court for recovery of money borrowed by you from the plaintiff Bank. You are hereby summoned to appear in this Court in person or by a pleader duly instructed on the **07th day of March 2026 at 11 a.m.** in the forenoon, to answer the claim and you are directed to file on that day written statement and produce documents to base your defence, failing wherein, the said claim in the above suit will be heard and determined ex-parte.

Given under my hand & seal of the Court this the 18th day of February 2026.

/By order of the Court/
Sd/- Chief Ministerial Officer
1st Add. District and Sessions Judge, D.K.
Sd/- Smt. Surekha Naveen Rao
Advocate for the plaintiff

IN THE COURT OF THE III ADDITIONAL DISTRICT JUDGE D.K. MANGALURU

R.R.P No.3/2025

Between,
Sandhya Vani and another - Revision Petitioner
AND
Smt. Prafulla Marla and others - Respondents

NOTICE

To,
Respondent No.4 and 5:
4.Mr. Trivikram Ullal, Aged about 60 years, S/o. late Indira. Residing at Door No.22-10-1395, Manegar Compound, Bolar Ferry Road, Mangaluru Thota Village, Mangaluru-575 001.
5.Mr. Devraj Ullal, Aged about 60 years, S/o. late Indira. Residing at Door No.22-10-1395, Manegar Compound, Bolar Ferry Road, Mangaluru Thota Village, Mangaluru-575 001.

Take notice that the above case is now posted to **05/03/2026** for your appearance. You are hereby called upon to appear before the Court on that day at **3.00pm**, either personally or through pleader, failing which the matter will be decided in your absence, placing you exparte.

Given under my hand and seal of their court this the 16th day of February 2026.

(By order of court)
Sd/-Chief Administrative Officer,
District Court, Mangaluru, D.K.
Sd/-Advocate for Revision Petitioner.
Place: Mangalore.
Date: 16-02-2026

ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.
ಮಡಿಕೇರಿ, ಕೊಡಗು ಜಿಲ್ಲೆ
ಸಿ.ಆರ್.ಎಂ.ಸಿ. ನಂ.: 117/2025

ಅರ್ಜಿದಾರರು:
ಹೇಮಲತ ಎ.ಈ.
ವಿರುದ್ಧ
ಎದುರುದಾರರು:
ತಹಶೀಲ್ದಾರರು, ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ ಮತ್ತು ಇತರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಅರ್ಜಿದಾರರಾದ ಹೇಮಲತ ಎ.ಈ. ರವರ ತಂದೆಯಾದ **ಎ.ಯು. ಈರಪ್ಪನವರು ದಿನಾಂಕ:14.10.1985 ರಂದು** 1ನೇ ಮೊಣ್ಣಂಗೇರಿ ಗ್ರಾಮ, ಮಡಿಕೇರಿ ತಾಲೂಕು, ಕೊಡಗು ಜಿಲ್ಲೆಯ ಅವರ ಮನೆಯಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ **ದಿನಾಂಕ: 07.03.2026 ರಂದು ಬೆಳಿಗ್ಗೆ 11.00 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/– ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಡಿಕೇರಿ, ಕೊಡಗು ಜಿಲ್ಲೆ
ಸಹಿ/– ಎ.ಎ. ಪೆಮ್ಮಯ್ಯ
ಅರ್ಜಿದಾರರ ಪರ ವಕೀಲರು
ಮಡಿಕೇರಿ,
17.02.2026

ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.
ಮಡಿಕೇರಿ, ಕೊಡಗು ಜಿಲ್ಲೆ
ಸಿ.ಆರ್.ಎಂ.ಸಿ. ನಂ.: 59/2026

ಅರ್ಜಿದಾರರು:
ಶ್ರೀ ಪಿ.ಎಸ್. ಮುತ್ತಣ್ಣ ಮತ್ತು ಇತರರು
ವಿರುದ್ಧ
ಎದುರುದಾರರು:
ತಹಶೀಲ್ದಾರರು,
ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಅರ್ಜಿದಾರರ ತಾಯಿಯಾದ ಪಿ.ಎಸ್. ಮುತ್ತವ್ವ ಇವರು ದಿನಾಂಕ:05.07.2011ರಂದು ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ನೆಲಜಿ ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ ದಿನಾಂಕ: **09.04.2026 ರಂದು ಬೆಳಿಗ್ಗೆ 11.00 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/– ಶಿರಸ್ತೇದಾರರು
ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ, ಮಡಿಕೇರಿ, ಕೊಡಗು ಜಿಲ್ಲೆ
ಸಹಿ/– ಕೆ.ಎಸ್. ಚಂದ್ರಶೇಖರ್
ಅರ್ಜಿದಾರರ ಪರ ವಕೀಲರು
ಮಡಿಕೇರಿ,
10.02.2026

Before the Principal Commercial Court/1ST Add. District and Sessions Judge at Mangaluru, D.K. District
Com.O.S.No.3/2026

Between:
The State Bank of India ...Plaintiff
AND
M/s A. S. Garments and another ...Defendants

To,
1. M/s A. S.Garments,
By its Proprietor Mr. Sheik Saif Ali, Adult,
S/o Mr. Sheik Sagar Kareem
Door No.3-9/4(58),
Smart City, Thokkottu, Ullal,
Mangaluru-575 020.
2.Mr. Sheik Saif Ali,
Prop. M/s A. S. Garments,
S/o. Mr. Sheik Sagar Kareem,
R/at Door No.3-9/4(58),
Smart City, Thokkottu, Ullal,
Mangaluru -575 020

Whereas the above-named plaintiff have filed a Civil suit before this Hon'ble Court for recovery of money borrowed by you from the plaintiff Bank. You are hereby summoned to appear in this Court in person or by a pleader duly instructed on the **07th day of March 2026 at 11 a.m.** in the forenoon, to answer the claim and you are directed to file on that day written statement and produce documents to base your defence, failing wherein, the said claim in the above suit will be heard and determined ex-parte.

Given under my hand & seal of the Court this the 19th day of February 2026.

/By order of the Court/
Sd/- Chief Ministerial Officer
1st Add. District and Sessions Judge, D.K.
Sd/- Smt. Surekha Naveen Rao
Advocate for the plaintiff

ಪುತ್ತೂರು ಮಾರುಕಟ್ಟೆ ಧಾರಣೆ

19-02-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 485	ಹಳೆ ಕರಿಗೋಟು	240 - 270
ಚೋಲ್ ಅಡಿಕೆ	520 - 550	ಹಸಿ ಕೊಕ್ಕೋ	80 - 110
ಡಬಲ್ ಚೋಲ್	520 - 550	ಒಣ ಕೊಕ್ಕೋ	380 - 380
ಹೊಸ ಪಠೋರ	365 - 415	**ಕಾಳುಮೆಣಸು ಧಾರಣೆ**	
ಹಳೆ ಪಠೋರ	400 - 430	ಕಾಳುಮೆಣಸು	430 - 670
ಹೊಸ ಉಳ್ಳಿ	115 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	105 - 295	ಆರ್‌ಎಸ್‌ಎಸ್ 1	210.50
ಹೊಸ ಕೋಕಾ	330 - 350	ಆರ್‌ಎಸ್‌ಎಸ್ 2	192.00
ಹಳೆ ಕೋಕಾ	355 - 375	ಸ್ಕ್ರಾಪ್ 1	133.00
ಹೊಸ ಕರಿಗೋಟು	240 - 270	ಸ್ಕ್ರಾಪ್ 2	124.00

ಪುರಸಭಾ ಕಾರ್ಯಾಲಯ, ಮೂಡುಬಿದಿರೆ, ದ.ಕ.

ಮೂಪು/ಕಿಅ/ಟೆಂಡರ್ 25 & 27/2025–26/ಎರಡನೇ ಕರೆ ದಿನಾಂಕ: 19/02/2026

ಮರು ಟೆಂಡರ್ ಪ್ರಕಟಣೆ (ಕೆಪಿಪಿ–ಟೆಂಡರಿಂಗ್ ಮುಖಾಂತರ)

ಮೂಡುಬಿದಿರೆ ಪುರಸಭೆಗೆ 2025–26ನೇ ಸಾಲಿನ ಪುರಸಭಾ ನಿಧಿ ಅನುದಾನದಡಿ ಕಾಮಗಾರಿಯನ್ನು ಎರಡನೇ ಕರೆಯಲ್ಲಿ ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ಮೆಸ್ಕಾಂ ನೊಂದಾಯಿತ ಹಾಗೂ EPF ಮತ್ತು ESI ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ನಿರ್ಧಿಷ್ಟ ಟೆಂಡರು ದಸ್ತಾವೇಜಿನಲ್ಲಿ (Standard tender document KW1) ಕೆಪಿಪಿ – ಟೆಂಡರಿಂಗ್ ಮುಖಾಂತರ ಐಟಂವಾರು ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಬಗ್ಗೆ ಮಾಹಿತಿಯನ್ನು www.kppp.karnataka.gov.in ನಲ್ಲಿ ವೀಕ್ಷಿಸಬಹುದು/ಪಡೆಯಬಹುದು.
(1) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: ಕೆಪಿಪಿ–ಪೋರ್ಟಲ್‌ನಲ್ಲಿ ನಮೂದಿಸಿದಂತೆ. (2) ಸ್ವೀಕೃತವಾದ ಟೆಂಡರು ತೆರೆಯುವ ದಿನಾಂಕ ಮತ್ತು ವೇಳೆ: ಕೆಪಿಪಿ–ಪೋರ್ಟಲ್‌ನಲ್ಲಿ ನಮೂದಿಸಿದಂತೆ.

ಸಹಿ/– ಮುಖ್ಯಾಧಿಕಾರಿ,
ಪುರಸಭೆ ಮೂಡುಬಿದಿರೆ

DIPR/DK/KSMCA/1628/25-26 dt.19.02.2026

ಕಾರ್ಕಳ ಪುರಸಭೆ, ಕಾರ್ಕಳ, ಉಡುಪಿ ಜಿಲ್ಲೆ–574104

ದೂರವಾಣಿ: 08258–230292, 231023 ಫ್ಯಾಕ್ಸ್: 08258–235664
E-Mail: itstaff_ulb_karkala@yahoo.co.in, tmckarkala@yahoo.co.in
Website: www.karkalatown.mrc.gov.in
ಕಾಪುಸ:ತಾಂತ್ರಿಕ ವಿಭಾಗ:ಜ.ಹೀ.ಅ:ಸಿಆರ್:99:2025–26 ದಿನಾಂಕ: 16–02–2026

ಮರು ಇ–ಟೆಂಡರ್ ಪ್ರಕಟಣೆ

ಕಾರ್ಕಳ ಪುರಸಭೆಯ ಅಮೃತ್ 2.0 Jal Hi Amrit ಉಪ–ಘಟಕ ಯೋಜನೆಯಡಿ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ/ಏಜೆನ್ಸಿದಾರರಿಂದ ನಿರ್ದಿಷ್ಟ ಟೆಂಡರ್ ದಸ್ತಾವೇಜಿನಲ್ಲಿ (Standard tender document) ಟೆಂಡರನ್ನು KPPP (Website: kppp.karnataka.gov.in/) ಮುಖಾಂತರ ಆಹ್ವಾನಿಸಲಾಗಿದೆ.
1. DMA/2025-26/WT/WORK_INDENT50159/CALL-2– ರೂ. 25.00 ಲಕ್ಷ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 23/02/2026 ಅಪರಾಹ್ನ 4:30 ಗಂಟೆ
ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 25/02/2026 ಪೂರ್ವಾಹ್ನ 10:30 ಗಂಟೆ
ಹಣಕಾಸಿನ ಬಿಡ್ಡನ್ನು ತೆರೆಯುವ ದಿನಾಂಕ: 27/02/2026 ಪೂರ್ವಾಹ್ನ 11:00 ಗಂಟೆ

ಸಹಿ/– ಮುಖ್ಯಾಧಿಕಾರಿ,
ಪುರಸಭೆ, ಕಾರ್ಕಳ

ವಾಸಾಸಂಇ/ಉಡುಪಿ/ಕೆಎಸ್ಎಂಸಿಎ/733/25–26 ದಿ: 19.02.2026

ಪಟ್ಟಣ ಪಂಚಾಯತ್ ಕಾರ್ಯಾಲಯ, ಕಡಬ, ದ.ಕ.

Email: co.kadaba2@gmail.com, Phone: 08251-298002
ಕ.ಪ.ಪಂ/ಪತ್ರ ಸಂ./ಎ4/8/2025–26 ದಿನಾಂಕ 17/02/2026

ದರಪಟ್ಟಿ ಆಹ್ವಾನ ಪ್ರಕಟಣೆ

ಕಡಬ ಪಟ್ಟಣ ಪಂಚಾಯತ್‌ಗೆ 2025–26ನೇ ಸಾಲಿನಲ್ಲಿ ವಿಕಲಚೇತನರ ಕಛೇರಿಗೆ ಕಂಪ್ಯೂಟರ್ ಖರೀದಿ ಬಗ್ಗೆ ಮತ್ತು ಪ್ರಿಂಟರ್ ಖರೀದಿ ಬಗ್ಗೆ ಪ್ರತ್ಯೇಕ ಪ್ರತ್ಯೇಕವಾಗಿ ಈ ಕೆಳಗಿನ ಸಾಮಾಗ್ರಿಗಳಿಗೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಏಜೆನ್ಸಿದಾರರು ತಾವು ನಮೂದಿಸುವ ದರವನ್ನು Seal ಮಾಡಿದ ಲಕೋಟೆಯ ಮೇಲೆ ಹೆಸರನ್ನು ಬರೆದು ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕಡಬ ಇವರಿಗೆ **ದಿನಾಂಕ 25/02/2026 ರ ಸಾಯಂಕಾಲ 4.00 ಗಂಟೆಯೊಳಗೆ** ಸಲ್ಲಿಸಬಹುದಾಗಿದೆ.

ಕ್ರ.ಸಂ.	ಸಾಮಾಗ್ರಿ ಹೆಸರು	ನಮೂದಿಸುವ ದರ
1	Intel i3, 8GB DDR4 RAM, 512 GB NVME SSD, ACER 20" MONITOR, USB KEYBOARD AND MOUSE DESKTOP COMPUTER (With 3 year Warranty)	
2	Epson Ecotank L6460 A4 Wireless Color Home Inkjet Printers, Black (With 1 year Warranty)	

ಟೆಂಡರು ತೆರೆಯುವ ದಿನಾಂಕ 25/02/2026, ಸಮಯ ಸಂಜೆ ಗಂಟೆ 5.00

ಶರ್ತಗಳು: 1. ಸರಬರಾಜುದಾರರು ಅಧಿಕೃತ ಏಜೆನ್ಸಿದಾರರಿಂದ ನೋಂದಾಯಿಸಿರತಕ್ಕದ್ದು. 2. ಸರಬರಾಜುದಾರರು ಮೇಲೆ ಕಾಣಿಸಿದ ಸಾಮರ್ಥ್ಯದ ಸಾಮಾಗ್ರಿಗಳಿಗೆ ದರಗಳನ್ನು ನಮೂದಿಸತಕ್ಕದ್ದು. 3. ISI ಗುಣಮಟ್ಟದ ಉತ್ಕೃಷ್ಟ ಕಂಪನಿಯ ಉತ್ತಮ ಗುಣಮಟ್ಟದ ಸಾಮಾಗ್ರಿಗಳ ದರವನ್ನು ನಮೂದಿಸುವುದು. 4. ದರವನ್ನು ನಮೂದಿಸುವಾಗ ಹೇರುವ, ಇಳಿಸುವ, ಅಳವಡಿಸುವ ಹಾಗೂ ಇತರ ತೆರಿಗೆ/ಶುಲ್ಕಗಳನ್ನು ಒಳಗೊಂಡಂತೆ ನಮೂದಿಸತಕ್ಕದ್ದು. 5. ಸದ್ರಿ ಸಾಮಾಗ್ರಿಗಳಿಗೆ ವಾರಂಟಿ/ಗ್ಯಾರಂಟಿ ಅವಧಿಯನ್ನು ನಮೂದಿಸತಕ್ಕದ್ದು. 6. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಶ್ರೀಮತಿ ಲೀಲಾವತಿ ಇ., ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಕಡಬ
ಸಹಿ/– ಶ್ರೀಮತಿ ತಮನ್ನಾ ಜಬೀನ್, ಅಧ್ಯಕ್ಷರು, ಪಟ್ಟಣ ಪಂಚಾಯತ್, ಕಡಬ

ಪಟ್ಟಣ ಪಂಚಾಯತ್, ಕಡಬ

Email: co.kadaba2@gmail.com, Phone: 08251-298002
ನಂ : ಕ.ಪ.ಪಂ/ಜೆ.ಇ/ಎಸ್.ಎಫ್.ಸಿ(24.1%,7.25%&5%)/ಟೆ.ಪ್ರ/09/2025–26 ದಿನಾಂಕ : 17–02–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕಡಬ ಪಟ್ಟಣ ಪಂಚಾಯತಿನ 2025–26ನೇ ಸಾಲಿನ ಎಸ್.ಎಫ್.ಸಿ (24.1%,7.25%&5%) ನಿಧಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆ ಹಾಗೂ ಮೆಸ್ಕಾಂ ಇಲಾಖೆ ನೋಂದಾಯಿತ ಅರ್ಹ ದರ್ಜೆ ಮತ್ತು ಅಂಗೀಕೃತ ಏಜೆನ್ಸಿ/ಕಂಪನಿ/ಗುತ್ತಿಗೆದಾರರಿಂದ ನಿರ್ಧಿಷ್ಟ ಟೆಂಡರ್ ದಸ್ತಾವೇಜಿನಲ್ಲಿ (Standard tender document KW1) ಮುಖಾಂತರ ಟೆಂಡರ್ ನ್ನು ಆಹ್ವಾನಿಸಲಾಗಿದೆ.

1. ಟೆಂಡರಿನ ದಸ್ತಾವೇಜುಗಳನ್ನು ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್, ಕಡಬ ಇವರ ಕಛೇರಿಯಿಂದ ದಿನಾಂಕ:23/02/2026ರ ಒಳಗೆ ಕೆಳಗೆ ಕಾಣಿಸಿದ ಪ್ರಕಾರ ಮರುಪಾವತಿ ಮಾಡಲಾಗದ ಶುಲ್ಕವನ್ನು ಕಛೇರಿಯಲ್ಲಿ ಪಾವತಿ ಮಾಡಿ ಪಡೆಯತಕ್ಕದ್ದು. 2. ಇ.ಎಂ.ಡಿ. ಮೊಬಗಲನ್ನು ಕಡ್ಡಾಯವಾಗಿ ಟೆಂಡರು ಫಾರಂ ಅರ್ಜಿಯೊಂದಿಗೆ ಡಿ.ಡಿ./ನಗದಾಗಿ ಮಾತ್ರ ಪಾವತಿಸುವುದು. 3. ಟೆಂಡರುಗಳು ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್, ಕಡಬ ಇವರಿಗೆ **ದಿನಾಂಕ:24/02/2026 ರ ಸಂಜೆ 4:00 ಗಂಟೆಯೊಳಗೆ** ಸೇರುವಂತೆ ಸಲ್ಲಿಸತಕ್ಕದ್ದು. ಅದೇ ದಿನ ಸಂಜೆ 5:00 ಗಂಟೆಗೆ ಹಾಜರಿರುವ ಎಲ್ಲ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಒಂದುವೇಳೆ ನಿಗದಿಪಡಿಸಲಾದ ದಿನದಂದು ರಜೆಯಿದ್ದಲ್ಲಿ, ಟೆಂಡರ್‌ರನ್ನು ಮಾರನೇಯ ಕಛೇರಿ ದಿನದಂದು ಅದೇ ಸಮಯ ತೆರೆಯಲಾಗುವುದು. 4. ಹೆಚ್ಚಿನ ವಿವರಗಳು ಹಾಗೂ ಶರ್ತಗಳನ್ನು ಟೆಂಡರ್ ದಾಸ್ತಾವೇಜ್ನಲ್ಲಿ ನೀಡಲಾಗಿದೆ. 5. ಟೆಂಡರ್ ಫಾರಂ ದರ ರೂ.500.00 + GST. 6. ಜಿ.ಎಸ್.ಟಿ ತೆರಿಗೆ (18%) ಪ್ರತ್ಯೇಕ ಪಾವತಿಸಲಾಗುವುದು. ಗುತ್ತಿಗೆದಾರರು ಟೆಂಡರ್ ಶೆಡ್ಯೂಲ್ ನಲ್ಲಿ GST ಯನ್ನು ಹೊರತುಪಡಿಸಿದ ದರವನ್ನು ನಮೊದಿಸುವುದು.

ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ಸಮಯದಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಅಥವಾ ನಗರ ಪಂಚಾಯತ್ ನ ಅಧಿಕೃತ ವೆಬ್ಸೈಟ್ **(www.kadabatown.mrc.gov.in)** ನಲ್ಲಿ ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ	ಟೆಂಡರು ಅವಧಿ
1	ಕಡಬ ಪಟ್ಟಣ ಪಂಚಾಯತಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ವಿಕಲಚೇತನ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಖರೀದಿಸಿ ಅಳವಡಿಸುವುದು.	4.16	10,400.00	3 ತಿಂಗಳು

ಸಹಿ/– ಶ್ರೀಮತಿ ಲೀಲಾವತಿ ಇ. ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಕಡಬ
ಸಹಿ/– ಶ್ರೀಮತಿ ತಮನ್ನಾ ಜಬೀನ್, ಅಧ್ಯಕ್ಷರು, ಪಟ್ಟಣ ಪಂಚಾಯತ್, ಕಡಬ

ಕರ್ನಾಟಕ ಸರ್ಕಾರ

ತಾಲೂಕು ಪಂಚಾಯತ್ ಕಾರ್ಯಾಲಯ, ಬಂಟ್ವಾಳ

Ph:08255-233339,234738, E-mail: eotpbantwal@yahoo.in
ನಂ.ತಾಪಂಬಂ/ಟೆಂಡರ್ ಪ್ರಕಟಣೆ/04/2025–26(ಎ2) ದಿನಾಂಕ: 16.02.2026

ಟೆಂಡರ್ ಆಹ್ವಾನ ಪ್ರಕಟಣೆ

ವಿಷಯ: ಬಂಟ್ವಾಳ ತಾಲೂಕು ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತ್ ಗ್ರಂಥಾಲಯಕ್ಕೆ ಮತ್ತು ಶಾಲಾ ಗ್ರಂಥಾಲಯಕ್ಕೆ ಪೀಠೋಪಕರಣ ಸರಬರಾಜು ಮಾಡುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಂಟ್ವಾಳ ತಾಲೂಕು ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತ್ ಗ್ರಂಥಾಲಯಕ್ಕೆ ಮತ್ತು ಶಾಲಾ ಗ್ರಂಥಾಲಯಕ್ಕೆ ಪೀಠೋಪಕರಣ ಸರಬರಾಜು ಮಾಡಲು ಟೆಂಡರ್ ಕರೆಯಬೇಕಾಗಿರುತ್ತದೆ. ಆದ್ದರಿಂದ ಈ ಕೆಳಗಿನಂತೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಆಸಕ್ತರು ಈ ಕೆಳಗಿನ ವಿಳಾಸಕ್ಕೆ ದರಪಟ್ಟಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ.

ಸಾಮಾಗ್ರಿ ವಿವರ ಮತ್ತು ಪರಿಮಾಣ ಈ ಕೆಳಗಿನಂತಿದೆ.

1) 6/1/2* 36" *19 Steel Glass Door Almirah heavy guage(2). **2)** 4*2 Office (1). **3)** Table 3 side Close(1). **4)** Office Chair arm cushion scat & Back (1). **5)** Black Board (1). **6)** 6'*16" *30 H steel Bench with compartment powder coated palint (3). 6) 6'*12" *18H steel Bench with Back Rest (7). **7)** Round Plastic Table with Baby Chair (1Set). **8)** 6'*15" *36 Book Rack heavy (2). **9)** Notice Board (1). **10)** 10* 3/1/2 Steel Leg Heavy guage Novopon top 2mm Moulded Task (1). **11)** Supreme Chair arm (20). **12)** 4*2 Computer Table (1). **13)** 6/1/2* 36" *19 Steel Glass Door Almirah heavy guage (1). **14)** 6'*36" *15 Library Rack Both side Support powder coated paint (1). **15)** Orient celling Hi-Speed Fan (1).

ದರಪಟ್ಟಿ ಸಲ್ಲಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ್ ಬಂಟ್ವಾಳ, ಅಂಚೆ ಜೋಡುಮಾರ್ಗ, ಬಂಟ್ವಾಳ- 574219

ದರಪಟ್ಟಿ ಸಲ್ಲಿಸಲು ಕೊನೆಯ ದಿನಾಂಕ: 23.02.2026

ವಿ.ಸೂ.: ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ್ ಬಂಟ್ವಾಳ, ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ ತಾಲೂಕು ಪಂಚಾಯತ್, ಬಂಟ್ವಾಳ

ಉಡುಪಿ ನಗರಸಭೆ

ಕವಿ ಮುದ್ದಣ್ಣ ಮಾರ್ಗ, ಉಡುಪಿ–576101, ದೂ: 0820–2520306
E-mail: ka.udupi.cmc@gmail.com Website: www.udupicity.mrc.gov.in
ಸಂಖ್ಯೆ: UCMC/HS/STP-BE/CR-594/2024-25 ದಿನಾಂಕ: 19.02.2026

ವಿಚಾರಣಾ ಕೊಟೇಷನ್ ಪ್ರಕಟಣೆ

ಉಡುಪಿ ನಗರಸಭಾ ವ್ಯಾಪ್ತಿಯ ಕೊಳಚೆ ನೀರು ಶುದ್ಧೀಕರಣ ಘಟಕದಲ್ಲಿ ಸಂಗ್ರಹವಾಗಿರುವ ಕೊಳಚೆ ನೀರನ್ನು ಶುದ್ಧೀಕರಿಸಲು Bio-Enzyme (ಬಯೋ ಕಲ್ಚರ್) ಖರೀದಿಸಲು ಅರ್ಹ ಅನುಭವ ಹೊಂದಿರುವ ಕೊಟೇಷನ್‌ದಾರರು/ಏಜನ್ಸಿದಾರರು ತಮ್ಮ ಕೊಟೇಷನ್‌ಗಳನ್ನು ಪ್ರತಿ ಲೀಟರ್‌ಗೆ (ಎಲ್ಲಾ ತೆರಿಗೆಗಳು, ಸಾಗಾಣಿಕೆ ವೆಚ್ಚ & ಇತರೆ ವೆಚ್ಚಗಳು ಒಳಗೊಂಡಂತೆ) ದರವನ್ನು ತ್ರಿಪ್ರತಿಯಲ್ಲಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಕೋರಿದೆ. ಸಲ್ಲಿಕೆಯಾದ ಕೊಟೇಷನ್‌ಗಳನ್ನು ದಿನಾಂಕ: 24/02/2026 ರಂದು ಅಪರಾಹ್ನ 5.00 ಗಂಟೆಗೆ ಅಥವಾ ಸೂಕ್ತ ದಿನದಂದು ತೆರೆಯಲಾಗುವುದು. ಕೊಟೇಶನ್ ದರಗಳನ್ನು ಹಾಗೂ ತಾಂತ್ರಿಕ ವಿವರಗಳನ್ನು ಒಳಗೊಂಡಿರುವ ಕೊಟೇಷನ್‌ನ್ನು ದರಪಟ್ಟಿ ತಯಾರಿಸಲು ಮೂಲ ದರವಾಗಿ ಪರಿಗಣಿಸಲು ಹಾಗೂ ನಿರ್ದಿಷ್ಟತೆಗಳನ್ನು ನಿರ್ಧರಿಸಲು ಮಾತ್ರ ತೆಗೆದುಕೊಳ್ಳಲಾಗುವುದು. ಅವಧಿ ಮೀರಿ ಬಂದ ದರ ಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ: ತಾಂತ್ರಿಕ ವೈಶಿಷ್ಟತೆಯನ್ನು ನಗರಸಭಾ ಕಛೇರಿಯ ವಿಭಾಗದಿಂದ ಪಡೆದ ನಂತರವೇ ದರವಾರು ಕೊಟೇಷನ್ ಸಲ್ಲಿಸಲು ಸೂಚಿಸಿದೆ.

ಸಹಿ/– ಪೌರಾಯುಕ್ತರು,
ಉಡುಪಿ ನಗರಸಭೆ

ವಾಸಾಇ/ಸನಿಉ/ಕೆಎಸ್ಎಂಸಿಎ/734/25–26 ದಿ: 19.02.2026

ಕರ್ನಾಟಕ ಸರಕಾರ

ತಾಲೂಕು ಪಂಚಾಯತು ಕಾರ್ಯಾಲಯ, ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ

ದೂರವಾಣಿ: 08256-232026 Email: eobelthangadi@gmail.com
ಸಂ:ತಾಪಂಬೆ/ಟೆಂಡರ್/ಎ3/2025–26 ದಿನಾಂಕ: 17–02–2026

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಮರು ಪ್ರಕಟಣೆ

(Notice Inviting Tender through E-Procurement)

2025–26ನೇ ಸಾಲಿನ ತಾಲೂಕು ಪಂಚಾಯತು ಅನಿರ್ಬಂಧಿತ ಯೋಜನೆಯಡಿಯಲ್ಲಿ (1) ಬಳಂಜ ಉನ್ನತೀಕರಿಸಿದ ಸರಕಾರಿ ಪ್ರಾಥಮಿಕ ಶಾಲೆಯ ಗ್ರಂಥಾಲಯ, (2) ಕೊಕ್ರಾಡಿ ಸರಕಾರಿ ಪ್ರೌಢ ಶಾಲೆಯ ಗ್ರಂಥಾಲಯ (3) ಅರಸಿನಮಕ್ಕಿ ಸರಕಾರಿ ಪ್ರೌಢ ಶಾಲೆಯ ಗ್ರಂಥಾಲಯ (4) ತಣ್ಣೀರುಪಂತ ಕರಾಯ ಸರಕಾರಿ ಪ್ರೌಢ ಶಾಲೆ ಗ್ರಂಥಾಲಯ (5) ಚಾರ್ಮಾಡಿ ಕಕ್ಕಿಂಜೆ ಪ್ರೌಢ ಶಾಲೆಯ ಗ್ರಂಥಾಲಯ (6) ವೇಣೂರು ಸರಕಾರಿ ಪ್ರೌಢ ಶಾಲಾ ಗ್ರಂಥಾಲಯಕ್ಕೆ ಏಕಲಕೋಟೆ ಪದ್ಧತಿ ಪ್ರಕಾರ ಅರ್ಹ ನೋಂದಾಯಿತ ಸಂಸ್ಥೆ/ಬಿಡ್ಡುದಾರರು/ಗುತ್ತಿಗೆದಾರರು ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟು ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ: ರೂ. 650000.00, ಇ.ಎಂ.ಡಿ ಮೊತ್ತ: ರೂ. 19500.00

ವಿವರ: (1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ ವೆಬ್‌ಸೈಟ್: www. https://kppp.karnataka.gov.in (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ: 24–02–2026 ಸಮಯ: ಸಂಜೆ 4.00 ಗಂಟೆ (3) ಬಿಡ್‌ನ್ನು ತೆರೆಯುವ ದಿನಾಂಕ: 26–02–2026, ಸಮಯ: ಸಂಜೆ 5.00 ಗಂಟೆ.

ಹೆಚ್ಚಿನ ವಿವರಗಳಿಗೆ ಕಾರ್ಯನಿರ್ವಾಹಣಾಧಿಕಾರಿ, ತಾಲೂಕು ಪಂಚಾಯತ್ ಬೆಳ್ತಂಗಡಿ (ದೂರವಾಣಿ ಸಂಖ್ಯೆ: 08256–232026/9480862100/9480853044) ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ವೆಬ್‌ಸೈಟ್: www.https://kppp.karnataka.gov.in ಲ್ಲಿ ಪರಿಶೀಲಿಸುವುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ,
ತಾಲೂಕು ಪಂಚಾಯತ್, ಬೆಳ್ತಂಗಡಿ.

DIPR/DK/KSMCA/1626/25-26 dt.19.02.2026

ಕರ್ಣಾಟಕ ಬ್ಯಾಂಕ್ ಲಿ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ಣಾಟಕ ಬ್ಯಾಂಕ್ ಬಿಲ್ಡಿಂಗ್,
ಕೊಡಿಯಾಲ್‌ಬೈಲ್, ಮಂಗಳೂರು–575003.
ದೂರವಾಣಿ : 0824-2422811(Gen)/2427811 (CM)
ಇ–ಮೇಲ್ : mlr.arm@ktkbank.com
Website : https://www.karnatakabank.bank.in
CIN : L85110KA1924PLC001128

ಸ್ವಾಧೀನತೆಯ ನೋಟೀಸು (ಸ್ಥಿರಾಸ್ತಿಗೆ ಸಂಬಂಧಿಸಿದಂತೇ)

ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 ರನ್ವಯ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002 ರ ಪರಿಚ್ಛೇದ 13 (12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ದಿನಾಂಕ **10.11.2025** ರಂದು **ತಗಾದೆ ನೋಟೀಸನ್ನು ಸಾಲಗಾರರು/ಅಡಮಾನದಾರರು/ಜಾಮೀನುದಾರರು: 1) ಮೆ. ಆಂಟೋನಿ ಟ್ರೇಡರ್ಸ್, ಇದನ್ನು ಪ್ರತಿನಿಧಿಸುವ ಪಾಲುದಾರರು: i) ಶ್ರೀ ಲಿಯೊ ಫೆಲಿಕ್ಸ್ ಫೆರ್ನಾಂಡೀಸ್, ii) ಶ್ರೀಮತಿ ಗೀತಾ ಎಸ್. ಭಟ್**, ವಿಳಾಸ: ಡೋರ್ ನಂಬ್ರ 2–161–2, ಮಣಿನಾಲ್ಕೂರು, ಮಾವಿನಕಟ್ಟೆ ಸರಪಾಡಿ, ಬಂಟ್ವಾಳ – 574 211, **2) ಶ್ರೀ ಲಿಯೊ ಫೆಲಿಕ್ಸ್ ಫೆರ್ನಾಂಡೀಸ್,** ಶ್ರೀ ಆಂಟೋನಿ ಫೆರ್ನಾಂಡೀಸ್ ರವರ ಮಗ, ವಿಳಾಸ: ಡೋರ್ ನಂಬ್ರ 1–40, ಕೆಳಗಿನ ಬಳ್ಳಿ ಮನೆ, ಸರಪಾಡಿ, ಬಂಟ್ವಾಳ – 574 211, **3) ಶ್ರೀಮತಿ ಗೀತಾ ಎಸ್. ಭಟ್,** ಶ್ರೀ ಶ್ರೀಪತಿ ಭಟ್‌ರವರ ಪತ್ನಿ, ವಿಳಾಸ: ಡೋರ್ ನಂ. 2/101–3ಎ, "ಸುಕನ್ಯಾ ನಿವಾಸ", ಮಸೀದಿ ರಸ್ತೆ, ಬಡಾ ಗ್ರಾಮ, ಉಚ್ಚಿಲ, ಉಡುಪಿ ಜಿಲ್ಲೆ – 574 117. ಇವರಿಗೆ ಸದ್ರಿ ಸಾಲದ ಬಾಕಿ ಬಾಬ್ತು **ಪಿಎಸ್‌ಓಡಿ ಖಾತೆ ಸಂಖ್ಯೆ 4757000600073701** ರಲ್ಲಿ **ರೂ. 1,10,63,015.98 (ರೂಪಾಯಿ ಒಂದು ಕೋಟಿ ಹತ್ತು ಲಕ್ಷದ ಅರ್ವತ್ತಮೂರು ಸಾವಿರದ ಹದಿನೈದು ಮತ್ತು ಪೈಸೆ ತೊಂಭತ್ತೆಂಟು ಮಾತ್ರ)** ಅದರೊಂದಿಗೆ ದಿನಾಂಕ **01.11.2025** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳನ್ನು ಈ ನೋಟೀಸು ಪಡೆದ ದಿನಾಂಕದಿಂದ **60 ದಿನಗಳೊಳಗೆ** ಪಾವತಿಸುವಂತೇ ನೋಟೀಸು ಜಾರಿಯಾಗಿರುತ್ತದೆ.

ಸಾಲಗಾರರು / ಅಡಮಾನದಾರರು ಬಾಕಿ ಹಣವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ **ಅಧಿಕೃತ ಅಧಿಕಾರಿಯವರು ಮೇಲೆ ಹೇಳಿದ ಕಾಯಿದೆಯ ಪರಿಚ್ಛೇದ 13(4) ರ ನಿಯಮ 8 ರಲ್ಲಿ ದತ್ತವಾದ ಅಧಿಕಾರದಂತೆ ಕೆಳಗೆ ವಿವರಣೆ ನೀಡಿದ ಆಸ್ತಿಯನ್ನು 17.02.2026 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ** ಎಂದು ಸಾಲಗಾರರಿಗೆ / ಅಡಮಾನದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸಾಲಗಾರರು / ಅಡಮಾನದಾರರು ಮತ್ತು ಸಾರ್ವಜನಿಕರು ಈ ಸ್ಥಿರಾಸ್ತಿಯ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದಾಗಿ ಈ ಮೂಲಕ ಎಚ್ಚರಿಸಲಾಗಿದೆ. ಆದಾಗ್ಯೂ ಈ ಸ್ಥಿರಾಸ್ತಿ ಬಗ್ಗೆ ವ್ಯವಹಾರ ನಡೆಸಿದಲ್ಲಿ **ಕರ್ಣಾಟಕ ಬ್ಯಾಂಕ್, ಮಂಗಳೂರು – ಫೌಂಡರ್ಸ್ (ಡೊಂಗರಕೇರಿ) ಶಾಖೆಗೆ** ಸಲ್ಲತಕ್ಕ ಬಾಕಿ ಸಾಲದ ಬಾಬ್ತು **ಪಿಎಸ್‌ಓಡಿ ಖಾತೆ ಸಂಖ್ಯೆ 4759000600073701** ರಲ್ಲಿ **ರೂ. 1,14,76,575.98 (ರೂಪಾಯಿ ಒಂದು ಕೋಟಿ ಹದಿನಾಲ್ಕು ಲಕ್ಷದ ಎಪ್ಪತ್ತಾರು ಸಾವಿರದ ಐನೂರ ಎಪ್ಪತ್ತೈದು ಮತ್ತು ಪೈಸೆ ತೊಂಭತ್ತೆಂಟು ಮಾತ್ರ)** ಮತ್ತು ದಿನಾಂಕ **01.02.2026** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳ ಪಾವತಿಗೆ ಬಾಧ್ಯಸ್ಥರಾಗಿರುತ್ತಾರೆ.

(ಭದ್ರತೆಯ ಸ್ವತ್ತುಗಳನ್ನು ಹಿಂದೆ ಪಡೆಯುವ ಬಗ್ಗೆ ಕಾಯಿದೆಯ ಸೆಕ್ಷನ್ 13 ಉಪನಿಯಮ (8) ರಲ್ಲಿ ಲಭ್ಯವಾಗುವ ಕಾಲಾವಕಾಶದ ಬಗ್ಗೆ ಸಾಲಗಾರರ & ಅಡಮಾನದಾರರ ಗಮನವನ್ನು ಸೆಳೆಯಲಾಗಿದೆ).

ಸ್ಥಿರಾಸ್ತಿಯ ವಿವರಗಳು

ಶ್ರೀಮತಿ ಗೀತಾ ಎಸ್. ಭಟ್ ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ 12 ಮಳಿಗೆಗಳು / ಘಟಕಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದ್ದು, ಪರಿವರ್ತಿತ ಭೂಮಿಯಲ್ಲಿ ನಿರ್ಮಿಸಲಾದ ವಾಣಿಜ್ಯ ಕಟ್ಟಡದ ಹೆಸರು **"ಸುಕನ್ಯಾ ಕಾಂಪ್ಲೆಕ್ಸ್", ಸರ್ವೆ ನಂಬ್ರ 137–2, ವಿಸ್ತೀರ್ಣ 3.48 ಸೆಂಟ್ಸ್ (141.06 ಚದರಮೀಟರ್), ಆಸ್ತಿಯ ಐಡಿ ನಂಬ್ರ 152600303200123952.** ಈ ಸ್ಥಿರಾಸ್ತಿಯು ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ, ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನದ ಹತ್ತಿರ, ಬಡಾಗ್ರಾಮ, ಕಾಪು ತಾಲೂಕು, ಉಡುಪಿ ಜಿಲ್ಲೆಯಲ್ಲಿದೆ.

ಕ್ರ. ಸ.	ಆಸ್ತಿಯ ಐಡಿ ನಂಬ್ರ	ಮಹಡಿ	ಮಳಿಗೆ ನಂಬ್ರ	ಡೋರ್ ನಂಬ್ರ	ಕಾರ್ಪೆಟ್ ಏರಿಯಾ (ಚ.ಮಿ.)	ಸೂಪರ್ ಬಿಲ್ಟಪ್ ಏರಿಯಾ (ಚ.ಮಿ.)	ಅವಿಭಜಿತ ಪಾಲು / ಆಸಕ್ತಿ (%)
1	152600303 200123969	Basement	B7	1-116/ 1G	13.94	17.65 (190 Sq.ft.)	3.60
2	152600303 200123958	Ground	G4	1-116/ 2D	26.24	32.52 (350 Sq.ft.)	6.66
3	152600303 200123962	Ground	G7	1-116/ 2G	13.94	17.65 (190 Sq.ft.)	3.60
4	152600303 200123970	First	F1	1-116/ 3A	11.15	13.94 (150 Sq.ft.)	2.85
5	152600303 200123972	First	F2	1-116/ 3B	13.94	17.65 (190 Sq.ft.)	3.60
6	152600303 200123974	First	F3	1-116/ 3C	23.70	29.73 320 Sq.ft.)	6.06
7	152600303 200123975	First	F4	1-116/ 3D	26.24	32.52 (350 Sq.ft.)	6.66
8	152600303 200123977	First	F5	1-116/ 3E	13.12	16.26 (175 Sq.ft.)	3.33
9	152600303 200123979	First	F6	1-116/ 3F	13.94	17.65 (190 Sq.ft)	3.60
10	152600303 200123980	First	F7	1-116/ 3G	13.94	17.65 (190 Sq.ft.)	3.60
11	152600303 200123983	Second	S1	1-116/ 4A	47.80	59.00 (635 Sq.ft.)	12.03
12	152600303 200123985	Second	S2	1-116/ 4B	86.22	106.87 (1150 Sq.ft.)	21.80
					ಒಟ್ಟು ವಿಸ್ತೀರ್ಣ	379.09 (4080 Sq.ft.)	

ಡೀಡ್/ವಾಸ್ತವದ ಪ್ರಕಾರ ಭೂಮಿ ಸ್ಥಿರಾಸ್ತಿಯ ಗಡಿರೇಖೆಗಳು: **ಪೂರ್ವ:** ಎಸ್.ಡಿ.ಲೈನ್ & ಎನ್‌ಎಚ್–66/ಉಡುಪಿ–ಮಂಗಳೂರು ಎನ್‌ಎಚ್; **ಪಶ್ಚಿಮ:** ಸರ್ವೆ ಲೈನ್ / ಸರ್ವೆ ಲೈನ್; **ಉತ್ತರ:** ಸರ್ವೆ ಲೈನ್ / ಸರ್ವೆ ಲೈನ್; **ದಕ್ಷಿಣ:** ಸರ್ವೆ ಲೈನ್ / ಸರ್ವೆ ಲೈನ್.

ದಿನಾಂಕ : 17.02.2026
ಸ್ಥಳ : ಉಚ್ಚಿಲ–ಕಾಪು, ಉಡುಪಿ.

ಸಹಿ/–, ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಕರ್ಣಾಟಕ ಬ್ಯಾಂಕ್ ಲಿ.,

ಕರ್ನಾಟಕ ಸರಕಾರ

ಶಾಲಾ ಶಿಕ್ಷಣ ಇಲಾಖೆ

ಸರಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ)
ಕೊಂಬೆಟ್ಟು, ಪುತ್ತೂರು, ದ.ಕ– 574201
ದಿನಾಂಕ: 19.02.2026

ಪ್ರಕಟಣೆ

ಸರಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ) ಕೊಂಬೆಟ್ಟು ಪುತ್ತೂರು ಈ ಸಂಸ್ಥೆಗೆ ಪೀಠೋಪಕರಣ ಖರೀದಿಸಲು ಅನುದಾನ ಬಿಡುಗಡೆಯಾಗಿರುತ್ತದೆ. ಶಾಲೆಗೆ ಪೀಠೋಪಕರಣ ಒದಗಿಸಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಪ್ರಕಟಣೆ ಹೊರಡಿಸಿದ 7 ದಿನಗಳ ಒಳಗೆ ಕೊಟೇಶನ್ ಸಹಿತ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆ.
ಅರ್ಜಿ ಸಲ್ಲಿಸಲು ಪ್ರಾರಂಭದ ದಿನ: 20.02.2026. ಅರ್ಜಿ ಸಲ್ಲಿಸಲು ಕೊನೆಯ ದಿನ: 27.02.2026

ಸಹಿ/– ಅಧ್ಯಕ್ಷರು, ಎಸ್.ಡಿ.ಎಂ.ಸಿ., ಸರಕಾರಿ ಪ್ರೌಢ ಶಾಲೆ ಕೊಂಬೆಟ್ಟು, ಪುತ್ತೂರು
ಸಹಿ/– ಪ್ರಾಂಶುಪಾಲರು, ಸರಕಾರಿ ಪ್ರೌಢ ಶಾಲೆ ಕೊಂಬೆಟ್ಟು, ಪುತ್ತೂರು

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು - 577 101, ಕರ್ನಾಟಕ

Tel.08262-230401(0), 230402(R), 231499(ADC), 235262(Rev. Sec.)
email:dcckmir@gmail.com, deo.cmagalur@gmail.com
ಟೆಂಡರ್ ಸಂಖ್ಯೆ:DCCKM/ADMNOEST2(MISC)/01/2026 ದಿನಾಂಕ:12-02-2026

ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲಾ ಕಂದಾಯ ಘಟಕದ ನಾಡ ಕಛೇರಿಗಳಿಗೆ ಅಗತ್ಯವಿರುವ **Desktop Computer** ಗಳನ್ನು ಅಧಿಕೃತ ಏಜೆನ್ಸಿಯವರಿಂದ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆಸಕ್ತಿಯುಳ್ಳ ಅಧಿಕೃತ ಏಜೆನ್ಸಿಯವರು ಟೆಂಡರ್ ಬಿಡ್ ಅನ್ನು ದಿನಾಂಕ:25-02-2026ರೊಳಗಾಗಿ ಈ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ ,ಚಿಕ್ಕಮಗಳೂರು

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ

Email :preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ ಸಂಖ್ಯೆ: 08338–272131,
ಕ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2025–26/8177 ದಿನಾಂಕ:16–02–2026

(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4 (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿದ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.

1]Last date of request for issue of blank E-bid document through e-Procurment Date: Other works:16-02-2026 To 27-02-2026, 2]Bid Closing & submission Date: 27-02-2026 AT 04:00 PM, 3]Financial Bid Opening Date:02-03-2026 AT 11:00 AM, 4]Pre Bid Meeting Date: [KW-3 & 4 Works Only]:26-02-2026 AT 05:00 PM, 5]Techanical Bid Opening Date: [KW-3 & 4 Works Only]:02-02-2026 AT 11:00 AM, 6]Financial Bid Opening Date: [KW-3 & 4 Works Only]:04-02-2026 AT 11:00 AM.

General Works Indent No's:24455, 24453, 24469, 24467, 24451, 24448, 24460, 24496, 24492, 24466, 24446, 24506, 24443, 24445, 24462, 24454, 23965, 24868, 23944, 23943, 24042, 24041, 22966, SC Works Indent No's:24471, 24458, 24452, 23942, 24053, 24045, ST Works Indent No's:24457, 24489, 24044, Category 1 Works Indent No's:24470, 24504, Category 2A Works Indent No's:24497, 24499, 24449, 24503, 24039, 24040,

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಾಗಿದೆ:

ಸಹಿ/–ಕಾರ್ಯನಿರ್ವಾಹಕ ಅಭಿಯಂತರು
ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ.

DIPR/BGM/RO-NO-1876/KSMCA/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-611) ಡ್ರಾ ಫೆಬ್ರವರಿ 19ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PC 785815 (PALAKKAD)

Consolation Prize Rs.5,000/-
PA 785815 PB 785815 PD 785815 PE 785815
PF 785815 PG 785815 PH 785815 PJ 785815
PK 785815 PL 785815 PM 785815

2nd Prize Rs.30,00,000/- [30 Lakhs]
PJ 717390 (KAYAMKULAM)

3rd Prize Rs.5,00,000/- [5 Lakhs]
PL 556683 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0283 1159 1842 2105 2658 2882 4476 5041 6095 8259 9015 9073 9207 9215 9229 9295 9564 9773 9832

5th Prize Rs.2,000/-
0352 2501 3454 4217 4239 4870

6th Prize Rs.1,000/-
0469 0470 0729 1139 2631 2760 2912 3243 3799 4350 4853 4884 4926 6202 6371 6376 6847 6926 7649 7797 7904 8014 8371 8646 9901

7th Prize Rs.500/-
0030 0201 0317 0367 0396 0429 0466 0612 0904 0912 1022 1080 1218 1252 1295 1330 1397 1420 1758 1941 2121 2256 2344 2556 2816 2838 2905 2917 2988 3119 3351 3396 3640 3730 4130 4155 4359 4455 4776 4826 4866 5003 5135 5153 5250 5276 5531 5867 6398 6498 6596 6895 6920 7308 7420 7467 7656 7776 7889 7922 8140 8231 8460 8481 8613 8754 8942 9002 9023 9129 9157 9655 9685 9740 9788 9882

8th Prize Rs.200/-
0097 0262 0423 0761 0890 0929 0934 0976 1198 1375 1540 1614 1798 1801 2077 2098 2123 2441 2729 2807 2823 2844 2937 3058 3155 3181 3314 3577 3586 3634 3699 3984 4118 4160 4211 4228 4417 4448 4577 4669 4951 4957 5006 5267 5312 5504 5585 5748 5778 6099 6203 6335 6480 6496 6577 6619 6622 7022 7056 7246 7323 7339 7707 7844 7977 8028 8161 8409 8596 8612 8637 8825 8839 8910 8916 9046 9151 9191 9203 9255 9439 9571 9632 9956

9th Prize Rs.100/-
0137 0176 0229 0234 0348 0468 0495 0719 0764 0770 0829 0894 0919 0966 0970 1077 1094 1132 1361 1390 1452 1580 1599 1617 1653 1671 1733 1773 1775 1866 1906 1988 2180 2211 2226 2238 2268 2508 2661 2669 2700 2708 2724 2731 2757 2857 2916 3042 3199 3223 3242 3336 3345 3371 3529 3564 3606 3638 3647 3672 3736 3758 3809 3812 3971 4132 4133 4294 4447 4466 4503 4603 4606 4629 4634 4704 4711 4733 4883 4977 5122 5146 5188 5195 5204 5218 5342 5469 5512 5595 5717 5800 6016 6058 6127 6135 6156 6241 6262 6368 6437 6538 6582 6629 6840 6946 6999 7183 7221 7316 7332 7346 7480 7511 7523 7619 7633 7706 7737 7883 7888 7898 7946 8013 8018 8037 8055 8151 8363 8491 8510 8529 8610 8631 8654 8659 8727 8757 8847 8855 8889 9113 9307 9395 9417 9444 9476 9520 9567 9575 9727 9738 9742 9776 9818 9897

7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಎರಿಂಞಿಪುಯ ಚೆಕ್ ಡ್ಯಾಮ್ ನಿರ್ಮಾಣ ಕಾಮಗಾರಿ ಉದ್ಘಾಟನೆ

ಕಾಸರಗೋಡು: ಉದುಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎರಿಂಞಿಪುಯದಲ್ಲಿ ಪಯಸ್ವಿನಿ ನದಿಗೆ ನಿರ್ಮಿಸಲಾಗುವ 7 ಕೋಟಿ ರೂಪಾಯಿ ಮೊತ್ತದ ಚೆಕ್ ಡ್ಯಾಮ್ ಕಾಮಗಾರಿಯನ್ನು ಉದುಮ ಶಾಸಕ ಸಿ.ಎಚ್.ಕುಂಞಂಬು ಉದ್ಘಾಟಿಸಿ ಮಾತನಾಡಿದರು.



ನಾಡಿನ ಅಭಿವೃದ್ಧಿಗೆ ಅಗತ್ಯವಿರುವ ನಿರ್ಮಾಣ ಯೋಜನೆಯು ವಾಸ್ತವವಾಗಬೇಕಾದರೆ ಅನೇಕ ತಾಂತ್ರಿಕ ಅಡೆತಡೆಗಳನ್ನು ನಿವಾರಿಸಬೇಕಾಗುತ್ತದೆ. ಇದಕ್ಕೆ ವರ್ಷಗಳ ಮಧ್ಯಪ್ರವೇಶ ಮತ್ತು ಪ್ರಯತ್ನಗಳು ಬೇಕಾಗುತ್ತವೆ. ಅಭಿವೃದ್ಧಿ ಕಾರ್ಯಗಳು ವಿಳಂಬವಾಗಲು ಕೆಲವು ತಾಂತ್ರಿಕ ಸಮಸ್ಯೆಗಳು ಮುಖ್ಯ ಕಾರಣವಾಗಿವೆ. ರಾಜ್ಯ ಸರಕಾರವು ಪ್ರತಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ಅನುದಾನಗಳನ್ನು ಒದಗಿಸಿದೆ ಎಂದು ಶಾಸಕರು ಹೇಳಿದರು.

ಮುಳಿಯಾರು ಮತ್ತು ಬೇಡಡ್ಕ ಗ್ರಾಮ ಪಂಚಾಯತ್‌ಗಳ ಜನರ ಕುಡಿಯುವ ನೀರು ಮತ್ತು ಕೃಷಿ ಸಮಸ್ಯೆಗಳಿಗೆ ಪರಿಹಾರವಾಗಿ ಎರಿಂಞಿಪುಯದಲ್ಲಿ ಚೆಕ್ ಡ್ಯಾಮ್ ನಿರ್ಮಾಣವಾಗುತ್ತಿದೆ. ಈ ಯೋಜನೆ ಸಾಕಾರಗೊಂಡ ನಂತರ ಎರಡೂ ಗ್ರಾಮ ಪಂಚಾಯತ್‌ಗಳಲ್ಲಿನ 250 ಹೆಕ್ಟೇರ್ ಭೂ ಪ್ರದೇಶಕ್ಕೆ ಪ್ರಯೋಜನ ದೊರೆಯಲಿದೆ. ನೀರಾವರಿ ವಿನ್ಯಾಸ ಮತ್ತು ಸಂಶೋಧನಾ ಮಂಡಳಿಯ ವಿನ್ಯಾಸ ಲಭ್ಯವಾದ ನಂತರ ಯೋಜನೆಯ ಡಿಪಿಆರ್ ಸಲ್ಲಿಸಲಾಯಿತು ಮತ್ತು ಮೇ 2025 ರಲ್ಲಿ ಹೊಸ ಕೇರಳ ಸದಸ್ ಯೋಜನೆಯ ಭಾಗವಾಗಿ ಉದುಮ ಕ್ಷೇತ್ರದ ಅಭಿವೃದ್ಧಿಗೆ ನಿಗದಿಪಡಿಸಿದ 7 ಕೋಟಿ ರೂಪಾಯಿಗಳನ್ನು ಬಳಸಲು ಅನುಮೋದನೆ ಪಡೆಯಲಾಯಿತು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಯೋಜನೆಯು ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಪಡೆಯಿತು. ಯೋಜನೆಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ ಮತ್ತು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಮುಂದಿನ ವರ್ಷದ ಜುಲೈ ವೇಳೆಗೆ ಕೆಲಸ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಶಾಸಕರು ತಿಳಿಸಿದರು.

ಮುಳಿಯಾರು ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಬಿ.ಮುಹಮ್ಮದ್ ಕುಂಞಿ ಅಧ್ಯಕ್ಷತೆ ವಹಿಸಿದ್ದರು. ನೀರಾವರಿ ಇಲಾಖೆ ಕಾಸರಗೋಡು ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪಿ.ಟಿ.ಸಂಜೀವ್ ವರದಿ ಮಂಡಿಸಿದರು. ಕಾರಡ್ಕ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸಿ.ಬಾಲನ್, ಮುಳಿಯಾರು ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಸಿ.ಕೆ.ಪುಷ್ಪಾಕುಮಾರಿ, ಬೇಡಡ್ಕ ಗ್ರಾಪಂ ಉಪಾಧ್ಯಕ್ಷೆ ರಾಧಾ ರವಿ, ಸದಸ್ಯರಾದ ಟಿ.ರಾಜೀವ್‌ನಾಥ್, ಲತಾ ಗೋಪಿ, ಕೃಷ್ಣವೇಣಿ, ಶಾಂತಕುಮಾರಿ, ಶೋಭನಾ, ಮಾಧವಿ, ಕೆ.ಬಾಲಕೃಷ್ಣನ್, ಯೋಜನೆಯ ಗುತ್ತಿಗೆದಾರ ಮಹಮ್ಮದ್ ರಫಿ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಕೆ.ಬಿ.ಕೆ.ಹಂಸ, ಅಬ್ದುಲ್ ಖಾದರ್ ಕೊಲ್ಲೋಟ್, ಎಂ.ಅನಂತನ್ ನಂಬಿಯಾರ್ ಮಾತನಾಡಿದರು.

ಸಂಘಟನಾ ಸಮಿತಿ ಅಧ್ಯಕ್ಷ ಸಿ.ರಾಮಕೃಷ್ಣನ್ ಸ್ವಾಗತಿಸಿ, ನೀರಾವರಿ ಇಲಾಖೆ ಕಾಸರಗೋಡು ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕೆ.ಸುನೀತಾ ಧನ್ಯವಾದವಿತ್ತರು.

ಫೆ.28 ರಿಂದ ಮಾ.9: ನಾರಾವಿ ಶ್ರೀ ಸೂರ್ಯನಾರಾಯಣ ದೇವಸ್ಥಾನದಲ್ಲಿ ಸಂಭ್ರಮ

ಅಷ್ಟಬಂಧ ಬ್ರಹ್ಮಕಲಶೋತ್ಸವ, ವರ್ಷಾವಧಿ ಜಾತ್ರೆ

ಬೆಳ್ತಂಗಡಿ : 'ನಾರಾವಿ ಶ್ರೀ ಸೂರ್ಯ ನಾರಾಯಣ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ ವರ್ಷಾವಧಿ ಜಾತ್ರಾ ಮಹೋತ್ಸವ ಫೆ.28 ರಿಂದ ಮಾರ್ಚ್ 9 ರವರೆಗೆ ಬ್ರಹ್ಮಶ್ರೀ ಎಡಪದವು ರಾಧಾಕೃಷ್ಣ ತಂತ್ರಿಗಳ ನೇತೃತ್ವದಲ್ಲಿ ವಿವಿಧ ವೈದಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ' ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ರಕ್ಷಿತ್ ಶಿವರಾಂ ಹೇಳಿದರು.



ಅವರು ಬುಧವಾರ ದೇವಸ್ಥಾನದ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ನಡೆಯುವ ಕಾರ್ಯಕ್ರಮಗಳ ಮಾಹಿತಿ ನೀಡಿದರು.

ಫೆ. 28 ರಂದು ಬೆಳಿಗ್ಗೆ 9.30 ಕ್ಕೆ ಕ್ಷಮಾಯಾಚನ ಪ್ರಾರ್ಥನೆ ಪೂರ್ವಕ ಮುಷ್ಟಿ ಕಾಣಿಕೆ ಸೇವೆ, ಸಂಜೆ 5.30 ರಿಂದ ಅಘೋರ ಹೋಮ ನಡೆಯಲಿದೆ. ಮಾ.1 ರಿಂದ ಪ್ರತಿದಿನ ಬೆಳಗ್ಗಿನಿಂದ ವಿವಿಧ ವೈದಿಕ ಕಾರ್ಯಕ್ರಮಗಳು ನಡೆಯಲಿದ್ದು, ಪ್ರತಿದಿನ ಭಜನಾ ಕಾರ್ಯಕ್ರಮ, ಸಂಜೆ ಗಂಟೆ 6.30ಕ್ಕೆ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ವಿವಿಧ ಮಠಾಧಿಪತಿಗಳು ಹಾಗೂ ಸಚಿವರ ಪಾಲ್ಗೊಳ್ಳುವಿಕೆಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ, ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಅವರು ತಿಳಿಸಿದರು.

ಮಾ. 1 ರಂದು ಸಂಜೆ 3 ರಿಂದ ಅರಸುಕಟ್ಟೆ ಬಳಿಯಿಂದ ಹಸಿರವಾಣಿ ಹೊರೆಕಾಣಿಕೆ ಶೋಭಾಯಾತ್ರೆ, ಸಂಜೆ 5 ರಿಂದ ಸೂರ್ಯವಂದನಾ ಭಜನೋತ್ಸವ ನಡೆಯಲಿದ್ದು, ಧಾರ್ಮಿಕ ಸಭೆಯನ್ನು ಅಳದಂಗಡಿ ಅರಮನೆಯ ಡಾ. ಪದ್ಮಪ್ರಸಾದ ಅಜಿಲರು ಉದ್ಘಾಟಿಸಲಿದ್ದಾರೆ. ಸಭಾ ಕಾರ್ಯಕ್ರಮದ ಬಳಿಕ ಸಂಗೀತ ನೃತ್ಯ ವೈಭವ ನಡೆಯಲಿದೆ.

ಮಾ.2 ರಂದು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಬೆಂಗಳೂರು ಸೋಲೂರು ಮಠ ಆರ್ಯ ಈಡಿಗ ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ವಿಖ್ಯಾತನಂದ ಸ್ವಾಮೀಜಿ ಆಶೀರ್ವಚನ ನೀಡಲಿದ್ದು, ಬಳಿಕ ಮೈಸೂರು ರಾಮಚಂದ್ರ ರಾವ್ ಅವರಿಂದ ದಾಸರ ಹಾಡುಗಳ ಗಾಯನ ನಡೆಯಲಿದೆ.

ಮಾ. 3ರಂದು ಸಂಜೆ 6.30 ರಿಂದ ಯೋಗಾಸನ ನೃತ್ಯ ನಡೆಯಲಿದ್ದು, ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಮೂಡಬಿದಿರೆ ಡಾ. ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯ ಸ್ವಾಮೀಜಿ ಹಾಗೂ ಉಡುಪಿ ಪಡುಕುತ್ಯಾರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠದ ಪೀಠಾಧಿಪತಿ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿ ಆಶೀರ್ವಚನ ನೀಡುವರು. ರಾತ್ರಿ ಗಂಟೆ 7 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ.

ಮಾ.4 ರಂದು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಸುಬ್ರಹ್ಮಣ್ಯ ಸಂಪುಟ ನರಸಿಂಹ ಮಠದ ವಿದ್ಯಾಪ್ರಸನ್ನತೀರ್ಥ ಶ್ರೀಪಾದರು ಆಶೀರ್ವಚನ ನೀಡಲಿದ್ದಾರೆ. ರಾತ್ರಿ ಗಂಟೆ 7 ರಿಂದ ಭರತನಾಟ್ಯ ನೃತ್ಯವೃಕ್ಷ ಹಾಗೂ ಮಹಿಷಮರ್ದಿನಿ ಮಹಿಳಾ ಯಕ್ಷಗಾನ ಕಾರ್ಯಕ್ರಮ ನಡೆಯಲಿದೆ.

ಮಾ.5ರಂದು ಬೆಳಿಗ್ಗೆ 11.30 ಕ್ಕೆ ಮಹಿಳಾ ಧಾರ್ಮಿಕ ಸಭೆಯಲ್ಲಿ ಮಹಿಳೆಯರೇ ಭಾಗವಹಿಸಲಿದ್ದು, ಸಂಜೆಯ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಶ್ರೀಧಾಮ ಮಾಣಿಲದ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡುವರು. ಬಳಿಕ ಜಾನಪದ ನೃತ್ಯ ಹಾಗೂ ಗೆಜ್ಜೆಗಿರಿ ಮೇಳದಿಂದ ಯಕ್ಷಗಾನ ಕಾರ್ಯಕ್ರಮ ನಡೆಯಲಿದೆ.

ಮಾ.6 ರಂದು 10.44 ಕ್ಕೆ ಬ್ರಹ್ಮಕಲಶಾಭಿಷೇಕ ಪ್ರಸನ್ನ ಪೂಜೆ, ಮಧ್ಯಾಹ್ನ ಗಂಟೆ 2 ರಿಂದ ಯಕ್ಷ ಹಾಸ್ಯ ವೈಭವ, 4.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಧಾರ್ಮಿಕ ಸಭೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಆಶೀರ್ವಚನ ನೀಡಲಿದ್ದಾರೆ. ರಾತ್ರಿ ಗಂಟೆ 8 ರಿಂದ ದೇವಿದಾಸ್ ಕಾಪಿಕಾಡ್ ತಂಡದಿಂದ ಪುದರ್ ದೀತಿಜಿ ಎಂಬ ತುಳು ಹಾಸ್ಯ ನಾಟಕ ನಡೆಯಲಿದೆ.

ಮಾ.7 ರಂದು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಕನ್ಯಾಡಿ ಶ್ರೀರಾಮ ಕ್ಷೇತ್ರದ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ಆಶೀರ್ವಚನ ನೀಡಲಿದ್ದಾರೆ. ಸಂಜೆ ಗಂಟೆ 7 ರಿಂದ ಜರ್ನಿ ಥಿಯೇಟರ್ ಗ್ರೂಪ್ ಮಂಗಳೂರು ಇವರಿಂದ ರಂಗ ಸಂಗೀತ ಹಾಗೂ ಜನಪದ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ.

ಮಾ. 8 ರಂದು ಬೆಳಿಗ್ಗೆ 8.30 ರಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸಾಮೂಹಿಕ ಸತ್ಯನಾರಾಯಣ ಪೂಜಾ ಸಮಿತಿ ನಾರಾವಿ, ಜನಜಾಗೃತಿ ವೇದಿಕೆ ನಾರಾವಿ ಹಾಗೂ ಶ್ರೀ ಸೂರ್ಯನಾರಾಯಣ ದೇವಸ್ಥಾನ ಇದರ ಸಂಯುಕ್ತ ಆಶ್ರಯದಲ್ಲಿ ಸಾಮೂಹಿಕ ಸತ್ಯ ನಾರಾಯಣ ಪೂಜೆ ನಡೆಯಲಿದ್ದು, ಭಕ್ತಿ ಸಂಗೀತ ಹಾಗೂ ರಾತ್ರಿ ಎಕ್ಸೆಲ್ ವೈಭವ ಕಾರ್ಯಕ್ರಮ ನಡೆಯಲಿದೆ.

ಮಾ.9 ರಂದು ರಾತ್ರಿ 8.30ಕ್ಕೆ ಕೊಡಮಣಿತ್ತಾಯ ದೈವದ ನೇಮ, ಮಾ.10ರಂದು ರಾತ್ರಿ 8 ರಿಂದ ಶ್ರೀ ಮೂಜಿಲ್ನಾಯ ಬೊಮ್ಮರ್ದಾಯ ಪಿಲ್ಚಂಡಿ ದೈವಗಳಿಗೆ ಬಲಿನೇಮ ಹಾಗೂ ಮಾ.14 ರಂದು ಏಕಾಹೋರಾತ್ರಿ ಭಜನೋತ್ಸವ ನಡೆಯಲಿದೆ ಎಂದು ತಿಳಿಸಿದರು.

ದೇವಸ್ಥಾನದ ಆಡಳಿತ ಮೊಕ್ತೇಸರ ರವೀಂದ್ರ ಪೂಜಾರಿ ಬಾಂದೊಟ್ಟು, ಪ್ರಧಾನ ಅರ್ಚಕ ಕೃಷ್ಣ ತಂತ್ರಿ, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ವಿನಯ ಹೆಗ್ಡೆ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಗುರುವಾಯನಕೆರೆ ಇದರ ಯೋಜನಾಧಿಕಾರಿ ಅಶೋಕ್ ಬಿ, ಕಾರ್ಯಾಧ್ಯಕ್ಷರಾದ ಮಹಾವೀರ ಜೈನ್, ಜಗದೀಶ್ ಅಂಚನ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಜಗದೀಶ್ ಹೆಗ್ಡೆ, ಎನ್ ದಿವಾಕರ ಭಂಡಾರಿ, ಲಕ್ಷ್ಮಣ ಬಂಗೇರ, ಶಂಕರ್ ತುಂಬೆಗುಡ್ಡೆ, ಯಶೋಧ, ರಶ್ಮಿ ಹಾಗೂ ವಿವಿಧ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಫೆ.22: ಮಜೂರು ಮಂಡಲ ಹಿಂದೂ ಸಮಾಜೋತ್ಸವ

ಶಿರ್ವ: ಹಿಂದೂ ಸಂಗಮ ಆಯೋಜನಾ ಸಮಿತಿ ಕಾಪು ತಾಲೂಕು, ಮಜೂರು, ಹೇರೂರು, ಪಾದೂರು ಗ್ರಾಮಗಳನ್ನು ಒಳಗೊಂಡ ಮಜೂರು ಮಂಡಲದ ವತಿಯಿಂದ ಫೆ.22ರಂದು 'ಹಿಂದೂ ಸಂಗಮ' ಸಂಪನ್ನಗೊಳ್ಳಲಿದೆ. ಪೂರ್ವಭಾವಿಯಾಗಿ ಅಪರಾಹ್ನ ಗಂಟೆ 3.30ಕ್ಕೆ ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದದಿಂದ ಹೇರೂರು ಶ್ರೀಗುರು ರಾಘವೇಂದ್ರ ಭಜನಾ ಮಂದಿರದವರೆಗೆ ಬೃಹತ್ ಶೋಭಾಯಾತ್ರೆ ನಡೆಯಲಿದ್ದು, ಸಂಜೆ 4.30ಕ್ಕೆ ಸಭಾ ಕಾರ್ಯಕ್ರಮ ಜರುಗಲಿದೆ. ಸಭಾಧ್ಯಕ್ಷತೆಯನ್ನು ಕಲ್ಲುಗುಡ್ಡೆ ಶ್ರೀಬ್ರಹ್ಮ ಬೈದರ್ಕಳ ಕಲಾ ಸಂಘದ ಅಧ್ಯಕ್ಷ ಹಾಗೂ ಗರಡಿ ಪಾತ್ರಿ ಕಲ್ಲುಗುಡ್ಡೆ ಚಂದ್ರಕಾಂತ ಪೂಜಾರಿ ವಹಿಸಲಿದ್ದು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಂಗಳೂರು ವಿಭಾಗದ ಸಂಪರ್ಕ ಪ್ರಮುಖ್ ಯೋಗೀಶ ಶಿರಿಯಾರ ದಿಕ್ಸೂಚಿ ಭಾಷಣ ಮಾಡುವರು. ಹೇರೂರು ಮಾಜಿ ಗ್ರಾ.ಪಂಚಾಯತ್ ಸದಸ್ಯೆ ಮುತ್ತಕ್ಕ, ಹಿಂದೂ ಸಂಗಮ ಮಜೂರು ಮಂಡಲದ ಅಧ್ಯಕ್ಷ ವರುಣ್ ಆಚಾರ್ಯ ಉಪಸ್ಥಿತರಿರುವರು ಎಂದು ಸಂಘಟಕರ ಪ್ರಕಟನೆ ತಿಳಿಸಿದೆ.

ʼಡ್ರಗ್ಸ್ ಬೇಡ ಎನ್ನಿʼ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಜಾಗೃತಿ

ಮಾದಕದ್ರವ್ಯ ವಿರೋಧಿ ಕಾರ್ಯಕ್ರಮ

ಮಂಗಳೂರು: ನಗರದ ಸಂತ ಆಲೋಶಿಯಸ್ ಗೊನ್ಜಾಗ ಶಾಲೆಯಲ್ಲಿ ಮಾದಕದ್ರವ್ಯ ವ್ಯಸನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ 'ಡ್ರಗ್ಸ್ ಬೇಡ ಎನ್ನಿ 'ಎಂಬ ಶೀರ್ಷಿಕೆಯಲ್ಲಿ 7 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಮಾದಕದ್ರವ್ಯ ವ್ಯಸನದ ವಿರುದ್ಧ ಇರುವ ಕಾನೂನು ಮತ್ತು ಅದರ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.



ಸಂಸ್ಥೆಯ ಪ್ರಿನ್ಸಿಪಾಲ್ ಫಾ.ರೋಹನ್ ಡಿ ಆಲ್ಮೇಡಾ ಮಾತನಾಡಿ, ಮಾದಕ ದ್ರವ್ಯ ವ್ಯಸನಕ್ಕೆ ಸಂಬಂಧಿಸಿದಂತೆ ಜನಜಾಗೃತಿ ಮೂಡಿಸುವ ಅವಶ್ಯಕತೆ ಇದೆ. ಹದಿಹರೆಯದಲ್ಲಿ ಮಕ್ಕಳಲ್ಲಿ ಬಲವಾದ ಮೌಲ್ಯಗಳು ಹಾಗೂ ನೈತಿಕತೆಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಪ್ರಸ್ತುತ ಕಾರ್ಯಕ್ರಮವನ್ನು ಸಂತ ಅಲೋಶಿಯಸ್ ಲಾ ಸ್ಕೂಲ್ ಆಯೋಜಿಸಿದ್ದು, ಲಾ ಸ್ಕೂಲ್ ನ ಡೀನ್ ಉದಯಕೃಷ್ಣಬಿ, ಫಾ.ಪ್ರಶಾಂತ್ ಸಿಕ್ವೇರಾ ಸಹಾಯಕ ಪ್ರಾಧ್ಯಾಪಕ ರಾಯನ್ ಫರ್ನಾಂಡಿಸ್, ಸಹ ಪ್ರಾಧ್ಯಾಪಕರಾದ ಭಗಿನಿ ರೇಖಾ ಲೋಬೊ ಉಪಸ್ಥಿತರಿದ್ದರು. ಮಾದಕ ದ್ರವ್ಯ ವ್ಯಸನಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರ ಹಾಗೂ 'ಜಸ್ಟ್ ವನ್ಸ್' ನಾಟಕವನ್ನು ಪ್ರಸ್ತುತಪಡಿಸಲಾಯಿತು. ಧೀರಜ್ ಲೋಬೊ ಕಾರ್ಯಕ್ರಮ ಸಂಯೋಜಿಸಿದರು.

ನವೆಂಬರ್ ತಿಂಗಳಲ್ಲಿ ದುಬೈನಲ್ಲಿ ಕನ್ನಡ ಸಮ್ಮೇಳನ

ಮಂಗಳೂರು: ಅಮೆರಿಕದಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಕಾಗಿ ಕೆಲಸ ಮಾಡುತ್ತಿರುವ ನಾವು ವಿಶ್ವ ಕನ್ನಡಿಗರು(ನಾವಿಕ) ಸಂಸ್ಥೆ ವತಿಯಿಂದ ಈ ಬಾರಿ ನವೆಂಬರ್ ತಿಂಗಳಲ್ಲಿ ದುಬೈನಲ್ಲಿ ಕನ್ನಡ ಸಮ್ಮೇಳನವನ್ನು ಆಯೋಜಿಸಲು ತೀರ್ಮಾನ ಮಾಡಲಾಗಿದೆ. ಈಗಾಗಲೇ ದುಬೈ ಕನ್ನಡ ಸಂಘದ ಜತೆಗೆ ಮಾತುಕತೆ ನಡೆದಿದೆ ಎಂದು ನಾವಿಕ ಅಧ್ಯಕ್ಷೆ ಡಾ. ಅನ್ನಪೂರ್ಣ ಭಟ್ ತಿಳಿಸಿದರು.

ದುಬೈ ಕನ್ನಡ ಸಂಘ ಕನ್ನಡ ರಾಜ್ಯೋತ್ಸವವನ್ನು ಬಹಳ ಅದ್ದೂರಿಯಾಗಿ ಮಾಡುತ್ತದೆ. ಈ ಬಾರಿ ನಾವಿಕದಿಂದ ಕನ್ನಡ ಸಮ್ಮೇಳನ ಆಯೋಜಿಸಲಾಗಿದೆ. ಜತೆಗೆ 2027ರ ಸೆಪ್ಟೆಂಬರ್ ತಿಂಗಳ 3ರಿಂದ 5ರ ವರೆಗೆ ಅಮೆರಿಕದ ಅಟ್ಲಾಂಟಾ ರಾಜ್ಯದ ಸೌತ್ ಕನ್ವೆಶನ್ ಸೆಂಟರ್‌ನಲ್ಲಿ ನಾವಿಕ- ವಿಶ್ವ ಕನ್ನಡಿಗರ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ. ಇಲ್ಲಿ ವಿಶ್ವದ ಬೇರೆ ಬೇರೆ ಭಾಗಗಳಿಂದ ಕನ್ನಡ ನಾಡು, ನುಡಿ, ಸಂಸ್ಕೃತಿ, ಆರ್ಥಿಕತೆ, ಸಾಮಾಜಿಕ ಸುಧಾರಣೆ, ಉದ್ಯಮಶೀಲತೆ, ಪರಿಸರ, ಶಿಕ್ಷಣ ಮುಂತಾದ ಕ್ಷೇತ್ರದಲ್ಲಿ ದುಡಿದ ಅನುಭವ ಮತ್ತು ಆಲೋಚನೆ ಇರುವ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸುವ ಜತೆಗೆ ಕನ್ನಡ ಮತ್ತು ಕನ್ನಡಿಗರ ಭವಿಷ್ಯದ ಕಾರ್ಯಸೂಚಿಯನ್ನು ಸಿದ್ಧಪಡಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಪ್ರಮುಖರಾದ ಡಾ. ಸುಬ್ರಹ್ಮಣ್ಯ ಭಟ್, ಡಾ.ಜಿ.ಕೆ.ಭಟ್, ಡಾ.ರಾಜಲಕ್ಷ್ಮಿ ಎನ್.ಕೆ. ಉಪಸ್ಥಿತರಿದ್ದರು.

ಫೆ.22ರಂದು ಶ್ರೀಯಾ ರಾವ್ ಸಣ್ಣಯ್ಯ ಭರತನಾಟ್ಯ ರಂಗಪ್ರವೇಶ

ಮಂಗಳೂರು: ನೃತ್ಯ ಸುಧಾ ಮಂಗಳೂರು ಸಂಸ್ಥೆಯ ಸ್ಥಾಪಕಿ ವಿದುಷಿ ಸೌಮ್ಯ ಸುಧೀಂದ್ರ ರಾವ್ ಅವರ ಪುತ್ರಿ ಹಾಗೂ ಶಿಷ್ಯೆ ವಿದುಷಿ ಶ್ರೀಯಾ ರಾವ್ ಸಣ್ಣಯ್ಯ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಫೆ.22ರಂದು ಸಂಜೆ 5ಕ್ಕೆ ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಹಿರಿಯ ನೃತ್ಯಗುರು ನಾಟ್ಯಾಚಾರ್ಯ ಉಳ್ಳಾಲ ಮೋಹನ್ ಕುಮಾರ್, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ವೈಸ್ ಛಾನ್ಸಲರ್ ರೆ. ಡಾ. ಪ್ರವೀಣ್ ಮಾರ್ಟಿಸ್, ಮೈಸೂರಿನ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ನಿರ್ದೇಶಕ ಪ್ರೊ.ಕೆ. ರಾಮಮೂರ್ತಿ ರಾವ್, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲು, ಯಕ್ಷಧ್ರುವ ಪಟ್ಲ ಫೌಂಡೇಶನ್ ಸ್ಥಾಪಕ ಪಟ್ಲ ಸತೀಶ್ ಶೆಟ್ಟಿ ಭಾಗವಹಿಸುವರು. ಈ ವೇಳೆ ಶ್ರೀಯಾ ಅವರ ಮೃದಂಗ ಗುರು ವಿದ್ವಾನ್ ರವಿಕುಮಾರ್ ಕುಂಜೂರು ಅವರಿಗೆ ಗುರುವಂದನೆ ನಡೆಯಲಿದೆ ಎಂದು ವಿದುಷಿ ಸೌಮ್ಯ ಸುಧೀಂದ್ರ ರಾವ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿದುಷಿ ಶ್ರೀಯಾ ರಾವ್ ಅವರು ಸಂತ ಅಲೋಶಿಯಸ್ ವಿವಿಯಲ್ಲಿ ಪ್ರಥಮ ಬಿಎಸ್ಸಿ ವಿದ್ಯಾರ್ಥಿನಿ. ವಿದ್ವತ್ ಅಂತಿಮ ಪರೀಕ್ಷೆಯನ್ನು 2025ರಲ್ಲಿ ಪೂರೈಸಿದ್ದಾರೆ. ಮೃದಂಗ ಹಾಗೂ ಕರ್ನಾಟಕ ಸಂಗೀತ ಕಲಿಯುತ್ತಿದ್ದಾರೆ ಎಂದರು.

ಸಂಸ್ಥೆಯ ಅಧ್ಯಕ್ಷ ಡಾ. ಸುಧೀಂದ್ರ ರಾವ್, ವಿದುಷಿ ಶ್ರೀಯಾ ರಾವ್ ಸಣ್ಣಯ್ಯ, ವಿದುಷಿ ಸಹನಾ, ವಿದುಷಿ ನವ್ಯಾ ಭಟ್ ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಆಹ್ವಾನಿತ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್‌ಶಿಪ್

ಮಂಗಳೂರು: ಕಾಸ್ಮೋಪೊಲಿಟನ್ ಕ್ಲಬ್ ವತಿಯಿಂದ ಫೆ.20ರಿಂದ ಮಾ.1ರವರೆಗೆ ಬಾವುಟಗುಡ್ಡೆಯಲ್ಲಿರುವ ಕಾಸ್ಮೋಪೊಲಿಟನ್ ಕ್ಲಬ್‌ನ ಒಳಾಂಗಣ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಆಹ್ವಾನಿತ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್‌ಶಿಪ್ ಆಯೋಜಿಸಲಾಗಿದೆ ಎಂದು ಟೂರ್ನಮೆಂಟ್ ಚೇರ್ ಮೆನ್ ರಾಜಗೋಪಾಲ ರೈ ತಿಳಿಸಿದರು.

ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಚಾಂಪಿಯನ್‌ಶಿಪ್ ಉದ್ಘಾಟಿಸಲಿದ್ದಾರೆ. ಕ್ಲಬ್ ಅಧ್ಯಕ್ಷ ಡಾ. ಎ. ಸದಾನಂದ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಕರಾವಳಿ ಭಾಗದಲ್ಲಿ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಸ್ಪರ್ಧೆ ನಡೆಯುತ್ತಿದೆ. ಈ ಸ್ಪರ್ಧೆಯಲ್ಲಿ ಪ್ರತಿಷ್ಠಿತ 14 ಮಂದಿ ರಾಷ್ಟ್ರೀಯ ಆಟಗಾರರು ಭಾಗವಹಿಸುತ್ತಾರೆ. ವಿಜೇತರಿಗೆ ನಗದು ಹಾಗೂ ಆಕರ್ಷಕವಾದ ಬಹುಮಾನಗಳನ್ನು ನೀಡಲಾಗುತ್ತದೆ ಎಂದರು.

ಮಾ.1 ರಂದು ಸಂಜೆ 6 ಗಂಟೆಗೆ ನಮ್ಮ ಸಂಸ್ಥೆಯ 125ನೇ ವರ್ಷಾಚರಣೆ ನಡೆಯ ಲಿದೆ. ಈ ಕಾರ್ಯಕ್ರಮದಲ್ಲಿ ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ, ಅದಾನಿ ಕಂಪೆನಿಯ ಕಿಶೋರ್ ಆಳ್ವ ಸಹಿತ ಗಣ್ಯರು ಭಾಗವಹಿಸುವರು. ಸಮಾರಂಭದಲ್ಲಿ ಸಂತೋಷ್ ಹೆಗ್ಡೆ, ಸದಾನಂದ ಶೆಟ್ಟಿ ಮತ್ತು ನಟ ನವೀನ್ ಡಿ ಪಡೀಲ್ ಅವರಿಗೆ ಸನ್ಮಾನ ನಡೆಯಲಿದೆ. ನಮ್ಮ ಕ್ಲಬ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಹಳೇಯ ಕ್ಲಬ್ ಆಗಿದ್ದು, 1901ರಲ್ಲಿ ಅಸ್ತಿತ್ವಗೊಂಡಿತು. ಈಗಾಗಲೇ ಅನೇಕ ಜನಪರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ ಎಂದು ಹೇಳಿದರು.

ಕ್ಲಬ್ ಕಾರ್ಯದರ್ಶಿ ಎಂ.ಸಿ. ಶೆಟ್ಟಿ, ಕ್ರೀಡಾ ಕಾರ್ಯದರ್ಶಿ ಯೋಗೀಶ್ ಕುಮಾರ್, ಕೋಶಾಧಿಕಾರಿ ದೇವಿಚರಣ್ ಶೆಟ್ಟಿ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಮನೋಜ್ ಕುಮಾರ್, ಪುಷ್ಪರಾಜ್ ಶೆಟ್ಟಿ, ಪ್ರಸಾದ್ ರೈ ಉಪಸ್ಥಿತರಿದ್ದರು.

ವಿಧಾನ ಸೌಧದಲ್ಲಿ ಮಾಧ್ಯಮ ನಿರ್ಬಂಧಿಸುವ ಮೂಲಕ ವೈಫಲ್ಯ ಮರೆಮಾಚಲು ಯತ್ನ : ಯಶ್ ಪಾಲ್ ಸುವರ್ಣ

ಉಡುಪಿ: ವಿಧಾನಸೌಧದಲ್ಲಿ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮವನ್ನು ನಿರ್ಬಂಧಿಸುವ ಮೂಲಕ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ತಮ್ಮ ವೈಫಲ್ಯವನ್ನು ಮರೆಮಾಚಲು ಮುಂದಾಗಿದೆ ಎಂದು ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮುಖ್ಯಮಂತ್ರಿ ಬದಲಾವಣೆ ಗೊಂದಲದಲ್ಲಿ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದಿದ್ದು, ಪಕ್ಷದ ಹೈಕಮಾಂಡ್ ಸೂಚನೆಯನ್ನು ಧಿಕ್ಕರಿಸಿ ಶಾಸಕರು ವಿದೇಶ ಪ್ರವಾಸ ನಡೆಸುತ್ತಿರುವ ಸಂದರ್ಭದಲ್ಲಿ ಮಾಧ್ಯಮಗಳನ್ನು ನಿರ್ಬಂಧಿಸುವ ಮೂಲಕ ಸರ್ಕಾರದ ಅಸ್ಥಿರತೆಯನ್ನು ಮರೆಮಾಚಲು ಮುಂದಾಗಿದೆ. ಸಿದ್ದರಾಮಯ್ಯ ಸರಕಾರ ಮಾಧ್ಯಮಗಳನ್ನು ನಿರ್ಬಂಧಿಸುವ ಮೂಲಕ ಪ್ರಜಾಪ್ರಭುತ್ವದ ಆಶಯಕ್ಕೆ ಕೊಡಲಿಯೇಟು ನೀಡಿದ್ದಾರೆ. ರಾಜ್ಯ ಸರ್ಕಾರ ತಕ್ಷಣ ತಮ್ಮ ನಿರ್ಧಾರವನ್ನು ತಕ್ಷಣ ಹಿಂಪಡೆದು ರಾಜ್ಯದಲ್ಲಿ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮಕ್ಕೆ ಮುಕ್ತ ಅವಕಾಶ ನೀಡುವಂತೆ ಶಾಸಕ ಯಶ್‌ಪಾಲ್ ಸುವರ್ಣ ಆಗ್ರಹಿಸಿದ್ದಾರೆ.

ಮಂಗಳೂರು ವಿವಿ: ಕಾರ್ಯಾಗಾರ ಉದ್ಘಾಟನೆ

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಆಂತರಿಕ ಗುಣಮಟ್ಟ ಖಾತರಿ ಕೋಶ ಇದರ ವತಿಯಿಂದ ಉಪನ್ಯಾಸಕರಿಗಾಗಿ ಸಮಕಾಲಿನ ಶೈಕ್ಷಣಿಕ ಬೋಧನಾ ವಿಧಾನಗಳು, ನವೀನ ಶೈಕ್ಷಣಿಕ ಅಭ್ಯಾಸಗಳು ಮತ್ತು ವೃತ್ತಿಪರ ಬೆಳವಣಿಗೆಯ ಕುರಿತು ಒಂದು ದಿನದ ಕಾರ್ಯಾಗಾರ ಮಂಗಳೂರು ವಿವಿಯಲ್ಲಿ ಇತ್ತೀಚೆಗೆ ನಡೆಯಿತು.



ಕಾರ್ಯಕ್ರಮವನ್ನು ಮಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಕುಲಸಚಿವರಾದ ಕೆ.ರಾಜು ಮೊಗವೀರ ಅವರು ಉದ್ಘಾಟಿಸಿ ಮಾತನಾಡಿದರು.

ಮಂಗಳೂರಿನ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾದ ಡಾ. ವಿನ್ಸೆಂಟ್ ಕ್ರಾಸ್ತಾ ಇವರು 'ಸಂಸ್ಥೆ ನಿರ್ಮಾಣದ ಕಡೆಗೆ ಶಿಕ್ಷಕರ ಪಾತ್ರ' ಹಾಗೂ ಸೈಂಟ್ ಅಲೋಶಿಯಸ್ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಶಾಲಿನಿ ಅಯ್ಯಪ್ಪ ಇವರು '' ಯಂಗ್ ಅಡಲ್ಟ್ ಸೈಕಾಲಜಿ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ. ಗಣೇಶ್ ಸಂಜೀವ್, ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾದ ಡಾ. ದೇವೇಂದ್ರಪ್ಪ, ಐಕ್ಯುಎಸಿಯ ನಿರ್ದೇಶಕಿ ಡಾ. ಮೋನಿಕಾ ಸದಾನಂದ, ಸಹ ನಿರ್ದೇಶಕರಾದ ಪ್ರೊ. ವಿಶಾಲಾಕ್ಷಿ ಬಿ., ಹಾಗೂ ಕಾರ್ಯಕ್ರಮದ ಸಂಯೋಜಕರಾದ ಡಾ. ಪ್ರೀತಿ ಕೀರ್ತಿ ಡಿಸೋಜ ಮೊದಲಾದವರು ಉಪಸ್ಥಿತರಿದ್ದರು. ಸುಮಾರು 75 ಮಂದಿ ಉಪನ್ಯಾಸಕರು ಕಾರ್ಯಕ್ರಮದ ಪ್ರಯೋಜವನ್ನು ಪಡೆದರು.

ಕಿರುಸುದ್ದಿ

ಕಾರ್ನಾಡು ಶ್ರೀ ಹರಿಹರ ಕ್ಷೇತ್ರದಲ್ಲಿ 'ಜಾಗರಣಾ ಭಜನಾ'

ಮುಲ್ಕಿ: ಕಾರ್ನಾಡು ಶ್ರೀ ಹರಿಹರ ಕ್ಷೇತ್ರ ಯುವಕ ವೃಂದ ಮತ್ತು ಮಹಿಳಾ ಮಂಡಳಿಯ ನೇತೃತ್ವದಲ್ಲಿ 42ನೇ ವರ್ಷದ ಮಹಾಶಿವರಾತ್ರಿ ಕಾರ್ಯಕ್ರಮದ ಪ್ರಯುಕ್ತ 'ಜಾಗರಣಾ ಭಜನಾ' ಕಾರ್ಯಕ್ರಮ ಕ್ಷೇತ್ರದಲ್ಲಿ ನಡೆಯಿತು ವೈದ್ಯ ಡಾ. ಹಂಸರಾಜ ಶೆಟ್ಟಿ ಹಾಗೂ ಕ್ಷೇತ್ರದ ಆಡಳಿತ ಮೊಕ್ತೇಸರ ಎಮ್. ಎಚ್. ಅರವಿಂದ ಪೂಂಜ ಭಜನಾ ಕಾರ್ಯಕ್ರಮ ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭ ಕ್ಷೇತ್ರದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ರವಿಕುಮಾರ್, ಶಶೀಂದ್ರ ಎಂ. ಸಾಲ್ಯಾನ್, ಟಿ. ರಾಘವೇಂದ್ರ, ನೂತನ್ ಕೆ. ಶೆಟ್ಟಿ ಸುದರ್ಶನ್ ಭಟ್, ಯುವಕ ವೃಂದದ ಅಧ್ಯಕ್ಷ ಶೈಲೇಶ್ ಶೆಟ್ಟಿ ಪಡುಬೈಲು, ಉಪಾಧ್ಯಕ್ಷ ವಸಂತ್ ಕೋಟ್ಯಾನ್ ಕಾರ್ಯದರ್ಶಿ ಮನೋಹರ್, ಜೊತೆ ಕಾರ್ಯದರ್ಶಿ ನಿತೇಶ್ ಅಮೀನ್, ಕೋಶಾಧಿಕಾರಿ ಕಿಶೋರ್ ಆಚಾರ್ಯ ಹರೀಶ್ ಸುವರ್ಣ, ಮಹಿಳಾ ಮಂಡಳಿ ಅಧ್ಯಕ್ಷೆ ಕಸ್ತೂರಿ ದೇವಾಡಿಗ , ಉಪಾಧ್ಯಕ್ಷೆ ರಾಧಿಕಾ ವೈ. ಕೋಟ್ಯಾನ್ ಹಾಗೂ ಶ್ರೀ ಹರಿಹರ ಕ್ಷೇತ್ರದ ಯುವಕ ವೃಂದದ ಸರ್ವಸದಸ್ಯರು ಉಪಸ್ಥಿತರಿದ್ದರು. ಬಳಿಕ ಭಜನಾ ಕಾರ್ಯಕ್ರಮ ನಡೆಯಿತು

ದಿವಾಕರ ಪೂಜಾರಿ ದೈವಾರಾಧನೆ ಕ್ಷೇತ್ರದಲ್ಲಿ ಮಾದರಿ ಸೇವಕ

ಮಂಗಳೂರು: ಇತ್ತೀಚೆಗೆ ನಿಧನ ಹೊಂದಿದ ದರ್ಶನ ಪಾತ್ರಿ ಮುಂಡೂರು ಜಾರಿಗೆಕಟ್ಟೆ ದಿವಾಕರ ಪೂಜಾರಿ ದೈವಾರಾಧನೆಯಲ್ಲಿ ಮಾದರಿ ಸೇವಕ. ಅವರ ನಿಧನದಿಂದ ದೈವಾರಾಧನೆ ಕ್ಷೇತ್ರದ ಮಾದರಿ ಸೇವಕರೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ನಮ್ಮೂರ ಆಟ ಕೂಟ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷ ಮುಲ್ಕಿ ಕರುಣಾಕರ ಶೆಟ್ಟಿ ಸಂತಾಪ ವ್ಯಕ್ತಪಡಿಸಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರಿಂದ ದೀಕ್ಷೆ ಪಡೆದು, ದೈವಾರಾಧನೆ ಕ್ಷೇತ್ರ ಮತ್ತು ಸಾವಿರಾರು ಕುಟುಂಬಗಳಲ್ಲಿ ಪಂಜುರ್ಲಿ ದರ್ಶನ ಸೇವೆ ಮೂಲಕ ಜನಾನುರಾಗಿಯಾಗಿದ್ದರು. ಇವರು ಜಾರಿಗೆಕಟ್ಟೆ ಕೊರಗಜ್ಜ ಕೊರಗ ಪಂಜುರ್ಲಿ ಕ್ಷೇತ್ರದ ಧರ್ಮದರ್ಶಿಯಾಗಿ ದೇವಾರಾಧನೆ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು. ಇವರ ಮಾರ್ಗದರ್ಶನದಲ್ಲಿ ಸಾವಿರಾರು ದೈವಾರಾಧನೆ ಕ್ಷೇತ್ರ ಹಾಗೂ ಕುಟುಂಬಗಳು ಶ್ರೇಯೋಭಿವೃದ್ಧಿ ಹೊಂದಿದ್ದಾರೆ. ಮುಂಡೂರು ಜಾರಿಗೆ ಕಟ್ಟೆಯಲ್ಲಿರುವ ಕೊರಗಜ್ಜ ಕೊರಗ ಪಂಜುರ್ಲಿ ಕ್ಷೇತ್ರದಲ್ಲಿ ಸಾವಿರಾರು ಜಾತ್ಯಾತೀತ ಭಕ್ತರು ಆಗಮಿಸಿ ತಮ್ಮ ಅಹವಾಲು ಕೋರಿ ಪರಿಹಾರ ಕಂಡುಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಫಿಲೋಮಿನಾ ಎನ್ನೆಸ್ಸೆಸ್ ಶಿಬಿರದಲ್ಲಿ ಯಕ್ಷರೂಪಕ 'ಸುದರ್ಶನ'

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ರಾಷ್ಟ್ರೀಯ ಸೇವಾ ಯೋಜನೆ(ಎನ್ನೆಸ್ಸೆಸ್)ಯ ವಾರ್ಷಿಕ ಶಿಬಿರದ ಪಾಪೆಮಜಲು ಪ್ರೌಢ ಶಾಲೆಯ ಸಾಂಸ್ಕೃತಿಕ ವೇದಿಕೆಯ ಯಕ್ಷಕಲಾ ಕೇಂದ್ರ (ಭಾರತೀಯ ಶಾಸ್ತ್ರೀಯ ಮತ್ತು ಜಾನಪದ ಕಲೆಗಳ ಅಧ್ಯಯನ ಕೇಂದ್ರ) ಪ್ರಸ್ತುತಿಯಲ್ಲಿ ಯಕ್ಷರೂಪಕ 'ಸುದರ್ಶನ' ಪ್ರದರ್ಶನಗೊಂಡಿತು. ಯಕ್ಷ ಕಲಾ ಕೇಂದ್ರದ ಸಾಂಸ್ಕೃತಿಕ ವಿಸ್ತರಣೆಯ ಯೋಜನೆಯಡಿಯಲ್ಲಿ ವಿದ್ಯಾರ್ಥಿ ಕಲಾವಿದರಿಂದ ಯಕ್ಷರೂಪಕ ಸಂಪನ್ನಗೊಂಡಿತು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕಗಾನ ಮೇಳ

1. ಕಜೆಕಾರು ಶ್ರೀ ಮಹಾದೇವ ದೇವೇಶ್ವರ ದೇವಸ್ಥಾನ, ಬಂಟ್ವಾಳ (ತಾ).
2. ಶ್ರುತಿ ಎಸ್. ಹೆಗ್ಡೆ ಮತ್ತು ಡಾ. ವೈ. ಸನತ್ ಹೆಗ್ಡೆ, ಮಜಲೊಟ್ಟು ಬೀಡು, ಶಿರ್ವ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
3. ಲಕ್ಷ್ಮೀ ಗಣೇಶ್ ಪ್ರಭು, 'ದೇವಾಂಶಿ ನಿಲಯ', ಮಂಜಡ್ಕ, 2ನೇ ಮುಖ್ಯ ರಸ್ತೆ, ಶಕ್ತಿನಗರ, ಮಂಗಳೂರು.
4. ದಿವ್ಯ, ಮಿಥುನ್ ಭಂಡಾರಿ, ಮಕ್ಕಳು, ಗಾಂಧಿನಗರ, ಕಾವೂರು.
5. ಸಚ್ಚಿದಾನಂದ ಶೆಟ್ಟಿ ಬೊಂಡಾಲ, ಬಂಟ್ವಾಳ (ತಾ)
6. ರಾಜೇಶ್ ಮತ್ತು ಮನೆಯವರು, ದುರ್ಗಾ ನಗರ, ಸ್ವಾಮಿಲಪದವು, ಬಜಪೆ.
7. ವಸಂತಿ ಬಾಲಕೃಷ್ಣ ಶೆಟ್ಟಿ, "ಸಮೃದ್ಧಿ", ಕೃಷ್ಣಾಪುರ, ಪೊನ್ನಗಿರಿ ದೇವಸ್ಥಾನ ವಠಾರ.

ಶ್ರೀ ಧರ್ಮಸ್ಥಳ ಮೇಳ
ದೇವಂಗಿ -ಬಾಣಂಕಿಯಲ್ಲಿ
ಶ್ರೀ ಬಿ.ಕೆ. ವಿಜಯ ಮತ್ತು ಕುಟುಂಬಸ್ಥರು, ಬಾಣಂಕಿ ಮನೆ

ಶ್ರೀ ಸಾಲಿಗ್ರಾಮ ಮೇಳ
ಮಂಜೇಶ್ವರ -ಜೋಡುಕಲ್ಲಿನಲ್ಲಿ

ಶ್ರೀ ಪೆರ್ಡೂರು ಮೇಳ
ದೇವಿಕಾನದಲ್ಲಿ- ಕೃಷ್ಣಮಂಜರಿ

ಶ್ರೀ ಹನುಮಗಿರಿ ಮೇಳ
ವಿಟ್ಲದಲ್ಲಿ

ಶ್ರೀ ಪಾವಂಜೆ ಮೇಳ
ಕುಂದಾಪುರದ ಕೂಡಿಗೆ ಮೂರುಪಾಲು ಕೊಡ್ಲಾಡಿಯಲ್ಲಿ
ಶ್ರೀ ದೇವಿ ಮಹಾತ್ಮೆ



ರಾಜ್ಯ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಬುಧವಾರ ಮಂಗಳೂರಿನ ಇತಿಹಾಸ ಪ್ರಸಿದ್ಧ ಕದ್ರಿ ಶ್ರೀ ಮಂಜುನಾಥ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ಸಲ್ಲಿಸಿದರು. ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಡಾ. ಎ. ಜನಾರ್ದನ ಶೆಟ್ಟಿ ಅವರು ಸಚಿವರನ್ನು ಸ್ವಾಗತಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಹರಿನಾಥ್ ಜೋಗಿ, ರಾಜೇಂದ್ರ ಚಿಲಿಂಬಿ, ಕಿರಣ್ ಕುಮಾರ್ ಜಿ., ಪ್ರೀತಾನಂದನ್, ನಾರಾಯಣ ಕೋಟ್ಯಾನ್, ಉಷಾ ಪ್ರಭಾಕರ್, ದಿಲ್‌ರಾಜ್ ಆಳ್ವ, ಕಾರ್ಯನಿರ್ವಹಣಾಧಿಕಾರಿ ಪುಷ್ಪಲತಾ ಹಾಗೂ ಅರ್ಚಕ ರಾಘವೇಂದ್ರ ಅಡಿಗ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕೊಡಗು ವಿಶ್ವವಿದ್ಯಾಲಯದ ಬಿ.ಎಡ್ ಪದವಿ ಮತ್ತು ಸ್ನಾತಕ ಪದವಿಗಳ ಫಲಿತಾಂಶ ಪ್ರಕಟ

ಕುಶಾಲನಗರ: ಕುಶಾಲನಗರ: ಕೊಡಗು ವಿಶ್ವವಿದ್ಯಾಲಯದ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್ ಬಿ.ಎಡ್ ಪದವಿ ಮತ್ತು ಸ್ನಾತಕ ಪದವಿ ಪರೀಕ್ಷಾ ಫಲಿತಾಂಶವನ್ನು ಪರೀಕ್ಷಾ ಫಲಿತಾಂಶವನ್ನು ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಅವರು ಆನ್ಲೈನ್ ತಂತ್ರಾಂಶದಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಧಿಕೃತವಾಗಿ ಪ್ರಕಟಿಸಿದರು.

ಕೊಡಗು ವಿಶ್ವವಿದ್ಯಾಲಯದ ಘಟಕ ಮತ್ತು ಸಂಯೋಜಿತ ಮಹಾವಿದ್ಯಾಲಯಗಳ 2025–26ನೇ ಶೈಕ್ಷಣಿಕ ಸಾಲಿನ ಬಿಕಾಂ, ಬಿಬಿಎ ಮತ್ತು ಬಿಎಸ್ಸಿ ಪದವಿಗಳ ಪ್ರಥಮ/ತೃತೀಯ/ಪಂಚಮ ಸೆಮಿಸ್ಟರ್‌ನ (ಆವರ್ತನ ಮತ್ತು ಪುನರಾವರ್ತನ) ಪರೀಕ್ಷೆಗಳು ಮುಗಿದ ನಾಲ್ಕು ದಿನಗಳಲ್ಲಿ ಫಲಿತಾಂಶವನ್ನು ಪ್ರಕಟಿಸುವ ಮೂಲಕ ಅತೀ ಕಡಿಮೆ ಅವಧಿಯಲ್ಲಿ ಪರೀಕ್ಷೆಗಳನ್ನು ನಡೆಸಿ ಫಲಿತಾಂಶವನ್ನು ಪ್ರಕಟಿಸಿದ ಕೀರ್ತಿಗೆ ಕೊಡಗು ವಿಶ್ವವಿದ್ಯಾಲಯ ಭಾಜನವಾಗಿದೆ.

ರಾಜ್ಯ ಶಿಕ್ಷಣ ನೀತಿ –2024/ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅಡಿಯಲ್ಲಿ ನಡೆದ ಪ್ರಥಮ/ ತೃತೀಯ/ಪಂಚಮ ವರ್ಷದ ಸ್ನಾತಕ ಪದವಿ ಪರೀಕ್ಷಾ ಫಲಿತಾಂಶವನ್ನು ಅತೀ ಶೀಘ್ರವಾಗಿ ಪ್ರಕಟಿಸಿದೆ.

ಇದೇ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ ಕೊಡಗಿನ 22 ಕಾಲೇಜುಗಳ ಸುಮಾರು 6000 ವಿದ್ಯಾರ್ಥಿಗಳು ಹಾಜರಾಗಿದ್ದರು. ಹಾಗೆಯೇ ಫೆಬ್ರವರಿ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ ವೀರಾಜಪೇಟೆಯ ಸರ್ವೋದಯ ಬಿ.ಎಡ್ ಕಾಲೇಜು ಮತ್ತು ಪೊನ್ನಂಪೇಟೆಯ ಸಾಯಿ ಶಂಕರ್ ಕಾಲೇಜುಗಳ ಒಟ್ಟು 95 ವಿದ್ಯಾರ್ಥಿಗಳು ಹಾಜರಾಗಿದ್ದರು. ಬಿಎಡ್ ಪರೀಕ್ಷೆ ಮುಗಿದು ಎಂಟು ದಿನಗಳಲ್ಲಿ ಮತ್ತು ಮೌಲ್ಯಮಾಪನ ಪೂರ್ಣವಾಗಿ ಒಂದು ದಿನದಲ್ಲಿ ಅತೀ ಶೀಘ್ರವಾಗಿ ಪ್ರಕಟಿಸಿದ ಹಿರಿಮೆಗೆ ಕೊಡಗು ವಿಶ್ವವಿದ್ಯಾಲಯ ಪಾತ್ರವಾಗಿದೆ.

ಈ ಸಂದರ್ಭ ಕೊಡಗು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಆದ ಡಾ. ಸುರೇಶ್ ಎಂ., ಕೊಡಗು ವಿವಿ ಪರೀಕ್ಷಾಂಗದ ವಿಶೇಷಾಧಿಕಾರಿದ ಪ್ರೊ. ರವಿಶಂಕರ್ ಎಂ ಎನ್, ಸಿಬ್ಬಂದಿಗಳು ಮತ್ತು ಉಪನ್ಯಾಸಕರುಗಳು ಉಪಸ್ಥಿತರಿದ್ದರು.

ಪತ್ರಕರ್ತರ ನಡೆ ಹಾಡಿ ಕಡೆ | ಪೆನ್ನು ಬದಿಗಿಟ್ಟು ಸಂತ್ರಸ್ತರ ಮನೆಯಂಗಳದತ್ತ ಕೊಡಗು ಪತ್ರಕರ್ತರು

ದುಬಾರೆಯಲ್ಲಿ ಸಿಕ್ಕಿತು ಸಂಕಷ್ಟಗಳ ವರದಿ

ಮಡಿಕೇರಿ: ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲೊಂದಾದ ದುಬಾರೆ ಪ್ರಕೃತಿದತ್ತ ಸೌಂದರ್ಯದೊಂದಿಗೆ ಎಲ್ಲರನ್ನೂ ತನ್ನತ್ತ ಸೆಳೆಯುತ್ತದೆ. ಸಾಕಾನೆ ಶಿಬಿರವನ್ನು ಕಂಡು ಜನ ಬೆರಗಾಗುತ್ತಾರೆ. ಕಾವೇರಿ ನೀರಿಗೆ ಮನಸೋಲುತ್ತಾರೆ. 'ರಾಯಾಫ್ಟಿಂಗ್'ನೊಂದಿಗೆ ಜಲಕ್ರೀಡೆಯ ಅನುಭವ ಹಿತ ನೀಡುತ್ತದೆ. ಆದರೆ, ನದಿ ದಾಟಿ, ಸಾಕಾನೆ ಶಿಬಿರ ಕಳೆದ ನಂತರ, ಅಲ್ಲಿಯೇ ತಲತಲಾಂತರಗಳಿಂದ ಬದುಕು ಕಟ್ಟಿಕೊಂಡಿರುವ ಬುಡಕಟ್ಟು ಜನರ ದಯನೀಯ ಸ್ಥಿತಿ ಯಾರಿಗೂ ಬೇಡವಾಗಿದೆ.

ಸರಕಾರ, ಅಧಿಕಾರಿಗಳು ಹಾಗೂ ಆಡಳಿತದ ದಿವ್ಯನಿರ್ಲಕ್ಷ್ಯಕ್ಕೆ ಒಳಗಾಗಿರುವ ದುಬಾರೆ ಹಾಡಿಯ ನಿವಾಸಿಗಳ ಸಮಸ್ಯೆಯನ್ನು ಸಂಬಂಧಪಟ್ಟವರ ಗಮನ ಸೆಳೆಯುವ ನಿಟ್ಟಿನಲ್ಲಿ ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಕೊಡಗು ಪ್ರೆಸ್‌ಕ್ಲಬ್ ಹಾಗೂ ಕುಶಾಲನಗರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ 'ಪತ್ರಕರ್ತರ ನಡೆ ಹಾಡಿ ಕಡೆ' ಕಾರ್ಯಕ್ರಮವನ್ನು ದುಬಾರೆಯಲ್ಲಿ ಆಯೋಜಿಸಲಾಗಿತ್ತು.

ಈ ನಿಟ್ಟಿನಲ್ಲಿ ಐಟಿಡಿಪಿ ಅಧಿಕಾರಿ ಹೊನ್ನೇಗೌಡ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಸನ್ನ ಕುಮಾರ್, ಚೆಸ್ಕಾಂ ಕಾರ್ಯಪಾಲಕ ಅಭಿಯಂತರ ಎಸ್.ಎಸ್. ಸತೀಶ್ ಅವರುಗಳನ್ನು ಸ್ಥಳಕ್ಕೆ ಕರೆಸಿಕೊಂಡು ನಿವಾಸಿಗಳ ಸಮಸ್ಯೆಗಳನ್ನು ತಿಳಿಸುವ ಪ್ರಯತ್ನವನ್ನು ಮಾಡಲಾಯಿತು.

ಸಮರ್ಪಕವಾಗಿ ವಿದ್ಯುತ್ ಸಂಪರ್ಕವಿಲ್ಲ, ರಸ್ತೆ ಸಂಪೂರ್ಣ ದುಸ್ಥಿತಿಯಲ್ಲಿ ಕೂಡಿದೆ.



ಚಿಕಿತ್ಸೆಗೆ ಕರೆದೊಯ್ಯುವಾಗ ಮೃತಪಟ್ಟಿರುವ ಉದಾಹರಣೆಗಳು ಕೂಡಾ ಇವೆ. ಜೋಪಾಡಿಯಲ್ಲಿ ಶೋಚನೀಯವಾಗಿ ಹಲವು ನಿವಾಸಿಗಳು ಬದುಕುತ್ತಿದ್ದಾರೆ. ಕೆಲವು ಮನೆಗಳ ಮೇಲೆ ಮರ ಬಿದ್ದು ನಷ್ಟ ಉಂಟಾಗಿದೆ ಎಂದು ನಿವಾಸಿಗಳು ಗೋಳು ತೋಡಿಕೊಂಡರು.

ಸ್ಥಳೀಯ ನಿವಾಸಿ ನಾಗು ಮಾತನಾಡಿ, ಇಲ್ಲಿನ ನಿವಾಸಿಗಳಿಗೆ ಪಡಿತರ ಚೀಟಿ ಸೇರಿದಂತೆ ಅಗತ್ಯ ದಾಖಲೆಗಳಿಲ್ಲ. ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ನಮ್ಮ ಗೋಳು ಕೇಳುವವರು ಇಲ್ಲದಾಗಿದೆ. ಅಲ್ಲದೆ ಪಟ್ಟಣಕ್ಕೆ ತೆರಳಲು ಸುತ್ತಿ ಬಳಸಿ ತೆರಳಬೇಕಾದ ಹಿನ್ನೆಲೆ ದುಬಾರೆ ನದಿಗೆ ಅಡ್ಡಲಾಗಿ ತೂಗು ಸೇತುವೆ ನಿರ್ಮಾಣವಾಗಬೇಕೆಂದು ಒತ್ತಾಯಿಸಿದರು. ಹಾಡಿಯಲ್ಲಿರುವ ಅಂಗನವಾಡಿಯಲ್ಲಿ ಹಲವು ಸಮಯದಿಂದ ಶಿಕ್ಷಕಿಯರಿಲ್ಲದ ಪರಿಣಾಮ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ತಕ್ಷಣ ಶಿಕ್ಷಕರನ್ನು ನೇಮಿಸಬೇಕೆಂದು ಸ್ಥಳೀಯರು ಒಕ್ಕೊರಲ ಆಗ್ರಹ ವ್ಯಕ್ತಪಡಿಸಿದರು.

ಸ್ಥಳೀಯ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಲಿಜಬೆತ್ ಮಾತನಾಡಿ, ಅಂಗನವಾಡಿ ಮಕ್ಕಳಿಗೆ ಶಾಲೆಯಲ್ಲಿ ಬೋಧಿಸಲಾಗುತ್ತಿದೆ. ಶಿಕ್ಷಕರಿಲ್ಲದ ಪರಿಣಾಮ ಶಾಲಾ ಅಕ್ಷರ ದಾಸೋಹ ಸಿಬ್ಬಂದಿಯನ್ನು ಮಕ್ಕಳನ್ನು ನೋಡಿಕೊಳ್ಳಲು ನಿಯೋಜಿಸಲಾಗಿದೆ. ಶಿಕ್ಷಕರ ನೇಮಕಕ್ಕೆ ಸಂಬಂಧಪಟ್ಟವರು ಗಮನ ಹರಿಸುತ್ತಿಲ್ಲ. ಪ್ರಸಕ್ತ ಸಾಲಿನಲ್ಲಿ 17 ವಿದ್ಯಾರ್ಥಿಗಳು ದಾಖಲಾಗಿದ್ದು, 1 ರಿಂದ 5ನೇ ತರಗತಿಯ ತನಕ ಪಾಠ ಪ್ರವಚನ ನಡೆಯುತ್ತಿದೆ. ಶಾಲೆಗೆ ಸೂಕ್ತ ಭದ್ರತೆ ಇಲ್ಲದ ಕಾರಣ ಕಾಡುದನಗಳು ಆವರಣಕ್ಕೆ ಬರುತ್ತವೆ. ಸಗಣಿ ತೆಗೆಯುವ ಕೆಲಸವನ್ನು ಮಕ್ಕಳು ಹಾಗೂ ನಾವು ಮಾಡಬೇಕಾಗಿದೆ. ಸದ್ಯಕ್ಕೆ ತಂತಿ ಬೇಲಿ ಇದೆ. ಅದನ್ನು ಹಾರಿ ದನಗಳು ಬರುತ್ತಿವೆ. ಗ್ರಾ.ಪಂ. ಗಮನಕ್ಕೆ ತಂದರೂ ಅನುದಾನ ನೀಡುತ್ತಿಲ್ಲ. ಶಾಲೆಗೆ ದಾನಿಗಳು ಕಂಪ್ಯೂಟರ್ ನೀಡಿದ್ದಾರೆ. ಸೂಕ್ತ ವಿದ್ಯುತ್ ವ್ಯವಸ್ಥೆ ಇಲ್ಲದೆ ಇದನ್ನು ಉಪಯೋಗಿಸಲಾಗುತ್ತಿದೆ. ಇಲ್ಲಿನ ಮಕ್ಕಳಿಗೆ ಕಲಿಕೆಯ ಆಸಕ್ತಿಯಿದೆ. ಅಲ್ಲದೆ ಇಲ್ಲಿಯೇ ವಿದ್ಯಾವಂತರು ಇರುವ ಕಾರಣ ಅಂಗನವಾಡಿಗೆ ಶಿಕ್ಷಕರನ್ನು ಆದ್ಯತೆ ಮೇರೆಗೆ ಇಲ್ಲಿಂದಲೇ ನೇಮಿಸಬೇಕೆಂದರು.

> ಮನೆ ನಿರ್ಮಾಣಕ್ಕೆ ರೂ. 4.50 ಲಕ್ಷ ಹಣ ನೀಡಲು ಸ್ಥಳೀಯ ಪಂಚಾಯಿತಿಯಲ್ಲಿ ಅವಕಾಶವಿದ್ದು, ಆನ್‌ಲೈನ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡಿ ಯೋಜನೆಯ ಲಾಭ ಪಡೆದಕೊಳ್ಳಬಹುದಾಗಿದೆ. ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಲಿದ್ದು, ಅದನ್ನು ಬಳಸಿಕೊಂಡು ಮನೆ ನಿರ್ಮಿಸಬಹುದಾಗಿದೆ. ದುಬಾರೆ ಹಾಡಿಯಲ್ಲಿ ಭಾಗಶಃ ಸಾಕಾನೆ ಶಿಬಿರ, ಮೀಸಲು ಅರಣ್ಯವಿರುವ ಕಾರಣದಿಂದ ಕೆಲ ಗೊಂದಲಗಳಿವೆ. ಇಲ್ಲಿನ ನಿವಾಸಿಗಳು ಶಿಬಿರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆದ್ಯತೆ ಮೇರೆಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ತೂಗು ಸೇತುವೆ ನಿರ್ಮಾಣಕ್ಕೂ ಪ್ರಸ್ತಾವನೆ ಇದೆ
> ■ ಹೊನ್ನೇಗೌಡ, ಐಟಿಡಿಪಿ ಅಧಿಕಾರಿ

ಹಾಡಿಯಲ್ಲಿರುವ ಬಹುತೇಕ ಮನೆಗಳು ದುಸ್ಥಿತಿಯಲ್ಲಿವೆ. ಕುಟುಂಬ ದೊಡ್ಡದಾಗುತ್ತ ಹೋದಂತೆ ಸಣ್ಣ ಜೋಪಾಡಿಯಲ್ಲಿ ಬದುಕು ನಡೆಸಬೇಕಾದ ಅನಿವಾರ್ಯತೆ ತಲೆದೋರಿದೆ. ಸರಕಾರದ ಸೌಲಭ್ಯ ದೊರೆಯುತ್ತಿಲ್ಲ. ಹಲವು ಮನೆಗಳ ಗೋಡೆ ಬೀಳುವ ಭಯವಿದೆ. ಗೋಡೆ ಬಿದ್ದು ಒಬ್ಬ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ ಎಂದ ಸ್ಥಳೀಯರು, ಸೊಸೈಟಿಗೆ ಮಾಲ್ದಾರೆಗೆ ಹೋಗಬೇಕಾಗಿದ್ದು, ದುಬಾರೆ ಹಾಡಿಯಲ್ಲಿ ನ್ಯಾಯಬೆಲೆ ಅಂಗಡಿ ತೆರೆಯಬೇಕು. ರಸ್ತೆ ಸರಿಯಾಗಬೇಕು ಎಂದು ಒತ್ತಾಯಿಸಿದರು.

ಆದಿವಾಸಿ ಮುಖಂಡ, ಜಿ.ಪಂ. ಮಾಜಿ ಸದಸ್ಯ ಚಂದ್ರು ಮಾತನಾಡಿ, ಜೇನು ಕುರುಬ ಸಮುದಾಯವನ್ನು ಸರಕಾರ ಸಂಪೂರ್ಣವಾಗಿ ಕಡೆಗಣಿಸಿದೆ. ಯೋಗ್ಯ ಮನೆ ಇಲ್ಲ, ಯಾವುದೇ ಸೌಲಭ್ಯ ದೊರೆಯುತ್ತಿಲ್ಲ. ಎಲ್ಲರಿಗೂ ಮೂಲಭೂತ ಸೌಲಭ್ಯ ಸಿಗಬೇಕು. ನಮ್ಮ ಹಕ್ಕು ಪಡೆಯಲು ಭಿಕ್ಷೆ ಬೇಡುವಂತಾಗಿದೆ. ಶಾಲೆಗೂ ಮೂಲಭೂತ ಸೌಲಭ್ಯ ಕಲ್ಪಿಸಬೇಕು. ಅಧಿಕಾರಿಗಳಿಗೆ ದುಬಾರೆ ಹಾಡಿಯಿದೆ ಎಂಬುದೇ ತಿಳಿದಿಲ್ಲ. ದುಬಾರೆಯಲ್ಲಿ ಮುಂದೆ ಗ್ರಾಮ ಸಭೆ ನಡೆಸಬೇಕು ಎಂದು ಆಗ್ರಹಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಸನ್ನ ಕುಮಾರ್, ಚೆಸ್ಕಾಂ ಅಧಿಕಾರಿ ಸತೀಶ್, ಜಿ.ಪಂ. ಮಾಜಿ ಅಧ್ಯಕ್ಷ, ರಾಜ್ಯ ಪಶ್ಚಿಮಘಟ್ಟ ಕಾರ್ಯಪಡೆ ಮಾಜಿ ಅಧ್ಯಕ್ಷ ಶಾಂತೆಯಂಡ ರವಿಕುಶಾಲಪ್ಪ, ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಚರಣಿಯಂಡ ಅನು ಕಾರ್ಯಪ್ಪ, ಕೊಡಗು ಪ್ರೆಸ್ ಕ್ಲಬ್ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ, ಕುಶಾಲನಗರ ತಾಲೂಕು ಸಂಘದ ಅಧ್ಯಕ್ಷ ಎಂ.ಎನ್. ಚಂದ್ರಮೋಹನ್, ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಜೆ. ರಾಕೇಶ್, ಖಜಾಂಚಿ ಸುನಿಲ್ ಪೊನ್ನೇಟಿ ಮತ್ತಿತರರಿದ್ದರು.

ಉರುವಾಲು ವನಶಾಸ್ತಾರ ಮತ್ತು ಶ್ರೀ ವೀರಭದ್ರ ದೇವಸ್ಥಾನ ಜೀರ್ಣೋದ್ಧಾರ

ಇಂದಿನಿಂದ ಬ್ರಹ್ಮಕಲಶೋತ್ಸವ ಸಂಭ್ರಮ

ಬೆಳ್ತಂಗಡಿ: ಅತ್ಯಂತಪುರಾತನಇತಿಹಾಸವಿರುವ ಇಳಂತಿಲ ಸಮೀಪದ ಉರುವಾಲು ಗ್ರಾಮದ ವನಶಾಸ್ತಾರ ಮತ್ತು ಶ್ರೀ ವೀರಭದ್ರ ದೇವಸ್ಥಾನ ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವ ಫೆ.20ರಿಂದ 22ರ ವರೆಗೆ ನಡೆಯಲಿದೆ ಎಂದು ಶಾಸಕ ಹರೀಶ್ ಪೂಂಜ ಹೇಳಿದರು. ಅವರು ಫೆ.17 ರಂದು ದೇವಸ್ಥಾನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಡಾ. ಡಿ.ವೀರೇಂದ್ರ ಹೆಗ್ಗಡೆಯವರ ಆಶೀರ್ವಾದಗಳೊಂದಿಗೆ ವೇಣೂರು ವೇದಮೂರ್ತಿ ಶ್ರೀ ಕೆ.ಲಕ್ಷ್ಮೀನಾರಾಯಣ ಕಾರಂತ ಇವರ ನೇತೃತ್ವದಲ್ಲಿ ಕಾರ್ಯ ಕ್ರಮಗಳು ನಡೆಯಲಿದ್ದು, ಫೆ.20ರಂದು ಬೆಳಿಗ್ಗೆ ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ಕಾರ್ಯಾಲಯ ಉದ್ಘಾಟನೆ ನಡೆಯಲಿದೆ. ಹಾಗೂ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ಸಂಜೆ 4.30 ರಿಂದ ಹೊರೆಕಾಣಿಕೆ ಮೆರವಣಿಗೆ ನಡೆಯಲಿದೆ.

ರಾತ್ರಿ 7 ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಅರಿಕೋಡಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿ ಹರೀಶ್ ಅರಿಕೋಡಿ ದೀಪ ಪ್ರಜ್ವಲನೆ ಮಾಡಲಿದ್ದಾರೆ. ತನ್ನೋಜಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಅತುಲ್ ಕುಮಾರ್ ಕೆ.ಎನ್. ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಕಾರ್ಮಿಕ ಮುಖಂಡರಾದ ಕಿರಣ್ ಚಂದ್ರ ಡಿ. ಪುಷ್ಪಗಿರಿ, ಅರುಣ್ ಕುಮಾರ್ ಪುತ್ತಿಲ ಮತ್ತಿತರರು ಭಾಗವಹಿಸುವರು



ರಾತ್ರಿ 9 ರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಫೆ.21 ರಂದು ಬೆಳಿಗ್ಗೆ 8 ರಿಂದ ವೈದಿಕ ಕಾರ್ಯಕ್ರಮಗಳು ನಡೆಯಲಿದೆ. ನಂತರ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ರಾತ್ರಿ 7 ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ.

ಉದ್ಯಮಿ ಶಶಿಧರ ಶೆಟ್ಟಿ ಬರೋಡ ದೀಪ ಪ್ರಜ್ವಲನೆ ಮಾಡಲಿದ್ದಾರೆ. ಶಾಸಕ ಹರೀಶ್ ಪೂಂಜ ಅಧ್ಯಕ್ಷತೆ ವಹಿಸಲಿದ್ದಾರೆ. ಎಂ ಎಲ್ ಸಿ ಕಿಶೋರ್ ಕುಮಾರ್ ಬೊಟ್ಯಾಡಿ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಸಹಿತ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ.

ಫೆ.22 ರಂದು ಬೆಳಿಗ್ಗೆ 8 ರಿಂದ ವೈದಿಕ ಕಾರ್ಯಕ್ರಮಗಳು ನಡೆಯಲಿದೆ. ನಂತರ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ರಾತ್ರಿ 7 ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಸಂಸದ ಬ್ರಿಜೇಶ್ ಚೌಟ ದೀಪ ಪ್ರಜ್ವಲನೆ ಮಾಡಲಿದ್ದಾರೆ. ಬ್ರಹ್ಮಕಲಶೋತ್ಸವಸಮಿತಿಯ ಅಧ್ಯಕ್ಷಯೋಗೀಶ್ ಪೂಜಾರಿ ಕಡ್ತಿಲ ಅಧ್ಯಕ್ಷತೆ ವಹಿಸಲಿದ್ದಾರೆ. ಎಂ ಎಲ್ ಸಿ ಪ್ರತಾಪಸಿಂಹ ನಾಯಕ್, ಬೆಸ್ಟ್ ಫೌಂಡೇಶನ್ ಅಧ್ಯಕ್ಷ ರಕ್ಷಿತ್ ಶಿವರಾಂ ಹಾಗೂ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ.

ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಯೋಗೀಶ್ ಕುಮಾರ್ ಕಡ್ತಿಲ, ಕಾರ್ಯಾಧ್ಯಕ್ಷ ಸುನಿಲ್ ಅಣವು, ಟ್ರಸ್ಟ್ ಸಮಿತಿಯ ಅಧ್ಯಕ್ಷ ಕೊರಗಪ್ಪ ಪೂಜಾರಿ ಕಾರಿಂಜ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷದಾಸಪ್ಪಗೌಡ, ಜೀರ್ಣೋದ್ಧಾರ ಸಮಿತಿಯ ಕಾರ್ಯಾಧ್ಯಕ್ಷ ವಿಜಯ್ ಕುಮಾರ್ ಕಲ್ಲಳಿಕೆ, ಹೊರೆಕಾಣಿಕೆ ಸಮಿತಿಯ ಸಂಚಾಲಕ ಪ್ರಭಾಕರ ಪೊಸಂದೋಡಿ ಉಪಸ್ಥಿತರಿದ್ದರು.

ಏಕಾದಶ ಯೋಗ ಶಿವನಮಸ್ಕಾರ



ಮಂಗಳೂರು: ಎಸ್‌ಪಿವೈಎಸ್‌ಎಸ್ ಕರ್ನಾಟಕ ವತಿಯಿಂದ ಪೊಳಲಿ ಶ್ರೀ ಅಖಿಲೇಶ್ವರ ದೇವಸ್ಥಾನದ ಪ್ರಾಂಗಣ ದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಭಾನುವಾರ ಇಡೀ ದಿನ ರಾತ್ರಿ ಶಿವಜಾಗರಣೆ ಮತ್ತು ಸೋಮವಾರ ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಸಾಮೂಹಿಕ ಏಕಾದಶ ಯೋಗ ಶಿವನಮಸ್ಕಾರ ಕಾರ್ಯಕ್ರಮ ನಡೆಯಿತು.

ದೇವಸ್ಥಾನದ ಪ್ರಧಾನ ಅರ್ಚಕರಾದ ವಾಸುದೇವ ಮಯ್ಯ, ಸುಬ್ರಾಯ ಕಾರಂತ್, ವೆಂಕಟೇಶ್ ನಾವಡ, ಜಿಲ್ಲಾ ಸಹ ಸಂಚಾಲಕಿ ಅನಿತಾ ಪ್ರಸನ್ನ, ನಗರ ಸಂಚಾಲಕ ಜನಾರ್ದನ ಪೆರಾರ ಉದ್ಘಾಟಿಸಿದರು.

ಶಿವಜಾಗರಣೆಯ ಮಹತ್ವದ ಕುರಿತು ಜನಾರ್ದನ್ ತಿಳಿಸಿದರು. ಮೃತ್ಯುಂಜಯ ಜಪದ ಮಹತ್ವ ಹಾಗೂ 108 ಬಾರಿ ಪಠಣೆಯನ್ನು ನಿಶಾ ಪ್ರೇಮನಾಥ್ ಪೊಳಲಿ, 1008 ಶಿವಪಂಚಾಕ್ಷರಿ ಜಪವನ್ನು ರಾಜೇಶ್ವರೀ ಪೊಳಲಿ, ಶಿವಾಷ್ಟೋತ್ತರ ಶತನಾಮಾನಿಯ ಮಹತ್ವ ಮತ್ತು ಪಠಣೆ ಶಶಿಕಲಾ ಕುಕ್ಕಿಪಾಡಿ ನಡೆಸಿಕೊಟ್ಟರು. ಭಜನೆಯ ಮಹತ್ವವನ್ನು ಭಾರತಿ ನಾಗೇಶ್, ಶರ್ಮಿಳಾ ಪೊಳಲಿ ತಿಳಿಸಿಕೊಟ್ಟರು. ಅಗ್ನಿ ಹೋತ್ರದಿಂದ ಪ್ರಾರಂಭವಾಗಿ ಯೋಗಭ್ಯಾಸ, ಗಣಪತಿ ನಮಸ್ಕಾರವನ್ನು ಯೋಗ ಶಿಕ್ಷಕರಾದ ಕೇಶವ್, ನಯನಾ ಬೆಂಜನ ಪದವು, ದೇವದಾಸ್ ನಡೆಸಿಕೊಟ್ಟರು. ಸಾಮೂಹಿಕ ಏಕಾದಶ ಯೋಗ ಶಿವನಮಸ್ಕಾರವನ್ನು ಪೊಳಲಿ ನಗರದ ಎಲ್ಲಾ ಶಾಖೆಗಳ ಯೋಗಬಂಧುಗಳ ಸಮಾಗಮದಲ್ಲಿ ಶಿಕ್ಷಕರಾದ ಲೋಕೇಶ್ ಪೊಳಲಿ, ಅಕ್ಷಿತ್ ನಾರಳ, ಕವಿತಾ ಅಶ್ವಥಪುರ, ಕೃಷ್ಣ ಕೈಕಂಬ ಮತ್ತು ಯೋಗ ಶಿಕ್ಷಕರ ಪ್ರಾತ್ಯಕ್ಷಿಕೆಯೊಂದಿಗೆ ನಗರದ ಶಿಕ್ಷಣ ಪ್ರಮುಖ ಕುಮಾರ್ ಕೈಕಂಬ ಅವರ ಮಾರ್ಗದರ್ಶನದಲ್ಲಿ ನೆರವೇರಿಸಲಾಯಿತು.

ಶಿವನಮಸ್ಕಾರ ಮತ್ತು ಕ್ಷೇತ್ರದ ಮಹತ್ವದ ಬಗ್ಗೆ ಯೋಗ ಶಿಕ್ಷಕ ಪ್ರಶಾಂತ್ ಕುಕ್ಕಟ್ಟೆ ತಿಳಿಸಿದರು. ಭವಿನ್ ಮಟ್ಟಿ ಕಾರ್ಯಕ್ರಮ ನಿರೂಪಿಸಿದರು, ಅನ್ನಪೂರ್ಣೇಶ್ವರಿ ಮಂತ್ರವನ್ನು ಸಂಧ್ಯಾ ಅಡ್ಡೂರು ನೆರವೇರಿಸಿದರು. ಕಾರ್ಯಕ್ರಮದ ಸಂಚಾಲಕ ಮೋಹನ್ ದಾಸ್ ಪೊಳಲಿ ವಂದಿಸಿದರು.

ಕನ್ನಡ ಶಾಲೆ ಉಳಿಸಿ ಬೆಳೆಸಿ ಅಭಿಯಾನ | ಕೆಮ್ಮಾರ ಶಾಲೆಗೆ ಉತ್ತಮ ಎಸ್‌ಡಿ.ಎಂಸಿ ಪ್ರಶಸ್ತಿ

ರಾಜ್ಯ ಸಮಾವೇಶದಲ್ಲಿ ಸಾಧಕರಿಗೆ ಗೌರವ ಪ್ರದಾನ

ಆಲಂಕಾರು: ಕನ್ನಡ ಶಾಲೆ ಉಳಿಸಿ ಬೆಳೆಸಿ ಅಭಿಯಾನದ ವತಿಯಿಂದ ಕೊಡ ಮಾಡುವ ಉತ್ತಮ ಎಸ್‌ಡಿಎಂಸಿ ರಾಜ್ಯ ಪ್ರಶಸ್ತಿಯನ್ನು ಕೆಮ್ಮಾರ ಸರಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಪಡೆದುಕೊಂಡಿದೆ.

ಮೂರು ವರ್ಷಗಳಿಂದ ಕೆಮ್ಮಾರ ಶಾಲೆಯ ಅಧ್ಯಕ್ಷರಾಗಿ ಮರು ಆಯ್ಕೆಯಾದ ಅಝೀಝ್ ಬಿ.ಕೆ. ಮತ್ತು ಶಾಲಾಭಿವೃದ್ಧಿ ಸಮಿತಿಯ ಸದಸ್ಯರನ್ನೊಳ ಗೊಂಡ ತಂಡವು ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು.

ಆರಂಭದಿಂದಲೇ ಕಾರ್ಯ ಪ್ರವೃತ್ತರಾದ ಸದಸ್ಯರು ರೋಟರಿ ಕ್ಲಬ್ ಉಪ್ಪಿನಂಗಡಿ ವತಿಯಿಂದ ಶಾಲೆಯ ಗೋಡೆಗೆ ಬಣ್ಣ, ಮಾಜಿ ಶಾಸಕರ ವಿಶೇಷ ಅನುದಾನದ ಮೂಲಕ ಶಾಲೆಗೆ ಪ್ರೊಜೆಕ್ಟರ್ ಮತ್ತು ಶುದ್ಧ ಕುಡಿಯುವ



ನೀರಿನ ಘಟಕ ಮತ್ತು ಮಳೆಹಾನಿ ದುರಸ್ತಿ ಅನುದಾನದ ಮೂಲಕ ಸಭಾಂಗಣಕ್ಕೆ ಹೊಸ ಕಬ್ಬಿಣದ ಮಾಡು ನಿರ್ಮಾಣ, ಹಿರಿಯ ವಿದ್ಯಾರ್ಥಿಗಳ ವತಿಯಿಂದ ಕೈ ತೊಳೆಯುವ ಬೇಸಿನ್, ಬೆಂಚ್ ಡೆಸ್ಕ್, ಪ್ರತಿಭಾ ಕಾರಂಜಿ, ವಾರ್ಷಿಕೋತ್ಸವ, ಇತರ ಅಭಿವೃದ್ಧಿ ಕೆಲಸಗಳು, ದ್ವಾರಕ ಪ್ರತಿಷ್ಠಾನ ಸಂಸ್ಥೆ ಮೂಲಕ ಸುಸಜ್ಜಿತ ಶಾಲಾ ಆಟದ ಮೈದಾನ ನಿರ್ಮಾಣ, ಮುಖ್ಯ ಗುರು ಜಯಶ್ರೀ ಎಂ. ಮತ್ತು ಶಾಲಾಭಿವೃದ್ಧಿ ಸಮಿತಿ ಜಂಟಿಯಾಗಿ ಆಕರ್ಷಕ ಗೋಡೆ ಬರಹ, ಬಸ್ಸಿನ ಚಿತ್ರ, ಎಲ್‌ಕೆಜಿ ಪ್ರಾರಂಭ ಮತ್ತು ಶಿಕ್ಷಣ ಇಲಾಖೆ ಮತ್ತು ಗ್ರಾ.ಪಂ. ವತಿಯಿಂದ ಸುಸಜ್ಜಿತ ಶೌಚಾಲಯ ನಿರ್ಮಾಣ, ಕ್ಯಾಪ್ ಫೌಂಡೇಶನ್ ವತಿಯಿಂದ ಶಾಲೆಗೆ ಕಂಪ್ಯೂಟರ್ ಮತ್ತು ಕಲಿಕೆಗೆ ಬೇಕಾದ ಸಾಮಗ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಊರ ದಾನಿಗಳ ಮೂಲಕ ರಂಗ ಮಂದಿರ ನಿರ್ಮಾಣ, ಎಂ ಫ್ರೆಂಡ್ಸ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಮ್ಮ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಕಂಪ್ಯೂಟರ್ ಶಿಕ್ಷಣ ತರಬೇತಿ ಹೀಗೆ ದಾನಿಗಳ ಮೂಲಕ 10 ಹಲವು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಹಿರಿಯ ವಿದ್ಯಾರ್ಥಿಗಳು ಮತ್ತು ಸರ್ವ ವಿದ್ಯಾಭಿಮಾನಿಗಳನ್ನು ಸೇರಿಸಿಕೊಂಡು ನಮ್ಮ ಕೆಮ್ಮಾರ ಶಾಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಲ್ಲಿ ಸಫಲರಾದರು.

ಮಂಗಳೂರಿನ ಪುರಭವನದಲ್ಲಿ ನಡೆದ ಕನ್ನಡ ಶಾಲೆ ಉಳಿಸಿ ಬೆಳೆಸಿ ಅಭಿಯಾನದ ರಾಜ್ಯ ಸಮಾವೇಶದಲ್ಲಿ ಉತ್ತಮ ಎಸ್‌ಡಿಎಂಸಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಅಝೀಝ್ ಬಿ.ಕೆ., ಸದಸ್ಯರಾದ ಪದ್ಮನಾಭ ಶೆಟ್ಟಿ, ಹಿರಿಯ ವಿದ್ಯಾರ್ಥಿ ಸಂಘದ ಗೌರವ ಸಲಹೆಗಾರರಾದ ಅಡ್ವಕೇಟ್ ಕಬೀರ್ ಬಿ.ಸಿ. ರೋಡ್ ಪ್ರಶಸ್ತಿಯನ್ನು ಪಡೆದುಕೊಂಡರು.

ಮಂಗಳೂರಿನಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ 399ನೇ ಜಯಂತಿ ಆಚರಣೆ

ಅತ್ಯುತ್ತಮ ಹೋರಾಟಗಾರರಾಗಿದ್ದರು: ಟಿ.ಎಂ. ಶಹೀದ್

ಮಂಗಳೂರು: ಶಿವಾಜಿ ಮಹಾ ರಾಜರು ಅತ್ಯುತ್ತಮ ಹೋರಾಟಗಾರ. ಧೈರ್ಯ, ಶಿಸ್ತು ಮತ್ತು ಸೈನ್ಯದ ಬದ್ಧತೆಯಿಂದ ತಮ್ಮ ಜನರ ರಕ್ಷಣೆಗೆ ಅವರು ಸದಾ ಸದೃಢರಾಗಿದ್ದರು. ಅವರ ಹೋರಾಟ ಧರ್ಮ, ನ್ಯಾಯ ಮತ್ತು ಸರ್ವಜಾತ್ಯತೀತ ಶಾಂತಿಯ ಸಂಕೇತವಾಗಿತ್ತು ಎಂದು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್ ಹೇಳಿದರು.

ದ.ಕ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ್, ಆರ್ಯ ಮತ್ತು ಸಮಾಜ ಸಂಘಗಳ ಆಶ್ರಯದಲ್ಲಿ ನಗರದ ಪುರಭವನದಲ್ಲಿ ನಡೆದ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ಆಚರಣೆಯನ್ನು ಅವರು ಉದ್ಘಾಟಿಸಿ ಮಾತನಾಡಿದರು.



ಜನರ ರಕ್ಷಣೆ

ಉಪನ್ಯಾಸ ನೀಡಿದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಸನ್ಮತಿ ಕುಮಾರ್, ಶಿವಾಜಿ ಮಹಾರಾಜರು ಧೈರ್ಯ, ನೀತಿ ಮತ್ತು ನ್ಯಾಯದ ನಿಷ್ಠೆಯಿಂದ ತಮ್ಮ ರಾಜ್ಯವನ್ನು ಕಟ್ಟಿ, ಜನರ ರಕ್ಷಣೆಗೆ ಸದಾ ಸಮರ್ಪಿತರಾಗಿದ್ದರು ಎಂದರು.

ಯುವಜನರಿಗೆ ಮಾದರಿ

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಅಧ್ಯಕ್ಷೆ ಮಮತಾ ಡಿ. ಎಸ್. ಗಟ್ಟಿ ಮಾತನಾಡಿ, ಶಿವಾಜಿ ಮಹಾರಾಜರ ಜೀವನ ಚರಿತ್ರೆಯು ಯುವಜನರ ಬದುಕಿಗೆ ಮಾದರಿಯಾಗಿದೆ. ಸೈನ್ಯವಿಲ್ಲದೆ ಜಯ ಸಾಧ್ಯವಿಲ್ಲ, ಧೈರ್ಯವಿಲ್ಲದೆ ಗೌರವ ಸಿಗದು ಎಂಬಂತೆ ಹೋರಾಡಿದ ಶೂರ ಶಿವಾಜಿ ಮಹಾರಾಜರು ಸರ್ವಜಾತ್ಯತೀತ ಶಾಂತಿಯ ಸಂಕೇತ ಎಂದು ಹೇಳಿದರು.

ಕೆ.ಕೆ.ಎಂ.ಪಿ ರಾಜ್ಯ ಮಹಿಳಾ ಉಪಾಧ್ಯಕ್ಷೆ ಭಾಗ್ಯಲಕ್ಷ್ಮಿ ಸುಧಾಕರ್ ಸಿಂಧ್ಯಾ, ಜಿಲ್ಲಾ ಅಧ್ಯಕ್ಷ ಎ. ವಿ. ಸುರೇಶ್ ರಾವ್ ಮೋರೆ, ಮಹಿಳಾ ಅಧ್ಯಕ್ಷೆ ಸವಿತಾ ನಾಗೇಶ್ ಪಾಟೀಲ್ ಮೊದಲಾದವರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜೇಶ್ ಜಿ. ಸ್ವಾಗತಿಸಿದರು. ಬಬಿತಾ ನಿರೂಪಿಸಿದರು. ಗೋಪಾಲ್ ರಾವ್ ಲಾಡ್ ವಂದಿಸಿದರು.



ಬುಧವಾರ ಕೋಟದ ಪಂಚವರ್ಣ ಕಚೇರಿಯಲ್ಲಿ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಸಂಘದ ಸದಸ್ಯರೊರ್ವರ ಹುಟ್ಟುಹಬ್ಬದ ಅಂಗವಾಗಿ ಅಶಕ್ತರಿಗೆ ನೆರವು ಎಂಬ ಶೀರ್ಷಿಕೆಯಡಿ ಮೂಡುಗಿಳಿಯಾರಿನ ಆಶಾಕಾರ್ಯಕರ್ತೆ ಲಕ್ಷ್ಮಿ ಎಂಬವರಿಗೆ ನೆರವು ಹಾಗೂ ದಿನಸಿ ಪರಿಕರ ಹಸ್ತಾಂತರಿಸಲಾಯಿತು. ವಿವೇಕ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಕೆ.ಜಗದೀಶ ನಾವಡ, ಹುಟ್ಟುಹಬ್ಬ ಆಚರಿಸಿಕೊಂಡ ಶಶಿಧರ ತಿಂಗಳಾಯ, ಸತೀಶ್ ಹೆಚ್. ಕುಂದರ್, ಮನೋಹರ್ ಪೂಜಾರಿ, ಅಮೃತ್ ಜೋಗಿ, ರವೀಂದ್ರ ಕೋಟ, ಲಲಿತಾ ಪೂಜಾರಿ, ಕಲಾವತಿ ಅಶೋಕ್ ಉಪಸ್ಥಿತರಿದ್ದರು.

ಕಿರು ಸುದ್ದಿ

ಹುಲ್ಲು ತರಲು ಹೋದ ಮಹಿಳೆಗೆ ಹೃದಯಾಘಾತ

ಪುತ್ತೂರು: ತೋಟದಲ್ಲಿ ಹುಲ್ಲು ಕತ್ತರಿಸುತ್ತಿದ್ದ ವೇಳೆ ಹೃದಯಾಘಾತಕ್ಕೀಡಾಗಿ ದರ್ಬೆತ್ತಡ್ಕ ಸರಕಾರಿ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಶುಭಕರ ನಾಯಕ್ ಅವರ ಪತ್ನಿ ನವ್ಯ (45) ನಿಧನ ಹೊಂದಿದ ಘಟನೆ ಫೆ.18ರಂದು ಸಂಜೆ ನಡೆದಿದೆ.

ನವ್ಯ ಅವರು ಸಂಜೆ ವೇಳೆ ದರ್ಬೆತ್ತಡ್ಕ ಸರಕಾರಿ ಶಾಲಾ ಆವರಣದಲ್ಲಿರುವ ತೋಟಕ್ಕೆ ಹುಲ್ಲು ತರಲು ಬಂದಿದ್ದರು. ಹುಲ್ಲು ಕತ್ತರಿಸುತ್ತಿದ್ದ ವೇಳೆಯೇ ಹೃದಯಾಘಾತಕ್ಕೀಡಾಗಿದ್ದು, ತಕ್ಷಣವೇ ಅವರನ್ನು ಸ್ಥಳೀಯರ ಯುವಕರು ಪುತ್ತೂರು ಸರಕಾರಿ ಆಸ್ಪತ್ರೆಗೆ ಕರೆತಂದಿದ್ದರು. ಈ ವೇಳೆಗಾಗಲೇ ಅವರು ಮೃತಪಟ್ಟಿದ್ದರು ಎನ್ನಲಾಗಿದೆ.ಮೃತರು ಪತಿ ಶುಭಕರ ನಾಯಕ್ ಮತ್ತು ಮೂವರು ಪುತ್ರಿಯರನ್ನು ಆಗಲಿದ್ದಾರೆ. ನವ್ಯ ಅವರು ಎಂದಿನಂತೆ ಮನೆಯ ದನಗಳಿಗೆ ಹುಲ್ಲು ತರಲೆಂದು ದರ್ಬೆತ್ತಡ್ಕ ಶಾಲಾ ತೋಟಕ್ಕೆ ಬಂದಿದ್ದರು. ಸಂಜೆ ವೇಳೆ ಗಂಡ ಶುಭಕರ ನಾಯಕ್ ಅವರು ತನ್ನ ರಿಕ್ಷಾದಲ್ಲಿ ಪತ್ನಿಯನ್ನು ಶಾಲಾ ಬಳಿ ಇಳಿಸಿ ಬಾಡಿಗೆಗೆ ಹೋಗಿದ್ದರು. ಹುಲ್ಲಿಗಾಗಿ ಬಂದಿದ್ದ ಅಮ್ಮ ಬಹಳ ಹೊತ್ತು ಕಳೆದರೂ ಮನೆಗೆ ಬಂದಿಲ್ಲ ಎಂದು ಮನೆಯಲ್ಲಿದ್ದ ಮೂವರು ಹೆಣ್ಣು ಮಕ್ಕಳಲ್ಲಿ ಇಬ್ಬರು ಅಮ್ಮನನ್ನು ಹುಡುಕಿಕೊಂಡು ಶಾಲಾ ಬಳಿಗೆ ಬಂದಿದ್ದರು. ಈ ವೇಳೆ ಅಮ್ಮ ಎಲ್ಲೂ ಕಾಣಲಿಲ್ಲ ಎಂದು ತಿರುಗಿ ಮನೆ ಕಡೆ ತೆರಳಿದ್ದರು. ಮನೆಗೆ ಬಂದು ನೋಡಿದಾಗ ಅಲ್ಲಿಯೂ ಅಮ್ಮ ಕಾಣಲಿಲ್ಲವೆಂದು ಮತ್ತೆ ಶಾಲಾ ಬಳಿಗೆ ಬಂದಿದ್ದು ಶಾಲಾ ಅಂಗಳದ ಬಳಿ ಅಳುತ್ತಾ ನಿಂತಿದ್ದನ್ನು ಶಾಲಾ ಮೈದಾನದಲ್ಲಿ ಆಟವಾಡುತ್ತಿದ್ದ ಸ್ಥಳೀಯ ಯುವಕರು ನೋಡಿ ವಿಚಾರಿಸಿ ಯುವಕರು ಸೇರಿಕೊಂಡು ತೋಟದಲ್ಲಿ ಹುಡುಕಾಡಿದಾಗ ನವ್ಯ ಅವರು ಅಡಿಕೆ ಗಿಡದ ಗುಂಡಿಯಲ್ಲಿ ಬಿದ್ದಿರುವುದು ಕಂಡು ಬಂದಿತ್ತು. ತಕ್ಷಣವೇ ಶುಭಕರ ನಾಯಕ್ ಅವರಿಗೆ ವಿಷಯ ತಿಳಿಸಿದ ಯುವಕರು ನವ್ಯರನ್ನು ರಿಕ್ಷಾದಲ್ಲಿ ಪುತ್ತೂರು ಸರಕಾರಿ ಆಸ್ಪತ್ರೆಗೆ ಕರೆ ತಂದಿದ್ದರು. ಆದರೆ, ಈ ವೇಳೆಗಾಗಲೇ ಅವರು ಮೃತಪಟ್ಟಿದ್ದರು ಎನ್ನಲಾಗಿದೆ.

ಅಪ್ರಾಪ್ತ ಯುವತಿ ಗರ್ಭಿಣಿ : ಆರೋಪಿ ಬಂಧನ

ಸುಳ್ಯ: ಮನೆಯೊಂದಕ್ಕೆ ತೋಟದ ಕೆಲಸಕ್ಕೆ ಬಂದಿದ್ದ ಅಪ್ರಾಪ್ತ ಯುವತಿಯೋರ್ವಳು ಗರ್ಭಿಣಿಯಾಗಿದ್ದು ಯುವಕನೊಬ್ಬನನ್ನು ಬಂಧಿಸಲಾಗಿದೆ. ಜಾರ್ಖಂಡ್ ಮೂಲದ ಯುವಕ ಹಾಗೂ ಯುವತಿ ಐವರ್ನಾಡಿನ ಮನೆಯೊಂದಕ್ಕೆ ತೋಟದ ಕೆಲಸಕ್ಕೆ ಬಂದಿದ್ದು ಅಲ್ಲಿಯೇ ವಾಸವಾಗಿದ್ದರು. ಇತ್ತೀಚೆಗೆ ಯುವತಿಗೆ ಜ್ವರ ಬಂದ ಕಾರಣ ಅವಳು ಸುಳ್ಯದ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದಿದ್ದರು. ಅಲ್ಲಿ ವೈದ್ಯರು ಪರೀಕ್ಷಿಸಿದಾಗ ಯುವತಿ ಗರ್ಭವತಿಯೆಂದು ತಿಳಿದು ಬಂದಿದ್ದು ಈ ಕುರಿತು ಪೊಲೀಸರಿಗೆ ಮಾಹಿತಿ ನೀಡಲಾಯಿತು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿದ್ದು, ಯುವಕನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಲಯವು ಆತನಿಗೆ ನ್ಯಾಯಂಗ ಬಂಧನ ವಿಧಿಸಿದೆ.

ಡಾ. ಹರಿಕೃಷ್ಣ ಪುನರೂರು ಸಂತಾಪ

ಮಂಗಳೂರು: ಪ್ರತಿಷ್ಠಿತ ಶ್ರೀನಿವಾಸ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಸ್ಥಾಪಕ ಅಧ್ಯಕ್ಷ ಹಾಗೂ ಶ್ರೀನಿವಾಸ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಸಿಎ ಎ. ರಾಘವೇಂದ್ರ ರಾವ್ ಅವರ ನಿಧನಕ್ಕೆ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಸಂತಾಪ ವ್ಯಕ್ತಪಡಿಸಿದ್ದಾರೆ. ಅನೇಕ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಮಾರ್ಗದರ್ಶಕರಾಗಿದ್ದ ಅವರು ಆದರ್ಶಪ್ರಾಯರಾಗಿದ್ದರು ಎಂದಿದ್ದಾರೆ.

ಕೋಡಿಮಕ್ಕಿ ನಡೂರು: ವಾರ್ಷಿಕ ಗೆಂಡಸೇವೆ, ಡಕ್ಕೆಬಲಿ

ಉಡುಪಿ: ಶ್ರೀ ಚಿಕ್ಕಮ್ಮ ಹಾಗೂ ಸಪರಿವಾರ ದೈವಸ್ಥಾನ ಕೋಡಿಮಕ್ಕಿ ನಡೂರು ಇದರ ವಾರ್ಷಿಕ ಗೆಂಡಸೇವೆ ಮತ್ತು ಡಕ್ಕೆಬಲಿ, ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಫೆ. 20 ಹಾಗೂ 21ರಂದು ನಡೆಯಲಿದೆ. ಈ ಪ್ರಯುಕ್ತ 20ರ ರಾತ್ರಿ ಗೆಂಡ ಸೇವೆ, ಶನಿವಾರ ಬೆಳಿಗ್ಗೆ ಡಕ್ಕೆಬಲಿ, ತುಲಾಭಾರ ಸೇವೆ ನಡೆಯಲಿದೆ. ಫೆ. 20ರಂದು ರಾತ್ರಿ 7.30ರಿಂದ ಶ್ರೀ ಗೋಪಾಲಕೃಷ್ಣ ಆಂಜನೇಯ ಪುರುಷ ಮತ್ತು ಮಹಿಳಾ ಭಜನಾ ಮಂಡಳಿ ಮೇಲ್ಮಠ ಅಲೆಯ ನಡೂರು ಹಾಗೂ ಶ್ರೀ ವಿನಾಯಕ ಕಲಾ ಭಜನಾ ಮಂಡಳಿ ಪ್ರಗತಿ ನಗರ ನಡೂರು ಇವರಿಂದ ಭಜನಾ ಕಾರ್ಯಕ್ರಮ ನಡೆಯಲಿದೆ ಎಂದು ದೈವಸ್ಥಾನದ ಅಧ್ಯಕ್ಷ ಎನ್. ಶರತ್ ಕುಮಾರ್ ಶೆಟ್ಟಿ ನಡೂರು ತೆಂಕ್ಮನೆ ತಿಳಿಸಿದ್ದಾರೆ.

ನಿಧನ ಸುದ್ದಿ

ಶ್ರೀಧರ ಯಾನೆ ಸಂಕಪ್ಪ



ಕಾಸರಗೋಡು: ಕೇಳುಗುಡ್ಡೆ ಕುಚ್ಚಿಕ್ಕಾಡು ನಿವಾಸಿ ಶ್ರೀಧರ ಯಾನೆ ಸಂಕಪ್ಪ (62) ಬುಧವಾರ ನಿಧನ ಹೊಂದಿದರು. ಮೃತರು ತಂದೆ ಮೋನಪ್ಪ ಪೂಜಾರಿ, ಪತ್ನಿ ವೀಣಾ, ಮಕ್ಕಳಾದ ನಮ್ರತ, ನಿಕೇತ, ನಿಷೇತ, ಶಿಲ್ಪಾ, ಶಿಪ್ರಾ, ನಾಗಭೂಷಣ್ ಅವರನ್ನು ಆಗಲಿದ್ದಾರೆ.

ನಾರಾಯಣ ಪೂಜಾರಿ



ಉಪ್ಪಳ: ಬಾಯಾರು ಪೆರ್ವೋಡಿ ಕುದ್ರೆಡ್ಕ ನಿವಾಸಿ, ಹಿರಿಯ ವ್ಯಾಪಾರಿಯಾಗಿದ್ದ ನಾರಾಯಣ ಪೂಜಾರಿ (68) ಅಲ್ಪಕಾಲದ ಅಸೌಖ್ಯದಿಂದ ಮಂಗಳವಾರ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರು ಹಲವು ವರ್ಷಗಳಿಂದ ಮನೆ ಪರಿಸರದಲ್ಲಿ ವ್ಯಾಪಾರಿಯಾಗಿದ್ದರು. ಮೃತರು ಪತ್ನಿ ಇಂದಿರಾ, ಮಕ್ಕಳಾದ ಅಶೋಕ್ ಪೂಜಾರಿ, ಅಜಿತ್ ಪೂಜಾರಿ, ಅನಿಲ್ ಪೂಜಾರಿ ಅವರನ್ನು ಆಗಲಿದ್ದಾರೆ.

ಗಿಲ್ಬರ್ಟ್ ಲೂವಿಸ್ ಪಿಂಟೊ



ಶಿರ್ವ: ಬಂಟಕಲ್ಲು ಬಿ.ಸಿ.ರೋಡ್ ನಿವಾಸಿ ಗಿಲ್ಬರ್ಟ್ ಲೂವಿಸ್ ಪಿಂಟೊ (83) ಅಲ್ಪ ಕಾಲದ ಅಸೌಖ್ಯದಿಂದ ಬುಧವಾರ ಉಡುಪಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಮುಂಬಯಿ ಬಿಎಸ್‌ಟಿ ಬಸ್ ಚಾಲಕರಾಗಿ,ನಂತರ ಫೈಝರ್ ಕಂಪನಿಯಲ್ಲಿ ಉದ್ಯೋಗದಲ್ಲಿದ್ದು ವಯೋನಿವೃತ್ತಿಯ ನಂತರ ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದರು. ಇವರು ಪತ್ನಿ, ಪುತ್ರ, ಪುತ್ರಿ, ಮೊಮ್ಮಕ್ಕಳನ್ನು ಆಗಲಿದ್ದಾರೆ.

ಸಂಗೀತ ಭಾರತಿ ಫೌಂಡೇಶನ್ ಸಂಸ್ಥೆಯ ಆಶ್ರಯ
ಫೆ.22: ಸ್ತ್ರೀ ವಿನೂತನ ಶಾಸ್ತ್ರೀಯ ಸಂಗೀತ

ಮಂಗಳೂರು: ಮಂಗಳೂರಿನ ಸಂಗೀತ ಭಾರತಿ ಫೌಂಡೇಶನ್ ಸಂಸ್ಥೆಯ ಆಶ್ರಯದಲ್ಲಿ 'ಸ್ತ್ರೀ' ಎಂಬ ಪರಿಕಲ್ಪನೆಯಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಫೆ.22ರಂದು ಸಂಜೆ 5ರಿಂದ ನಗರದ ಉರ್ವ ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಂಗೀತ ಭಾರತಿ ಫೌಂಡೇಶನ್ ಕಾರ್ಯದರ್ಶಿ ಡಾ. ಉಷಾಪ್ರಭಾ ಎನ್. ನಾಯಕ್ ತಿಳಿಸಿದರು.

ಉತ್ಕೃಷ್ಟ ಮಟ್ಟದ ಶಾಸ್ತ್ರೀಯ ಗಾಯನ ಜುಗಲ್ ಬಂದಿ ಮತ್ತು ವಯೋಲಿನ್ ಟ್ರಿಯೋ ಕಾರ್ಯಕ್ರಮಗಳು ನಡೆಯಲಿದ್ದು, ಈ ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ. ಸಂಗೀತಪ್ರಿಯರಿಗೆ ಇದೊಂದು ಸಂಗೀತದ ರಸದೌತಣವಾಗಲಿದೆ. ಪೂರ್ವಾರ್ಧದಲ್ಲಿ ಯಲ್ಲಾಪುರದ ವಿಭಾ ಹೆಗಡೆ ಮತ್ತು ಬೆಂಗಳೂರಿನ ಶಿವಾನಿ ಮಿರಾಜ್‌ಕರ್ ಅವರಿಂದ ಶಾಸ್ತ್ರೀಯ ಗಾಯನ ಜುಗಲ್‌ಬಂದಿ ಕಾರ್ಯಕ್ರಮನಡೆಯಲಿದ್ದು, ಇದಕ್ಕೆಹಾರ್ಮೋನಿಯಂನಲ್ಲಿ ಮಂಗಳೂರಿನ ಮೇಧಾ ಜಿ. ಭಟ್ ಮತ್ತು ಭೋಪಾಲ್‌ನ ವಿಜೇತಾ ಹೆಗಡೆ ಅವರು ತಬ್ಲಾದಲ್ಲಿ ಸಾಥ್ ನೀಡಲಿದ್ದಾರೆ

- ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ.
- ಸಂಗೀತಪ್ರಿಯರಿಗೆ ಇದೊಂದು ಸಂಗೀತದ ರಸದೌತಣವಾಗಲಿದೆ.

ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉತ್ತಾರಾರ್ಧದಲ್ಲಿ ಮುಂಬೈನ ಡಾ.ಸಂಗೀತ ಶಂಕರ್, ರಾಗಿಣಿ ಶಂಕರ್ ಮತ್ತು ನಂದಿನಿ ಶಂಕರ್ ಅವರಿಂದ ವಯೋಲಿನ್ ಟ್ರಿಯೋ ಕಾರ್ಯಕ್ರಮ ನಡೆಯಲಿದೆ. ಅವರಿಗೆ ತಬ್ಲಾದಲ್ಲಿ ಮುಂಬೈನ ಅನುರಾಧ ಪಾಲ್ ಅವರು ಸಾಥ್ ನೀಡಲಿದ್ದಾರೆ. ಸ್ತ್ರೀ ಕಾರ್ಯಕ್ರಮವನ್ನು ನಗರದ ಸಂಗೀತ ಗುರುಗಳಾದ ಬಸ್ತಿ ಕವಿತಾ ಶೆಣೈ, ವಿಭಾ ನಾಯಕ್ ಹಾಗೂ ಶ್ರೀಲತಾ ಪ್ರಭು ಉದ್ಘಾಟಿಸಲಿದ್ದಾರೆ ಎಂದರು.

ಸಂಗೀತ ಭಾರತಿ ಫೌಂಡೇಶನ್‌ನ ಅಧ್ಯಕ್ಷ ಉಸ್ತಾದ್ ರಫೀಕ್ ಖಾನ್, ಟ್ರಸ್ಟಿಗಳಾದ ಮುರುಳೀಧರ್ ಜಿ. ಶೆಣೈ, ಡಾ. ರಮೇಶ್ ಕೆ.ಜಿ., ಸದಸ್ಯರಾದ ಉಜ್ವಲ್ ಪ್ರದೀಪ್, ಶ್ವೇತಾ ಸುವರ್ಣ ಉಪಸ್ಥಿತರಿದ್ದರು.

ಪುತ್ತೂರಿನ ವಿವೇಕಾನಂದ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿಂದ ವಿಶಿಷ್ಟ ಸಾಧನೆ
ಸಿವಿಲ್ ನ್ಯಾಯಾಧೀಶರಾಗಿ ನಾಲ್ವರು ಆಯ್ಕೆ

ಪುತ್ತೂರು: ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ 2025ನೇ ಸಾಲಿನ ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾದ ಒಟ್ಟು 83 ಸಾಧಕರಲ್ಲಿ ವಿವೇಕಾನಂದ ಕಾನೂನು ಕಾಲೇಜಿನ 4 ಹಿರಿಯ ವಿದ್ಯಾರ್ಥಿಗಳು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ನೆಹರುನಗರದಲ್ಲಿರುವ ವಿವೇಕಾನಂದ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಾಧನೆಯ ಕಿರೀಟಕ್ಕೆ ಇನ್ನೊಂದು ಗರಿ ಸೇರ್ಪಡೆಯಾಗಿದೆಯಲ್ಲದೆ ಕಾನೂನು ಕಾಲೇಜಿಗೆ ಮೆರುಗು ತಂದಿದ್ದಾರೆ.

ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಪ್ರಾಥಮಿಕ ಪರೀಕ್ಷೆ ನಡೆದು ಡಿಸೆಂಬರ್ ತಿಂಗಳಿನಲ್ಲಿ ಮುಖ್ಯ ಪರೀಕ್ಷೆ ಹಾಗೂ ಜನವರಿ ತಿಂಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನಡೆದಿದ್ದ ನೇರ ಸಂದರ್ಶನದ ಮೂರು ಹಂತದ ಕಠಿಣ ಪರೀಕ್ಷೆಗಳನ್ನು ಪೂರೈಸಿರುವ ವಿವೇಕಾನಂದ ಕಾನೂನು ಕಾಲೇಜಿನ 2013-16 ಬ್ಯಾಚ್‌ನ 3 ವರ್ಷದ ಎಲ್.ಎಲ್.ಬಿ. ಪದವಿ ಪಡೆದ ದೀಪಿಕಾ ಎಸ್., 2013-18 ಬ್ಯಾಚ್‌ನಲ್ಲಿ 5 ವರ್ಷದ ಬಿ.ಎ.ಎಲ್.ಎಲ್.ಬಿ. ಪದವಿ ಪಡೆದ ಮನೋಜ್ ಕುಮಾರ್ ಯು., 2016-19ನೇ ಬ್ಯಾಚ್‌ನಲ್ಲಿ 3 ವರ್ಷದ ಎಲ್.ಎಲ್.ಬಿ. ಪದವಿ ಪಡೆದಿದ್ದ ಧನ್ಯ ಎಂ.ಕೆ. ಹಾಗೂ 2019-24ನೇ ಬ್ಯಾಚ್‌ನಲ್ಲಿ 5 ವರ್ಷದ ಬಿ.ಎ.ಎಲ್.ಎಲ್.ಬಿ. ವ್ಯಾಸಂಗ ಮಾಡಿದ ಮಂಜುನಾಥ್ ಶಿವಲಿಂಗಪ್ಪ ಜಿ. ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾಗುವ ಮೂಲಕ ವಿವೇಕಾನಂದ ಕಾನೂನು ಕಾಲೇಜಿನ ಕೀರ್ತಿ ಪತಾಕೆಯನ್ನು ಇನ್ನಷ್ಟು ಎತ್ತರಕ್ಕೆ ಏರಿಸಿದ್ದಾರೆ. ಇದರೊಂದಿಗೆ ಒಟ್ಟು 26 ಹಿರಿಯ ವಿದ್ಯಾರ್ಥಿಗಳು ವಿವಿಧ ಹಂತದ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರಾಗಿ ಆಯ್ಕೆಯಾದ ಖ್ಯಾತಿಯನ್ನು ವಿವೇಕಾನಂದ ಕಾನೂನು ಕಾಲೇಜ್ ಹೊಂದಿದೆ.

ಸಾಧಕ ವಿದ್ಯಾರ್ಥಿಗಳ ಪರಿಚಯ

ದೀಪಿಕಾ ಎಸ್.



ಬಡ ಕೃಷಿಕರ ಮನೆಯಲ್ಲಿ ಹುಟ್ಟಿ ಬೆಳೆದ ಪುತ್ತೂರಿನ ಯುವತಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 4ನೇ ರಾಂಕ್ ಪಡೆದು ನ್ಯಾಯಾಧೀಶೆಯಾಗಿ ಹೊರ ಹೊಮ್ಮುವ ಮೂಲಕ ಸಾಧನೆಯನ್ನು ಮೆರೆದಿದ್ದಾರೆ. ಪುತ್ತೂರು ತಾಲೂಕಿನ ಕೆಯೂರು ಗ್ರಾಮದ ಇಳಂತಾಜೆ ನಿವಾಸಿ ಶ್ರೀಧರ ಶೆಟ್ಟಿ-ಹರಿಣಾಕ್ಷಿ ದಂಪತಿಯ ಏಕೈಕ ಪುತ್ರಿ ದೀಪಿಕಾ ಎಸ್. ಶೆಟ್ಟಿ ಈ ಸಾಧನೆಯನ್ನು ಮಾಡಿದ ವಿವೇಕಾನಂದ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಯಾಗಿದ್ದಾರೆ. ಅವರು ಕೆಯ್ಯೂರು ಸರಕಾರಿ ಶಾಲೆಯಲ್ಲಿ ಕಲಿತು, ಕೆಯ್ಯೂರು ಸರಕಾರಿ ಪ.ಪೂ. ಕಾಲೇಜಿನಲ್ಲಿ ಪಿಯುಸಿ ಮುಗಿಸಿ ಬಳಿಕ ಪುತ್ತೂರು ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಮೂರು ವರ್ಷಗಳ ಎಲ್.ಎಲ್.ಬಿ. ಕಾನೂನು ಶಿಕ್ಷಣ ಪಡೆದರು. ಅವರು 8 ವರ್ಷಗಳಿಂದ ಬೆಂಗಳೂರಿನಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದರು.

ಮನೋಜ್ ಕುಮಾರ್



ಬಂಟ್ವಾಳ ತಾಲೂಕು ಕೇಪು ಗ್ರಾಮದ ಶಿವಪ್ಪ ಹಾಗೂ ಶಶಿಕಲಾ ದಂಪತಿಯ ಪುತ್ರ ಮನೋಜ್ ಕುಮಾರ್ ಯು. ಅವರು ಪಡಿಬಾಗಿಲು ಸ.ಹಿ.ಪ್ರಾ. ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು, ವಿಟ್ಲದ ವಿಠಲ ಪ.ಪೂ. ಕಾಲೇಜಿನಲ್ಲಿ ಪ್ರೌಢ ಮತ್ತು ಪ.ಪೂ. ಶಿಕ್ಷಣ ಹಾಗೂ ವಿವೇಕಾನಂದ ಕಾನೂನು ಕಾಲೇಜಿನಲ್ಲಿ 2013-18ನೇ ಸಾಲಿನಲ್ಲಿ 5 ವರ್ಷದ ಬಿ.ಎ. ಎಲ್.ಎಲ್.ಬಿ. ಕಾನೂನು ಪದವಿ ಪೂರ್ಣಗೊಳಿಸಿದ್ದರು. ನಂತರ 7 ವರ್ಷಗಳ ಕಾಲ ಪುತ್ತೂರಿನಲ್ಲಿ ವಿವೇಕಾನಂದ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿ, ವಕೀಲ ಕೆ. ನಾಗೇಶ್ ಶರ್ಮ ಅವರೊಂದಿಗೆ ಕಿರಿಯ ವಕೀಲರಾಗಿ ಸೇವೆ ಸಲ್ಲಿಸಿದ್ದರು.

ಧನ್ಯ ಎಂ.ಕೆ.




ಮಡಿಕೇರಿಯ ವಿರಾಜಪೇಟೆ ನಿವಾಸಿ ಕೃಷ್ಣ ಎಂ.ಕೆ. ಮತ್ತು ಕೆ.ಆರ್. ನಾಗವೇಣಿ ದಂಪತಿಯ ಪುತ್ರಿಯಾಗಿರುವ ಧನ್ಯ ಎಂ.ಕೆ. ತಮ್ಮ ಪಿಯುಸಿ ತನಕದ ಶಿಕ್ಷಣವನ್ನು ಮಡಿಕೇರಿಯ ಸೈಂಟ್ ಜೋಸೆಫ್‌ನಲ್ಲಿ ಪೂರೈಸಿದ್ದರು. 2016ರಿಂದ 2019ರವರೆಗೆ ಮೂರು ವರ್ಷದ ಎಲ್.ಎಲ್.ಬಿ. ಪದವೀಧರ ವಿದ್ಯಾರ್ಥಿಯಾಗಿ ಕಾನೂನು ಪದವಿ ಪಡೆದುಕೊಂಡು ನಂತರ ವಿರಾಜಪೇಟೆಯಲ್ಲಿ ವಕೀಲರ ಸಂಘದಲ್ಲಿ ತನ್ನ ವೃತ್ತಿಯನ್ನು ಆರಂಭಿಸಿದ ಅವರು, ಪ್ರಸ್ತುತ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಕಂಪನಿಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

ಮಂಜುನಾಥ್ ಶಿವಲಿಂಗಪ್ಪ



ಮೂಲತಃ ಬೆಳಗಾವಿಯವರಾಗಿರುವ ಶಿವಲಿಂಗಯ್ಯ ಮತ್ತು ನಿಂಗಮ್ಮ ದಂಪತಿ ಪುತ್ರ ಮಂಜುನಾಥ್ ಶಿವಲಿಂಗಯ್ಯ ಜಿ. ಅವರು ತಮ್ಮ 6ನೇ ತರಗತಿಯವರೆಗಿನ ಶಿಕ್ಷಣವನ್ನು ಬೆಳಗಾವಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದು, ನಂತರ ಪಡನೂರು ಪ್ರಾಥಮಿಕ ಶಾಲೆ, ಕೊಂಬೆಟ್ಟು ಸರಕಾರಿ ಪ.ಪೂ. ಕಾಲೇಜಿನಲ್ಲಿ ಮುಗಿಸಿ, ವಿವೇಕಾನಂದ ಕಾನೂನು ಕಾಲೇಜಿನಲ್ಲಿ 2019-24ರ ಸಾಲಿನಲ್ಲಿ 5 ವರ್ಷದ ಬಿ.ಎ. ಎಲ್.ಎಲ್.ಬಿ. ಕಾನೂನು ಪದವಿಯನ್ನು ಪೂರೈಸಿದ್ದಾರೆ. ಪ್ರಸ್ತುತ ಬೆಳ್ತಂಗಡಿ ತಾಲೂಕಿನ ಮೇಲಂತಬೆಟ್ಟುವಿನಲ್ಲಿ ವಾಸವಿರುವ ಅವರು, ಬೆಳ್ತಂಗಡಿಯ ವಕೀಲರಾದ ಯತೀಶ್ ಶೆಟ್ಟಿ ಅವರ ಆಫೀಸ್‌ರಿಯಲ್ಲಿ ಕಿರಿಯ ವಕೀಲರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಜೆಇಇ ರಾಷ್ಟ್ರೀಯ ಪರೀಕ್ಷೆ
ಅಂಬಿಕಾ ವಿದ್ಯಾಲಯದ ಅತ್ಯಧಿಕ ವಿದ್ಯಾರ್ಥಿಗಳಿಗೆ ಅರ್ಹತೆ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ನೆಲ್ಲಿಕಟ್ಟೆ ಹಾಗೂ ಬಪ್ಪಳಿಗೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯಗಳ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ರಾಷ್ಟ್ರೀಯ ಸ್ಪರ್ಧಾತ್ಮಕ ಪರೀಕ್ಷೆ ಜೆಇಇಯಲ್ಲಿ ಉತ್ತಮ ಸಾಧನೆಗೈದಿದ್ದು, 29 ವಿದ್ಯಾರ್ಥಿಗಳು 85 ಪರ್ಸಂಟೈಲ್‌ಗಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ತನ್ಮೂಲಕ ತಾಲೂಕಿನಲ್ಲೇ ಜೆಇಇ ಪರೀಕ್ಷೆಯಲ್ಲಿ ಅತ್ಯಧಿಕ ವಿದ್ಯಾರ್ಥಿಗಳು ಅರ್ಹತೆ ಹೊಂದಿದ ಸಂಸ್ಥೆಯಾಗಿ ಅಂಬಿಕಾ ಹೊರ ಹೊಮ್ಮಿದೆ.

ಪುತ್ತೂರು ನೈತಾಡಿಯ ಪ್ರಜ್ವಲ್ ಎಚ್. (97.7509), ಪುತ್ತೂರು ಆರ್ಯಾಪಿನ ಶ್ರೇಯಸ್ ಎಂ. (97.6626), ಪುತ್ತೂರು ಸಾಮೆತ್ತಡ್ಕದ ಚಿತ್ರಾ ಕೆ.ಪಿ. (97.2050), ಬೆಳ್ಳಾರೆ ಇಂದಿರಾನಗರದ ಶಾರ್ವರಿ ಆರ್.ಎಸ್. (97.1429), ಗದಗ ಜಿಲ್ಲೆಯ ಬೂದಿಹಾಳದ ಪ್ರತೀಕ ಶಿವರುದ್ರಯ್ಯ ಹಿರೇಮಠ (97.1402), ಬೆಂಗಳೂರು ಜಿಲ್ಲೆಯ ಆನೇಕಲ್‌ನ ಅಖಿಲೇಶ್ ಅನಂತ ಶರ್ಮ (96.1779), ಪುತ್ತೂರು ಬನ್ನೂರಿನ ಶ್ಲೇಷ್ ಅಲೆಕ್ಕಾಡಿ ಚಂದ್ರಶೇಖರ (95.2549), ಪುತ್ತೂರು ಕಬಕದ ಜಸ್ವಿತ್ (95.0051), ಪುತ್ತೂರು ಈಶ್ವರಮಂಗಲದ ಶರಜ್ ಪಿ. (93.9805), ಮೈಸೂರು ಎಚ್.ಡಿ. ಕೋಟೆಯ ಎಂ. ಶ್ರೀಶೈಲ್ (93.7891), ಪುತ್ತೂರು ಹಾರಾಡಿಯ ತ್ರಿಶೂಲ್ ಎನ್.ಡಿ. (93.5261), ಕಾಸರಗೋಡು ಜಿಲ್ಲೆಯ ನೆಟ್ಟಣಿಗೆಯ ಶ್ರೀಶ ಎಂ. (92.8946), ಕಡಬ ಬಲ್ಯದ ಯಶಸ್ವಿ ಸುರುಳಿ (92.8946), ಪುತ್ತೂರು ಭಕ್ತಕೋಡಿ ಪಿ.ಕೆ. ರಕ್ಷಿತ್ (92.7611), ಸುಳ್ಯ ಕೆಳಗಿನ ನಾವೂರಿನ ಆಯುಷ್ ರಾವ್ ಕೆ. (92.4775), ಸೋಮವಾರಪೇಟೆಯ ಬೇಕನಹಳ್ಳಿಯ ಶಿಲ್ಪಿತಾ ಬಿ.ಎಸ್. (92.4654), ಪುತ್ತೂರು ಸೇಡಿಯಾಪುವಿನ ಶ್ರೀಲಕ್ಷ್ಮಿ ಎಸ್.ಸಿ. (91.9385), ಪುತ್ತೂರು ಸಾಮೆತ್ತಡ್ಕದ ಚೈತ್ರಾ ಕೆ.ಪಿ. (91.7186), ಬಂಟ್ವಾಳ ಮಾಣಿಯ ರಚಿತ್ ವಿ. ಪೂಜಾರಿ (91.5721), ವಿಟ್ಲ ನಿಡ್ಯ ಚಂದಳಿಕೆಯ ಸ್ಕಂದ ಗಣಪತಿ (90.4183), ಪುತ್ತೂರಿನ ಹಾರಾಡಿಯ ಅಭಿನವ್ ವಸಿಷ್ಠ (90.3759), ಮಡಿಕೇರಿಯ ಸಿತಾಂಶು (90.1181), ಸುಳ್ಯ ಕೆಪಿಟಿಸಿಎಲ್ ಕ್ವಾರ್ಟರ್ಸ್‌ನ ಅದ್ವಿತ್ ಎ. (89.8235), ದರ್ಬೆಯ ಶ್ರೇಯಸ್ ಜೆ. ಶೆಟ್ಟಿ (89.6575), ಆರ್ಯಾಪುವಿನ ಹಿತಾ ಶೆಟ್ಟಿ (88.6844), ತೆಂಕಿಲದ ಸಾಕ್ಷಿ ಕೃಷ್ಣ (88.5594), ದರ್ಬೆಯ ಪ್ರಖ್ಯಾತ್‌ರಾಜ್ ರೈ (87.888), ಬಂಟ್ವಾಳ ಮಾಣಿಯ ಪ್ರಕೃತಿ ಶೆಟ್ಟಿ (87.7005), ಬಂಟ್ವಾಳದ ದೀಪಾಲಿ ಜೆ.ಕೆ. (85.5094) ಅವರು ಉತ್ತಮ ಸಾಧನೆಗೈದಿದ್ದಾರೆ.

ಬಪ್ಪಳಿಗೆ ವಿದ್ಯಾಲಯದ ಮತ್ತೆ 6 ಮಂದಿಗೆ ಅರ್ಹತೆ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರಾಯೋಜಿತ ಬಪ್ಪಳಿಗೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯದ ಹೆಚ್ಚುವರಿ ಆರುಮಂದಿ ವಿದ್ಯಾರ್ಥಿಗಳು ಇಂಜಿನಿಯರಿಂಗ್‌ಗೆ ಸಂಬಂಸಿದ ರಾಷ್ಟ್ರೀಯ ಸ್ಪರ್ಧಾತ್ಮಕ ಪರೀಕ್ಷೆ ಜೆಇಇಯಲ್ಲಿ ಅರ್ಹತೆ ಪಡೆದುಕೊಂಡಿದ್ದಾರೆ. ಇದರೊಂದಿಗೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯದಿಂದ ಒಟ್ಟು 35 ಮಂದಿ ಶೇ.85ಕ್ಕಿಂತಲೂ ಅಧಿಕ ಪರ್ಸಂಟೈಲ್ ಗಳಿಸುವ ಮೂಲಕ ತಾಲೂಕಿನಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳು ಜೆಇಇ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಶಿಕ್ಷಣ ಸಂಸ್ಥೆ ಎಂಬ ಕೀರ್ತಿಗೆ ಅಂಬಿಕಾ ಪಾತ್ರವಾಗಿದೆ.

ಕಾಸರಗೋಡು ಜಿಲ್ಲೆಯ ಏತ್ತಡ್ಕದ ತೇಜಸ್ವಿ ಕೆ. (89.53), ಕಡಬ ತಾಲೂಕಿನ ಎಸ್. ಚಿನ್ಮಯ್ (88.85), ಬೆಂಗಳೂರಿನ ಓಂಕಾರ್ ಶಾಸ್ತ್ರಿ (88.03), ಕಾಸರಗೋಡಿನ ಮೊವ್ವಾರಿನ ಜಯೇಶ್ (86.34), ಕಲ್ಬುರ್ಗಿಯ ಶ್ರೀಶಾಂತ್ (86.34), ಕಾಸರಗೋಡು ಜಿಲ್ಲೆಯ ಪೈವಳಿಕೆಯ ಅಭಿನವ್ ಐ.ಜಿ. (85.41) ಅವರು ಜೆಇಇ ಅರ್ಹತೆ ಪಡೆದುಕೊಂಡಿದ್ದಾರೆ.

ಸಮಾಜಕ್ಕೆ ಸ್ಪಂದಿಸಿದಾಗ ವ್ಯಕ್ತಿತ್ವಕ್ಕೆ ಗರಿತ್ವ ಲಭ್ಯ: ಶ್ರೀ ಚಂದ್ರಶೇಖರ ಸ್ವಾಮೀಜಿ



ಮುಲ್ಕಿ: ಜಗತ್ ಜೀವನದ ಮಹತ್ತಿನಲ್ಲಿ ವ್ಯಕ್ತಿ ಜೀವನ ಕ್ಷುಲ್ಲಕವಲ್ಲ ವೈಶಿಷ್ಟ ರಹಿತವಲ್ಲ.. ಸತ್ವ ಶೂನ್ಯವಲ್ಲ... ಅಲಕ್ಷಣಿಯವಲ್ಲ. ಈ ಭೂಮಿ ಸಾಫಲ್ಯ ವೈಫಲ್ಯದ ಸಾಹಸಕ್ಷೇತ್ರ. ಇದಕ್ಕೆ ಅನುರೂಪವಾಗಿ ತಮ್ಮ ವ್ಯಕ್ತಿತ್ವವನ್ನು ಸಮಾಜಕ್ಕೆ ಅರ್ಪಿಸಬೇಕು ಎಂದು ಬೆಂಗಳೂರಿನ ಆಧ್ಯಾತ್ಮಿಕ ವಿಶ್ವಗುರು, ಅಂತಾರಾಷ್ಟ್ರೀಯ ವಾಸ್ತು ತಜ್ಞ ಶ್ರೀ ಚಂದ್ರಶೇಖರ ಸ್ವಾಮೀಜಿ ಹೇಳಿದರು.

ಅವರು ಮುಲ್ಕಿ ಶ್ರೀ ಚಂದ್ರಶೇಖರ ಸ್ವಾಮೀಜಿ ಆಶ್ರಮದಲ್ಲಿ ಸಮಾಜ ಸೇವಕ, ಸಂಘಟಕ, ಕಾರ್ಯಕ್ರಮ ನಿರೂಪಕ ಕಿನ್ನಿಗೋಳಿ ರೋಟರಿ ಕ್ಲಬ್ಬಿನ ಅಧ್ಯಕ್ಷ ಸಾಯಿನಾಥ ಶೆಟ್ಟಿ, ಅವರನ್ನು ತಮ್ಮ ಆಶ್ರಮದ ವತಿಯಿಂದ ಗೌರವಿಸಿ ಮಾತನಾಡಿದರು.

ಶ್ರದ್ಧಾವಂತರು ಯಾವತ್ತೂ ಯಾವ ಕಾಲಕ್ಕೂ ಜ್ಞಾನಿಗಳು ಅನುಭವಿಗಳು. ಅವರು ಕರ್ಮದ ಫಲವನ್ನು ಬಯಸದೆ ಅನುಭವ ಮಾರ್ಗದಲ್ಲಿ ನಿರತರಾಗಿ ದೋಷ ದೂರವಾದ ಪದವಿಗೆ ಭಾಜನರಾಗುತ್ತಾರೆ. ಈ ಮಾತಿನಲ್ಲಿ ವಿಶ್ವಾಸವಿಟ್ಟು ಸಮಾಜದೊಂದಿಗೆ ಸ್ಪಂದಿಸಿ ಮುಂದುವರಿದಾಗ ವ್ಯಕ್ತಿತ್ವಕ್ಕೆ ಗರಿತ್ವ ಮೂಡುತ್ತದೆ ಎಂದರು. ಕಾರ್ಯ ಸಾಧಿಸುವವನಿಗೆ ಯಶಸ್ಸು ಖಂಡಿತ. ಯುವಜನತೆ ತನ್ನನ್ನು ತಾನು ಸಮಾಜಕ್ಕೆ ಅರ್ಪಣಾ ಮನೋಭಾವದಿಂದ ಅರ್ಪಿಸಿ ಮುಂದುವರಿದಾಗ ಬಾಳು ಹಸನಾಗುತ್ತದೆ ಎಂದು ಸ್ವಾಮೀಜಿ ನುಡಿದರು.

ಈ ಸಂದರ್ಭ ಆಶ್ರಮದ ನಿರ್ದೇಶಕರಾದ ರಜನಿ ಸಿ. ಭಟ್, ರಾಹುಲ್ ಚಂದ್ರಶೇಖರ್, ಮುಲ್ಕಿ ಬಿಲ್ಲವ ಸಂಘದ ಮಾಜೀ ಅಧ್ಯಕ್ಷ ಪ್ರಕಾಶ್ ಸುವರ್ಣ, ಭದ್ರತಾ ಸಿಬ್ಬಂದಿ ಪ್ರದೀಪ್ ಗೌಡ, ರಾಜು, ಕಿರಣ್ ಒಡೆಯರ್ ಮತ್ತಿತರರು ಉಪಸ್ಥಿತರಿದ್ದರು.

ಆಶ್ರಮದ ಸಂಚಾಲಕ ಪುನೀತ್ ಕೃಷ್ಣ ಕಾರ್ಯಕ್ರಮ ನಿರೂಪಿಸಿದರು. ಪ್ರಕಾಶ್ ಸುವರ್ಣ ಧನ್ಯವಾದ ಅರ್ಪಿಸಿದರು.

ಪುತ್ತೂರು ದರ್ಬೆಯ ಕ್ಯಾಂಪ್ಕೋ ಸಂಸ್ಥೆಗೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಭೇಟಿ | ಬೆಳೆಗಾರರ ಸಮಸ್ಯೆ ಕುರಿತು ಮಾತುಕತೆ
ಕೇಂದ್ರ ಸರಕಾರದ ಮಟ್ಟದಲ್ಲಿ ಸಮಸ್ಯೆ ನಿವಾರಣೆಗೆ ಯತ್ನ

ಪುತ್ತೂರು: ಮಂಗಳೂರು ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ ಅವರು ಮಂಗಳವಾರ ಪುತ್ತೂರಿನ ದರ್ಬೆಯಲ್ಲಿರುವ ಕ್ಯಾಂಪ್ಕೋ ಚಾಕಲೇಟ್ ಫ್ಯಾಕ್ಟರಿಗೆ ಭೇಟಿ ನೀಡಿ, ನೂತನವಾಗಿ ಆಯ್ಕೆಯಾದ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರು ಮತ್ತು ನಿರ್ದೇಶಕರೊಂದಿಗೆ ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಕುರಿತು ಮಾತುಕತೆ ನಡೆಸಿದರು.

ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಅವರು ಅಡಿಕೆ ತೋಟಗಳಲ್ಲಿ ಹೆಚ್ಚುತ್ತಿರುವ ಎಲೆ ಚುಕ್ಕಿ ರೋಗ, ಹಳದಿ ರೋಗ ಹಾಗೂ ಕಾಳುಮೆಣಸಿನ ಸೊರಗು ರೋಗಗಳಿಂದ ಅಡಿಕೆ ಮತ್ತು ಸಂಬಂಧಿತ ಬೆಳೆಗಳಲ್ಲಿ ಸುಮಾರು ಶೇ.40ರಷ್ಟು ನಷ್ಟವಾಗಿರುವುದನ್ನು ಸಂಸದರಿಗೆ ವಿವರಿಸಿದರು. ಈ ಪರಿಸ್ಥಿತಿಯ ನಡುವೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಡಿಕೆಯನ್ನು ಕ್ಯಾನ್ಸರ್‌ಕಾರಕ ಎಂದು ಸುಳ್ಳು ಆರೋಪ ಮಾಡುತ್ತಿರುವ ವಿಚಾರ ಬೆಳೆಗಾರರಲ್ಲಿ ಆತಂಕ



ಮೂಡಿಸಿದೆ ಎಂದು ಅವರು ತಿಳಿಸಿದರು.

ಅಲ್ಲದೆ, ಅಡಿಕೆ ಕ್ಯಾನ್ಸರ್ ಕಾರಕವಲ್ಲ ಎಂಬುದನ್ನು ವೈಜ್ಞಾನಿಕವಾಗಿ ಸಾಬೀತುಪಡಿಸಲು ಕ್ಯಾಂಪ್ಕೋ ಸಂಸ್ಥೆ ಕೈಗೊಂಡಿರುವ ವಿವಿಧ ಪ್ರಯತ್ನಗಳು, ಸಂಶೋಧನೆಗೆ ನೀಡುತ್ತಿರುವ ಪ್ರೋತ್ಸಾಹ ಮತ್ತು ಜಾಗೃತಿ ಕಾರ್ಯಕ್ರಮಗಳ ಕುರಿತು ಸತೀಶ್ಚಂದ್ರ ಸಂಸದರಿಗೆ ಮಾಹಿತಿ ನೀಡಿದರು.

ಈ ಸಂದರ್ಭ ಮಾತನಾಡಿದ ನಿರ್ದೇಶಕ ವಿಶ್ವನಾಥ್ ಹೆಗಡೆ ಕೂಜಳ್ಳಿ, ವಿಶ್ವ ಆರೋಗ್ಯ ಸಂಸ್ಥೆಯು ಅಡಿಕೆಯಲ್ಲಿ ಇರುವ ಅರೆಕೋಲಿನ್ 2ಬಿ ವಿಭಾಗದಲ್ಲಿ ಸೇರಿಸಿರುವುದಾಗಿ ತಿಳಿಸಿದರು. ಆದರೆ, ಸಂಪೂರ್ಣ ಅಡಿಕೆಯನ್ನು ಗ್ರೂಪ್ ಎ ವಿಭಾಗದಲ್ಲಿ ಸೇರಿಸಿರುವುದನ್ನು ಮರುಪರಿಶೀಲಿಸಿ, ಗ್ರೂಪ್ 2ಬಿ ವಿಭಾಗದಲ್ಲಿ ಮಾತ್ರ ಇರಿಸುವಂತೆ ಪರಿಗಣಿಸಬೇಕು ಎಂದು ಹೇಳಿದರು.

ಅಡಿಕೆಯಲ್ಲಿ ಪಾಲಿಫಿನಾಲ್, ಪಾಲಿಸ್ಯಾಡ್, ಫೈಬರ್, ಫ್ಯಾಟಿ ಆಸಿಡ್ ಮುಂತಾದ ಆರೋಗ್ಯಕರ ಮತ್ತು ಔಷಧೀಯ ಗುಣಗಳನ್ನು ಹೊಂದಿರುವ ಅನೇಕ ಬಯೋ-ಆಕ್ಟಿವ್ ಘಟಕಗಳಿವೆ. ಪಾರಂಪರಿಕವಾಗಿ ಅಡಿಕೆಯನ್ನು ಔಷಧೀಯವಾಗಿ ಬಳಸಿಕೊಂಡು ಬಂದಿರುವುದನ್ನೂ ಉಲ್ಲೇಖಿಸಿದ ಅವರು, ಅಡಿಕೆಯಲ್ಲಿರುವ ಇತರ ಔಷಧೀಯ ಗುಣಗಳ ಕುರಿತಾಗಿ ಆಧುನಿಕ ಸಂಶೋಧನೆ ಇನ್ನಷ್ಟು ಅಗತ್ಯವಿದೆ ಎಂದು ತಿಳಿಸಿದರು.

ಈ ಕುರಿತು ಶಿರಸಿಯ ಬಿಎಲ್‌ಆರ್‌ಎಫ್ ಸಂಶೋಧನಾ ಪ್ರಯೋಗ ಶಾಲೆಯ ತಜ್ಞರಾದ ವಿನಯ್ ಕುಮಾರ್ ಹೆಗಡೆ ಮತ್ತು ಡಾ. ಕೇಶವ್ ಎಚ್. ಕೊರ್ಸೆ ಅವರು ನಡೆಸುತ್ತಿರುವ ಸಂಶೋಧನಾ ಪ್ರಯತ್ನಗಳ ಕುರಿತು ಮಾಹಿತಿ ವಿನಿಮಯ ನಡೆಯಿತು. ಅಡಿಕೆ ಬೆಳೆಗಾರರ ಹಿತಾಸಕ್ತಿಯನ್ನು ಕಾಪಾಡಲು ವೈಜ್ಞಾನಿಕ ಆಧಾರಿತ ಅಧ್ಯಯನ ಮತ್ತು ಜಾಗೃತಿ ಅಗತ್ಯವಿದೆ ಎಂದು ಸಭೆಯಲ್ಲಿ ಒತ್ತಿ ಹೇಳಲಾಯಿತು. ಸಂಸದ ಬ್ರಿಜೇಶ್ ಚೌಟ ಅವರು ಅಡಿಕೆ ಬೆಳೆಗಾರರ ಸಮಸ್ಯೆಗಳಿಗೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಹಕರಿಸುವ ಭರವಸೆ ನೀಡಿದರು.

ಈ ಸಂದರ್ಭ ಸಂಸ್ಥೆಯ ಮಾಜಿ ಅಧ್ಯಕ್ಷ ಎಸ್. ಆರ್. ರಂಗಮೂರ್ತಿ, ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ, ಕ್ಯಾಂಪ್ಕೊ ಆಡಳಿತ ನಿರ್ದೇಶಕ ಡಾ. ಸತ್ಯನಾರಾಯಣ, ನಿರ್ದೇಶಕರಾದ ಪುರುಷೋತ್ತಮ ಭಟ್, ಮುರಳೀಕೃಷ್ಣಮಹೇಶ್ ಚೌಟ, ಸತೀಶ್ಚಂದ್ರ ಭಂಡಾರಿ, ಕೆ.ಎನ್. ವೆಂಕಟ್ರಮಣ ಭಟ್, ದಯಾನಂದ ಹೆಗ್ಡೆ ಮತ್ತಿತರರಿದ್ದರು.

ಇಂದಿನ ಪಂದ್ಯಗಳು

ಆಸ್ಟ್ರೇಲಿಯಾ VS ಒಮನ್
ಸಂಜೆ 7 (ಕೊಲಂಬೋ)

ಕಿರುಸುದ್ದಿ

ಬೆಂಗಳೂರು ಓಪನ್: ವೈಷ್ಣವಿ ಕ್ವಾರ್ಟರ್‌ಗೆ

• **ಬೆಂಗಳೂರು:** ಭಾರತದ ಭರವಸೆಯ ಆಟಗಾರ್ತಿ ವೈಷ್ಣವಿ ಅಡ್ಕರ್ ಇಲ್ಲಿ ನಡೆಯುತ್ತಿರುವ ಮಹಿಳೆಯರ ಬೆಂಗಳೂರು ಓಪನ್ ಪಂದ್ಯಾವಳಿಯ ಪಂದ್ಯದಲ್ಲಿ ಸ್ಮರಣೀಯ ಜಯ ಸಾಧಿಸಿ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ್ದಾರೆ. ಎಂಟನೇ ಸೀಡ್ ಆಗಿದ್ದ ಜಪಾನ್‌ನ ಮಾಯ್ ಹೊಂಟಾಮಾ ವಿರುದ್ಧ 2-6, 6-4, 7-6(8) ಅಂಕಗಳಿಂದ ರೋಚಕ ಮೂರು ಸೆಟ್‌ಗಳ ಹೋರಾಟದಲ್ಲಿ ಗೆಲುವು ದಾಖಲಿಸಿ ಬೆಂಗಳೂರಿನ ಗಮನ ಸೆಳೆದರು. ಮೊದಲ ಸೆಟ್‌ನಲ್ಲಿ ಹೋಂಟಾಮಾ ಆಕ್ರಮಣಕಾರಿ ಆಟ ಪ್ರದರ್ಶಿಸಿ ಅಡ್ಕರ್



ಅವರ ತಪ್ಪುಗಳನ್ನು ಸದುಪಯೋಗಪಡಿಸಿಕೊಂಡು 6-2ರಿಂದ ಮುನ್ನಡೆ ಪಡೆದರು. ಬೇಸ್‌ಲೈನ್‌ನಲ್ಲಿ ಸ್ಥಿರತೆ ಮತ್ತು ಆಳದ ಶಾಟ್‌ಗಳ ಮೂಲಕ ಅವರು ಪಂದ್ಯದ ನಿಯಂತ್ರಣ ಹಿಡಿದಿಟ್ಟುಕೊಂಡರು. ಎರಡನೇ ಸೆಟ್‌ನಲ್ಲಿ ಅಡ್ಕರ್ ತಮ್ಮ ಆಟದ ತೀವ್ರತೆಯನ್ನು ಹೆಚ್ಚಿಸಿ ನೆಟ್‌ಗೆ ಹತ್ತಿರವಾಗಿ ಆಕ್ರಮಣ ಆರಂಭಿಸಿದರು. ಎರಡನೇ ಗೇಮ್‌ನಲ್ಲೇ ಬ್ರೇಕ್ ಸಾಧಿಸಿ 3-0 ಮುನ್ನಡೆ ಪಡೆದರು. ಹೊಂಟಾಮಾ 3-2ಕ್ಕೆ ಅಂತರ ಕಡಿತ ಮಾಡಿದರೂ, ಅಡ್ಕರ್ ಶಕ್ತಿಶಾಲಿ ರಿಟರ್ನ್‌ಗಳ ಮೂಲಕ ಒತ್ತಡ ಹೆಚ್ಚಿಸಿ 6-4ರಿಂದ ಸೆಟ್ ಜಯಿಸಿದರು.

ನಿರ್ಣಾಯಕ ಸೆಟ್‌ನಲ್ಲಿ: ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಇಬ್ಬರೂ ಆಟಗಾರ್ತಿಯರು ಪರಸ್ಪರ ಬ್ರೇಕ್‌ಗಳನ್ನು ವಿನಿಮಯ ಮಾಡಿಕೊಂಡರು. 10ನೇ ಗೇಮ್‌ನಲ್ಲಿ ಅಡ್ಕರ್ ಗೆಲುವಿನ ಅಂಚಿನಲ್ಲಿದ್ದರೂ, ಹೋಂಟಾಮಾ ಮ್ಯಾಚ್ ಪಾಯಿಂಟ್ ಉಳಿಸಿಕೊಂಡು ಟೈಬ್ರೇಕ್‌ಗೆ ಕೊಂಡೊಯ್ದರು. ಟೈಬ್ರೇಕ್‌ನಲ್ಲಿ ಹೋಂಟಾಮಾ 5-2 ಮುನ್ನಡೆ ಸಾಧಿಸಿದರೂ, ಅಡ್ಕರ್ ಹಿಂಜರಿಯದೆ ಫೋರ್‌ಹ್ಯಾಂಡ್ ವಿನ್ನರ್‌ಗಳ ಮೂಲಕ ಮರುಪ್ರವೇಶಿಸಿದರು. ಮೂರು ಮ್ಯಾಚ್ ಪಾಯಿಂಟ್‌ಗಳನ್ನು ತಪ್ಪಿಸಿಕೊಂಡ ಬಳಿಕ 9-8 ಸಮಯದಲ್ಲಿ ಹೋಂಟಾಮಾ ಬ್ಯಾಕ್‌ಹ್ಯಾಂಡ್ ನೆಟ್‌ಗೆ ತಾಕಿದಾಗ ಅಡ್ಕರ್ ಸ್ಮರಣೀಯ ಜಯ ಸಾಧಿಸಿದರು.

ಎರಡನೇ ಟಿ20 ಗೆದ್ದ ಆಸೀಸ್ ಮಹಿಳೆಯರು

• **ಕ್ಯಾನ್ಬೆರಾ:** ಜಾರ್ಜಿಯಾ ವಾಲ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಆಸೀಸ್ ತಂಡದ ಸಾಂಘಿಕ ಬೌಲಿಂಗ್ ದಾಳಿಯ ನೆರವಿನಿಂದ ಆಸ್ಟ್ರೇಲಿಯಾ ಮಹಿಳೆಯರ ತಂಡವು ಇಲ್ಲಿ ನಡೆದ ಎರಡನೇ ಟಿ20 ಪಂದ್ಯವನ್ನು ಗೆದ್ದು, ಸರಣಿಯನ್ನು ಟೈ ಮಾಡಿಕೊಂಡಿದೆ. ಮೊದಲ ಪಂದ್ಯದಲ್ಲಿ ಭಾರತ ಭರ್ಜರಿ ಗೆಲುವು ಸಾಧಿಸಿದ ನಂತರ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ಪಡೆ ಚೇತರಿಸಿಕೊಂಡಿತು. ತಾಳ್ಮೆಯಿಂದ ಪಂದ್ಯ ಗೆದ್ದುಕೊಂಡಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ವಾಲ್ 88 ರನ್ ಗಳಿಸಿದರು. ಮೂನಿ 44 ರನ್‌ಗಳಿಸಿದರು. ಭಾರತ ಪರ ರೆಡ್ಡಿ 2 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಭಾರತ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 144 ರನ್ ಮಾತ್ರ ಗಳಿಸಿತು. ಕೌರ್ ಮತ್ತು ಮಂಧಾನ ಅಲ್ಪ ಪ್ರತಿರೋಧಿಸಿದವರಾದರು. ಆಸೀಸ್ ಪರ ಸೋಫಿ, ಅನಾಬೆಲ್ ಮತ್ತು ಗಾರ್ತ್ ತಲಾ 2 ವಿಕೆಟ್ ಪಡೆದುಕೊಂಡರೆ, ಗಾರ್ಡನರ್ 3 ವಿಕೆಟ್ ಪಡೆದರು.

ಪ್ಯಾರಾಲಿಂಪಿಕ್ಸ್‌ಗೆ ಉಕ್ರೇನ್ ಬಹಿಷ್ಕಾರ

• **ಹೊಸದಿಲ್ಲಿ:** ರಷ್ಯಾ, ಬೆಲರೂಸಿಯನ್ ಕ್ರೀಡಾಪಟುಗಳು ತಮ್ಮ ದೇಶದ ಧ್ವಜದ ಅಡಿಯಲ್ಲೇ ಆಡುವುದಕ್ಕೆ ಅಧಿಕೃತ ಅನುಮತಿ ಪಡೆದ ನಂತರ ಉಕ್ರೇನ್ ಅಧಿಕಾರಿಗಳು ಮಿಲಾನೋ ಕೋರ್ಟಿನಾದಲ್ಲಿ ನಡೆಯಲಿರುವ ಚಳಿಗಾಲದ ಪ್ಯಾರಾಲಿಂಪಿಕ್ಸ್ ಬಹಿಷ್ಕರಿಸುವುದಾಗಿ ಹೇಳಿದ್ದಾರೆ. ರಷ್ಯಾ ಮತ್ತು ಉಕ್ರೇನ್ ಯುದ್ಧದ ಬಿಸಿ ಕ್ರೀಡೆಗೂ ತಟ್ಟಿದಂತಾಗಿದೆ. ವಿವಿಧ ಕಾರಣಗಳಿಂದಾಗಿ ಈ ಹಿಂದೆ ರಷ್ಯಾ ಆಟಗಾರರಿಗೆ ತಮ್ಮ ಧ್ವಜದೊಂದಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವುದಕ್ಕೆ ಅನುಮತಿ ಕೊಟ್ಟಿರಲಿಲ್ಲ. ಆದರೆ ಮೇಲ್ಮನವಿ ಸಲ್ಲಿಸಿದ ನಂತರ ಅವಕಾಶ ದೊರೆತಿದೆ. ಈ ಬೆನ್ನಲ್ಲೇ ನಾವು ಕ್ರೀಡಾಕೂಟದಲ್ಲಿ ಭಾಗವಹಿಸುವುದಿಲ್ಲ ಎಂದು ಉಕ್ರೇನ್ ಕ್ರೀಡಾ ಮಂತ್ರಿ ತಿಳಿಸಿದ್ದಾರೆ. ಮಾರ್ಚ್ 6ರಿಂದ 15ರವರೆಗೆ ನಡೆಯಲಿರುವ ವಿಂಟರ್ ಪ್ಯಾರಾಲಿಂಪಿಕ್ಸ್‌ನಲ್ಲಿ ಉಕ್ರೇನ್ ಕ್ರೀಡಾಪಟುಗಳು ಭಾಗಿಯಾದರೂ ಸಮಾರೋಪ ಸಮಾರಂಭದಲ್ಲಿ ಉಕ್ರೇನ್‌ನ ಅಧಿಕಾರಿಗಳು ಭಾಗವಹಿಸುವುದಿಲ್ಲ.

ಉತ್ತರಾಖಂಡ ವಿರುದ್ಧದ ಪಂದ್ಯ | ಇನ್ನಿಂಗ್ಸ್ ಮುನ್ನಡೆಯಿಂದಾಗಿ ಫೈನಲ್‌ಗೆ ಪಡಿಕ್ಕಲ್ ಪಡೆ

ಪಂದ್ಯ ಡ್ರಾ: ರಣಜಿ ಫೈನಲ್‌ಗೆ ಕರ್ನಾಟಕ

• **ಲಖನೌ:** ಒಬ್ಬರ ಹಿಂದೊಬ್ಬರಂತೆ ದ್ವಿಶತಕ ಮತ್ತು ಶತಕಗಳ ಪ್ರಹಾರ ಮಾಡಿದ ಕರ್ನಾಟಕ ಬ್ಯಾಟಿಗರು ತಮ್ಮ ತಂಡವನ್ನು ಪ್ರತಿಷ್ಠಿತ ರಣಜಿ ಪಂದ್ಯಾವಳಿಯ ಫೈನಲ್‌ಗೆ ಲೀಲಾಜಾಲವಾಗಿ ಕೊಂಡೊಯ್ದರು.

ದಾಖಲೆಯ ಮೊತ್ತ ಗಳಿಸಿದ ಕರ್ನಾಟಕ ಪರಿಪೂರ್ಣ ಪಂದ್ಯ ಗೆಲ್ಲದಿದ್ದರೂ ಫೈನಲ್‌ಗೇರುವುದಕ್ಕೆ ಬೇಕಾದ ಮೊದಲ ಇನ್ನಿಂಗ್ಸ್ ಮುನ್ನಡೆ ಮೂರನೇ ದಿನವೇ ಸಾಧಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಉತ್ತರಾಖಂಡ ಬೌಲರ್‌ಗಳ ತಾಳ್ಮೆ ಪರೀಕ್ಷಿಸಿತು. ಜಮ್ಮು-ಕಾಶ್ಮೀರದೊಂದಿಗೆ ಫೈನಲ್ ಆಡುವುದಕ್ಕೆ ಅಡಿಪಾಯ ಹಾಕಿತು. ಪ್ರತಿಯೊಂದು ಪಂದ್ಯದಲ್ಲಿ ಪ್ರತಿಸ್ಪರ್ಧಿಗಳಿಗೆ ಪ್ರತ್ಯುತ್ತರ ನೀಡುತ್ತಾ ಬಂದ ಉತ್ತರಾಖಂಡ ಕರ್ನಾಟದೆದುರು ಉತ್ತರವಿಲ್ಲದೆ, ನಿಬ್ಬೆರಗಾಗಿ ನಿಂತಿತು. ಡ್ರಾ ಆದ ಪಂದ್ಯದಲ್ಲಿ ಪರಾಭವ ಕಂಡ ತಂಡವಾಗಿತು. ಫೈನಲ್ ಆಡುವ ಅವಕಾಶ ಕೈಚೆಲ್ಲಿತು.

ನಾಲ್ಕನೇ ದಿನವೇ ಫೈನಲ್ ಖಚಿತ ಪಡಿಸಿಕೊಂಡಿದ್ದ ಕರ್ನಾಟಕ ಐದನೇ ದಿನದ ಔಪಚಾರಿಕ ಆಟವನ್ನು ಮುಗಿಸಿಕೊಂಡಿತು. ಎರಡನೇ ಇನ್ನಿಂಗ್ಸ್‌ನಲ್ಲಿ 323 ರನ್ ಗಳಿಸಿದ ನಂತರ ಬರೋಬ್ಬರಿ 826 ರನ್‌ಗಳ ಪೇರಿಸಲಾಗದ ಗುರಿ ನೀಡಿತು. ಐದನೇ ದಿನ ಉತ್ತರಾಖಂಡ 260 ರನ್‌ಗಳಿಸುವಷ್ಟರಲ್ಲಿ ಮತ್ತೆ 6 ವಿಕೆಟ್‌ಗಳನ್ನು ಕಳೆದುಕೊಂಡಿತು. 566 ರನ್‌ಗಳ ಹಿನ್ನಡೆಯಲ್ಲಿದ್ದ ಉತ್ತರಾಖಂಡ ಬ್ಯಾಟಿಂಗ್ ಮಾಡುವ ಹೊತ್ತಿಗೆ ಸಂಜೆಯಾಗುವ ಸೂಚನೆಗಳು ಬಂದವು. ಅಲ್ಲಿಗೆ ಪಂದ್ಯವನ್ನು ನಿಲ್ಲಿಸಿದ ನಿರ್ಣಾಯಕರು ಪಂದ್ಯವನ್ನು ಡ್ರಾ ಎಂದು ಘೋಷಿಸಿಬಿಟ್ಟರು. ಕರ್ನಾಟಕ ಗೆಲುವಿನ ಸಂಭ್ರಮ ಶುರು ಮಾಡಿಕೊಂಡಿತು. ಕರಾರುವಾಕ್ಕಾಗಿ ಪ್ರಶಸ್ತಿ ಸುತ್ತಿನೆಡೆಗೆ ನಡೆದುಕೊಂಡು ಹೋಯಿತು.

ಸಾರಾಂಶ: ಮೊದಲನೇ ಇನ್ನಿಂಗ್ಸ್‌ನಲ್ಲಿ ಬರೋಬ್ಬರಿ 736 ರನ್ ಚಚ್ಚಿದ್ದ ಕರ್ನಾಟಕ, 233 ರನ್‌ಗಳಿಗೆ ಎದುರಾಳಿಗಳನ್ನು ಆಲೌಟ್ ಮಾಡಿತು. ಫಾಲೋ ಆನ್ ನೀಡುವ ಅವಕಾಶ ಹೊಂದಿತ್ತು. ಆದರೆ ಹಾಗೆ ಮಾಡದ ಕರ್ನಾಟಕ ಎರಡನೇ ಇನ್ನಿಂಗ್ಸ್‌ನಲ್ಲೂ ಉತ್ತರಾಖಂಡವನ್ನು ದಂಡಿಸುವ ನಿರ್ಣಯ ಮಾಡಿಕೊಂಡಿತು. ಎರಡನೇ ಇನ್ನಿಂಗ್ಸ್‌ನಲ್ಲಿ ಕರ್ನಾಟಕ 323 ರನ್‌ಗಳನ್ನು ಬಾರಿಸಿತು. ಇದರೊಂದಿಗೆ 826 ರನ್‌ಗಳ ಗುರಿ ನೀಡಿತು. 5ನೇ ದಿನದಾಟ ಆಡುವಾಗಲೂ ಕರ್ನಾಟಕಕ್ಕೆ ರನ್ ಗಳಿಸುವ ಹಸಿವು ಮಾತ್ರ ತಣ್ಣಗಾಗಿರಲಿಲ್ಲ. ಕೊನೆಯ ದಿನದವರೆಗೂ ಬೌಂಡರಿಗಳ ಸುರಿಮಳೆಗೈದಿತು. ಎರಡನೇ ಇನ್ನಿಂಗ್ಸ್‌ನಲ್ಲಿ ಉತ್ತರಾಖಂಡ 6 ವಿಕೆಟ್ ಕಳೆದುಕೊಂಡು 260 ರನ್‌ಗಳಿಸಿ ಬ್ಯಾಟಿಂಗ್ ಮಾಡುತ್ತಿರುವಾಗ ಪಂದ್ಯ ಮುಕ್ತಾಯಗೊಂಡಿತು.

1059 ರನ್‌ಗಳಿಸಿದ ಕರ್ನಾಟಕ: ಎರಡೂ ಇನ್ನಿಂಗ್ಸ್ ಸೇರಿ ಕರ್ನಾಟಕ ಬರೋಬ್ಬರಿ 1059 ರನ್‌ಗಳನ್ನು ಗಳಿಸಿತು. ಮೊದಲ ಇನ್ನಿಂಗ್ಸ್‌ನ 736, ಎರಡನೇ ಇನ್ನಿಂಗ್ಸ್‌ನಲ್ಲಿ 323 ರನ್ ಗಳಿಸಿತು. ಪಂದ್ಯದಲ್ಲಿ ಒಟ್ಟು 36 ವಿಕೆಟ್‌ಗಳು ಬಿದ್ದವು. 8 ಜನರು ಅರ್ಧಶತಕ ಬಾರಿಸಿದರು.



ಪಂದ್ಯದಲ್ಲಿ 1 ದ್ವಿಶತಕ, 3 ಶತಕ

ಮೊದಲ ಇನ್ನಿಂಗ್ಸ್‌ನಲ್ಲಿ ಕರ್ನಾಟಕ ಬ್ಯಾಟಿಗರು ಉತ್ತರಾಖಂಡದ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸಿದ್ದರು. ಪಡಿಕ್ಕಲ್ ತಮ್ಮ ಅತ್ಯುತ್ತಮ ಬ್ಯಾಟಿಂಗ್‌ನೊಂದಿಗೆ ತಂಡವನ್ನು ದಂಡಿಸಿದ್ದಲ್ಲದೆ, ದ್ವಿಶತಕ ಬಾರಿಸಿ ಮಿಂಚಿದರು. ಅವರ ಇನ್ನಿಂಗ್ಸ್ 29 ಬೌಂಡರಿಗಳಿದ್ದವು, 5 ಸ್ಫೋಟಕ ಸಿಕ್ಸರ್‌ಗಳಿದ್ದವು. ಇವರಲ್ಲದೆ ರಾಹುಲ್ ಕೂಡ ಮೊದಲ ಇನ್ನಿಂಗ್ಸ್‌ನಲ್ಲಿ ಉತ್ತರಾಖಂಡದ ಪರೀಕ್ಷೆ ತೆಗೆದುಕೊಂಡರು. ತಮ್ಮ ಕ್ಲಾಸಿಕ್ ಬ್ಯಾಟಿಂಗ್ ಮೂಲಕ ಕ್ರಿಕೆಟ್ ಅಭಿಮಾನಿಗಳಿಗೆ ಮನರಂಜನಾ ರಸದೌತಣ ನೀಡಿದ ಅವರು, 141 ರನ್ ಬಾರಿಸಿದ್ದರು. ಅಷ್ಟಕ್ಕೆ ಕರ್ನಾಟಕ ಬ್ಯಾಟಿಗರು ನಿಲ್ಲಲಿಲ್ಲ. ಸ್ಮರಣ್ ರವೀಚಂದ್ರನ್ ತಮ್ಮ ಕ್ವಾಲಿಟಿ ಸಾಬೀತು ಪಡಿಸಿದರು. 12 ಬೌಂಡರಿಗಳ ಮೂಲಕ 135 ರನ್ ಗಳಿಸಿ ಮಿಂಚಿದರು. ಉತ್ತರಾಖಂಡದ ಪರ ಯಾವುದೇ ಆಟಗಾರರು ಶತಕ ಬಾರಿಸಲಿಲ್ಲ. ಸ್ಮರಣ್ ಎರಡನೇ ಇನ್ನಿಂಗ್ಸ್‌ನಲ್ಲೂ ಶತಕ ಬಾರಿಸಿದರು. ರಾಹುಲ್ ಶತಕ ಬಾರಿಸುವತ್ತ ಸಾಗಿದರೂ ಅದೃಷ್ಟ ಸಾಥ್ ನೀಡಲಿಲ್ಲ.

ಸ್ಕೋರ್‌ಬೋರ್ಡ್

(ಎರಡನೇ ಇನ್ನಿಂಗ್ಸ್):
ಕರ್ನಾಟಕ 74.3 ಓವರ್‌ಗಳಲ್ಲಿ 323

ಮಯಾಂಕ್	ಸಿ ರಾವತ್ ಬಿ ನೇಗಿ	21
ಕೃತಿಕ್	ಎಲ್‌ಬಿ ಬಿ ಅವನೀಶ್	52
ಶ್ರೇಯಸ್	ಎಲ್‌ಬಿ ಬಿ ಮಯಾಂಕ್	0
ಕರುಣ್	ಸಿ ಸುಚಿತ್ ಬಿ ನೇಗಿ	8
ಸ್ಮರಣ್	ಸಿ ರೈಚಂದನಿ ಬಿ ಸುಚಿತ್	127
ರಾಹುಲ್	ನಾಟೌಟ್	86
ವಿದ್ಯಾಧರ	ಸಿ ರಾವತ್ ಬಿ ಮಯಾಂಕ್	7
ವಿಜಯ್	ಸ್ಟಂಪ್ ರಾವತ್ ಬಿ ಮಯಾಂಕ್	0
ಶಿಖರ್	ಬಿ ಮಯಾಂಕ್	7
ಕೃಷ್ಣ	ರನೌಟ್	0
ಪಡಿಕ್ಕಲ್	ಗಾಯದಿಂದ ನಿವೃತ್ತಿ	–
ಇತರೆ		15

ಬೌಲಿಂಗ್ ವಿವರ

ನೇಗಿ	19-9-63-2
ಜೋಷಿ	9-0-54-0
ಮಯಾಂಕ್	18-3-69-4
ಅವನೀಶ್	12-1-50-1
ಸುಚಿತ್	12-0-59-1
ರಾವತ್	3.3-0-15-0
ರೈಚಾಂದನಿ	1-0-3-0

ಉತ್ತರಾಖಂಡ62 ಓವರ್‌ಗಳಲ್ಲಿ 260/6

ಭುಪೇನ್	ಸಿ ಕೃಷ್ಣ ಬಿ ಪ್ರಸಿದ್ಧ	15
ಚೋಪ್ರಾ	ಸಿ ಕೃಷ್ಣ ಬಿ ವಿಜಯ್‌ಕುಮಾರ್	0
ಅವನೀಶ್	ಸಿ ರಾಹುಲ್ ಬಿ ಗೋಪಾಲ್	66
ರೈಚಾಂದನಿ	ಸಿ ಕೃಷ್ಣ ಬಿ ಪ್ರಸಿದ್ಧ	10
ಸುಚಿತ್	ಸಿ ಅವನೀಶ್ ಬಿ ಗೋಪಾಲ್	19
ರಾವತ್	ನಾಟೌಟ್	53
ಕುನಾಲ್	ಸ್ಟಂಪ್ ಬಿ ಗೋಪಾಲ್	20
ನೇಗಿ	ನಾಟೌಟ್	57
ಇತರೆ		20

ಬೌಲಿಂಗ್ ವಿವರ

ವಿದ್ಯಾಧರ	4-0-13-0
ವಿಜಯ್‌ಕುಮಾರ್	4-0-22-1
ಶಿಖರ್	25-1-97-0
ಪ್ರಸಿದ್ಧ	6-1-17-2
ಗೋಪಾಲ್	19-1-83-3
ಕರುಣ್	2-0-9-0
ಮಯಾಂಕ್	2-0-5-0

ಪಾಕ್ ಹಾಕಿ ಸಂಸ್ಥೆ ಅಧ್ಯಕ್ಷ ರಾಜೀನಾಮೆ

» ಆಟಗಾರರು ಬೀದಿಗೆ ಬಿದ್ದ ವಿಚಾರ
» ಆಸ್ಟ್ರೇಲಿಯಾದಲ್ಲಿ ಹೋಟೆಲ್ ಬಿಲ್ ಪಾವತಿಸಲಾಗದೆ ಬೀದಿಪಾಲಾಗಿದ್ದ ಪಾಕ್ ತಂಡ

• **ಲಾಹೋರ್:** ಆಟಗಾರರ ಹೋಟೆಲ್ ಬಿಲ್ ಕೂಡ ಕೊಡಲಾಗದೆ ಜಗತ್ತಿನ ಮುಂದೆ ಮಾನ ಕಳೆದುಕೊಂಡಿರುವ ಪಾಕಿಸ್ತಾನ ಹಾಕಿ ಸಂಸ್ಥೆ ಇದೀಗ ಹತಾಶೆ ವ್ಯಕ್ತಪಡಿಸುತ್ತಿದ್ದು, ಹೊಣೆ ಹೊತ್ತಿದ ಸಂಸ್ಥೆಯ ಅಧ್ಯಕ್ಷ ತಾರಿಕ್ ಬುಗ್ತಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ರಾಜತಾಂತ್ರಿಕ ವಿಚಾರದಲ್ಲಿ ಹಲವು ದೇಶಗಳ ಕೆಂಗಣ್ಣಿಗೆ ಗುರಿಯಾಗಿರುವ ಪಾಕಿಸ್ತಾನ ಕ್ರೀಡೆಯಲ್ಲೂ ಅದೇ ವೈಖರಿ ಮುಂದಿವರಿಸಿದೆ. ಹೊದಲ್ಲೆಲ್ಲಾ ಅಪಮಾನ ಎದುರಿಸಿಯೇ ಬರುತ್ತಿದೆ.

ವರ್ಷದ ಮೊದಲ ಸುತ್ತಿನ ಎಫ್‌ಐಎಚ್ ಪ್ರೋ ಹಾಕಿ ಲೀಗ್. ಎಲ್ಲ ತಂಡಗಳೂ ತಯಾರಿಗಳೊಂದಿಗೆ ಗೆಲ್ಲುವುದಕ್ಕೆ ಆಸ್ಟ್ರೇಲಿಯಾಗೆ ಬಂದಿದ್ದವು. ಬೇರೆ ದೇಶದ ಆಟಗಾರರು ಕ್ಯಾನ್ಬೇರಾ ಬೀದಿಗಳಲ್ಲಿ ಬಿದ್ದಿದ್ದರು. ಅದು ಪ್ರವಾಸಿಸುವ ವಿಚಾರಕ್ಕೆ ಸಂಬಂಧಿಸಿದ್ದು. ಹಾಗೇ ಪಾಕ್ ಆಟಗಾರರೂ ಕೂಡ ಬೀದಿಯಲ್ಲಿ ಅಲದಾಡುವ ಸಂದರ್ಭ ಬಂದಿತ್ತು. ಆದರೆ ಪ್ರವಾಸಕ್ಕಲ್ಲ, ಹೋಟೆಲ್ ಬಿಲ್ ಪಾವತಿಸಿಲ್ಲ ಎಂಬ ಕಾರಣಕ್ಕೆ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ಹಾಕಿ ಅಂಗಳದಲ್ಲಿ ಕೋಲಾಹಲಗಳು ಉಂಟಾಗುತ್ತಿವೆ.

ಗುರುವಾರದಂದು ಸಂಸ್ಥೆಯ ಅಧ್ಯಕ್ಷ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಈ ಬಗ್ಗೆ ತಮ್ಮ ದೇಶದ ಪ್ರಧಾನ ಮಂತ್ರಿ ಶಹಬಾಜ್ ಶರೀಫ್ ಅವರಿಗೆ ಪತ್ರ ಬರೆದಿದ್ದಾರೆ. (ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ. ಹೀಗಾಗಬಾರದಿತ್ತು. ಆಗಿದೆ, ಈ ಹಿಂದಿರುವ ಕಾರಣೀಕರ್ತರನ್ನು ಬಿಡಬಾರದು ಎಂಬುದು ನನ್ನ ಆಶಯ. ರಾಜೀನಾಮೆ ಪತ್ರದೊಂದಿಗೆ, ಪ್ರಧಾನ ಮಂತ್ರಿಗಳಿಗೆ ಮತ್ತು ಫೀಲ್ಡ್ ಮಾರ್ಷಲ್ ಆಸೀಮ್ ಮುನೀರ್‌ಗೆ ಘಟನೆ ಬಗ್ಗೆ ತನಿಖೆ ನಡೆಸುವಂತೆ ಮನವಿ ಮಾಡಿಕೊಂಡಿದ್ದೇನೆ. ಎಂದು ಮಾಧ್ಯಮದ ಮುಂದೆ ಹೇಳಿದ್ದಾರೆ.

ವಿಶ್ವಕಪ್ ಸೋಲಿನ ಬಗ್ಗೆ ಆಸೀಸ್ ತನಿಖೆ

• **ಸಿಡ್ನಿ:** ಟಿ20 ವಿಶ್ವಕಪ್ ಪಂದ್ಯಾವಳಿಯ ಲೀಗ್ ಹಂತದದಲ್ಲೇ ಅನಿರೀಕ್ಷಿತ ಗೇಟ್‌ಪಾಸ್ ಪಡೆದ ಆಸ್ಟ್ರೇಲಿಯಾ ತೀವ್ರ ಹತಾಶೆಗೊಂಡಿದ್ದು, ಸೋಲಿನ ಹಿಂದಿರುವ ತನಿಖೆ ನಡೆಸಲು ಮುಂದಾಗಿದೆ. ಏಕದಿನ ವಿಶ್ವಕಪ್ ಪಂದ್ಯಾವಳಿಯ ಚಾಂಪಿಯನ್‌ಗಳಾದ ಆಸ್ಟ್ರೇಲಿಯಾ ತಂಡವು ಟಿ20 ಕ್ರಿಕೆಟ್‌ನಲ್ಲಿ ಸೊರಗುತ್ತಿದೆ. ಇದಕ್ಕೆ ವಿಶ್ವಕಪ್ ಪ್ರದರ್ಶನವೇ ಪ್ರತ್ಯಕ್ಷ ಸಾಕ್ಷಿ. ತಂಡದ ಪ್ರಮುಖ ಆಟಗಾರರಿಲ್ಲದೆ, ಟೂರ್ನಿಗಿಳಿದ ಆಸೀಸ್ ಜಿಂಬಾಬ್ವೆ ಅಂತಹ ತಂಡಗಳೊಂದಿಗೆ ಅನಿರೀಕ್ಷಿತ ಸೋಲುಗಳನ್ನು ಕಂಡಿದೆ. ಇದೇ ವಿಚಾರಕ್ಕೆ ಸಂಬಂಧ ಪಟ್ಟಂತೆ ತಂಡದ ವಿರುದ್ಧ ಭಾರೀ ಅಸಮಾಧಾನ ವ್ಯಕ್ತಪಡಿಸಿರುವ ಕ್ರಿಕೆಟ್ ಆಸ್ಟ್ರೇಲಿಯಾ, ಈಗ ಫಾರೆನ್ಸಿಕ್ ವಿಮರ್ಶೆ ನಡೆಸಲಾಗುವುದು ಎಂದು ಘೋಷಿಸಿದೆ. ಗೆಲುವಿನ ನಾಯಕ ಪ್ಯಾಟ್ ಕಮ್ಮಿನ್ಸ್ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ಭಾರೀ ಹಿಂದುಳಿದಿದ್ದಾರೆ. ಇದೇ ವೇಳೆ ಐಪಿಎಲ್‌ಗೆ ಲಭ್ಯರಿರುವುದಾಗಿ ಹೇಳಿದ್ದು, ಆಸ್ಟ್ರೇಲಿಯನ್ ಕ್ರಿಕೆಟ್ ಅಭಿಮಾನಿಗಳ ಕಣ್ಣುಗಳನ್ನು ಕೆಂಪು ಮಾಡಿದೆ. ಮಾಜಿ ಆಟಗಾರರನ್ನು ಕೆರಳಿಸಿದೆ. ಇದೇ ವೇಳೆ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಆಯ್ಕೆಗಾರ ಟೋನಿ ಡೋಡ್ಮೈಡ್ ಈ ಬಗ್ಗೆ ಮಾತನಾಡಿದ್ದು, ಆಟಗಾರರು ಮರಳಿದ ನಂತರ ಈ ಬಗ್ಗೆ ಒಂದು ತನಿಖೆ ನಡೆಸಲಾಗುವುದು ಎಂದಿದ್ದಾರೆ. ವಿಶ್ವಕಪ್‌ನಿಂದ ಹೊರಬಿದ್ದಿರುವುದು ನಮಗೆ ಭಾರೀ ಹಿನ್ನಡೆ ತಂದಿದೆ, ಇದೊಂದು ಅನಿರೀಕ್ಷಿತ. ಕೊನೆಯ ಪಂದ್ಯದಲ್ಲಿ ಗೆಲ್ಲುವುದು ನಮ್ಮ ಮೊದಲ ಗುರಿಯಾಗಿದೆ. ಗೆದ್ದು ಬರಲಿ ನಂತರ ಈ ಬಗ್ಗೆ ಚರ್ಚಿಸೋಣ ಎಂದಿದ್ದಾರೆ. ಅಲ್ಲದೆ, ಕಮ್ಮಿನ್ಸ್ ಮತ್ತು ಹ್ಯಾಜೆಲ್ವುಡ್ ಐಪಿಎಲ್‌ಗೆ ಮಾತ್ರ ಲಭ್ಯರಿರುವ ವಿಚಾರಕ್ಕೆ ಸಂಬಂಧ ಪಟ್ಟಂತೆ ;ಮೊದಲು ವಿಶ್ವಕಪ್ ನಡೆದಿದೆ. ಐಪಿಎಲ್ ವೇಳೆಗೆ ಅವರಿಬ್ಬರೂ ಚೇತರಿಸಿಕೊಳ್ಳುತ್ತಾರೆ. ವಿಶ್ವಕಪ್ ಬದಲಿಗೆ ಐಪಿಎಲ್ ಮೊದಲಿತ್ತೆಂದರೆ ಅದಕ್ಕೆ ಲಭ್ಯರಿರುತ್ತಿದ್ದರು ಎಂದರು.

ಅಜೇಯವಾಗಿ ಸೂಪರ್-8ಕ್ಕೆ ಜಿಂಬಾಬ್ವೆ

• **ಕೊಲಂಬೋ:** ಶ್ರೀಲಂಕಾ ವಿರುದ್ಧದ ತನ್ನ ಕೊನೆಯ ಪಂದ್ಯದಲ್ಲಿ 6 ವಿಕೆಟ್‌ಗಳ ಗೆಲುವು ಸಾಧಿಸಿರುವ ಜಿಂಬಾಬ್ವೆ, ಬಿ ಗುಂಪಿನ ಅಗ್ರಸ್ಥಾನ ಗಳಿಸಿತು. ವಿಶ್ವಕಪ್ ಪಂದ್ಯಾವಳಿಯಲ್ಲಿ ಎಲ್ಲರನ್ನೂ ನಿರೀಕ್ಷೆಗೂ ಮೀರಿ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಈಗ ಆಸ್ಟ್ರೇಲಿಯಾ, ಶ್ರೀಲಂಕಾ ಅಂತಹ ತಂಡಗಳಿರುವ ಗುಂಪಿನಲ್ಲಿ ಅಗ್ರಸ್ಥಾನಿಯಾಗಿ ಹೆಡೆ ಎತ್ತಿದೆ.

ಹೊಸ ರೂಪದೊಂದಿಗೆ ವಿಶ್ವಕಪ್ ಪಂದ್ಯಾವಳಿಯಲ್ಲಿ ತನ್ನದೇ ಅಲೆಗಳನ್ನು ಸೃಷ್ಟಿಸುತ್ತಿರುವ ಜಿಂಬಾಬ್ವೆ , ತನ್ನ ಗುಂಪಿನ ನಾಲ್ಕೂ ತಂಡಗಳನ್ನು ಸೋಲಿಸಿ ಮೆರೆದಾಡಿತು. ಅಷ್ಟೈರು ಪಂದ್ಯದಲ್ಲಿ ಬಲಿಷ್ಠ ಶ್ರೀಲಂಕಾ ತಂಡವನ್ನು ಎದುರಿಸಿದ್ದ ಸಿಕಂದರ್ ರಜಾ ಪಡೆ ಗೆಲುವಿನ ನಗೆ ಬೀರಿ ಇತಿಹಾಸ ನಿರ್ಮಿಸಿತು.

ರೋಮಾಂಚನಕಾರಿ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದ ಶ್ರೀಲಂಕಾ ನಿಸ್ಸಂಕಾ ಮತ್ತು ಪವನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 178 ರನ್‌ಗಳಿಸಿತು. ಗುರಿ ಬೆನ್ನತ್ತಿದ ಜಿಂಬಾಬ್ವೆ 19.3 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 182 ರನ್‌ಗಳಿಸಿತು. ಬ್ರೈನ್ ಬೆನೆಟ್ ಅಜೇಯ 68 ರನ್‌ಗಳಿಸಿ ಗೆಲುವಿನ ರೂವಾರಿಯಾದರು. ಪಂದ್ಯಶ್ರೇಷ್ಠ ಗೆದ್ದರು ಮತ್ತು ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿಕೊಂಡರು. ಸೂಪರ್-8ರಲ್ಲಿ ಜಿಂಬಾಬ್ವೆ ಭಾರತವನ್ನು ಎದುರಿಸಲಿದೆ.

ಶ್ರೀಲಂಕಾಗೆ ಜಿಂಬಾಬ್ವೆ ಶಾಕ್: ಆಸ್ಟ್ರೇಲಿಯಾ, ಐರ್ಲೆಂಡ್ ಅಂತಹ ತಂಡಗಳೊಂದಿಗೆ ಯಾವುದೇ ಆತಂಕವಿಲ್ಲದೆ ಗೆದ್ದಿದ್ದ ಜಿಂಬಾಬ್ವೆ ಆತ್ಮವಿಶ್ವಸದೊಂದಿಗೆ ಕಣಕ್ಕಿಳಿಯಿತು. ಬೌಲಿಂಗ್ ಮಾಡುವಾಗ ಶ್ರೀಲಂಕಾ ಬ್ಯಾಟಿಗರನ್ನು ಕಟ್ಟಿಹಾಕಿತು. ದೊಡ್ಡ ತಂಡಗಳನ್ನು ಸೋಲಿಸಿ ಈ ಬಾರಿಯ ವಿಶ್ವಕಪ್‌ನಲ್ಲಿ ಬಲಿಷ್ಠ ತಂಡ ಎನಿಸಿಕೊಂಡಿರುವ ಆತಿಥ್ಯ ಶ್ರೀಲಂಕಾ ಜಿಂಬಾಬ್ವೆ ದಾಳಿಗೆ ಅಕ್ಷರಶಃ ತತ್ತರಿಸಿತು. ನಿಸ್ಸಂಕಾ(62) ಹಾಗೂ ಪವನ್(45) ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗ್ಯೂ 200ರ ಗಡಿ ದಾಟಿಸಿಕೊಡಲಿಲ್ಲ ಜಿಂಬಾಬ್ವೆ. ಗುರಿ ಬೆನ್ನತ್ತುವಾಗಲೂ ಅದೇ ವಿಶ್ವಾಸ. 200ರ ಗಡಿ ದಾಟದಿದ್ದರೂ ವಿಶ್ವಕಪ್‌ನಲ್ಲಿ ದೊಡ್ಡ ಸ್ಕೋರ್ ಎನಿಸುವ 179 ರನ್ ಗುರಿಯನ್ನು ಯಾವುದೇ ಆತಂಕವಿಲ್ಲದೆ ಹೊಡೆಯಿತು. ಆರಂಭವೇ ಅಂತಹದ್ದಾಗಿತ್ತು. ಬೆನೆಟ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಅವರಿಗೆ ಮುರಮಾನಿ, ಸಿಕಂದರ್ ರಜಾ ಸಾಥ್ ಕೂಡ ಸಿಕ್ಕಿತು. ಕೊನೆಯ ಓವರ್‌ವರೆಗೂ ಪಂದ್ಯದ ಫಲಿತಾಂಶ ಸಿಕ್ಕಿರಲಿಲ್ಲ. ಒಂದು ಹಂತದಲ್ಲಿ ಉತ್ತಮ ಬೌಲಿಂಗ್ ಮಾಡುತ್ತಿದ್ದ ಶ್ರೀಲಂಕಾ ಬೆನೆಟ್ ಅವರ ತಾಳ್ಮೆಯಾಟಕ್ಕೆ ಶರಣಾಯಿತು. ಜಿಂಬಾಬ್ವೆ 6 ವಿಕೆಟ್‌ಗಳ ಗೆಲುವು ಸಾಧಿಸಿತು.

ವಿಂಡೀಸ್‌ಗೆ ಇಟಲಿ ಸುಲಭದ ತುತ್ತು: ಇದೇ ಮೊದಲು ಬಾರಿಗೆ ವಿಶ್ವಕಪ್ ಆಡುತ್ತಿರುವ ಇಟಲಿ ತನ್ನ ಅಂತಿಮ ಪಂದ್ಯದಲ್ಲಿ ನಿರಾಶಾದಾಯಕ ಸೋಲನುಭವಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿ ವಿಂಡೀಸ್ ಬ್ಯಾಟಿಂಗ್‌ನಲ್ಲಿ ಪರದಾಡುತ್ತಾ 6 ವಿಕೆಟ್‌ನೊಂದಿಗೆ 165 ರನ್‌ಗಳಿಸಿತು. ಗುರಿ ಬೆನ್ನತ್ತಿದ ಇಟಲಿ 123 ರನ್‌ಗಳಿಗೆ ಆಲೌಟ್ ಆಯಿತು. ಶೈ ಹೋಪ್ ವಿಸ್ತಾರಗೊಂಡಿತು. ಅವರನ್ನು ಬಿಟ್ಟರೆ ಇನ್ನುಳಿದ ವಿಂಡೀಸ್ ಬ್ಯಾಟಿಗರು ಪರದಾಟ ನಡೆಸಿದ್ದು ಗೋಚರಿಸಿತು. ಆದರೆ ಕೈ ಬಿಡಲಿಲ್ಲ ಹೋಪ್. 46 ಬಾಲ್‌ಗಳಲ್ಲಿ 4 ಸಿಕ್ಸ್ ಮತ್ತು 6 ಬೌಂಡರಿಗಳೊಂದಿಗೆ 74 ರನ್ ಗಳಿಸಿ ಅಬ್ಬರಿಸಿದರು. ರುದರ್‌ಫೋರ್ಡ್ ಮತ್ತು ಫೋರ್ಡ್ ಸ್ಕೋರ್ ಹಿಗ್ಗಿಸುವ ಜವಾಬ್ದಾರಿ ಮೈಗೆತ್ತಿಕೊಂಡರು. ಗುರಿ ಬೆನ್ನತ್ತುವಾಗ ಇಟಲಿ ಮೊದಲಿನಿಂದಲೂ ನಿರಾಸೆಯ ಆಟವಾಡಿತು. 26 ರನ್‌ಗಳಿಸಿದ ಬೆನ್ ಮಾನೆಂಟಿ ತಂಡದ ಗರಿಷ್ಠ ಸ್ಕೋರರ್ ಎನಿಸಿದರು. ಇನ್ನುಳಿದ ಬ್ಯಾಟರ್‌ಗಳು 10ರೊಳಗೆ ಔಟಾದರು. ಸ್ಮಟ್ಸ್ 24 ರನ್‌ಗಳಿಸಿದರು. ವಿಂಡೀಸ್ ಪರ ಮ್ಯಾಥೀವ್ ಫೋರ್ಡ್ 3 ವಿಕೆಟ್ ಕಿತ್ತರು. ಜೋಸೆಫ್ 4 ವಿಕೆಟ್ ಪಡೆದುಕೊಂಡರು.

ಸಂಕ್ಷಿಪ್ತ ಸ್ಕೋರ್

ವಿಂಡೀಸ್-ಇಟಲಿ: ವಿಂಡೀಸ್ 20 ಓವರ್‌ಗಳಲ್ಲಿ 165/6: ಹೋಪ್ 75, ರುದರ್‌ಫೋರ್ಡ್ 24; ಕ್ರಿಶನ್ 25/2
ಇಟಲಿ 18 ಓವರ್‌ಗಳಲ್ಲಿ 123/10: ಬೆನ್ 26; ಜೋಸಫ್ 30/4, ಮ್ಯಾಥೀವ್ 19/3

ಜಿಂಬಾಬ್ವೆ -ಶ್ರೀಲಂಕಾ: ಶ್ರೀಲಂಕಾ 20 ಓವರ್‌ಗಳಲ್ಲಿ 178/7: ನಿಸ್ಸಂಕಾ 62, ಪವನ್ 44; ಕ್ರೆಮರ್ 27/2
ಜಿಂಬಾಬ್ವೆ 19.3 ಓವರ್‌ಗಳಲ್ಲಿ 182/4: ಬೆನೆಟ್ 63★, ಸಿಕಂದರ್ 45; ದುಶನ್ 36/2

ಅಫ್ಘಾನ್‌ಗೆ ಗೆಲುವು

ಇಬ್ರಾಹಿಮ್ ಜಾರ್ಡನ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಅಫ್ಘಾನಿಸ್ತಾನ ತಂಡದ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಕೆನಡಾ ತನ್ನ ಕೊನೆಯ ಪಂದ್ಯದಲ್ಲಿ ಸೋಲನುಭವಿಸಿದೆ. ಇದರೊಂದಿಗೆ ಕೆನಡಾ ಸೋಲಿನೊಂದಿಗೆ ಅಫ್ಘಾನ್ ಗೆಲುವಿನೊಂದಿಗೆ ಅಭಿಯಾನ ಮುಗಿಸಿದವು. ಗುರುವಾರದ ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನ್ 20 ಓವರ್‌ಗಳಲ್ಲಿ 200 ರನ್ ಗಳಿಸಿತು. ಇಬ್ರಾಹಿಮ್ ಔಟಾಗದೆ 95 ರನ್ ಗಳಿಸಿದರು. ಗುರಿ ಬೆನ್ನತ್ತಿದ ಕೆನಡಾ 20 ಓವರ್‌ಗಳಲ್ಲಿ 118 ರನ್ ಮಾತ್ರ ಗಳಿಸಿತು.

ಜಮ್ಮು-ಕಾಶ್ಮೀರ ವಿರುದ್ಧ ಫೆ.24ರಿಂದ ಪಂದ್ಯ ಆರಂಭ | ಅಭಿಮಾನಿಗಳಲ್ಲಿ ಸಂತಸ

ಹುಬ್ಬಳ್ಳಿಯಲ್ಲಿ ರಣಜಿ ಫೈನಲ್ ಪಂದ್ಯ

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ರಣಜಿ ಟೂರ್ನಿಯ ಫೈನಲ್ ಪಂದ್ಯದ ಆನಂದವನ್ನು ಸವಿಯುವ ಹುಬ್ಬಳ್ಳಿಗರ ಕನಸು ಈ ಬಾರಿ ನನಸಾಗಲಿದೆ. ಮೊಟ್ಟ ಮೊದಲ ಬಾರಿಗೆ ರಣಜಿ ಫೈನಲ್ ಪಂದ್ಯಕ್ಕೆ ನಗರ ಆತಿಥ್ಯ ವಹಿಸಲಿದ್ದು, ಫೆ.24ಕ್ಕೆ ಇದಕ್ಕೆ ಮುಹೂರ್ತ ಕೂಡಿ ಬಂದಿದೆ. ಕಳೆದ 10 ವರ್ಷದಿಂದ ರಣಜಿ ಪ್ರಶಸ್ತಿ ಬರ ಕಂಡಿರುವ ಕರ್ನಾಟಕ ತಂಡವೂ ಮೊಟ್ಟ ಮೊಲದ ಬಾರಿಗೆ ಫೈನಲ್ ಪ್ರವೇಶಿದ ಜಮ್ಮು-ಕಾಶ್ಮೀರ ತಂಡವನ್ನು ಎದುರಿಸಲಿದೆ.

ಹಸಿರಿನಿಂದ ಕೂಡಿದ ಇಲ್ಲಿಯ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಮೈದಾನದಲ್ಲಿ ಸಿದ್ಧತೆ ಬರದಿಂದ ಸಾಗಿದೆ. ಗುರುವಾರ ಮೈದಾನಕ್ಕೆ ಕೆಎಸ್‌ಸಿಎ ಆಡಳಿತ ಸಮಿತಿ ಸದಸ್ಯಅವಿನಾಶ ವೈದ್ಯ ಭೇಟಿ ನೀಡಿ ಪಿಚ್ ಹಾಗೂ ಮೈದಾನದ ಸೌಲಭ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇನ್ನೂ ಬಿಸಿಸಿಐನ ತಟಸ್ಥ ಪಿಚ್ ಕ್ಯುರೇಟರ್ ಪ್ರಕಾಶ ಅದವ್ ಅವರು ನಗರಕ್ಕೆ ಬಂದಿದ್ದು, ಮೈದಾನ ಪರಿಶೀಲಿಸಿ ವರದಿಯನ್ನು ನೀಡಿದ್ದಾರೆ. ಎರಡು



ತಂಡಗಳು ಫೆ.21ರಂದು ನಗರಕ್ಕೆ ಬಂದು ಅಭ್ಯಾಸ ನಡೆಸುವ ಸಾಧ್ಯತೆ ಇದೆ. 2025 ನವೆಂಬರ್ 16ರಿಂದ 19 ರ ವರೆಗೆ ನಡೆದಿದ್ದ ಚಂಡೀಗಢ ಎದುರಿನ ಪಂದ್ಯದಲ್ಲಿ ಕರ್ನಾಟಕ ತಂಡ ಇನ್ನಿಂಗ್ಸ್ ಜಯಗಳಿಸಿತ್ತು. 2025 ಜನವರಿ 5ರಿಂದ 8ರ ವರೆಗೆ ನಡೆದ ಪಂಜಾಬ್ ಎದುರಿನ ಪಂದ್ಯದಲ್ಲಿ ಕರ್ನಾಟಕ ತಂಡ ಏಳು ವಿಕೆಟ್‌ನಿಂದ ಗೆದ್ದಿತ್ತು. ಫೆ.16ರಿಂದ 18 ರವರೆಗೆ ನಡೆದ ಚಂಡೀಗಢ ಎದುರಿನ ಪಂದ್ಯ ಡ್ರಾನಲ್ಲಿ ಅಂತ್ಯವಾಗಿತ್ತು. 2013-14 ರಲ್ಲಿ ಭಾರತ ಎ ಹಾಗೂ ವೆಸ್ಟ್‌ಇಂಡಿಸ್ ಎ ತಂಡಗಳು ಇದೇ ಮೈದಾನದಲ್ಲಿ ಮುಖಾಮುಖಿಯಾಗಿದ್ದವು. ಭಾರತ ಎ- ಶ್ರೀಲಂಕಾ ಎ ತಂಡಗಳು 2019-20 ಹಾಗೂ ಭಾರತ ಎ- ನ್ಯೂಜಿಲೆಂಡ್‌ಎ ತಂಡಗಳು 2022-23ರಲ್ಲಿ ಎದುರಾಗಿದ್ದವು. ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ತಮಿಳುನಾಡು ಎದುರಿನ ಪಂದ್ಯಕ್ಕೆ ಸಹ ಇದೇ ಕ್ರೀಡಾಂಗಣ ಆತಿಥ್ಯ ವಹಿಸಿತ್ತು.

ಕನ್ನಡಿಗ ಕೆ.ಎಲ್.ರಾಹುಲ್ ಆಕರ್ಷಣೆ ಪ್ರಸ್ತುತ ರಣಜಿ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಕನ್ನಡಿಗ ಕೆ.ಎಲ್.ರಾಹುಲ್ ಹುಬ್ಬಳ್ಳಿಯ ಕ್ರಿಕೆಟ್ ಅಭಿಮಾನಿಗಳು ಕಣ್ಣು ತುಂಬಿಕೊಳ್ಳಲಿದ್ದಾರೆ. ಅದೇ ರೀತಿ ನಾಯಕ ದೇವದತ್ತ ಪಡಿಕಲ್, ಮಯಾಂಕ್ ಅಗರವಾಲ್, ಕರುಣ್ ನಾಯರ್, ಸ್ಮರಣ್ ರವಿಚಂದ್ರನ್ ಪ್ರಮುಖ ಆಕರ್ಷಣೆಯಾಗಿದ್ದಾರೆ. ಇನ್ನೂ ಮೊಟ್ಟ ಮೊದಲ ಬಾರಿಗೆ ರಣಜಿ ಫೈನಲ್ ಪಂದ್ಯವೂ ಹುಬ್ಬಳ್ಳಿಯಲ್ಲಿ ನಡೆಯುತ್ತಿರುವುದು ಇಲ್ಲಿಯ ಕ್ರಿಕೆಟ್ ಅಭಿಮಾನಿಗಳಿಗೆ ಸಂತಸ ತಂದಿದೆ.


ಫೆ.24ರಿಂದ ಪಂದ್ಯ

ಕರ್ನಾಟಕ ಹಾಗೂ ಜಮ್ಮು-ಕಾಶ್ಮೀರ ಫೈನಲ್ ರಣಜಿ ಪಂದ್ಯ ಫೆ.24ರಂದು ಹುಬ್ಬಳ್ಳಿಯ ರಾಜನಗರದ ಮೈದಾನದಲ್ಲಿ ನಡೆಯಲಿದೆ ಎಂದು ಕೆಎಸ್‌ಸಿಎ ಘೋಷಿಸಿದೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

5901



ಎಡದಿಂದ ಬಲಕ್ಕೆ
1.ಕೆಚ್ಚದೆಯ ಗಂಡಿನ ಹೃದಯ (3)
3.ಅಧಿಕವಾದ ಸಂತೋಷ (3)
5.ಸಂಜೆ ಅವರು ಗಮನಿಸಿದಾಗ ಕಂಡ ಬಿಳಿಯ ಕಲ್ಲು (5)
10.ಕೆಲಸ ವ್ಯವಸ್ಥೆಗೊಳಿಸುವ ವ್ಯಕ್ತಿ (4)
11.ಅಧಿಕವಾದ ಹಿರಿಮೆ ತಿರುಗಿದೆ (4)
12.ಪಕ್ಷಿಯನ್ನು ಸಾರಿಗೆಯಾಗುಳ್ಳವನು (5)
16.ಮನಸ್ಸಿನ ವಿಕಾರ-ಕುರೂಪ (3)
17.ಧೂಪಕ್ಕೆ ಉಪಯೋಗಿಸುವ ಅಂಟು (3)

ಮೇಲಿನಿಂದ ಕೆಳಕ್ಕೆ
1.ಏರಿದ ತನ್ಮಯತೆ (2)
2.ಕರಿದ, ನಂಜಿಕೊಳ್ಳುವ ಪದಾರ್ಥ ತಲೆಕೆಳಗಾಗಿದೆ (3)
3.ಈತ ಪ್ರಯಾಣ ಮಾಡುವವನು (3)
4.ಇದು ಯೋಚನೆ ಹುಟ್ಟುವ ಸ್ಥಳ (2)
6.ಲೆಕ್ಕ ಮಾಡುವ ಎಲೆಕ್ಟ್ರಾನಿಕ್ ಸಾಧನ (5)
7.ಪ್ರವಾಸಿಗರು ತಂಗುವ ಸ್ಥಳ (5)
8.ಸಂಗೀತ ಹಾಡಿ ಪಡೆದ ಪಗಡೆಯ ಹಾಸು (3)
9.ದುಡುಮ್ಮನೆ ಬಿದ್ದಂತೆ ಪರೀಕ್ಷೆಯಲ್ಲಿ ನಪಾಸಾಗುವುದು (3)
12.ಹರಿವಾಣವನ್ನು ಹೀಗೂ ಹೇಳುತ್ತೇವೆ (3)
13.ನಗುವಿನ ನಡುವೆ ಜಜ್ಜಿ ಹೋಗುವಿಕೆಯಿದೆ (3)
14.ಮುಸುಕು ಹಾಕಿಕೊಂಡ ಕಾವ್ಯರಚನೆಗಾರ (2)
15.ಮೊಳಕೈಯಿಂದ ಹಸ್ತ ತುದಿಯವರೆಗಿನ ಅಳತೆ (2)

5900 ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಣಿಸಂಗ್ರಹಾಲಯ
3.ಕುಶ 4.ಲತ್ತೆ
5.ಗಗನ 7.ಶಾಂಭವ
10.ಸಂಗೀತಕ 11.ಪಾತಕಲಿ
12.ಕಡಲೆ 13.ಅಣಕ
15.ನವ 16.ರಬ್ಬು
17.ಶ್ರಾವಣಿಸುಬ್ರಹ್ಮಣ್ಯ

ಮೇಲಿನಿಂದ ಕೆಳಕ್ಕೆ :
1.ಪ್ರಾಶನ 2.ವಲಯ
6.ಗಮಕಕಲೆ
7.ಶಾಂತಿಪಾಲಕ 8.ವಾಸಂತಿ
9.ನಲಿವು 12.ಶ್ರಾವಕ
14.ಅರಣ್ಯ

ಕಿರುಸುದ್ದಿ

ಎಸ್. ಆರ್. ಕುಡ್ವ ಇನ್ನಿಲ್ಲ

ಮಂಗಳೂರು: ಕೆನರಾ ಬ್ಯಾಂಕಿನ ನಿವೃತ್ತ ಮೆನೇಜರ್ ಎಸ್. ಆರ್. ಕುಡ್ವ (74) ಅಲ್ಪ ಕಾಲದ ಅಸೌಖ್ಯದಿಂದ ಫೆ.19 ರಂದು ನಗರದ ಮಣ್ಣಗುಡ್ಡೆಯ ಗುಂಡುರಾವ್ ಲೇನ್ ನಲ್ಲಿರುವ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಕೆನರಾ ಬ್ಯಾಂಕ್‌ನ ಚಿಕ್ಕಮಗಳೂರು, ಕುದ್ರೆಮುಖ, ಲಕ್ನೋ, ಮಂಗಳೂರು ಸರ್ಕಲ್ ಆಫೀಸ್, ಶಿವಭಾಗ್ ಮುಂತಾದ ಕಡೆ ಸೇವೆ ಸಲ್ಲಿಸಿ ದಕ್ಷ ಅಧಿಕಾರಿ ಎಂದು ಹೆಸರು ಪಡೆದಿದ್ದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದ ಇವರು ಸಂಘನಿಕೇತನದ ಶ್ರೀ ಗಣೇಶೋತ್ಸವ ಸಮಿತಿಯ ಖಜಾಂಚಿಯಾಗಿ ಅನೇಕ ವರ್ಷ ಜವಾಬ್ದಾರಿ ನಿಭಾಯಿಸಿದ್ದರು. ಆರ್.ಎಸ್.ಎಸ್.ನ ಕ್ಷೇತ್ರೀಯ ಸಂಘಚಾಲಕ್ ಮಾನ್ಯ ಡಾ. ಪಿ. ವಾಮನ್ ಶೆಣೈ, ಮಾಜಿ ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು ಹಾಗೂ ಸಂಘ ಮತ್ತು ಬಿ.ಜೆ.ಪಿ.ಯ ಅನೇಕ ಕಾರ್ಯಕರ್ತರು ಮೃತರ ನಿವಾಸಕ್ಕೆ ತೆರಳಿ ಶ್ರದ್ಧಾಂಜಲಿ ಅರ್ಪಿಸಿದರು.

ಚೆಂಡಿನಂಥ ವಸ್ತು ಸ್ಫೋಟ: ಬಾಲಕನಿಗೆ ಗಾಯ

ಬೆಳ್ತಂಗಡಿ: ಚೆಂಡಿನಂತಹ ವಸ್ತುವಿನೊಂದಿಗೆ ಕ್ರಿಕೆಟ್ ಆಟವಾಡುತ್ತಿದ್ದ ವೇಳೆ ಅದು ಸ್ಫೋಟಗೊಂಡು ಬಾಲಕನೊಬ್ಬ ಗಾಯಗೊಂಡ ಘಟನೆ ಬಂದಾರು ಗ್ರಾಮದಲ್ಲಿ ಗುರುವಾರ ನಡೆದಿದೆ. ಬಾಲಕ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಗಾಯಗೊಂಡ ಬಾಲಕನನ್ನು ಫೆ.19 ರಂದು ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಘಟನೆಯ ಬಗ್ಗೆ ಧರ್ಮಸ್ಥಳ ಪೊಲೀಸರಿಗೆ ಮಾಹಿತಿ ಪಡೆದ ಪೊಲೀಸರು ಪ್ರಕರಣದ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ.

ಅಕ್ರಮ ಮರಳು ಸಾಗಾಟ, ಲಾರಿ ವಶಕ್ಕೆ

ಕೊಣಾಜೆ: ಕೊಣಾಜೆ ಠಾಣಾ ವ್ಯಾಪ್ತಿಯ ಹರೇಕಳ ಬೈತಾರ್ ಬಳಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದ ಟಿಪ್ಪರ್ ಲಾರಿ ಹಾಗೂ ಮರಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ವಾಹನ ಚಾಲಕ ಲಾರಿಯನ್ನು ನಿಲ್ಲಿಸಿ ಪರಾರಿಯಾಗಿದ್ದಾನೆ. ಬಳಿಕ ಟಿಪ್ಪರ್ ಲಾರಿಯನ್ನು ಪರಿಶೀಲಿಸಿದಾಗ ಲಾರಿಯಲ್ಲಿ ಸುಮಾರು 1 ಳಿ ಯುನಿಟಿನಷ್ಟು ಮರಳು ಇದ್ದು, ಪೊಲೀಸರು ಲಾರಿ ಹಾಗೂ ಮರಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿದ್ದಾರೆ.

ಟ್ರ್ಯಾಕ್ಟರ್ ಮಗುಚಿ ಸಾವು

ಮಡಿಕೇರಿ: ಚಾಲಕನಿಲ್ಲದ ಸಂದರ್ಭ ಟ್ರ್ಯಾಕ್ಟರ್ ಚಲಾಯಿಸಿದ ಕಾರ್ಮಿಕನೊಬ್ಬ ನಿಯಂತ್ರಣ ತಪ್ಪಿ ಹಳಕ್ಕೆ ಮಗುಚಿ ಬಿದ್ದು ಸಾವಿಗೀಡಾದ ಘಟನೆ ಸಿದ್ದಾಪುರ ಸಮೀಪದ ಹಿಲ್ಕ್ ಹಿಲ್ ತೋಟದಲ್ಲಿ ನಡೆದಿದೆ. ಮೃತನನ್ನು ಬಾಗಲಕೋಟೆ ಮೂಲದ ಪ್ರವೀಣ್ (35) ಎಂದು ಗುರುತಿಸಲಾಗಿದೆ. ಗುರುವಾರ ಮುಂಜಾನೆ ಎಸ್ಟೇಟ್ ನಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಾಮಗ್ರಿಗಳನ್ನು ತರಲು ಚಾಲಕನು ಇಲ್ಲದ ಸಂದರ್ಭ, ವಾಹನ ಚಲಾಯಿಸುವ ಆಸೆ ಹೊಂದಿದ್ದ ಪ್ರವೀಣ್ ಟ್ರ್ಯಾಕ್ಟರ್ ಚಲಾಯಿಸಿದ್ದು, ಆತನ ನಿಯಂತ್ರಣ ಕಳೆದುಕೊಂಡ ಟ್ರ್ಯಾಕ್ಟರ್ ಹಳಕ್ಕೆ ಮಗುಚಿ ಬಿದ್ದಿದೆ. ಪರಿಣಾಮವಾಗಿ ಆತ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.ಸಿದ್ದಾಪುರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿದ್ದು, ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಮಡಿಕೇರಿಯ ಜಿಲ್ಲಾಸ್ಪತ್ರೆ ಶವಾಗಾರದಲ್ಲಿ ಇಡಲಾಗಿದೆ.

ಬಿಎಸ್‌ಎನ್‌ಎಲ್ ಕೇಬಲ್ ಕಳವು: ಮೂವರು ಆರೋಪಿಗಳ ಬಂಧನ

ಮಂಗಳೂರು: ಬಿಎಸ್‌ಎನ್‌ಎಲ್‌ನ ನೆಲದಡಿಯಲ್ಲಿ ಅಳವಡಿಸಿದ್ದ ಸುಮಾರು 70 ಲಕ್ಷ ರೂ. ಮೌಲ್ಯದ ತಾಮ್ರದ ಕೇಬಲ್ ಕಳವು ಮಾಡಿದ ಮೂವರು ಆರೋಪಿಗಳನ್ನು ಪಾಂಡೇಶ್ವರ ಪೊಲೀಸರು ಬಂಧಿಸಿದ್ದಾರೆ.

ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ನಂದಿಪುರ ಗ್ರಾಮದ ಮಂಜುನಾಥ ಡಿ. (29), ಬಿಎಸ್‌ಎನ್‌ಎಲ್ ಕಚೇರಿಯ ಟೆಲಿಕಾಂ ಟೆಕ್ನಿಷಿಯನ್ ಕಣ್ಣೂರು ಜಿಲ್ಲೆಯ, ಮಾರ್ನಮಿ ಕಟ್ಟೆಯಲ್ಲಿ ವಾಸವಿದ್ದ ಕೆ.ಕೆ.ಚಾಮಿ (59), ಬಿಎಸ್‌ಎನ್‌ಎಲ್ ಕಚೇರಿಯ ಅಸಿಸ್ಟೆಂಟ್ ಆಫೀಸ್ ಸೂಪರಿಟೆಂಡೆಂಟ್ ಹಾಸನ ಜಿಲ್ಲೆಯ ಪಂಪ್‌ವೆಲ್‌ನಲ್ಲಿ ವಾಸವಿದ್ದ ತನ್ವೀರ್ ಪಾಷಾ (50) ಬಂಧಿತರು.

ಆರೋಪಿಗಳಿಂದ ಕಳವು ಮಾಡಿದ 2.50 ಲಕ್ಷ ರೂ. ಮೌಲ್ಯದ 45 ಕೆಜಿ ತಾಮ್ರದ ಕೇಬಲ್ ಮತ್ತು ಕೇಬಲ್ ಮಾರಾಟ ಮಾಡಿ ಅದರಿಂದ ಬಂದ 10 ಲಕ್ಷ ರೂ. ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ನ್ಯಾಯಾಲಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಉಡುಪಿ: ಅಧಿಕಾರಿಗಳೊಂದಿಗೆ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಶ್ಯಾಮ್ ಭಟ್ ಸಭೆ

ಹಕ್ಕುಗಳ ಉಲ್ಲಂಘನೆಯಾದರೆ ದೂರು ಕೊಡಿ

ಉಡುಪಿ: ನಾಗರಿಕರಿಗೆ ನೀಡಿರುವ ಮೂಲಭೂತ ಹಕ್ಕುಗಳೇ ಮಾನವ ಹಕ್ಕುಗಳಾಗಿದ್ದು, ಇವುಗಳ ಸಂರಕ್ಷಣೆ ಮಾಡುವುದು ಸರಕಾರಿ ಅಧಿಕಾರಿಗಳ ಕರ್ತವ್ಯ. ಇವುಗಳ ಉಲ್ಲಂಘನೆಯಾದಲ್ಲಿ ಸಾರ್ವಜನಿಕರು ಆಯೋಗಕ್ಕೆ ದೂರು ನೀಡಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ಹೇಳಿದರು.

ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ. ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ, ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಕರಣಗಳ ವಿಲೇವಾರಿ, ಸಾರ್ವಜನಿಕ ಅಹವಾಲು ಸ್ವೀಕಾರ ಮತ್ತು ದೂರುಗಳ ವಿಚಾರಣೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾರ್ವಜನಿಕರು ತಮ್ಮ ಮೂಲಭೂತ ಹಕ್ಕುಗಳನ್ನು ಉಲ್ಲಂಘನೆ ಆದಾಗ ಆಯೋಗದ ಮುಂದೆ ದೂರುಗಳನ್ನು ಸಲ್ಲಿಸುತ್ತಾರೆ. ದೂರುಗಳಿಗೆ ಸಂಬಂಧಿಸಿದಂತೆ ವರದಿಯನ್ನು ನೀಡಲು ನೋಟಿಸ್ ನೀಡುತ್ತೇವೆ. ಅವುಗಳನ್ನು ಸಕಾಲದಲ್ಲಿ ನೀಡಬೇಕು. ಇವುಗಳನ್ನು ಪರಿಶೀಲಿಸಿದಾಗ ಒಂದೊಮ್ಮೆ ತಪ್ಪು ಮಾಡಿರುವುದು ಕಂಡುಬಂದಲ್ಲಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಸೇರಿದಂತೆ ಮತ್ತಿತರ ಕ್ರಮಗಳನ್ನು ಕೈಗೊಳ್ಳಲು ಸರಕಾರಕ್ಕೆ ಶಿಫಾರಸ್ಸು ಮಾಡಲಾಗುವುದು. ಕೆಲವೊಂದು ಗಂಭೀರ ಪ್ರಕರಣಗಳಲ್ಲಿ ಪರಿಹಾರವನ್ನು ಒದಗಿಸಲು ಸಹ ಶಿಫಾರಸ್ಸು ಮಾಡಲಾಗುವುದು ಎಂದರು.

ಆಯೋಗದ ಸದಸ್ಯ ಎಸ್.ಕೆ ವಂಟಿಗೋಡಿ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿಯೂ ಹುಟ್ಟಿನಿಂದಲೇ ನೈಸರ್ಗಿಕವಾಗಿ ಮಾನವ ಹಕ್ಕುಗಳನ್ನು ಪಡೆದಿರುತ್ತಾನೆ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಗೌರವಯುತವಾಗಿ



» ದೂರುಗಳಿಗೆ ಸಂಬಂಧಿಸಿದಂತೆ ವರದಿಯನ್ನು ನೀಡಲು ನೋಟಿಸ್ ನೀಡುತ್ತೇವೆ. ಅವುಗಳನ್ನು ಸಕಾಲದಲ್ಲಿ ನೀಡಬೇಕು.

» ಇವುಗಳನ್ನು ಪರಿಶೀಲಿಸಿದಾಗ ಒಂದೊಮ್ಮೆ ತಪ್ಪು ಮಾಡಿರುವುದು ಕಂಡುಬಂದಲ್ಲಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಸೇರಿದಂತೆ ಮತ್ತಿತರ ಕ್ರಮಗಳನ್ನು ಕೈಗೊಳ್ಳಲು ಸರಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

ಬದುಕುವ ಹಕ್ಕು ಇದೆ. ಇವುಗಳು ಉಲ್ಲಂಘನೆ ಆದ ಸಂದರ್ಭದಲ್ಲಿ ಅವುಗಳನ್ನು ಪ್ರಶ್ನಿಸುವ ಹಕ್ಕು ಸಹ ಇದೆ ಎಂದರು.

ಸರಕಾರ ಜನಸಾಮಾನ್ಯರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುತ್ತದೆ. ಇವುಗಳು ಅರ್ಹರಿಗೆ ತಲುಪುವಂತಾಗಬೇಕು. ಕಾನೂನಿನ ಅಡಿಯಲ್ಲಿ ಸೇವೆಗಳನ್ನು ಪಡೆಯಲು ಹಕ್ಕು ಹೊಂದಿದ್ದು, ಅವುಗಳನ್ನು ನೀಡಲು ವಿಳಂಬ ಮಾಡುವುದು ಸಹ ಈ ಕಾನೂನಿನ ಉಲ್ಲಂಘನೆಯಾಗಿದೆ ಎಂದರು.

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಮಾತನಾಡಿ, ಜಿಲ್ಲೆಯು ಭೌಗೋಳಿಕವಾಗಿ ಇತರೆ ಜಿಲ್ಲೆಗಳಿಗೆ ಹೋಲಿಸಿದಲ್ಲಿ ವ್ಯತ್ಯಾಸವಿದೆ. ಸರಕಾರದ ಕೆಲವು ಯೋಜನೆ, ಕಾರ್ಯಕ್ರಮಗಳು ಹಾಗೂ ನಿಯಮಾವಳಿಗಳ ಅನುಷ್ಠಾನಗೊಳಿಸಲು ಕೆಲವೊಂದು ಮಾರ್ಪಾಡುಗಳು ಹಾಗೂ ವಿನಾಯಿತಿಗಳನ್ನು ನೀಡುವುದು ಅವಶ್ಯವಿದೆ. ಜಿಲ್ಲೆಯಲ್ಲಿ ಹೆಚ್ಚಿನ ಇಲಾಖೆಗಳಲ್ಲಿ ಸಿಬ್ಬಂದಿಯ ಕೊರತೆಗಳು ಇವೆ. ಈ ಹಿಂದೆ 3 ತಾಲೂಕು ಇದ್ದ ಉಡುಪಿ ಜಿಲ್ಲೆಯು ಪ್ರಸ್ತುತ 7 ತಾಲೂಕಾಗಿ ಮಾರ್ಪಟ್ಟಿದ್ದರೂ ಸಹ ಅಧಿಕಾರಿ ಹಾಗೂ ಸಿಬ್ಬಂದಿಗಳು ಉತ್ತಮವಾಗಿ ತಮ್ಮ ಕರ್ತವ್ಯಗಳನ್ನು ಎಲ್ಲಾ ಇಲಾಖೆಗಳಲ್ಲಿ ನಿರ್ವಹಿಸುತ್ತಿದ್ದಾರೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್, ಡಿ.ಎಫ್.ಓ ರುಥ್ರೇನ್ ಪಿ, ವೈಲ್ಡ್ ಲೈಫ್ ಡಿ.ಎಫ್.ಓ ಶಿವರಾಂ ಎಂ ಬಾಬು, ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರರುಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಅಜ್ಜರಕಾಡಿನಲ್ಲಿರುವ ಜಿಲ್ಲಾಸ್ಪತ್ರೆಗೆ ಭೇಟಿ



ಉಡುಪಿ: ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ಹಾಗೂ ಸದಸ್ಯರಾದ ಎಸ್.ಕೆ ವಂಟಿಗೋಡಿ ಅವರು ಗುರುವಾರ ನಗರದ ಅಜ್ಜರಕಾಡಿನಲ್ಲಿರುವ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದರು.

ಜಿಲ್ಲಾಸ್ಪತ್ರೆಯ ನೋಂದಣಿ ಕೇಂದ್ರ, ರೋಗಿಗಳ ವಾರ್ಡ್, ತೀವ್ರ ನಿಗಾ ಘಟಕ, ಔಷಧಿ ಉಗ್ರಾಣ, ಆಸ್ಪತ್ರೆಯ ಸ್ವಚ್ಛತೆ ಬಗ್ಗೆ ಪರಿಶೀಲಿಸಿದರು. ಇದೇ ಸಂದರ್ಭದಲ್ಲಿ ಮಾತನಾಡುತ್ತಾ, ಆಸ್ಪತ್ರೆ ಯ ಪ್ರವೇಶದ್ವಾರದಲ್ಲಿ ರೋಗಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಲು ಹೆಚ್ಚು ಜನರು ಸರದಿ ಸಾಲಿನಲ್ಲಿ ನಿಂತಿರುವುದು ಕಂಡು ಬಂದ ಹಿನ್ನೆಲೆ, ಜಿಲ್ಲಾ ಸರ್ಜನ್ ಅವರಿಗೆ ನೋಂದಣಿ ಕೌಂಟರ್‌ಗಳ ಬಗ್ಗೆ ಮಾಹಿತಿ ಪಡೆದರಲ್ಲದೆ, ಇನ್ನೂ ಹೆಚ್ಚು ನೋಂದಣಿ ಕೌಂಟರ್‌ಗಳನ್ನು ಸ್ಥಾಪಿಸಲು ತಿಳಿಸಿದರು.

ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುವ ರೋಗಿಗಳಿಂದ ಚಿಕಿತ್ಸೆ ನೀಡುವ ಬಗ್ಗೆ ಮಾಹಿತಿಗಳನ್ನು ಕೇಳಿ ಪಡೆದರು.

ಆಸ್ಪತ್ರೆಯ ಸ್ವಚ್ಛತೆ, ಶುಭ್ರತೆ, ಪರಿಶೀಲಿಸಿದ ಅವರು, ಆಸ್ಪತ್ರೆಯ ಒಳ ಕಾರಿಡಾರ್‌ಗಳಲ್ಲಿ ಬೆಳಕಿನ ಅಭಾವ ಕಂಡು ಬಂದ ಹಿನ್ನಲೆ, ಕಾರಿಡಾರ್‌ಗಳಲ್ಲಿ ಲೈಟ್‌ಗಳನ್ನು ಅಳವಡಿಸಲು ಸೂಚನೆ ನೀಡಿದರು.

ರಾಜ್ಯದ ಔಷಧಿ ಕೇಂದ್ರಗಳಿಂದ ಸರಬರಾಜಾದ ಔಷಧಿ ಸೇರಿದಂತೆ ಮತ್ತಿತರ ಪರಿಕರಗಳನ್ನು ಉಗ್ರಾಣದ ಒಳಭಾಗದಲ್ಲಿ ಇಡದೇ ಕಾರಿಡಾರ್‌ಗಳಲ್ಲಿ ದಾಸ್ತಾನು ಮಾಡಿರುವ ಬಗ್ಗೆ ಪ್ರಶ್ನಿಸಿದ ಅವರು, ಔಷಧಿಗಳು ಅವಧಿ ಮುನ್ನವೇ ಜನಸಾಮಾನ್ಯರಿಗೆ ಉಪಯೋಗಕ್ಕೆ ಬರುವಂತೆ ಕ್ರಮವಹಿಸಬೇಕೆಂದರು.

ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಜಿಲ್ಲಾಸ್ಪತ್ರೆಯ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದ ಅವರು, ಆಸ್ಪತ್ರೆ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು. ಆಸ್ಪತ್ರೆಗೆ ಅವಶ್ಯವಿರುವ ಸಿಬ್ಬಂದಿಗಳ ಬಗ್ಗೆ ಹಾಗೂ ಹೆಚ್ಚುವರಿ ಬೇಡಿಕೆಗಳಿಗಾಗಿ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ಜನ್ ಡಾ. ಅಶೋಕ್, ವೈದ್ಯಾಧಿಕಾರಿ ಡಾ. ವಾಸುದೇವ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯ್ಕ್, ವಾರ್ತಾಧಿಕಾರಿ ಮಂಜುನಾಥ್ ಬಿ. ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಮತ್ತಿತರರು ಉಪಸ್ಥಿತರಿದ್ದರು.

ಕಡಬದ ಯುವಕ ಐರ್ಲೆಂಡ್‌ನಲ್ಲಿ ಸಾವು

ಕಡಬ: ಐರ್ಲೆಂಡ್‌ನಲ್ಲಿ ತನ್ನ ಪತ್ನಿಯ ಜೊತೆ ವಾಸ್ತವ್ಯವಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ಮೂಲದ ಯುವಕ ತನ್ನ ನಿವಾಸದಲ್ಲೇ ನಿಗೂಢವಾಗಿ ಸಾವನ್ನಪ್ಪಿರುವ ಘಟನೆ ಫೆಬ್ರವರಿ 19ರಂದು ಸಂಭವಿಸಿದೆ.

ದ.ಕ. ಜಿಲ್ಲೆಯ ಕಡಬ ತಾಲೂಕಿನ ಕುಟ್ರುಪಾಡಿ ಗ್ರಾಮದ ವಿಮಲಗಿರಿ ನಿವಾಸಿ ಕೃಷಿಕ ಸುನಿಲ್ ಅವರ ಪುತ್ರ ಸ್ಯಾಂಜೋ ಸುನಿಲ್ (31) ಮೃತಪಟ್ಟವರು.



ಇವರು ಐರ್ಲೆಂಡ್‌ನ ಡಬ್ಲಿನ್ ನಗರದ ಫಿಂಗ್ಲಾಸ್‌ನ ಚಾರ್ಲ್ಸ್‌ಟನ್ ಪ್ರದೇಶದಲ್ಲಿ ವಾಸವಾಗಿದ್ದರು.

ಗುರುವಾರ ಸಾಂಜೋ ಸುನಿಲ್ ಅವರು ತಮ್ಮ ಮನೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಐರಿಶ್ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ್ದಾರೆ. ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಇರಬಹುದು ಎಂದು ಶಂಕಿಸಲಾಗಿದ್ದರೂ, ಸಾವಿನ ನಿಖರ ಕಾರಣ ಇನ್ನಷ್ಟೆ ತಿಳಿದು ಬರಬೇಕಿದೆ.

ಪೊಲೀಸರು ಇದನ್ನು ಸಂಶಯಾಸ್ಪದ ಸಾವು ಎಂದು ಪರಿಗಣಿಸಿ ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಪತಿಯ ಸಾವಿನ ಸುದ್ದಿ ಕೇಳುತ್ತಿದ್ದಂತೆಯೇ ಸಾಂಜೋ ಅವರ ಪತ್ನಿ ತೀವ್ರ ಆಘಾತಕ್ಕೊಳಗಾಗಿ ಅಸ್ವಸ್ಥಗೊಂಡಿರುವುದಾಗಿ ತಿಳಿದು ಬಂದಿದೆ.

ಪ್ರಸ್ತುತ ಐರಿಶ್ ಪೊಲೀಸರು ಮರಣೋತ್ತರ ಪರೀಕ್ಷೆ ಹಾಗೂ ಮುಂದಿನ ಕಾನೂನು ಪ್ರಕ್ರಿಯೆಗಳನ್ನು ನಡೆಸುತ್ತಿದ್ದಾರೆ.

ಮೃತದೇಹವನ್ನು ಭಾರತಕ್ಕೆ ತರುವ ಕುರಿತು ಕುಟುಂಬಸ್ಥರು ಅಧಿಕಾರಿಗಳ ನೆರವು ಕೋರುವ ಸಾಧ್ಯತೆ ಇದೆ. ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ.

ವಿಮಲ ಗಿರಿ ನಿವಾಸಿ ಸುನಿಲ್ ಅವರ ಪುತ್ರ ಇಸ್ರೇಲ್‌ನಲ್ಲಿ ಉದ್ಯೋಗದಲ್ಲಿದ್ದ ಸಾಂಜೋ ಸುನಿಲ್ ಅವರಿಗೆ ವರ್ಷದ ಹಿಂದೆ ಮದುವೆಯಾಗಿತ್ತು. ಪತ್ನಿ ಲಿಷ್ಮಾ ಫಿಲಿಪ್ ಅವರು ಐರ್ಲೆಂಡ್‌ನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿರುವ ಹಿನ್ನೆಲೆಯಲ್ಲಿ ಮದುವೆಯ ಬಳಿಕ ಇಸ್ರೇಲ್‌ನಲ್ಲಿದ್ದ ಉದ್ಯೋಗವನ್ನು ಬಿಟ್ಟು ಸ್ಯಾಂಜೋ ಸುನಿಲ್ ಜೊತೆ ಐರ್ಲೆಂಡ್‌ನಲ್ಲಿ ಕೆಲಸ ಮಾಡುವುದಕ್ಕಾಗಿ ತಿಂಗಳ ಹಿಂದಷ್ಟೇ ಅಲ್ಲಿಗೆ ತೆರಳಿದ್ದರು ಎಂದು ತಿಳಿದುಬಂದಿದೆ.

ಮೃತರು ಪತ್ನಿ, ತಂದೆ, ತಾಯಿ ಮತ್ತು ಇಬ್ಬರು ಸಹೋದರರನ್ನು ಅಗಲಿದ್ದಾರೆ. ಮೃತದೇಹವನ್ನು ಭಾರತಕ್ಕೆ ತರುವ ನಿಟ್ಟಿನಲ್ಲಿ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಐರ್ಲೆಂಡ್‌ನ ಭಾರತೀಯ ರಾಯಭಾರ ಕಚೇರಿಯನ್ನು ಸಂಪರ್ಕಿಸಿದ್ದಾರೆ ಎನ್ನುವ ಮಾಹಿತಿ ಇದೆ.

ಕೊಡಗು ಜಿಲ್ಲೆಯ ಜನತೆಗೆ ಮುಗಿಯಲು ಕೇಳದ ಸಂಕಷ್ಟ

ಕಾರಿನ ಮೇಲೆ ಕಾಡಾನೆಗಳ ದಾಳಿ

ಮಡಿಕೇರಿ: ಚಲಿಸುತ್ತಿದ್ದ ಕಾರಿನ ಮೇಲೆ ಕಾಡಾನೆಗಳ ಹಿಂಡು ದಾಳಿ ನಡೆಸಿರುವ ಘಟನೆ ಬುಧವಾರ ರಾತ್ರಿ ಸಿದ್ದಾಪುರ ಸಮೀಪದ ಕರಡಿಗೋಡು ಬಳಿ ನಡೆದಿದ್ದು, ಕಾರು ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸಿದ್ದಾಪುರ ಸಮೀಪದ ಪುಲಿಯೇರಿ ಗ್ರಾಮದ ಪ್ರಜಿತ್ ಎಂಬವರು ಮೈಸೂರಿಗೆ ತೆರಳಿ ರಾತ್ರಿ ಸಿದ್ದಾಪುರದತ್ತ ಬರುತ್ತಿರುವಾಗ, ಸಿದ್ದಾಪುರ -ಮೈಸೂರು ರಸ್ತೆ ಟೀಕ್ ವುಡ್ ಕಾಫಿ ತೋಟದ ಸಮೀಪದಲ್ಲಿ ಮೊದಲಿಗೆ ಆ ರಸ್ತೆ ಮೂಲಕ ಕಾಡಾನೆಯೊಂದು ಬರುತ್ತಿರುವುದನ್ನು ಗಮನಿಸಿ ಕಾರನ್ನು ನಿಧಾನವಾಗಿ ಚಲಾಯಿಸಿದ್ದಾರೆ. ಈ



ಸಂದರ್ಭ ಏಕಾಏಕಿ 4 ಕಾಡಾನೆಗಳಿದ್ದ ಗುಂಪು ಕಾರಿನ ಮೇಲೆ ದಾಳಿ ನಡೆಸಿದ್ದು, ಕಾರು ಚಾಲನೆ ಮಾಡುತ್ತಿದ್ದ ಪ್ರಜಿತ್ ಭಯದಿಂದಲೇ ಕಾರಿನಲ್ಲೇ ಕುಳಿತುಕೊಂಡಿದ್ದಾರೆ.

ಕಾಡಾನೆಗಳು ದಂತದಿಂದ ಕಾರಿನ ಮೇಲೆ ದಾಳಿ ನಡೆಸಿದ ಪರಿಣಾಮ ಕಾರಿಗೆ ಹಾನಿಯಾಗಿದೆ. ಶಬ್ದ ಕೇಳಿದ ಕೂಡಲೇ ಸ್ಥಳಕ್ಕಾಗಮಿಸಿದ ಟೀಕ್ ವುಡ್ ಕಾಫಿ ತೋಟದ ವ್ಯವಸ್ಥಾಪಕ ಅನಿಲ್ ಅವರು ನೋಡಿದಾಗ ಕಾಡಾನೆಗಳು ಕಾರಿನ ಮೇಲೆ ದಾಳಿ ನಡೆಸಿರುವುದು ಗೋಚರಿಸಿದೆ. ಆತಂಕಕ್ಕೆ ಸಿಲುಕಿದ್ದ ಚಾಲಕನನ್ನು ವಿಚಾರಿಸಿದ ಅನಿಲ್ ಧೈರ್ಯ ತುಂಬಿದ್ದಾರೆ.

ಕಾಡಾನೆಗಳು ಕಾಫಿ ತೋಟಕ್ಕೆ ತೆರಳಿದ ನಂತರ ಕಾರು ಚಾಲಕ ಕಾರನಲ್ಲಿ ಸಿದ್ದಾಪುರಕ್ಕೆ ತೆರಳಿದರು.

ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ರೈತರೊಂದಿಗೆ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಭರವಸೆ

ರೈತರಿಗೆ ಬಂದೂಕು ಪರವಾನಗಿ ನವೀಕರಣಕ್ಕೆ ಆನ್‌ಲೈನ್ ವ್ಯವಸ್ಥೆ



ಮಂಗಳೂರು: ರೈತರಿಗೆ ಗನ್ ಪರವಾನಗಿ ನೀಡುವ ಹಾಗೂ ನವೀಕರಣ ಪ್ರಕ್ರಿಯೆಯಲ್ಲಿ ಉಂಟಾಗುತ್ತಿರುವ ವಿಳಂಬವನ್ನು ನಿವಾರಿಸಲು ಶೀಘ್ರದಲ್ಲೇ ಆನ್‌ಲೈನ್ ವ್ಯವಸ್ಥೆ ಮಾಡಲಾಗುವುದು ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದ್ದಾರೆ.

ಗುರುವಾರ ದ.ಕ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರೈತರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಇನ್ನೆರಡು ವಾರಗಳೊಳಗೆ ಆನ್‌ಲೈನ್ ವ್ಯವಸ್ಥೆ ಜಾರಿಗೆ ಬರಲಿದೆ. ಇದರಿಂದ ಗನ್ ಪರವಾನಗಿ ನೀಡುವ ಪ್ರಕ್ರಿಯೆ ಒಂದು ತಿಂಗಳೊಳಗೆ ಅಥವಾ ಗರಿಷ್ಠ ಒಂದೂವರೆ ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದರು.

ಪರಿಹಾರ ವಿಳಂಬ

ಭಾರೀ ಮಳೆಯಿಂದ ಅಡಿಕೆ ಬೆಳೆ ಹಾನಿಗೊಳಗಾದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಪರಿಹಾರ ಪಾವತಿಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ ರೈತರು ಆಕ್ರೋಶ ವ್ಯಕ್ತಪಡಿಸಿದರು. ಸಹಕಾರ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳು ಬಡ ರೈತರಿಗೆ ಸಾಲ ನೀಡುತ್ತಿಲ್ಲ ಎಂದು ರೈತ ಮುಖಂಡ ಯಾದವ ಶೆಟ್ಟಿ ಆರೋಪಿಸಿದರು.



ವಿದ್ಯುತ್ ಮಾರ್ಗ ಬದಲಾವಣೆಗೆ ಆಗ್ರಹ

ಉಡುಪಿ-ಕಾಸರಗೋಡು 400 ಕೆವಿ ಹೈಟೆನ್ಷನ್ ವಿದ್ಯುತ್ ಲೈನ್ ಅಳವಡಿಕೆ ಯೋಜನೆಗೆ ರೈತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 19 ಗ್ರಾಮಗಳು ಈ ಯೋಜನೆಯಿಂದ ಸಮಸ್ಯೆಗೆ ಒಳಗಾಗಲಿವೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಯವರು, ಯೋಜನೆಯ ಡಿಪಿಆರ್ 9 ವರ್ಷಗಳ ಹಿಂದೆ ಸಿದ್ಧಗೊಂಡಿದ್ದು, ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುವುದರಿಂದ ಮಾರ್ಗ ಬದಲಾವಣೆ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಅನೇಕ ಮಂದಿ ರೈತರು ಗನ್ ಪರವಾನಗಿ ಮತ್ತು ನವೀಕರಣ ಪ್ರಕ್ರಿಯೆ ವಿಳಂಬವಾಗುತ್ತಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲದೆ ಪರವಾನಗಿ ಹೊಂದಿದ ಗನ್‌ಗಳಿಗೆ ಹಲವು ಬಾರಿ ಪೊಲೀಸ್ ಪರಿಶೀಲನೆ ನಡೆಸುತ್ತಿರುವುದರ ಬಗ್ಗೆ ರೈತರು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ, ಪರವಾನಗಿ ಹೊಂದಿದ ಗನ್‌ಗಳನ್ನು ಹೊಂದಿದವರಿಂದಲೇ ಬೆದರಿಕೆ ಪ್ರಕರಣ ಮತ್ತು ಕಾಡು ಹಂದಿ ಹತ್ಯೆ ಪ್ರಕರಣಗಳಲ್ಲಿ ಬಳಸಿದ ಉದಾಹರಣೆಗಳಿವೆ. ಆದ್ದರಿಂದ ಅನಧಿಕೃತ ಬಳಕೆಯನ್ನು ತಡೆಗಟ್ಟಲು ಗನ್ ಪರಿಶೀಲನೆ ಅಗತ್ಯ ಎಂದರು.

2013ರಲ್ಲಿ ಶಿಲಾನ್ಯಾಸಗೊಂಡು ನೆನೆಗುದಿಗೆ ಬಿದ್ದಿದ್ದ ಯೋಜನೆಗೆ ಮರುಜೀವ। ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಸ್ಪೀಕರ್ ಯು.ಟಿ. ಖಾದರ್

ತುಳುನಾಡಿನ ತೊಕ್ಕೊಟ್ಟಿನಲ್ಲಿ ತಲೆಯೆತ್ತಲಿದೆ ಭವ್ಯ, ಸುಸಜ್ಜಿತ ಅಬ್ಬಕ್ಕ ಭವನ!

ಉಳ್ಳಾಲ: ಹನ್ನೆರಡು ವರುಷಗಳ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ರಮಾನಾಥ ರೈ ಅವರು ತೊಕ್ಕೊಟ್ಟಿನ ಕೇಂದ್ರ ಬಸ್ಸು ನಿಲ್ದಾಣದ ಬಳಿಯ ಜಾಗದಲ್ಲಿ ಅಬ್ಬಕ್ಕ ಭವನ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಿದ್ದರೂ ಸಹ ತಾಂತ್ರಿಕ ಸಮಸ್ಯೆಗಳಿಂದ ಕಟ್ಟಡ ನಿರ್ಮಾಣ ಕಾಮಗಾರಿ ನೆನೆಗುದಿಗೆ ಬಿದ್ದಿತ್ತು. ಇದೀಗ ತೊಕ್ಕೊಟ್ಟಿನಲ್ಲಿ ಅಬ್ಬಕ್ಕ ಭವನ ನಿರ್ಮಾಣದ ದಶಕಗಳ ಯೋಜನೆಗೆ ಮರುಜೀವ ಸಿಕ್ಕಿದ್ದು ಗುರುವಾರದಂದು ವಿದಾನಸಭೆಯ ಸಭಾಧ್ಯಕ್ಷರಾದ ಯು.ಟಿ. ಖಾದರ್ ಅವರು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ್ದು, ನೂತನ ಕಟ್ಟಡ ನಿರ್ಮಾಣಕ್ಕೆ ಗಡಿ ಗುರುತು ಪ್ರಕ್ರಿಯೆ ನಡೆಯಿತು.

ಸ್ಥಳ ಪರಿಶೀಲನೆ ನಡೆಸಿ ಮಾತನಾಡಿದ ಸ್ಪೀಕರ್ ಖಾದರ್ ಅವರು, 2018 ರಲ್ಲಿ ನಾನು ಸಚಿವನಾಗಿದ್ದಾಗ ಅಂದಿನ ಮುಖ್ಯ ಮಂತ್ರಿ ಸಿದ್ಧರಾಮಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀಯವರು ಉಳ್ಳಾಲ ತಾಲೂಕಿನ ತೊಕ್ಕೊಟ್ಟಿನಲ್ಲಿ ಅಬ್ಬಕ್ಕ ಭವನ ನಿರ್ಮಾಣಕ್ಕೆ ಎಂಟು ಕೋಟಿ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡಿದ್ದರು. ಆದರೆ ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ ಅಂದು ಬಿಡುಗಡೆಯಾದ ಅನುದಾನವು ಹಾಗೆಯೇ ಬಾಕಿ





ಉಳಿದಿತ್ತು. ಇದೀಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಗೃಹ ಮಂಡಳಿ, ಜಿಲ್ಲಾಧಿಕಾರಿಗಳ ನಡುವೆ ಮಾತುಕತೆ ನಡೆದ ಬಳಿಕ ಎಲ್ಲಾ ಸಮಸ್ಯೆ ಬಗೆಹರಿದಿದ್ದು, ಇಂದು ಅಬ್ಬಕ್ಕ ಭವನ ನಿರ್ಮಾಣಕ್ಕೆ ಗಡಿ ಗುರುತು ಮಾಡಿ ಸ್ಥಳ ಪರಿಶೀಲನೆ ನಡೆಸಲಾಗಿದೆ. ಶೀಘ್ರವೇ ಕಾಮಗಾರಿ ಆರಂಭಿಸಲಿದ್ದು, ಕೆಲವೇ ದಿನಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರು ಅಬ್ಬಕ್ಕ ಭವನ ಮತ್ತು ಕೊಣಾಜೆ ಮಂಗಳೂರು ವಿವಿ ಬಳಿಯ ವಿಶಾಲ ಪ್ರದೇಶದಲ್ಲಿ ನಿರ್ಮಾಣಗೊಳ್ಳಲಿರುವ ಬ್ಯಾರಿ ಭವನಕ್ಕೂ ಅಧಿಕೃತವಾಗಿ ಶಂಕು ಸ್ಥಾಪನೆ ನೆರವೇರಿಸಲಿರುವರೆಂದರು.

ಅಬ್ಬಕ್ಕ ಭವನ ನಿರ್ಮಾಣದಿಂದ ಭವಿಷ್ಯದ ಅಭಿವೃದ್ಧಿ ಕಾಮಗಾರಿಗಳಿಗೆ ತೊಂದರೆಯಾಗಬಾರದೆಂಬ ಮುಂಜಾಗ್ರತೆಯಿಂದ ಸ್ಥಳೀಯರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಬ್ಬಕ್ಕ ಭವನವನ್ನು ಸುಂದರವಾಗಿ ನಿರ್ಮಿಸುವ ದೃಷ್ಟಿಯಲ್ಲಿ ಪ್ರದೇಶವನ್ನ ಪರಿಶೀಲನೆ ನಡೆಸಲಾಗಿದೆಯೆಂದರು.

ತೊಕ್ಕೊಟ್ಟಿನ ಉದ್ದೇಶಿತ ಅಬ್ಬಕ್ಕ ಭವನದ ಪಕ್ಕದಲ್ಲೇ ಬ್ಯಾರಿ ಭವನ ನಿರ್ಮಾಣಕ್ಕೂ ಭೂಮಿ ಮಂಜೂರಾಗಿತ್ತು. ಆದರೆ ಅಬ್ಬಕ್ಕ ಭವನದ ಪಕ್ಕದಲ್ಲೇ ಬ್ಯಾರಿ ಭವನ ನಿರ್ಮಾಣಕ್ಕೆ ವಿರೋಧ ವ್ಯಕ್ತವಾಗಿತ್ತು. ಹಾಗಾಗಿ ಈ ವಿಚಾರದಲ್ಲಿ ವಿವಾದವೇ ಬೇಡವೆಂದು ಮಂಗಳೂರು ವಿಶ್ವ ವಿದ್ಯಾಲಯದ ಬಳಿಯ ವಿಶಾಲ ಜಾಗದಲ್ಲಿ ಬ್ಯಾರಿ ಭವನ ನಿರ್ಮಾಣಕ್ಕೆ ಯೋಜನೆ ನಿರ್ಮಿಸಲಾಗಿದ್ದು, ಅಬ್ಬಕ್ಕ ಭವನದ ಜೊತೆಯಲ್ಲೇ ಬ್ಯಾರಿ ಭವನ ನಿರ್ಮಾಣ ಕಾಮಗಾರಿಗೆ ಸಚಿವ ತಂಗಡಗಿಯವರು ಶೀಘ್ರದಲ್ಲೇ ಶಂಕು ಸ್ಥಾಪನೆ ನೆರವೇರಿಸಲಿದ್ದಾರೆಂದು ಖಾದರ್ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರಾದ ರಾಜೇಶ್ ಜಿ, ಕರ್ನಾಟಕ ಗೃಹ ಮಂಡಳಿಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಾದ ಸಹನಾ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ, ಮಾಜಿ ತಾ.ಪಂ ಸದಸ್ಯೆ ಸುರೇಖ ಚಂದ್ರಹಾಸ್, ಉಳ್ಳಾಲ ಬ್ಲಾಕ್ ಮಹಿಳಾ ಕಾಂಗ್ರೆಸ್‌ನ ಅಧ್ಯಕ್ಷೆ ಚಂದ್ರಿಕಾ ರೈ ಮೊದಲಾದವರು ಉಪಸ್ಥಿತರಿದ್ದರು.

> **ಉಳ್ಳಾಲ ರಾಣಿ ಅಬ್ಬಕ್ಕ ಉತ್ಸವ ಸಮಿತಿಯು ಕಳೆದ ಕೆಲ ವರುಷಗಳಿಂದ ಸೀಮಿತ ಚೌಕಟ್ಟಿನಲ್ಲಿ ಅಬ್ಬಕ್ಕ ಉತ್ಸವವನ್ನು ನಡೆಸುತ್ತಾ ಬಂದಿದೆ. ಮುಂದಿನ ಏಪ್ರಿಲ್ ತಿಂಗಳಿನಲ್ಲಿ ಸರಕಾರದ ಮಟ್ಟದಲ್ಲಿ ಉಳ್ಳಾಲದ ಎಲ್ಲಾ ಸಂಘ ಸಂಸ್ಥೆಗಳನ್ನು ಒಗ್ಗೂಡಿಸಿ,ರಾಜಕೀಯ ರಹಿತವಾಗಿ, ಯಾವುದೇ ಸ್ವಪೇಕ್ಷೆ ಇಲ್ಲದೆ ಅದ್ದೂರಿಯ ಅಬ್ಬಕ್ಕ ಉತ್ಸವವನ್ನು ನಡೆಸಲಿದ್ದು, ಇದನ್ನು ಉಳ್ಳಾಲ ಉತ್ಸವವಾಗಿ ಪರಿವರ್ತಿಸಲಿದ್ದೇವೆ. ಸರಕಾರದ ಮಟ್ಟದಲ್ಲಿ ನಡೆಯುವ ಈ 'ಅಬ್ಬಕ್ಕ ಉತ್ಸವ'ದ ಮೇಲುಸ್ತುವಾರಿಯನ್ನು ಮಹಿಳಾ ಸಮಿತಿಯೇ ವಹಿಸಬೇಕೆಂಬ ಅಭಿಪ್ರಾಯವೂ ಕೇಳಿ ಬಂದಿದೆ.**
>
> ■ ಯು.ಟಿ.ಖಾದರ್. ಸ್ಪೀಕರ್

ಮೂರು ಅಂತಸ್ತಿನ ಸುಸಜ್ಜಿತ ಭವನ

ಉಳ್ಳಾಲವು ಪ್ರತ್ಯೇಕ ತಾಲೂಕಾಗಿ ಮಾರ್ಪಟ್ಟಾಗಲೂ ನಾವು ಮಂಗಳೂರಿನ ಟೌನ್ ಹಾಲನ್ನೇ ಅವಲಂಬಿಸುವ ಅನಿವಾರ್ಯತೆ ಇತ್ತು. ನಮ್ಮ ತಾಲೂಕಲ್ಲಿ ಟೌನ್ ಹಾಲ್ ಇಲ್ಲದ್ದಕ್ಕಾಗಿ ಅಬ್ಬಕ್ಕ ಭವನವನ್ನು ಕೇಳಿದ್ದೆವು. ಇದೀಗ ನಿರ್ಮಾಣಗೊಳ್ಳಲಿರುವ ಅಬ್ಬಕ್ಕ ಭವನವು ಉಳ್ಳಾಲ ತಾಲೂಕಿನ ಮಿನಿ ಟೌನ್ ಹಾಲ್ ಆಗಿ ರಾರಾಜಿಸಲಿದೆ. 41 ಸೆಂಟ್ಸ್ ಜಾಗದಲ್ಲಿ 22,223 ಚದರ ಅಡಿಯ ಮೂರು ಅಂತಸ್ತಿನ ಭವನ ನಿರ್ಮಾಣಗೊಳ್ಳಲಿದ್ದು, ಅದರಲ್ಲಿ 410 ಆಸನಗಳುಳ್ಳ ಸುಸಜ್ಜಿತ ಸಭಾಂಗಣ, ಗ್ರೀನ್ ರೂಮ್, ಮೀಟಿಂಗ್ ಹಾಲ್, ಅಬ್ಬಕ್ಕಳ ಚರಿತ್ರೆ ಕುರಿತಾದ ಮ್ಯೂಸಿಯಮ್, ಕೆಳ ಅಂತಸ್ತಲ್ಲಿ ಸುಸಜ್ಜಿತ ಕಾರ್ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆಯೆಂದು ಖಾದರ್ ತಿಳಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಶುಕ್ರವಾರ 20, ಫೆಬ್ರವರಿ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬಂದರೋ ಬಂದರು ನಮ್ಮ ಬಂದರಿಗೆ ಅತಿಥಿಗಳು!

165

ಒಟ್ಟು 95 ಪ್ರಯಾಣಿಕರು, 70 ಸಿಬ್ಬಂದಿ ಸಹಿತ ಈ ಹಡಗಿನಲ್ಲಿ 165 ಮಂದಿ ಇದ್ದರು.

ವಿದೇಶಿ ಪ್ರವಸಿಗರ ಕುಡ್ಲ ಸುತ್ತಾಟ!

ನವಮಂಗಳೂರಿಗೆ ಬಂದ ಬಳಿಕ ನಗರದ ಹಲವೆಡೆ ಅವರು ಸುತ್ತಾಟ ನಡೆಸಿದರು. ಕುದ್ರೋಳಿ ಗೋಕರ್ಣನಾಥ ದೇವಸ್ಥಾನ, ಸೈಂಟ್ ಅಲೋಶಿಯಸ್ ಚಾಪೆಲ್, ಸ್ಥಳೀಯ ಮಾರುಕಟ್ಟೆಗಳು ಮತ್ತು ಕಲ್ಲಾವಿ ಗೋಡಂಬಿ ಕಾರ್ಖಾನೆ ಸೇರಿದಂತೆ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರಮುಖ ತಾಣಗಳಿಗೆ ಪ್ರವಾಸಿಗರು ಭೇಟಿ ನೀಡಿದರು.

ಬಂದರಿಗೆ ಬಂದ ಎರಡನೇ ಹಡಗು!

ನವಮಂಗಳೂರಿಗೆ ಬಂದ ಪ್ರಸಕ್ತ ಋತುಮಾನದ ಎರಡನೇ ವಿಲಾಸಿ ಹಡಗು ಇದಾಗಿದೆ.



ಮರ್ಮುಗೋವಾದಿಂದ ನವಮಂಗಳೂರು ಬಂದರಿಗೆ ಗುರುವಾರ ಆಗಮಿಸಿದ 'ಐಸ್‌ಲ್ಯಾಂಡ್ ಸ್ಕೈ' ಹೆಸರಿನ ವಿಲಾಸಿ ಹಡಗನ್ನು ಅದರಲ್ಲಿದ್ದ ಪ್ರವಾಸಿಗರಿಗೆ ಆರತಿ ಬೆಳಗಿ ಹಣೆಗೆ ತಿಲಕವಿಟ್ಟು ಬರಮಾಡಿಕೊಳ್ಳಲಾಯಿತು. ವಿಶೇಷ ಸೆಲ್ಫಿ ಸ್ಟ್ಯಾಂಡ್‌ನಲ್ಲಿ ಆಯುಷ್ ಸಚಿವಾಲಯದ ಧ್ಯಾನ ಕೇಂದ್ರ, ಪ್ರವಾಸೋದ್ಯಮ ಸಚಿವಾಲಯದ ಯಕ್ಷಗಾನ ಕಲಾ ಪ್ರಕಾರದ ಸೆಲ್ಫಿ ವಿದೇಶಿಗರ ಗಮನಸೆಳೆಯಿತು.

ಜೀವಜಲಕ್ಕೆ ಕೈಗಾರಿಕಾ ರಾಸಾಯನಿಕ ತ್ಯಾಜ್ಯ
ಫಲ್ಗುಣಿಗೆ ವಿಷಪ್ರಾಶ
ಜನವಸತಿ ಪ್ರದೇಶಗಳಿಗೆ ಆರೋಗ್ಯದ ಚಿಂತೆ

ಮಂಗಳೂರು: ಫಲ್ಗುಣಿ ನದಿಗೆ ಕೈಗಾರಿಕಾ ವಿಷಕಾರಿ ತ್ಯಾಜ್ಯ ಸೇರ್ಪಡೆಯಿಂದ ಜನವಸತಿ ಪ್ರದೇಶಗಳಲ್ಲಿ ಆರೋಗ್ಯದ ಆತಂಕ ಉಂಟಾಗಿದ್ದು, ತಕ್ಷಣ ಕ್ರಮ ಕೈಗೊಳ್ಳುವಂತೆ ಹಿಂದು ಜನಜಾಗೃತಿ ಸಮಿತಿ 'ಸುರಾಜ್ಯ ಅಭಿಯಾನ'ದಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ.

ಅನಧಿಕೃತವಾಗಿ ನದಿಗೆ ತ್ಯಾಜ್ಯ

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಯಿಕಟ್ಟೆ ಪ್ರದೇಶದಲ್ಲಿ ಹರಿಯುವ ಫಲ್ಗುಣಿ ನದಿಗೆ ಸಮೀಪದ ಕೈಗಾರಿಕೆಗಳಿಂದ ವಿಷಕಾರಿ ರಾಸಾಯನಿಕ ಮತ್ತು ತ್ಯಾಜ್ಯಗಳನ್ನು ಅನಧಿಕೃತವಾಗಿ ಬಿಡಲಾಗುತ್ತಿದೆ. ಇದರಿಂದಾಗಿ ನದಿ ನೀರು ತೀವ್ರವಾಗಿ ಮಲಿನಗೊಂಡಿದ್ದು, ನೀರಿನ ಬಣ್ಣ ಬದಲಾಗಿ ಪರಿಸರದಲ್ಲಿ ತೀವ್ರ ದುರ್ವಾಸನೆ ಹರಡುತ್ತಿದೆ. ತಣ್ಣೀರು ಬಾವಿ ಸೇತುವೆ ಕಾಮಗಾರಿಗಾಗಿ ನದಿಯ ಹರಿವನ್ನು ತಾತ್ಕಾಲಿಕವಾಗಿ ತಡೆಹಿಡಿದಾಗ ಇದು ಬೆಳಕಿಗೆ ಬಂದಿದೆ. »ಪುಟ 6



ಫಲ್ಗುಣಿ ನದಿ ಕೂಳೂರು ಭಾಗದಲ್ಲಿ ಕಂಡುಬಂದ ಆಘಾತಕಾರಿ ದೃಶ್ಯವಿದು.

ಜ್ವರ, ಹೊಟ್ಟೆ ಸಂಬಂಧಿ ಕಾಯಿಲೆ, ಸಾಂಕ್ರಾಮಿಕ ರೋಗ ಭೀತಿ

ನದಿಯಲ್ಲಿ ನೂರಾರು ಮೀನುಗಳು, ಹಾವುಗಳು ಹಾಗೂ ಇತರ ಜಲಚರಗಳು ಸತ್ತು ತೇಲುತ್ತಿರುವುದು ಜಲಚರಗಳ ಮಾರಣಹೋಮವನ್ನು ಸಾರುತ್ತಿದೆ. ಕಲುಷಿತ ನೀರಿನಿಂದಾಗಿ ಸ್ಥಳೀಯ ನಿವಾಸಿಗಳಲ್ಲಿ ಜ್ವರ, ಹೊಟ್ಟೆ ಸಂಬಂಧಿತ ಕಾಯಿಲೆ ಹಾಗೂ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದ್ದು, ಇದು ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯಾಗಿದೆ ಎಂದು ನೀಡಿದ ಮನವಿಯಲ್ಲಿ ಹೇಳಲಾಗಿದೆ.

ತಕ್ಷಣ ಸೂಕ್ತ ಕ್ರಮಕ್ಕಾಗಿ ಸುರಾಜ್ಯ ಅಭಿಯಾನ ಜಿಲ್ಲಾಧಿಕಾರಿಗೆ ಮನವಿ

- ತಣ್ಣೀರು ಬಾವಿ ಸೇತುವೆ ಕಾಮಗಾರಿಗೆ ನದಿ ಹರಿವು ತಾತ್ಕಾಲಿಕವಾಗಿ ತಡೆಹಿಡಿದಾಗ ಈ ಅಂಶ ಬಹಿರಂಗಗೊಂಡಿದೆ
- ಈ ಮೊದಲು ಈ ವಿಷಕಾರಿ ತ್ಯಾಜ್ಯಗಳು ನೇರವಾಗಿ ಸಮುದ್ರಕ್ಕೆ ಸೇರುತ್ತಿದ್ದವು
- ಈ ಕೃತ್ಯವು ಭಾರತೀಯ ನ್ಯಾಯ ಸಂಹಿತೆ 2023ರ ವಿವಿಧ ಸೆಕ್ಷನ್‌ಗಳ ಉಲ್ಲಂಘನೆಯಾಗಿದ್ದು, ನಾಗರಿಕರ ಮೂಲಭೂತ ಹಕ್ಕಿನ ಹರಣವಾಗಿದೆ.

ಬೆಳ್ತಂಗಡಿ ಈಗ ಎಲ್ಲರಿಗೆ ಮಾದರಿ
ಅಶಕ್ತರಿಗೆ ಪ್ರತ್ಯೇಕ ಕೌಂಟರ್ ವ್ಯವಸ್ಥೆ!
ತಾಲೂಕು ಕಚೇರಿ ಕ್ರಮಕ್ಕೆ ಮೆಚ್ಚುಗೆ

ಬೆಳ್ತಂಗಡಿ: ಅಶಕ್ತರಿಗೆ, ಗರ್ಭಿಣಿಯರಿಗೆ, ಅಂಗವಿಕಲರಿಗೆ ಪಹಣಿ ಪತ್ರ ಹಾಗೂ ಇನ್ನಿತರ ದಾಖಲೆಗಳನ್ನು ಪಡೆಯಲು ಬೆಳ್ತಂಗಡಿ ತಾಲೂಕು ಕಚೇರಿಯಲ್ಲಿ ಪ್ರತ್ಯೇಕ ಕೌಂಟರ್ ನ ವ್ಯವಸ್ಥೆ ಗುರುವಾರದಿಂದ ಪ್ರಾರಂಭಿಸಲಾಗಿದೆ.

ಸರಕಾರದ ಸುತ್ತೋಲೆ ಇದೆ...

ತಾಲೂಕು ಕಚೇರಿ ಎದುರು ಕಂದಾಯ ದಾಖಲೆ ಪಡೆಯಲು ಎರಡು ಕೌಂಟರ್ ಇವೆಯಾದರೂ ಅಲ್ಲಿ ಪ್ರತಿದಿನ ಜನರ ಸಾಲು ಇರುತ್ತಿತ್ತು. ದಾಖಲೆ ಪಡೆಯಲು ಕೆಲವು ಹೊತ್ತು ತಗುಲುತ್ತಿತ್ತು. ಇದು ಹಿರಿಯ ನಾಗರಿಕರಿಗೆ ತೊಂದರೆ ಯಾಗುತ್ತಿತ್ತು. ಎಲ್ಲಾ ಇಲಾಖೆಗಳಲ್ಲಿ ಇಂತಹ ವ್ಯವಸ್ಥೆ ಮಾಡಬೇಕು ಎಂದು ಸರಕಾರದ ಸುತ್ತೋಲೆ ಇದ್ದರೂ ಯಾವ ಇಲಾಖೆಯವರೂ ಪಾಲಿಸುತ್ತಿರಲಿಲ್ಲ.

ಜನಸ್ಪಂದನ ಸಭೆಯಲ್ಲಿ ಚರ್ಚೆ

ಈ ಸಮಸ್ಯೆ ಬಗ್ಗೆ ಕೊಯ್ಯೂರಿನ ಜನಸ್ಪಂದನ ಕಾರ್ಯಕ್ರಮದಲ್ಲಿ ಗಮನ ಸೆಳೆಯಲಾಗಿತ್ತು. ಪ್ರತ್ಯೇಕ ವ್ಯವಸ್ಥೆ ಮಾಡಬೇಕೆಂದು ಅಲ್ಲಿನ ನಾಗರಿಕರು ಒತ್ತಾಯಿಸಿದ್ದರು. »ಪುಟ 6



ತಹಸೀಲ್ದಾರ್ ಕಾಳಜಿಗೆ ಇಲ್ಲಿನ ನಾಗರಿಕರು ಖುಷ್

ಗರ್ಭಿಣಿಯರು, ವಿಕಲಾಂಗರು, ಅಶಕ್ತರು, ವೃದ್ಧರು ಸರದಿ ಸಾಲಲ್ಲಿ ನಿಲ್ಲುವ ಅವಶ್ಯಕತೆ ಇಲ್ಲವಾಗಿದೆ. ಅವರಿಗಾಗಿ ಪ್ರತ್ಯೇಕ ವ್ಯವಸ್ಥೆ ಆರಂಭವಾಗಿದೆ. ತಹಸೀಲ್ದಾರರ ಈ ನಡೆ ನಾಗರಿಕರ ಮೆಚ್ಚುಗೆಗಳಿಸಿದೆ.

ನೇತ್ರಾವತಿ ಸೇತುವೆಯಲ್ಲಿ ಟೆಂಪೋ ಪಲ್ಟಿ | ತಡೆಬೇಲಿಗೆ ಆಗಿದೆ ಭಾರೀ ಹಾನಿ
ಮೈಮರೆತರೆ ಮತ್ತೆ 'ಸೂಸೈಡ್ ಸ್ಪಾಟ್' ಕುಖ್ಯಾತಿ!

ಉಳ್ಳಾಲ: ಮಂಗಳೂರಿನ ನೇತ್ರಾವತಿ ಸೇತುವೆ ಆವರಣ ಗೋಡೆಗೆ ಬುಧವಾರ ಮುಂಜಾನೆ ಮಿನಿ ಟೆಂಪೋ ಡಿಕ್ಕಿಯಾಗಿ ಪಲ್ಟಿಹೊಡೆದಿದ್ದು, ಘಟನೆಯಲ್ಲಿ ಟೆಂಪೋ ಚಾಲಕ ಸಣ್ಣ ಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾನೆ.

ಮತ್ತೆ ಆತ್ಮಹತ್ಯೆಗಳ ತಾಣವಾದೀತೇ?

ಈ ಘಟನೆಯಲ್ಲಿ ಸೇತುವೆಗೆ ಅರುವತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಅಳವಡಿಸಲಾದ ತಡೆಬೇಲಿಗೆ ಭಾರೀ ಹಾನಿಯಾಗಿದ್ದು, ತಕ್ಷಣ ಸರಿಪಡಿಸದಿದ್ದಲ್ಲಿ ಸೇತುವೆ ಮತ್ತೆ ಆತ್ಮಹತ್ಯೆಗಳ ತಾಣವಾಗುವ ಸನ್ನಿವೇಶ ಸೃಷ್ಟಿಯಾಗಲಿದೆ. ನೇತ್ರಾವತಿ ನದಿಯ ಈ ಸೇತುವೆಯಿಂದ ಕೆಳಗೆ ಜಿಗಿದು ಆತ್ಮಹತ್ಯೆ ನಡೆಸುವವರ ಶೋಧ ಜಿಲ್ಲಾಡಳಿತಕ್ಕೆ ತಲೆನೋವಾಗಿತ್ತು. »ಪುಟ 6



- ಕಳೆದ ಐದು ವರ್ಷ ಹಿಂದೆ ಸತತ ಆತ್ಮಹತ್ಯೆ ಪ್ರಕರಣ
- ಅವಘಡ ತಪ್ಪಿಸಲು ಆಡಳಿತದಿಂದ ತಡೆಬೇಲಿ ರಚನೆ
- ಆತಂಕ ಹೆಚ್ಚಿಸಿದೆ ಮತ್ತೆ ತಡೆಬೇಲಿಗೆ ಆಗಿರುವ ಹಾನಿ

ಸಿದ್ಧಾರ್ಥ್ ಆತಹತ್ಯೆ ಅಂದು ದೇಶದಲ್ಲೇ ಸದ್ದು ಮಾಡಿತ್ತು

ಐದು ವರುಷಗಳ ಹಿಂದೆ ನೇತ್ರಾವತಿ ಸೇತುವೆಯಿಂದ ನದಿಗೆ ಜಿಗಿದು ಅದೆಷ್ಟೋ ಮಂದಿ ಆತ್ಮಹತ್ಯೆಗೈದಿದ್ದಾರೆ. 'ಕಾಫೀ ಡೇ' ಸಂಸ್ಥಾಪಕ ಸಿದ್ಧಾರ್ಥ್ ಅವರು ಕೂಡಾ ಇದೇ ಸೇತುವೆಯಿಂದ ಜಿಗಿದು ಆತ್ಮಹತ್ಯೆಗೈದ ಘಟನೆ ದೇಶದಲ್ಲೇ ಸುದ್ದಿಯಾಗಿತ್ತು.

ಪಾಲಿಕೆ ಅಧಿಕಾರಿಗಳೇ ತಕ್ಷಣವೇ ಎಚ್ಚೆತ್ತುಕೊಳ್ಳಿ

ಟೆಂಪೋ ಡಿಕ್ಕಿಯಿಂದ ಸೇತುವೆಯ ಫೆನ್ಸಿಂಗ್ ಕಿತ್ತುಹೋಗಿದ್ದು ಇದರ ವೀಡಿಯೋ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಖಿನ್ನತೆಗೆ ಒಳಗಾದ ಮಂದಿ ಈ ವೀಡಿಯೋ ಕಂಡು ಇಲ್ಲಿ ನದಿಗೆ ಜಿಗಿದು ಆತ್ಮಹತ್ಯೆಗೈವ ಎಲ್ಲಾ ಸಾಧ್ಯತೆಗಳಿವೆ. ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಎಚ್ಚೆತ್ತು ಫೆನ್ಸಿಂಗ್ ತಕ್ಷಣ ದುರಸ್ಥಿ ಪಡಿಸಿ ಅಪಾಯ ತಪ್ಪಿಸಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

ಆರರ ಹರೆಯದ ಬಾಲಕಿ ಮೇಲೆ ಬೀದಿ ಶ್ವಾನ ದಾಳಿ
ಬಂಟ್ವಾಳ ತಾಲೂಕಲ್ಲಿ ಮತ್ತೊಂದು ಘಟನೆ

ಬಂಟ್ವಾಳ: ರಾಯಿ ಪರಿಸರದಲ್ಲಿ ಮೆಸ್ಕಾಂ ಮೀಟರ್ ರೀಡರ್ ಮೇಲೆ ನಾಯಿ ದಾಳಿ ಘಟನೆ ಮಾಸುವ ಮುನ್ನವೇ ಅಂಗನವಾಡಿ ಮಗುವಿನ ಮೇಲೆ ಬೀದಿ ನಾಯಿ ದಾಳಿ ನಡೆಸಿರುವ ಘಟನೆ ಬೋಳಂತೂರಿನಲ್ಲಿ ಗುರುವಾರ ನಡೆದಿದೆ.

ಅಂಗನವಾಡಿ ಮಗು

ಅಂಗನವಾಡಿಕೇಂದ್ರಕ್ಕೆ ತೆರಳುತ್ತಿದ್ದ ಬೋಳಂತೂರು ನಾರ್ಶ ಬಂಗಾರ ಕೋಡಿಯಲ್ಲಿ ಆರರ ಹರೆಯದ ಬಾಲಕಿ ದಾಳಿ ನಡೆದಿದೆ. »ಪುಟ 6



ಯಾವಾಗ? ಹೇಗೆ?

ಮನೆಯ ಸಮೀಪವಿರುವ ಅಂಗನವಾಡಿ ಕೇಂದ್ರಕ್ಕೆ ಬೆಳಿಗ್ಗೆ ಮಗು ಏಕಾಂಗಿಯಾಗಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಬೀದಿ ನಾಯಿ ಏಕಾಏಕಿ ದಾಳಿ ಮಾಡಿದೆ. ಪರಿಣಾಮ ಮಗುವಿನ ದೇಹದ ಮೇಲೆ ಗಾಯಗಳಾಗಿವೆ.



ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
36^0 23^0	32^0 24^0

ಸುತ್ತಮುತ್ತ

ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ: ಓರ್ವ ದಾರುಣ ಸಾವು

ಉಡುಪಿ: ಎರಡು ಬೈಕ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಖಾಸಗಿ ಬಸ್ ಚಾಲಕ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಬುಧವಾರ ತಡರಾತ್ರಿ ನಡೆದಿದೆ. ಅಪಘಾತದಲ್ಲಿ ಗಾಯಗೊಂಡ ಇತರ ಗಾಯಾಳುಗಳನ್ನು ತಕ್ಷಣವೇ ಸರಕು ಸಾಗಣೆ ಟೆಂಪೋದಲ್ಲಿ ಆಸ್ಪತ್ರೆಗೆ ಸಾಗಿಸಲಾಯಿತು. ಈ ಅಪಘಾತ ಘಟನೆಯ ವೀಡಿಯೊ ವೈರಲ್ ಆಗಿದೆ. ಉಡುಪಿಯ ಖಾಸಗಿ ಸಿಟಿ ಬಸ್‌ನಲ್ಲಿ ಬಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದ ಸಂದೀಪ್ ಮೃತವ್ಯಕ್ತಿ. ಅಂಬಾಗಿಲು ಜಂಕ್ಷನ್ ಬಳಿಯ ಪೆರಂಪಳ್ಳಿ ಕ್ರಾಸ್ ರಸ್ತೆಯಲ್ಲಿ ಎರಡು ಬೈಕ್‌ಗಳು ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರರಿಬ್ಬರಿಗೂ ಗಂಭೀರ ಗಾಯಗಳಾಗಿವೆ. ಘಟನೆಯಲ್ಲಿ ಭಾಗಿಯಾದ ಮತ್ತೊಬ್ಬ ಬೈಕ್ ಸವಾರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾನೆ.

ಶಿರೂರಿನ ಹಡವಿನಕೋಣೆ ಮುಖ್ಯರಸ್ತೆಯಲ್ಲಿ ಹೆಚ್ಚುತ್ತಿದೆ ನಾಗರಿಕರ ಸಂಕಷ್ಟ | ಕೇಳಿಸುತ್ತಿದೆ ಶಾಶ್ವತ ಮೇಲ್ಸೇತುವೆ ನಿರ್ಮಾಣಕ್ಕೆ ಬೇಡಿಕೆ
ಇಲ್ಲಿ ಮಸಣಕ್ಕೆ ಹೋಗಬೇಕು ಎಂದರೂ ರೈಲು ಹೋಗುವವರೆಗೆ ಕಾಯಬೇಕು!

ಉಪ್ಪುಂದ: ಬದುಕಿದ್ದಾಗ ಜೀವನದ ಜಂಜಾಟ ಸಹಜ. ಆದರೆ ಇಹಲೋಕ ತ್ಯಜಿಸಿದ ಮೇಲೆ ನಿಶ್ಚಿಂತೆಯಿಂದ ವೈಕುಂಠ ಸೇರಬೇಕೆಂದರೆ ಇಲ್ಲಿ ಅದು ಕೂಡ ಕಷ್ಟ. ಕಾರಣವೆಂದರೆ ಶವ ಸಂಸ್ಕಾರ ನಡೆಸಲು ಮಸಣಕ್ಕೆ ಹೋಗಬೇಕಾದರೂ ಇಲ್ಲಿ ರೈಲು ಹೋಗುವವರೆಗೆ ಕಾಯಲೇಬೇಕು!

ಹೀಗೆ ಗಂಟೆಗಟ್ಟಲೆ ಹೆಣ ಹೊತ್ತುಕೊಂಡು ನಿಲ್ಲುವ ಪರಿಸ್ಥಿತಿ ಇರುವುದು ಶಿರೂರಿನ ಹಡವಿನಕೋಣೆ ಮುಖ್ಯರಸ್ತೆಯದ್ದಾಗಿದೆ.

ಇಷ್ಟಕ್ಕೂ ಏನು ಇಲ್ಲಿನ ಸಮಸ್ಯೆ ?

ಶಿರೂರು ಮಾರ್ಕೆಟ್‌ನಿಂದ ಹಡವಿನಕೋಣೆ, ಕಳಿಹಿತ್ಲು, ಕೇರಿ ರಸ್ತೆ, ಮುದ್ರಮಕ್ಕಿ, ನಿರೋಡಿ ಮುಂತಾದ ಊರುಗಳಿಗೆ ಈ ರಸ್ತೆ ಸಂಪರ್ಕ ಬೆಸೆಯುತ್ತದೆ. ನೂರಾರು ಮನೆಗಳಿರುವ ಈ ಭಾಗ ಅತ್ಯಂತ ಜನನಿಬಿಡವಾಗಿದೆ. ಶಾಲೆ, ಅಂಗನವಾಡಿ, ದೇವಸ್ಥಾನ, ಮೀನುಗಾರಿಕಾ ಬಂದರು ಸೇರಿದಂತೆ ಹತ್ತಾರು ಅಗತ್ಯತೆಗಳಿಗೆ ಈ ರಸ್ತೆ ಅವಲಂಬಿಸಬೇಕಿದೆ. ಆದರೆ ಈ ರಸ್ತೆಯು ಮುದ್ರಮಕ್ಕಿ ಕ್ರಾಸ್ ಬಳಿ ರೈಲ್ವೆ ಹಳಿ ಹಾದು ಹೋಗಿದ್ದು, ದಿನಕ್ಕೆ ಹತ್ತಾರು ರೈಲುಗಳ ಸಂಚಾರದಲ್ಲಿ ಬಹುತೇಕ ಸಮಯ ಗೇಟ್ ತೆರೆಯುವುದನ್ನು ಕಾಯುವುದರಲ್ಲಿ ಕಳೆದು ಹೋಗುತ್ತದೆ. ಸಾವಿರಾರು ಜನರು ನಿತ್ಯ ಇಲ್ಲಿನ ಗೇಟ್ ಸಮಸ್ಯೆಯಿಂದ ಪರದಾಡುವಂತಾಗಿದೆ.

ಆಗ ಅಷ್ಟೇನೂ ವಾಹನಗಳಿರಲಿಲ್ಲ

1990ರ ದಶಕದಲ್ಲಿ ಕೊಂಕಣ ರೈಲ್ವೆ ಯೋಜನೆ ಆರಂಭವಾದಾಗ ಬಹುತೇಕ ಕಡೆ ಊರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಮೇಲ್ಗಡೆ ರೈಲ್ವೆ ಹಳಿ ಹಾದುಹೋಗಿದೆ. ಆ ಕಾಲದಲ್ಲಿ ಅಷ್ಟೇನು ವಾಹನ ಸಂಚಾರಗಳಿರಲಿಲ್ಲ. ಆದರೆ ನಗರ ಬೆಳವಣಿಗೆಯಾದಂತೆ ಈಗ ಭಾರೀ ಸಮಸ್ಯೆ ನಾಗರಿಕರನ್ನು ಕಾಡುತ್ತಿದೆ. »ಪುಟ 6



ಊರು ಸಮಸ್ಯೆಗಳು ನೂರು



- ಸದಾ ಜನನಿಬಿಡ ಪ್ರದೇಶವಾಗಿರುವ ಹಡವಿನಕೋಣೆ ರಸ್ತೆಯಲ್ಲಿ ರೈಲ್ವೆ ಗೇಟ್ ನಿಂದಾಗಿ ಸಾರ್ವಜನಿಕರಿಗೆ ಸಮಸ್ಯೆ
- ಮೊದಲು ದಿನಕ್ಕೆ ಒಂದೆರಡು ರೈಲುಗಳು ಮಾತ್ರ ಸಂಚರಿಸುತ್ತಿದ್ದು, ಈ ಭಾಗದಲ್ಲಿ ಅಷ್ಟೇನೂ ಸಮಸ್ಯೆಗಳಿರಲಿಲ್ಲ
- ಪ್ರಸ್ತುತ ಹತ್ತಾರು ರೈಲುಗಳು ಸಂಚರಿಸುವ ಕಾರಣ ಸಂಕಷ್ಟವಾಗಿದೆ

ಇಲ್ಲಿಗೆ ಅಗತ್ಯವಿದೆ

ಇಂತಹ ರಸ್ತೆಗಳಿರುವ ಕಡೆಗಳಲ್ಲಿ ಮೇಲ್ಸೇತುವೆ ನಿರ್ಮಿಸುವ ಯೋಜನೆ ಈಗಾಗಲೇ ಹಲವು ಕಡೆ ಇಲಾಖೆ ಜಾರಿಗೆ ತಂದಿದೆ. ಇದರಿಂದಾಗಿ ಅಪಘಾತ ನಿಯಂತ್ರಣ, ಸಾರ್ವಜನಿಕರಿಗೆ, ಶಾಲಾ ವಿದ್ಯಾರ್ಥಿಗಳಿಗೆ, ಆಸ್ಪತ್ರೆಗೆ ಸಾಗುವ ಜನರಿಗೆ ಅನುಕೂಲವಾಗಲಿದೆ ಎನ್ನುವುದು ಈ ಭಾಗದ ಜನರ ಅಭಿಪ್ರಾಯವಾಗಿದೆ.

ಶೀಘ್ರವೇ ಇಲ್ಲೊಂದು ಮೇಲ್ಸೇತುವೆ ನಿರ್ಮಿಸಿ

ಶಿರೂರು ಉಡುಪಿ ಜಿಲ್ಲೆಯಲ್ಲಿ ಅತೀ ದೊಡ್ಡ ಗ್ರಾಮ ಪಂಚಾಯತ್ ವ್ಯಾಪ್ತಿಯಾಗಿದೆ. ಹಡವಿನಕೋಣೆ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತದೆ. ಶಾಲೆ ಕೂಡ ಇದೆ. ಪಂಚಾಯತ್ ನಿರ್ಣಯ ಕೈಗೊಂಡಿದ್ದು ರೈಲ್ವೆ ಇಲಾಖೆ ಈ ಬಗ್ಗೆ ಗಮನಹರಿಸಿ ಮೇಲ್ಸೇತುವೆ ನಿರ್ಮಿಸಿ ಸಾರ್ವಜನಿಕರು ಅನುಕೂಲಮಾಡಿಕೊಡಬೇಕಗಿದೆ.

- ಕಾಪ್ಸಿ ನೂರ್‌ಮಹ್ಮದ್, ಉಪಾಧ್ಯಕ್ಷರು ಗ್ರಾ.ಪಂ. ಶಿರೂರು

ಚೆಂಬುಗುಡ್ಡೆ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕುಟುಂಬ ಮಿಲನ 2
ಸಿಐಎಸ್‌ಎಫ್ ವಂದೇ ಮಾತರಂ ಕೋಸ್ಟಲ್ ಸೈಕೋಥಾನ್‌ಗೆ ಸ್ವಾಗತ 3
ಗುರುಪುರ-ಕೈಕಂಬ: ಅಂಡರ್ ಪಾಸ್‌ಗಾಗಿ ಪ್ರತಿಭಟನೆ ತಾತ್ಕಾಲಿಕ ಸ್ಥಗಿತ 4
ಇಂದು, ನಾಳೆ ಮುನಿಯಾಲು ಏಕಪವಿತ್ರ, ಶ್ರೀಮನ್ನಾಗಮಂಡಲ 6

ಸುತ್ತಮುತ್ತ

ಸಸಿಹಿತ್ಲು: ಇಂದು ಚಪ್ಪರ ಮುಹೂರ್ತ

ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಮಾರ್ಚ್ 4 ರಿಂದ 8ರವರೆಗೆ ನಡೆಯಲಿರುವ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ಚಪ್ಪರ ಮುಹೂರ್ತ ಫೆ.20 (ಇಂದು) ಶುಕ್ರವಾರ ಬೆಳಗ್ಗೆ 8.15 ರಿಂದ 8.30ರೊಳಗೆ ನಡೆಯಲಿದೆ. ಈ ಪುಣ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ ತಾಯಿ ಭಗವತೀಯ ಕೃಪೆಗೆ ಪಾತ್ರರಾಗಬೇಕು ಎಂದು ಬ್ರಹ್ಮಕಲಶೋತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ

ಸೇವಾಭಾರತಿ: ವಿಶ್ವಸ್ಥ ಮಂಡಳಿಗೆ ನೂತನ ಪದಾಧಿಕಾರಿಗಳ ಆಯ್ಕೆ

ಬೆಳ್ತಂಗಡಿ: ಕನ್ಯಾಡಿಯ ಸೇವಾಭಾರತಿ ಸಂಸ್ಥೆಯ 2026ರಿಂದ 2029ರ ಅವಧಿಗೆ ಹೊಸ ವಿಶ್ವಸ್ಥ






ಮಂಡಳಿ ರಚನೆಯ ಕಾರ್ಯಕ್ರಮ ಫೆ.17ರಂದು ಸೌತಡ್ಕದಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ 'ಸೇವಾಧಾಮ'ದಲ್ಲಿ ನಡೆಯಿತು. ಮುಂದಿನ ಮೂರು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಕೆ. ವಿನಾಯಕ ರಾವ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಬಾಲಕೃಷ್ಣ ನೈಮಿಷ , ಕೋಶಾಧಿಕಾರಿಯಾಗಿ ಜೈ ರಾಜ್ ಸಾಲ್ಯಾನ್ ಕಾನರ್ಪ, ಕಾರ್ಯದರ್ಶಿಯಾಗಿ ವಿಷ್ಣು ಪ್ರಸಾದ್ ತೆಂಕಿಲ್ಲಾಯ ಹಾಗೂ ಟ್ರಸ್ಟಿಗಳಾಗಿ ಸ್ವರ್ಣಗೌರಿ, ಗಿರೀಶ್ ರಾವ್ ಕೆ.ಯು., ಮತ್ತು ಪೃಥ್ವೀಶ ಆಯ್ಕೆಯಾಗಿದ್ದಾರೆ.ಕಾರ್ಯಕ್ರಮದಲ್ಲಿ ಅಧ್ಯಕ್ಷರಾಗಿದ್ದ ಸ್ವರ್ಣಗೌರಿ ಕಳೆದ ಮೂರು ವರ್ಷಗಳ ಸೇವಾ ಪಯಣದ ಅನುಭವವ ಹಂಚಿಕೊಂಡರು. ಹೊಸದಾಗಿ ರಚನೆಯಾದ ವಿಶ್ವಸ್ಥ ಮಂಡಳಿ ಸದಸ್ಯರಿಗೆ ಗುರುತಿನ ಕಾರ್ಡ್ ನೀಡುವ ಮೂಲಕ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಲಾಯಿತು. ಶ್ರೀ ಕ್ಷೇತ್ರ ಧರ್ಮಸ್ಥಳದ ಪಾರುಪತ್ಯಗಾರ ಲಕ್ಷ್ಮೀನಾರಾಯಣ ರಾವ್, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷ ಕೆ. ಕೃಷ್ಣ ಭಟ್, ಸೇವಾಭಾರತಿ ಸಲಹಾ ಮಂಡಳಿ ಸದಸ್ಯ ಡಾ. ಜಯಕುಮಾರ್ ಶೆಟ್ಟಿ, ಸೇವಾಧಾಮ ಸಂಚಾಲಕರಾದ ಕೆ. ಪುರಂದರ ರಾವ್, ಹಾಗೂ ನಿಕಟಪೂರ್ವ ಟ್ರಸ್ಟಿಗಳು ಉಪಸ್ಥಿತರಿದ್ದರು. ಇದೇ ವೇಳೆ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ಸಂಸ್ಥೆಯ ಹಿತೈಷಿ ಹಾಗೂ ದಾನಿ ಬೆನ್ನುಹುರಿ ಅಪಘಾತಕ್ಕೊಳಗಾದ ಮಧ್ವಮೂರ್ತಿ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಬಿ.ಸಿ.ರೋಡಿನಲ್ಲಿ ನಾಳೆ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮ

ಬಂಟ್ವಾಳ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು,ಎಸ್ ಡಿ.ಸಿ.ಸಿ ಬ್ಯಾಂಕ್ ಮಂಗಳೂರು, ಜಿಲ್ಲಾ ಸಹಕಾರಿ ಯೂನಿಯನ್ ಲಿ. ಮಂಗಳೂರು, ದ. ಕ. ಜಿಲ್ಲಾ ಮೂರ್ತೆದಾರರ ಸಹಕಾರ ಮಹಾಮಂಡಳ ನಿ., ಬಿ.ಸಿ.ರೋಡ್ ಸಹಕಾರ ಇಲಾಖೆ, ದ.ಕ.ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮವು ಫೆ.21ರಂದು ಬಿ.ಸಿ.ರೋಡಿನ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪತ್ತಿನ, ಮೂರ್ತೆದಾರರ ಮತ್ತು ಇತರೆ ಸಹಕಾರ ಸಂಘಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿಯವರಿಗೆ ನಡೆಯುವ ತರಬೇತಿ ಕಾರ್ಯಾಗಾರವನ್ನು ದಕ್ಷಿಣ ಕನ್ನಡ ಜಿಲ್ಲಾ ಮೂರ್ತೆದಾರರ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಕೆ. ಸಂಜೀವ ಪೂಜಾರಿ ಅವರು ಉದ್ಘಾಟಿಸಲಿದ್ದಾರೆ. ದ.ಕ. ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷ ಶಶಿಕುಮಾರ್ ರೈ ಬಾಲ್ಯೊಟ್ಟು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಉಮೇಶ್ ಬೋಳಂತೂರು ಆಯ್ಕೆ

ಬಂಟ್ವಾಳ: ಇಲ್ಲಿನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಕೆಡಿಪಿ ಮಾಜಿ



ಸದಸ್ಯ ಉಮೇಶ್ ಬೋಳಂತೂರು ಅವರು ನೇಮಕಗೊಂಡಿದ್ದಾರೆ. ಬಂಟ್ವಾಳ ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಲಾದ್ರು ಮಿನೇಜಸ್ ಮತ್ತು ಪಾಣೆಮಂಗಳೂರು ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಎ.ಬಿ.ಅಬ್ದುಲ್ ಕೊಳ್ನಾಡು ಇವರನ್ನು ನೇಮಕಗೊಳಿಸಲಾಗಿದೆ. ಕೆಪಿಸಿಸಿ ಉಪಾಧ್ಯಕ್ಷ ಬಿ.ರಮಾನಾಥ ರೈ ಅವರ ಶಿಫಾರಸ್ಸಿನಂತೆ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷ ವಿನಯ ಕುಮಾರ್ ಸೊರಕೆ ಅವರು ನೇಮಕಗೊಳಿಸಿರುವುದಾಗಿ ಪ್ರಕಟಣೆ ತಿಳಿಸಿದೆ.

ಫೆ.23,24: ಕೊಲ್ಲೂರು ಶ್ರೀಕ್ಷೇತ್ರದ ಜಾತ್ರಾ ಮಹೋತ್ಸವ

ಕಿನ್ನಿಗೋಳಿ: ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ ವರ್ಷಾವಧಿ ಜಾತ್ರಾ ಮಹೋತ್ಸವ ಫೆ.23ರಿಂದ 24ರವರೆಗೆ ನಡೆಯಲಿದೆ. ಫೆ.22ರಂದು ನಾಗದೇವರಿಗೆ ಆಶ್ಲೇಷಬಲಿ ಪೂಜೆ, ಅನ್ನಸಂತರ್ಪಣೆ ನಡೆಯಲಿದೆ. ಫೆ.23ಕ್ಕೆ ಬೆಳಿಗ್ಗೆ ಚಂಡಿಕಾಯಾಗ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ರಾತ್ರಿ ಶ್ರೀ ಮೂಕಾಂಬಿಕಾ ದೇವಿ ಮತ್ತು ಜಾರಂದಾಯ ದೈವದ ಭೇಟಿ, ರಾತ್ರಿ ಜಾರಂದಾಯ ನೇಮ ನಡೆಯಲಿದೆ. ಫೆ.24ಕ್ಕೆ ಮಂಗಳವಾರ ಮಧ್ಯಾಹ್ನ ಮಹಾಪೂಜೆ, ಶ್ರೀ ದೇವಿ ದರ್ಶನ, ಮಾರಿ ಪೂಜೆ ಜರಗಲಿದೆಯೆಂದು ದೇವಳದ ಆಡಳಿತ ಸಮಿತಿಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಪುತ್ತೂರು ರೋಟರಿ ಯುವ ಪ್ರಾಯೋಜಕತ್ವ | ಮಕ್ಕಳ ಹಕ್ಕು, ಕಾನೂನಿನ ಮಹತ್ವ ಕುರಿತು ಅರಿವು

ಸಂಚಾರ ಪೊಲೀಸ್ ಠಾಣೆಯಲ್ಲಿ ಮಕ್ಕಳ ವಿಶೇಷ ಘಟಕ!

ಪುತ್ತೂರು: ಸ್ನೇಹಪರ ವಾತಾವರಣ ಹಾಗೂ ವಿಧಾನವನ್ನು ಸಂಯೋಜಿಸುವ ಉದ್ದೇಶದಿಂದ ಪೊಲೀಸರು ಮತ್ತು ಕಾನೂನಿನ ಮಹತ್ವ ಮತ್ತು ಮಕ್ಕಳಿಗೆ ತಮ್ಮ ಹಕ್ಕುಗಳ ಕುರಿತು ಅರಿವು ಮೂಡಿಸುವ ಉಪಕ್ರಮವನ್ನು ಪೊಲೀಸರ ಮನವಿಯಂತೆ ಪುತ್ತೂರು ರೋಟರಿ ಯುವದ ಪ್ರಾಯೋಜಕತ್ವದಲ್ಲಿ ಪುತ್ತೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಮಕ್ಕಳ ವಿಶೇಷ ಘಟಕ ಉದ್ಘಾಟಿಸಲಾಯಿತು.

ಪುಟಾಣಿ ಮಕ್ಕಳು ಪೊಲೀಸ್ ಠಾಣೆಗೆ ಪ್ರಥಮ ಪಾದಾರ್ಪಣೆ ಮಾಡುತ್ತಿದ್ದಂತೆ ಪೊಲೀಸರು ಮಕ್ಕಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಬರಮಾಡಿಕೊಂಡರು. ಬಳಿಕ ಮಕ್ಕಳ ಕೈಯಿಂದಲೇ ದೀಪ ಪ್ರಜ್ವಲಿಸಿ ಮಕ್ಕಳ ವಿಶೇಷ ಘಟಕವನ್ನು ಮತ್ತು ವರ್ಣಚಿತ್ರದ ಕೊಠಡಿಯನ್ನು ಉದ್ಘಾಟಿಸಲಾಯಿತು.

ಸಭಾ ಕಾರ್ಯಕ್ರಮದ ಬಳಿಕ ಪೊಲೀಸರಿಗೆ ಐಎಎಸ್, ಐಪಿಎಸ್ ಹಾಗೂ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ದರ್ಶನ್ ಗರ್ತಿಕೆರೆ ಮಾಹಿತಿ ನೀಡಿದರು.

ಸಮಾಜಮುಖಿ ಕಾರ್ಯಕ್ರಮ

ಪುತ್ತೂರು ನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಜಾನ್ಸನ್ ಡಿ'ಸೋಜ ಮಾತನಾಡಿ, ರೋಟರಿ ಯುವ ಸಂಸ್ಥೆಯಿಂದ ಇದೊಂದು ಸಮಾಜ ಮುಖಿ



ಕಾರ್ಯಕ್ರಮ. ಇದು ಕೇವಲ ಪುತ್ತೂರಿಗೆ ಮಾತ್ರವಲ್ಲ ಜಿಲ್ಲೆಗೆ ಪ್ರಯೋಜನವಾಗಲಿದೆ ಎಂದು ಹೇಳಿದರು.

ಪುತ್ತೂರು ಸಂಚಾರ ಪೊಲೀಸ್ ಠಾಣೆಯ ಎಸ್‌ಐ ಚಕ್ರಪಾಣಿ ಮಾತನಾಡಿ, ಇಲಾಖೆಯೊಂದಿಗೆ ಮಕ್ಕಳ ಆಕರ್ಷಣೆ ಇಂತಹ ಘಟಕದಿಂದ ಆಗಲಿದೆ ಎಂದು ಹೇಳಿ ರೋಟರಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

ಗೌರವ ಹೆಚ್ಚಲಿದೆ

ರೋಟರಿ ಯುವ ನಿಯೋಜಿತ ಅಧ್ಯಕ್ಷೆ ವಚನಾ ಜಯರಾಮ್ ಮಾತನಾಡಿ, ರೋಟರಿ ಯುವ ವಿಭಿನ್ನ ಕಾರ್ಯಕ್ರಮದ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಿದೆ. ಮಕ್ಕಳಿಗೆ ಪೊಲೀಸ್ ಮೇಲೆ ಗೌರವ, ಸ್ನೇಹ ಭಾವನೆ, ಜಾಗೃತಿ ಮೂಡಿಸುವ ಕಾರ್ಯಕ್ರಮ ಇದಾಗಿದೆ ಎಂದರು. ದರ್ಶನ್ ಗರ್ತಿಕೆರೆ ಮಾತನಾಡಿ, ಐಎಎಸ್, ಐಪಿಎಸ್ ಆಗಬೇಕಾದರೆ ಮಕ್ಕಳು ಎಳೆಯ ವಯಸ್ಸಿಲ್ಲೇ ಶಾಲೆಯಲ್ಲಿ ಏನು ಕಲಿಸುತ್ತಾರೋ ಅದನ್ನೇ ಚೆನ್ನಾಗಿ ಓದಿ, ಇದರ ಜೊತೆಗೆ ಪತ್ರಿಕೆ ಓದಿ ದೇಶದ ಗತಿಗಳ ವಿಚಾರ ಅರ್ಥ ಮಾಡಿಕೊಳ್ಳಿ, ಸೋಮಾರಿತನ ಬಿಟ್ಟು ಜೀವನದಲ್ಲಿ ಉತ್ಸಾಹದಿಂದ ಇರಬೇಕು ಎಂದರು.

ಕರಪತ್ರ ಬಿಡುಗಡೆ

ರೋಟರಿ ಯುವದ ರೋಡ್ ಸೇಫ್ಟಿ ಚೆಯರ್‌ಮ್ಯಾನ್ ಡಾ. ಹರ್ಷ ಕುಮಾರ್ ರೈ ಅವರು ಪ್ರಾಯೋಜಿಸಿದ ರಸ್ತೆ ಸುರಕ್ಷಾ ಮಾಹಿತಿ ಕರಪತ್ರವನ್ನು ಅತಿಥಿಗಳು ಬಿಡುಗಡೆಗೊಳಿಸಿದರು. ಬಳಿಕ ಮಕ್ಕಳಿಗೆ ವಿತರಿಸಿದರು. ರೋಟರಿ ಯುವ ಸ್ಥಾಪಕ ಅಧ್ಯಕ್ಷ ರತ್ನಾಕರ ರೈ, ರೋಟರಿ ಪುತ್ತೂರು ಯುವ ಜೋನಲ್ ಲೆಫ್ಟಿನೆಂಟ್ ಭರತ್ ಪೈ, ಧನ್ವಂತರಿ ಕ್ಲೀನಿಕಲ್ ಲ್ಯಾಬೋರೆಟರಿಯ ಆಡಳಿತ ನಿರ್ದೇಶಕ ಚೇತನ್ ಪ್ರಕಾಶ್ ಕಜೆ ಅತಿಥಿಗಳನ್ನು ಗೌರವಿಸಿದರು. ರೋಟರಿ ಕ್ಲಬ್ ಯುವ ಪೂರ್ವಾಧ್ಯಕ್ಷೆ ಅಶ್ವಿನಿಕೃಷ್ಣ ಮುಳಿಯ ಮತ್ತಿತರರು ಇದ್ದರು. ಪುತ್ತೂರು ಸಂಚಾರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ದಿನೇಶ್ ಪ್ರಾಸ್ತಾವಿಸಿದರು. ಗೃಹ ಪ್ರಾರ್ಥಿಸಿದರು. ರೋಟರಿ ಕ್ಲಬ್ ಯುವ ಅಧ್ಯಕ್ಷ ಕುಸುಮ್ ರಾಜ್ ಸ್ವಾಗತಿಸಿ, ಕಾರ್ಯದರ್ಶಿ ಅಭಿಷ್ ವಂದಿಸಿದರು. ಪುತ್ತೂರು ಕ.ಸಾ.ಪ. ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ನಿರ್ವಹಿಸಿದರು.

ಆಟದೊಂದಿಗೆ ಮಕ್ಕಳಿಗೆ ಸಿಗಲಿದೆ ಕಾನೂನಿನ ಪಾಠ

ಮಕ್ಕಳು ಠಾಣೆಗೆ ಬಂದರೆ ಮತ್ತು ಇನ್ನೂ ಕೆಲವು ಸಂದರ್ಭಗಳಲ್ಲಿ ಸೂಕ್ಷ್ಮ ಪ್ರಕರಣಗಳ ಭಾಗವಾಗಿರುವ ಮಕ್ಕಳಿಗೆ ಹೆಚ್ಚು ಸುರಕ್ಷಿತ ಮತ್ತು ಆರಾಮದಾಯಕ ಎನಿಸುವ ವ್ಯವಸ್ಥೆ ಕಲ್ಪಿಸಲು ನೂತನ ಕೊಠಡಿಗಳಲ್ಲಿ ಪ್ರಾಣಿಗಳ ಚಿತ್ರ, ಸಂಚಾರ ಸುರಕ್ಷತೆಯ ಕುರಿತು ಪೊಲೀಸರು ಕರ್ತವ್ಯ ನಿರ್ವಹಿಸುತ್ತಿರುವ ಚಿತ್ರಗಳನ್ನು ಅಳವಡಿಸಲಾಗಿದೆ. ಮಕ್ಕಳನ್ನು ರಸ್ತೆಯಿಂದ ದಾಟಿಸುವ ಚಿತ್ರಗಳು ಮಕ್ಕಳಿಗೆ ಪೊಲೀಸರ ಮೇಲೆ ಆತ್ಮವಿಶ್ವಾಸ ಹೆಚ್ಚಿಸುವಂತೆ ವಿನ್ಯಾಸಗೊಳಿಸಲಾಗಿದೆ. ಹಲವು ವಿಷಯಗಳ ಕುರಿತು ತಿಳಿಸಿ ಹೇಳುವ ಮೂಲಕ ಮೂಲಕ ಸುರಕ್ಷಿತ, ಸಕಾರಾತ್ಮಕ ವಾತಾವರಣ ಸೃಷ್ಟಿಸಲು ಶ್ಲಾಘನೀಯ ಪ್ರಯತ್ನ ನಡೆಸಲಾಗಿದೆ.

ಸನ್ಮಾನ

ಮಕ್ಕಳ ವಿಶೇಷ ಕೊಠಡಿಯಲ್ಲಿ ಮಕ್ಕಳ ಆಕರ್ಷಣೆಯಾಗಿ ಗೋಡೆ ಬರಹದೊಂದಿಗೆ ಚಿತ್ರ ಬಿಡಿಸಿದ ಕಲಾವಿದ ದಿನೇಶ್, ಪುತ್ತೂರು ಸಂಚಾರ ಪೊಲೀಸ್ ಠಾಣೆ ಎಸ್.ಐ. ಚಕ್ರಪಾಣಿ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರ ದರ್ಶನ್ ಗರ್ತಿಕೆರೆ ಅವರನ್ನು ರೋಟರಿ ಯುವದಿಂದ ಸನ್ಮಾನಿಸಲಾಯಿತು.

ಐಎಎಸ್-ಐಪಿಎಸ್ ಪರೀಕ್ಷೆಗಳ ಬಗ್ಗೆ ಅಕ್ಷಯ ಕಾಲೇಜಿನಲ್ಲಿ ಕಾರ್ಯಾಗಾರ

ಸಿದ್ಧತೆ ಬದ್ಧತೆಯಿಂದ ಸಾಧನೆ ಸಾಧ್ಯ: ಸ್ಟೆಲ್ಲಾ ವರ್ಗೀಸ್

ಪುತ್ತೂರು: ಎಲ್ಲರಿಗೂ ಉನ್ನತ ಶಿಕ್ಷಣದ ಅವಕಾಶ ಸಿಗುವುದಿಲ್ಲ, ಆದರೆ, ಕರಾವಳಿಗರಿಗೆ ಕಲಿಕೆಗೆ ಹೆಚ್ಚು ಅವಕಾಶ ಇದೆ. ನಾಗರಿಕ ಸೇವೆಗೆ ಸೇರುವುದು ಅಸಾಧ್ಯ ಎನ್ನುವಷ್ಟು ಕಠಿಣವಲ್ಲ, ಪರಿಶ್ರಮ, ಸಿದ್ಧತೆ ಹಾಗೂ ಬದ್ಧತೆಯಿಂದ ಇಲ್ಲಿ ಗೆಲುವು ಸಾಧ್ಯ. ಜಿಲ್ಲೆಯ ಯುವ ಸಮುದಾಯ ಈ ನಿಟ್ಟಿನಲ್ಲಿ ಆಸಕ್ತಿ ತೋರಬೇಕು ಎಂದು ಪುತ್ತೂರು ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಹೇಳಿದರು.



ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ನೇತೃತ್ವದಲ್ಲಿ ಅಕ್ಷಯ ಕಾಲೇಜಿನ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ನಡೆದ ಐಎಎಸ್-ಐಪಿಎಸ್ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪುತ್ತೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ರೋಟರಿ ಕ್ಲಬ್ ಪುತ್ತೂರು ಪೂರ್ವ, ರೋಟರ್‍ಯಾಕ್ಟ್ ಕ್ಲಬ್ ಅಕ್ಷಯ ಕಾಲೇಜ್ ಮತ್ತು ಕಾಲೇಜಿನ ಐಕ್ಯುಎಸಿ ಸಹಯೋಗದಲ್ಲಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಅಕ್ಷಯ ಕಾಲೇಜಿನಲ್ಲಿ ಕೋಚಿಂಗ್

ಅಕ್ಷಯ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಜಯಂತ ನಡುಬೈಲ್ ಮಾತನಾಡಿ, ಮುಂದಿನ ದಿನಗಳಲ್ಲಿ ಅಕ್ಷಯ ಕಾಲೇಜಿನಲ್ಲಿ ಐಎಎಸ್-ಐಪಿಎಸ್ ಕೋಚಿಂಗ್ ಆರಂಭಿಸಲಾಗುವುದು. ಇದಕ್ಕಾಗಿ ಸಂಬಂಧಪಟ್ಟ ಸಂಸ್ಥೆಗಳ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ. ಪುತ್ತೂರು ಸುತ್ತಮುತ್ತಲಿನ ವಿದ್ಯಾರ್ಥಿಗಳು ಕೂಡ ಮುಂದಿನ ದಿನಗಳಲ್ಲಿ ಐಎಎಸ್, ಐಪಿಎಸ್ ಅಧಿಕಾರಿಗಳಾಗಿ ಮೂಡಿ ಬರಬೇಕು ಎಂದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಐ.ಎ.ಎಸ್. ದರ್ಶನ ಸಂಸ್ಥೆಯ ಮುಖ್ಯಸ್ಥ ದರ್ಶನ್ ಗರ್ತಿಕೆರೆ ಮಾತನಾಡಿ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಶಿಕ್ಷಣ, ಉದ್ಯಮದಲ್ಲಿ ಸಾಕಷ್ಟು ಮುಂದುವರಿದಿದ್ದರೂ ಇಲ್ಲಿ ನಾಗರಿಕ ಸೇವಾ ಕ್ಷೇತ್ರಕ್ಕೆ ಹೋಗುವವರ ಸಂಖ್ಯೆ ವಿರಳವಾಗಿದೆ. ಇದಕ್ಕೆ ಇಲ್ಲಿರುವ ಮಾಹಿತಿ ಕೊರತೆಯೇ ಕಾರಣ. ಇದನ್ನು ನೀಗಿಸಲು ಇಂಥ ಕಾರ್ಯಾಗಾರಗಳು ಉಪಯುಕ್ತ ಎಂದರು.

ಪುತ್ತೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಧಾಕರ ಸುವರ್ಣ ತಿಂಗಳಾಡಿ, ರೋಟರಿ ಕ್ಲಬ್ ಪುತ್ತೂರು ಯುವ ಅಧ್ಯಕ್ಷ ಕುಸುಮರಾಜ್ ಶುಭ ಹಾರೈಸಿದರು. ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ ದರ್ಶನ್ ಗರ್ತಿಕರೆ ಅವರನ್ನು ನ್ಮಾನಿಸಲಾಯಿತು. ಹಿರಿಯ ಸಾಹಿತಿ ಡಾ.ಎಚ್.ಜಿ. ಶ್ರೀಧರ್ ಸನ್ಮಾನಿತರ ಬಗ್ಗೆ ಮಾತನಾಡಿದರು. ಕಾಲೇಜಿನ ಆಡಳಿತಾಧಿಕಾರಿ ಅರ್ಪಿತ್ ಉಪಸ್ಥಿತರಿದ್ದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಪ್ರಾಸ್ತಾವಿಸಿದರು. ಅಕ್ಷಯ ಕಾಲೇಜಿನ ಪ್ರಾಂಶುಪಾಲ ಸಂಪತ್ ಪಕ್ಕಳ ಸ್ವಾಗತಿಸಿ, ಪುತ್ತೂರು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಶೇ. ಕಜೆಮಾರ್ ವಂದಿಸಿದರು.

ಭೂಮಿ ತಾಯಿಗೆ ಎಣ್ಣೆ, ಹಾಲು, ಭಕ್ಷ್ಯಗಳ ಸಮರ್ಪಿಸಿ ವಿಶೇಷ ಪೂಜೆ

ಕಲ್ಲಡ್ಕ ಶ್ರೀರಾಮ ಶಾಲೆಯಲ್ಲಿ ಕೆಡ್ಡಸ ಹಬ್ಬ ಆಚರಣೆ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಡ್ಡಸ ಹಬ್ಬ ಆಚರಣೆ ಶಾಲಾ ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು.

ಕಾರ್ಯಕ್ರಮಕ್ಕೆ ಮೊದಲು ತುಳಸಿಕಟ್ಟೆಯ ಮುಂದೆ ಗೋಮಯದಿಂದ ಶುದ್ಧೀಕರಿಸಿ, ಭೂಮಿ ದೇವಿಯ ಸಾನಿಧ್ಯ ರಚಿಸಿ, ದೀಪಹಚ್ಚಿ, ತುದಿಎಲೆಯ ಮೇಲೆ ಎಣ್ಣೆ ಸೀಗೆಕಾಯಿ, ಅರಶಿನ -ಕುಂಕುಮ, ಪಚ್ಚೆ ಹಸಿರಿನ ಹುಡಿ, ವೀಳ್ಯದೆಲೆ ಇತ್ಯಾದಿಗಳನ್ನು ಭೂಮಿ ದೇವಿಯ ಸ್ನಾನಕೋಸ್ಕರ ಇಟ್ಟು ಹುರುಳಿ, ಹೆಸರುಕಾಳು, ಒಣಕೊಬ್ಬರಿ, ಕಡಲೆಕಾಯಿಗಳ ಮಿಶ್ರಣ (ನನ್ನೇರಿ) ಇದರೊಂದಿಗೆ ತುಳುನಾಡಿನ ವಿವಿಧ ಭಕ್ಷ್ಯಗಳನ್ನು ಸ್ಥಳೀಯ ಹಿರಿಯ ಮಾತೃಶ್ರೀ ಜಯಂತಿ ಅವರು ಭೂಮಿಗೆ ಎಣ್ಣೆ, ಹಾಲು ಹಾಕಿ ಬಡಿಸಿದರು. ವಿದ್ಯಾರ್ಥಿಗಳು ಈ ಸುಂದರ ಕಾರ್ಯಕ್ರಮ ವೀಕ್ಷಿಸಿದರು.



ಶ್ರೀರಾಮ ಹಿ.ಪ್ರಾ. ಶಾಲೆಯ ಅಧ್ಯಾಪಕಿ ದೇವಿಕಾ ಪಿ.ಶೆಟ್ಟಿ, ನಮ್ಮ ದೇಶದ ಭಾಷೆ, ಸಂಸ್ಕಾರ, ಸಂಸ್ಕೃತಿ ಭಿನ್ನವಾಗಿದೆ. ತುಳುನಾಡಿನ ಅತ್ಯಂತ ವಿಶಿಷ್ಟವಾದ ಫಲವತ್ತತೆ ಆರಾಧಿಸುವ ಮೂರು ದಿನಗಳ ಕೃಷಿ ಆಧಾರಿತ ಹಬ್ಬವಾಗಿದೆ ಎಂದರು.

ಕೆಡ್ಡಸ ಹಬ್ಬವನ್ನು ಶುರು ಕೆಡ್ಡಸ, ನಡುಕೆಡ್ಡಸ ಹಾಗೂ ಕಡೆ ಕೆಡ್ಡಸ ಎಂದು ಮೂರು ದಿನ ಆಚರಿಸಲಾಗುತ್ತಿದೆ. ಈ ಮೂರು ದಿನ ನಡೆಯುವ ಹಬ್ಬದ ಆಚರಣೆಯಲ್ಲಿ ನೆಲ ಅಗೆಯುವುದು, ಮರಗಳನ್ನು ಕಡೆಯುವುದು ನಿಷಿದ್ಧ. ಯಾಕೆಂದರೆ ಭೂಮಿ ರಜಸ್ವಾಲೆಯಾಗಿರುವುದರಿಂದ ಕೃಷಿ ಕಾರ್ಯದಲ್ಲಿ ತೊಡಗಿದರೆ ಭೂಮಿಗೆ ನೋವಾಗುತ್ತದೆ ಎಂಬ ನಂಬಿಕೆಯಿದೆ. ಕೆಡ್ಡಸದ ಸಮಯದಲ್ಲಿ ಮೂಡಣ ದಿಕ್ಕಿನಿಂದ ಒಂದು ವಿಲಕ್ಷಣವಾದ ಗಾಳಿ ಬೀಸುತ್ತದೆ. ಇದನ್ನು ಕೆಡ್ಡಸದ ಗಾಳಿ ಎಂದು ಕರೆಯಲಾಗುತ್ತದೆ. ಈ ಸಂದರ್ಭ ಋತು ಸ್ನಾನ ಮುಗಿಸಿರುವ ಭೂಮಿದೇವಿಯು ಈ ಗಾಳಿಯಿಂದ ಪುಳಕಗೊಂಡು ಫಲವತಿಯಾಗಲು ಸಜ್ಜಾಗುತ್ತಾಳೆ ಎಂಬ ನಂಬಿಕೆಯಿದೆ. ಇಂತಹ ಆಚರಣೆಗಳಿಂದ ಮಕ್ಕಳಲ್ಲಿ ಪ್ರಕೃತಿ ಆರಾಧನೆ ಮತ್ತು ಕಾಳಜಿ ಎಳವೆಯಲ್ಲಿ ಮೂಡುತ್ತದೆ ಎಂದರು.

ಭೂಮಿಕಾ, ವೈದೇಹಿ, ಸಾನ್ವಿ ಹಾಗೂ ಗೌರಿನಂದಿನಿ ಕೆಡ್ಡಸ ಕುರಿತಾದ ಹಾಡನ್ನು ಹಾಡಿದರು. ಪ್ರತಿವರ್ಷ ಕೆಡ್ಡಸ ಬಡಿಸಲು ಬರುವ ಹಿರಿಯ ಮಾತೃಶ್ರೀ ಜಯಂತಿ ಈ ಸಂದರ್ಭ ಸನ್ಮಾನಿಸಲಾಯಿತು. ರಾಷ್ಟ್ರಸೇವಿಕಾ ಸಮಿತಿಯ ಕಾರ್ಯ ಕಾರಿಣಿ ಸದಸ್ಯ ಡಾ. ಕಮಲಾ ಪ್ರಭಾಕರ ಭಟ್, ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯ ಲಕ್ಷ್ಮೀ ರಘುರಾಜ್, ಮಲ್ಲಿಕಾ ಆರ್ ಶೆಟ್ಟಿ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ಸ್ವಚ್ಛತಾ ಸಹಾಯಕಿ ಸುಮತಿ, ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ತನ್ಮಯಿ ರೈ ಸ್ವಾಗತಿಸಿ, ಪ್ರಾಪ್ತಿ ನಿರೂಪಿಸಿ, ಸಧ್ವಿ ವಂದಿಸಿದರು.

ನಾಳೆ ಉಜಿರೆಯಲ್ಲಿ ಧರಿತ್ರಿ ಭಿಡೆ, ಹಂಸಿನಿ ಭಿಡೆ ಭರತನಾಟ್ಯ ರಂಗಪ್ರವೇಶ

ಬೆಳ್ತಂಗಡಿ: ಮಂಗಳೂರು: ನಗರದ ಉರ್ವ ಮಾರ್ಕೆಟ್‌ನ ನಾಟ್ಯಾರಾಧನಾ ಕಲಾ ಕೇಂದ್ರದ ನಿರ್ದೇಶಕಿ, ಗುರು ವಿದುಷಿ ಸುಮಂಗಲಾ ರತ್ನಾಕರ್ ರಾವ್ ಅವರ ವಿದ್ಯಾರ್ಥಿಗಳಾದ ಧರಿತ್ರಿ ಭಿಡೆ ಹಾಗೂ ಹಂಸಿನಿ ಭಿಡೆ ಅವರ ಭರತನಾಟ್ಯ ರಂಗಪ್ರವೇಶ ಫೆ. 21ಕ್ಕೆ ಸಂಜೆ 4.30ರಿಂದ ಉಜಿರೆಯ ಎಸ್.ಡಿ.ಎಂ ಕಾಲೇಜಿನ 'ಇಂದ್ರಪ್ರಸ್ಥ ಸಭಾಂಗಣ'ದಲ್ಲಿ ನಡೆಯಲಿದೆ.



ಬೆಂಗಳೂರಿನ ಅಭಿನವ ಡಾನ್ಸ್ ಕಂಪೆನಿಯ ಕಲಾತ್ಮಕ ನಿರ್ದೇಶಕರಾದ ನಿರುಪಮಾ ಮತ್ತು ರಾಜೇಂದ್ರ ಟಿ.ಡಿ, ನಾಟ್ಯಾಂಜಲಿ ಕಲಾ ಅಕಾಡಮಿ ಸುರತ್ಕಲ್‌ನ ಗುರು ವಿದ್ವಾನ್ ಚಂದ್ರಶೇಖರ ನಾವಡ, ಎಸ್.ಡಿ.ಎಂ.ಸೊಸೈಟಿಯ ಕಾರ್ಯದರ್ಶಿ ಸತೀಶ್ಚಂದ್ರ, ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಮ್ಯಾನೇಜಿಂಗ್ ಟ್ರಸ್ಟಿ ಶರತ್ ಕೃಷ್ಣ ಪಡ್ವೆಟ್ನಾಯ ಅವರು ಅಭ್ಯಾಗತರಾಗಿ ಭಾಗವಹಿಸಲಿದ್ದಾರೆ.

ಬೆಳ್ತಂಗಡಿಯ ಕಲ್ಮಂಜದ ನಿವಾಸಿ, ಉಜಿರೆಯ ಪತ್ರಿಕಾ ವಿತರಕ ಧನಂಜಯ ಭಿಡೆ ಹಾಗೂ ಚಿತ್ರಾ ಭಿಡೆ ದಂಪತಿಯ ಮಕ್ಕಳಾದ ಧರಿತ್ರಿ ಭಿಡೆ, ಎಸ್.ಡಿ.ಎಂ. ಡಿಗ್ರಿ ಕಾಲೇಜಿನ ತೃತೀಯ ಬಿಕಾಂ ವಿದ್ಯಾರ್ಥಿನಿಯಾಗಿದ್ದು, ಭರತನಾಟ್ಯ ವಿದ್ವತ್ಪೂರ್ವ ಹಂತದ ಪರೀಕ್ಷೆಯನ್ನು (ಭರತನಾಟ್ಯ ಪ್ರೌಢ) ಬೆಂಗಳೂರಿನ ಎಸ್- ವ್ಯಾಸ ವಿಶ್ವವಿದ್ಯಾಲಯದ ಎಸ್- ಸೊಸೈಟಿಯ ಸ್ಪೆಕ್ ಪರೀಕ್ಷೆಯ ಮೂಲಕ ಪ್ರಥಮ ರ್‍ಯಾಂಕ್‌ನೊಂದಿಗೆ ತೇರ್ಗಡೆ ಹೊಂದಿರುತ್ತಾರೆ. ಹಂಸಿನಿ ಭಿಡೆ, ಎಸ್.ಡಿ.ಎಂ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿಯ ಕಾಮರ್ಸ್ ವಿಭಾಗ ವಿದ್ಯಾರ್ಥಿನಿ ಯಾಗಿದ್ದು, ಕೆ.ಎಸ್.ಇ.ಬಿ ನಡೆಸಿದ್ದ ಭರತನಾಟ್ಯ ಸೀನಿಯರ್ ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಗುರು ಸುಮಂಗಲಾ ರತ್ನಾಕರ್ ರಾವ್ ಅವರ ನಟುವಾಂಗಂ ಮತ್ತು ನೃತ್ಯ ನಿರ್ದೇಶನದಲ್ಲಿ, ಅವರು ರಚಿಸಿರುವ ಭರತನಾಟ್ಯ ಕನ್ನಡ ಮಾರ್ಗಂನ ನೃತ್ಯಬಂಧಗಳಿಗೆ ಭಿಡೆ ಸಹೋದರಿಯರು ನೃತ್ಯ ಪ್ರಸ್ತುತಿ ನೀಡಲಿದ್ದು, ಹಿಮ್ಮೇಳದಲ್ಲಿ ಬೆಂಗಳೂರಿನ ವಿ. ರೋಹಿತ್ ಭಟ್ ಉಪ್ಪೂರು (ಗಾಯನ), ವಿನಯ್ ನಾಗರಾಜ್ (ಮೃದಂಗ), ನಿತೀಶ್ ಅಮ್ಮಣ್ಣಾಯ (ಕೊಳಲು), ವಿ. ವೈ.ಜಿ. ಶ್ರೀಲತಾ ನಿಕ್ಷಿತ್ (ವೀಣೆ) ಭಾಗವಹಿಸಲಿದ್ದಾರೆ ಎಂದು ನಾಟ್ಯಾರಾಧನಾ ಕಲಾ ಕೇಂದ್ರದ ಟ್ರಸ್ಟಿ ಬಿ. ರತ್ನಾಕರ ರಾವ್ ಹಾಗೂ ಧನಂಜಯ ಭಿಡೆ ತಿಳಿಸಿದ್ದಾರೆ.

ಕ್ರೀಡೆಯಿಂದ ಬಾಂಧವ್ಯ, ಸೌಹಾರ್ದತೆ ವೃದ್ಧಿ: ಮೋನಪ್ಪ ಭಂಡಾರಿ ಅಭಿಪ್ರಾಯ



ಮಂಗಳೂರು: ಕ್ರೀಡಾಕೂಟಗಳಿಂದ ಎಲ್ಲರೂ ಜತೆಗೂಡಲು ಸಾಧ್ಯವಾಗುವುದರಿಂದ ಬಾಂಧವ್ಯ ವೃದ್ಧಿಯಾಗಿ ಶಾಂತಿ, ಸೌಹಾರ್ದ ವಾತಾವರಣ ನಿರ್ಮಾಣ ಸಾಧ್ಯ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಮೋನಪ್ಪ ಭಂಡಾರಿ ಹೇಳಿದರು.

ದ.ಕ. ಜಿಲ್ಲಾ ಟ್ಯಾಕ್ಸಿಮೆನ್ಸ್ ಮತ್ತು ಮ್ಯಾಕ್ಸಿ ಕ್ಯಾಬ್ ಅಸೋಸಿಯೇಶನ್ ವತಿ ಯಿಂದ ಸಂಘದ ಸದಸ್ಯರಿಗೆ ಉರ್ವ ಕ್ರಿಕೆಟ್ ಮೈದಾನದಲ್ಲಿ ನಡೆದ 2 ದಿನಗಳ ಸೌಹಾರ್ದ ಟ್ರೋಫಿ 2026 ಲೀಗ್ ಕ್ರಿಕೆಟ್ ಪಂದ್ಯಾಟದ ಸಮಾರೋಪದಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ, ಮಾತನಾಡಿದರು.

ಇದೇ ಸಂದರ್ಭ ಅಂತರಾಷ್ಟ್ರೀಯ ಕಬಡ್ಡಿ ಕ್ರೀಡಾಪಟು ಧನಲಕ್ಷ್ಮೀ, ಹಿರಿಯ ಪತ್ರಕರ್ತ ಹರೀಶ್ ಮೋಟುಕಾನ ಹಾಗೂ ಯೂ ಟ್ಯೂಬರ್ ವಿಜೆ ವಿಖ್ಯಾತ್ ಅವರನ್ನು ಸನ್ಮಾನಿಸಲಾಯಿತು. ಕಾಂಗ್ರೆಸ್ ಮುಖಂಡ ಉದಯ ಆಚಾರ್, ಅಸೋಸಿಯೇಶನ್ ಅಧ್ಯಕ್ಷ ಆನಂದ ಕೆ., ಉಪಾಧ್ಯಕ್ಷ ಮೋಹನ್ ದಾಸ್ ಸುರತ್ಕಲ್, ಹರೀಶ್‌ಶೆಟ್ಟಿ ಕುತ್ತಾರ್, ರೋಷನ್ ಕಿನ್ನಿಗೋಳಿ, ಕೋಶಾಧಿಕಾರಿ ಸುರೇಶ್ ಸಾಲಿಯಾನ್, ಮಾಜಿ ಅಧ್ಯಕ್ಷ ದಿನೇಶ್ ಕುಂಪಲ, ಮಾಜಿ ಉಪಾಧ್ಯಕ್ಷ ನಾಗಪ್ಪ ಅಡ್ಯಾರ್, ಮಾಜಿ ಕಾರ್ಯಾಧ್ಯಕ್ಷ ಪ್ರಮೋದ್ ಕುಮಾರ್ ಉಳ್ಳಾಲ, ಮಾಜಿ ಕಾರ್ಯದರ್ಶಿ ಶುಭಕರ ಶೆಟ್ಟಿ ಲೋಕೇಶ್ ಕಶೆಕೋಡಿ, ಕ್ರೀಡಾ ಸಂಚಾಲಕ ಎಂ.ಕೃಷ್ಣ ನಾಗೇಶ್ ಮಿತ್ತಡ್ಕ, ಕರುಣಾಕರ ಕುಂಟಿಕಾನ, ಅಬ್ದುಲ್ ಅಜೀಜ್, ತೀರ್ಪುಗಾರ ಪ್ರದೀಪ್ ಕೊಟ್ಟಾರಿ, ಶ್ರೀರಾಜ್, ಕುಂಪಲ, ವಿವೇಕ್ ಬೋಳೂರು ಮೊದಲಾದವರು ಇದ್ದರು. ಪ್ರಧಾನ ಕಾರ್ಯದರ್ಶಿ ಉದಯ ಕುಮಾರ್ ಸ್ವಾಗತಿಸಿ, ಪ್ರಜ್ನಾ ಓಡಿಳ್ನಾಳ ನಿರೂಪಿಸಿದರು.

ವಿಜೇತರು

ಮಂಗಳೂರು ಸೆಂಟ್ರಲ್ ರೈಲ್ವೆ ನಿಲ್ದಾಣ ಟ್ಯಾಕ್ಸಿ ಚಾಲಕರ ತಂಡ ಪ್ರಥಮ, ಆಲ್ ವೈಟ್ಸ್ ಪಿ ವಿ ಎಸ್ ಟ್ಯಾಕ್ಸಿ ಚಾಲಕರ ದ್ವಿತೀಯ, ಸುರತ್ಕಲ್ ಫ್ರೆಂಡ್ಸ್ ತೃತೀಯ ಸ್ಥಾನ ಪಡೆದುಕೊಂಡಿತು.

ಚೆಂಬುಗುಡ್ಡೆ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕುಟುಂಬ ಮಿಲನ



ಉಳ್ಳಾಲ: ಕೌಟುಂಬಿಕ ಮೌಲ್ಯಗಳಿಗೆ ಒತ್ತು ನೀಡುವ ನಿಟ್ಟಿನಲ್ಲಿ ತೊಕ್ಕೊಟ್ಟು, ಚೆಂಬುಗುಡ್ಡೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಯೋಜಿಸಲಾಗಿದ್ದ 'ಕುಟುಂಬ ಮಿಲನ-2026' ಕಾರ್ಯಕ್ರಮವು ಸಂಸ್ಥೆಯ ವಿದ್ಯಾರ್ಥಿಗಳು, ಪೋಷಕರು,ಶಿಕ್ಷಕರು ಹಾಗೂ ಅವರ ಕುಟುಂಬ ಸದಸ್ಯರ ನಡುವಿನ ಏಕತೆ ಮತ್ತು ಪರಂಪರೆಯ ಸಂಭ್ರಮಕ್ಕೆ ಸಾಕ್ಷಿಯಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಿವೃತ್ತ ಮುಖ್ಯೋಪಾಧ್ಯಾಯ ವಿಶ್ವನಾಥ ಕೊಳಿಯೂರು ಮಾತನಾಡಿ, ಕುಟುಂಬ ಬಾಂಧವ್ಯ, ಒಟ್ಟುಗೂಡುವಿಕೆ ಹಾಗೂ ಭಾರತೀಯ ಪರಂಪರೆಯ ಕುಟುಂಬ ವ್ಯವಸ್ಥೆಯ ಶಾಶ್ವತ ಶಕ್ತಿಯ ಮಹತ್ವದ ಕುರಿತು ವಿವರಿಸಿದರು. ಹಿಂದು ಸಂಸ್ಕೃತಿಯಲ್ಲಿ ನೆಲೆಸಿರುವ ಮೌಲ್ಯಗಳು ಕುಟುಂಬ ಹಾಗೂ ಸಮಾಜದಲ್ಲಿ ಸೌಹಾರ್ದತೆ, ಹೊಣೆಗಾರಿಕೆ ಮತ್ತು ಪರಸ್ಪರ ಗೌರವವನ್ನು ಬೆಳೆಸುತ್ತವೆಯೆಂದರು.

ಕಾರ್ಯಕ್ರಮದಲ್ಲಿ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಸಂಚಾಲಕ ವಸಂತ ಕುಮಾರ್ ಹಾಗೂ ಪ್ರಧಾನಾಚರ್ಯ ವಿದ್ಯಾ ಕಾಮತ್ ಉಪಸ್ಥಿತರಿದ್ದರು. ಜ್ಯೋತಿ ಸ್ವಾಗತಿಸಿ, ಮಮತಾ ಮತ್ತು ಡಾ.ಅರುಣ್ ಉಳ್ಳಾಲ್ ನಿರೂಪಿಸಿದರು. ಕವಿತಾ ವಂದಿಸಿದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದದಿಂದ ನೃತ್ಯ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಸಹಭೋಜನದಲ್ಲಿ ಎಲ್ಲಾ ಕುಟುಂಬಗಳು, ಶಿಕ್ಷಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದರು.

ಫೆ.26ಕ್ಕೆ ಸಜೀಪಮುನ್ನೂರು ಮೂರ್ತೆದಾರರ ಸೇವಾ ಸಹಕಾರಿ ಸಂಘದ ಕೇಂದ್ರ ಕಚೇರಿಯ ನೂತನ ಕಟ್ಟಡಕ್ಕೆ ಶಿಲಾನ್ಯಾಸ

ಸಂಘದ ಬಹುದಿನಗಳ ಬೇಡಿಕೆ ಈಡೇರಿಕೆಯತ್ತ: ಕೆ. ಸಂಜೀವ ಪೂಜಾರಿ

ಬಂಟ್ವಾಳ: ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ಸಜೀಪಮೂಡ ಗ್ರಾಮದ ಬೊಳ್ಳಾಯಿಯಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಸಜೀಪಮುನ್ನೂರು ಮೂರ್ತೆದಾರರ ಸೇವಾ ಸಹಕಾರಿ ಸಂಘದ ಕೇಂದ್ರ ಕಚೇರಿಯ ನೂತನ ಕಟ್ಟಡಕ್ಕೆ ಸಜೀಪಮೂಡ ಗ್ರಾಮದ ಸುಭಾಷ್ ನಗರದಲ್ಲಿ ಫೆ.26 ರಂದು ಬೆಳಿಗ್ಗೆ 9.30ಕ್ಕೆ ಶಿಲಾನ್ಯಾಸ ನೆರವೇರಲಿಸಲಾಗುವುದು ಎಂದು ಸಂಘದ ಅಧ್ಯಕ್ಷ ಕೆ. ಸಂಜೀವ ಪೂಜಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಸಚಿವ ಬಿ. ರಮಾನಾಥ ರೈ ಶಿಲಾನ್ಯಾಸ ನೆರವೇರಿಸಲಿದ್ದು, ರಾಜ್ಯ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷರಾದ ಕೆ. ಸಂಜೀವ ಪೂಜಾರಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅವರು



ತಿಳಿಸಿದ್ದಾರೆ. ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯೆ ಪ್ರತಿಭಾ ಕುಳಾಯಿ, ಮಾಜಿ ಶಾಸಕ ಎ. ರುಕ್ಮಯ ಪೂಜಾರಿ , ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ, ಜಿ.ಪಂ. ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ, ಸಜೀಪಮೂಡ ಗ್ರಾಮ ಪಂಚಾಯತ್ ಅಧ್ಯಕ್ಷೆ ಶೋಭಾ ಶೆಟ್ಟಿ, ನಂದಾವರ ಶ್ರೀ ವಿನಾಯಕ ಶಂಕರ ನಾರಾಯಣ ದುರ್ಗಾಂಬ ದೇವಳದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪ್ರಭಾಕರ ಶೆಟ್ಟಿ ಕಾಂತಾಡಿಗುತ್ತು, ಸಜೀಪನಡು ಶ್ರೀ ನಾಲ್ಕೈತ್ತಾಯ ದೈವಸ್ಥಾನದ ದೈವಪಾತ್ರಿ ಶಂಕರ ಯಾನೆ ಕೋಚ ಪೂಜಾರಿ, ಅಮ್ಮೆಂಬಳ ಸಂತ ಥೋಮಸರ ಚರ್ಚಿನ ಧರ್ಮಗುರು ವಂ.ಫಾ. ಮೈಕಲ್ ಡಿ.ಸಿಲ್ವಾ, ಕೊಳಕೆ ಮುಹಿಯುದ್ದೀನ್ ಜುಮ್ಮಾ ಮಸೀದಿಯ ಅಧ್ಯಕ್ಷ ಎಸ್. ಸಿದ್ದೀಕ್, ಸಜೀಪಮೂಡ ಬ್ರಹ್ಮಶ್ರೀ ನಾರಾಯಣ ಜ್ಞಾನಮಂದಿರದ ಅಧ್ಯಕ್ಷ ಕೆ. ಮೋಹನ್‌ದಾಸ್ ಪೂಜಾರಿ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

1991ರಲ್ಲಿ ಸಂಘ ಸ್ಥಾಪನೆ

ಮೂರ್ತೆದಾರಿಕೆ ಮಾಡುವ ಕುಲ ಕಸುಬುದಾರರ ಶ್ರೇಯೋಭಿವೃದ್ಧಿ ಹಾಗೂ ಅವರ ಆರ್ಥಿಕ ಜೀವನ ಮಟ್ಟ ಸುಧಾರಿಸುವ ಸದುದ್ದೇಶದೊಂದಿಗೆ, ಸಂಘದ ಅಧ್ಯಕ್ಷ ಕೆ. ಸಂಜೀವ ಪೂಜಾರಿಯವರ ದೂರದೃಷ್ಟಿ ಚಿಂತನೆಯೊಂದಿಗೆ 1991ರಲ್ಲಿ ಬಂಟ್ವಾಳ ತಾಲೂಕಿನ ಸಜೀಪಮೂಡ ಗ್ರಾಮದ ಸುಭಾಷ್ ನಗರದ ಬ್ರಹ್ಮಶ್ರೀ ನಾರಾಯಣ ಗುರುಮಂದಿರದಲ್ಲಿ ಸಂಘ ಅಸ್ತಿತ್ವಕ್ಕೆ ಬಂದಿತು. 2005 ನ.18ರಂದು ಸಜೀಪಮೂಡ ಗ್ರಾಮದ ಬೊಳ್ಳಾಯಿಯಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ಆರಂಭಿಸಿ ಬಂಟ್ವಾಳ ತಾಲೂಕಿನ ಎಲ್ಲಾ ಭಾಗಗಳಲ್ಲಿರುವ ಮೂರ್ತೆದಾರರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಸ್ಥಾಪನೆಯಾದ ಸಹಕಾರಿ ಸಂಘ ಕೆಲವೇ ವರ್ಷಗಳಲ್ಲಿ ಹಂತ ಹಂತವಾಗಿ ಬೆಳೆದು, ಜಿಲ್ಲೆಯ ವಿವಿದೆಡೆಗಳಲ್ಲಿ 17 ಶಾಖೆಗಳನ್ನು ಆರಂಭಿಸಿ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸ್ವಂತ ಕಟ್ಟಡದ ಕನಸು

ಸಂಘದ ಪ್ರಧಾನ ಕಚೇರಿಗೆ ಸ್ವಂತ ಕಟ್ಟಡವನ್ನು ಹೊಂದುವ ಉದ್ದೇಶದಿಂದ ಸಜೀಪಮೂಡ ಗ್ರಾಮದ ಸುಭಾಷ್‌ನಗರದಲ್ಲಿ 0.50 ಎಕ್ರೆ ಜಮೀನನ್ನು ಈ ಹಿಂದೆಯೇ ಖರೀದಿಸಿ ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. ಇದೀಗ ಸಂಘದ ಬಹುದಿನಗಳ ಬೇಡಿಕೆಯೊಂದು ಈಡೇರುತ್ತಿದ್ದು, ಗ್ರಾಮೀಣ ಭಾಗದಲ್ಲಿ ಸಹಕಾರಿ ಸಂಘವೊಂದರ ಸುಸಜ್ಜಿತ ಕಟ್ಟಡ ಶೀಘ್ರದಲ್ಲಿಯೇ ಎದ್ದು ನಿಲ್ಲಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತಮುತ್ತ

ಫೆ.22ರಂದು ಸಾರ್ವಜನಿಕ ಶ್ರೀ ಶನೈಶ್ಚರ ಪೂಜೆ

ಮುಲ್ಕಿ: ಕಾರ್ನಾಡು ಶ್ರೀ ರಾಮ ಸೇವಾ ಮಂಡಳಿಯ ಆಶ್ರಯದಲ್ಲಿ ಕಾರ್ನಾಡು, ಶ್ರೀ ಮಹಾಮ್ಮಾಯಿ ದೇವರ ಕಟ್ಟೆಯಲ್ಲಿ ಫೆ.22ರ ಭಾನುವಾರ ಬೆಳಿಗ್ಗೆ ಎಂಟನೇ ವರ್ಷದ ಸಾರ್ವಜನಿಕ ಶ್ರೀ ಶನೈಶ್ಚರ ಪೂಜೆ ಹಾಗೂ ಗಣ ಹೋಮವು ಚಿತ್ರಾಪು ಪುಷ್ಪರಾಜ್ ಭಟ್ ನೇತೃತ್ವದಲ್ಲಿ ನಡೆಯಲಿದೆ. ಬೆಳಿಗ್ಗೆ 11ರಿಂದ ಮಧ್ಯಾಹ್ನದ ವರೆಗೆ ಶ್ರೀ ರಾಮ ಸೇವಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಮಧ್ಯಾಹ್ನ ಅನ್ನಪ್ರಸಾದ ವಿತರಣೆ ನಡೆಯಲಿದೆ

ಫೆ.28ರಂದು ನಡಿಕುದ್ರು ದೈವಸ್ಥಾನ ನೇಮೋತ್ಸವ

ಮುಲ್ಕಿ: ಸಮೀಪದ ನಡಿಕುದ್ರು ಧರ್ಮದೈವ ಜಾರಂದಾಯ ದೈವಸ್ಥಾನದಲ್ಲಿ ಧರ್ಮ ದೈವದ ನೇಮೋತ್ಸವವು ಫೆ.28ಕ್ಕೆ ಜರಗಲಿದೆ. ಅಂದು ಶನಿವಾರ ಬೆಳಿಗ್ಗೆ ನವಕ ಕಲಶಾಭಿಷೇಕ, ನಾಗದೇವರಿಗೆ ಹಾಲು ಅಭಿಷೇಕ, 11ಕ್ಕೆ ವಿದ್ಯಾರ್ಥಿ ವೇತನ ವಿತರಣೆ, ಡಾ. ಪೂರ್ವಿ ಪ್ರವೀಣ್ ನಡಿಕುದ್ರು ಹಾಗೂ ಡಾ. ರೇಷ್ಮಾ ರಾಜೇಶ್ ಸನಿಲ್ ನಡಿಕುದ್ರುರಿಗೆ ಸನ್ಮಾನ ಕಾರ್ಯಕ್ರಮ, ಮಧ್ಯಾಹ್ನ ಅನ್ನಸಂತರ್ಪಣೆ,ರಾತ್ರಿ ಭಂಡಾರ ಇಳಿದು, ಮೈಸಂದಾಯ ನೇಮ, ರಾತ್ರಿ 10ಕ್ಕೆ ಧರ್ಮದೈವ ಜಾರಂದಾಯ, ಬಂಟ ಪರಿವಾರ ದೈವಗಳ ಗಡುವಾಡು ನೇಮ ನಡೆಯಲಿದೆ.

ನಿಡ್ಪಳ್ಳಿ ಗ್ರಾ.ಪಂ. ಆಡಳಿತಾಧಿಕಾರಿಯಾಗಿ ಚೇತನ್ ಕುಮಾರ್

ನಿಡ್ಪಳ್ಳಿ: ಪುತ್ತೂರು ಪಿ.ಎಂ.ಜಿ.ಎಸ್.ವೈ.ನ ಸಹಾಯಕ



ಕಾರ್ಯವಾಹಕ ಚೇತನ್ ಕುಮಾರ್ ಅವರು ಫೆ.18ಕ್ಕೆ ನಿಡ್ಪಳ್ಳಿ ಗ್ರಾಮ ಪಂಚಾಯತ್ ಪ್ರಭಾರ ಆಡಳಿತಾಕಾರಿಯಾಗಿ ಅಧಿಕಾರ ಸ್ವೀಕರಿಸಿದರು. ಪಿಡಿಒ ಜಯಪ್ರಕಾಶ್ ಅವರನ್ನು ಹೂಗುಚ್ಛ ನೀಡಿ ಸ್ವಾಗತಿಸಿದರು.

ಬಾಕಿಲ–ಪೈಕ ಕಾಂಕ್ರೀಟ್ ರಸ್ತೆ ಉದ್ಘಾಟನೆ

ಸುಬ್ರಹ್ಮಣ್ಯ: ರಸ್ತೆಗಳು ಗ್ರಾಮೀಣ ಜನರ ಅತ್ಯವಶ್ಯಕ ಮೂಲ ಸೌಕರ್ಯಗಳಲ್ಲಿ ಒಂದಾಗಿದೆ. ರಸ್ತೆಗಳ ಅಭಿವೃದ್ಧಿಯು ಜನತೆಗೆ ಹೆಚ್ಚು ಅನುಕೂಲತೆ ಸೃಷ್ಟಿಸುತ್ತದೆ. ಮೂಲಭೂತ ಸೌಕರ್ಯಗಳ ಅಭ್ಯುದಯದಿಂದ ಗ್ರಾಮೀಣ ಭಾಗದ ಪ್ರಗತಿ ಸಾಧ್ಯ. ಆದುದರಿಂದ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುವುದು ಎಂದು ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಶಾಸಕರ ವಿಶೇಷ ಅನುದಾನದಿಂದ ಮಂಜೂರಾದ ರೂ.20 ಲಕ್ಷ ವೆಚ್ಚದಲ್ಲಿಲ್ಲಿ ನಿರ್ಮಿತವಾದ ಬಾಕಿಲ–ಪೈಕ ಕಾಂಕ್ರೀಟ್ ರಸ್ತೆಯನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಈ ಸಂದರ್ಭ ಬಿಜೆಪಿ ಮಂಡಲಾಧ್ಯಕ್ಷ ವೆಂಕಟ್ ವಳಲಂಬೆ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ವೆಂಕಟ್ ದಂಬೆಕೋಡಿ, ಗ್ರಾ.ಪಂ. ಅಧ್ಯಕ್ಷೆ ಸುಮಿತ್ರಾ ಮೂಕಮಲೆ, ಸದಸ್ಯ ಜಗದೀಶ ಬಾಕಿಲ, ಹಿರಿಯರಾದ ಬಿ.ಕೆ. ಬೆಳ್ಯಪ್ಪ ಗೌಡ, ಶಕ್ತಿ ಕೇಂದ್ರದ ಅಧ್ಯಕ್ಷ ಕಿಶೋರ್ ಕುಮಾರ್ ಪೈಕ, ಬೂತ್ ಅಧ್ಯಕ್ಷ ಜಗದೀಶ ಪಿ.ಎಸ್., ಕಾರ್ಯದರ್ಶಿ ಶಿವಕುಮಾರ ಮಣೆಯಾನಮನೆ ಮತ್ತಿತರಿದ್ದರು.

ಕೋಟ: ಕರ್ಣಾಟಕ ಬ್ಯಾಂಕ್‌ನಿಂದ ಶಾಲೆಗೆ ಬಸ್ ಕೊಡುಗೆ

ಕೋಟ: ಇಲ್ಲಿನ ಕೋಟದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತ ಡಾ.ಕೋಟ ಶಿವರಾಮ ಕಾರಂತರು ಕಲಿತ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಟ ಇಲ್ಲಿ ಕಳೆದ ಕೆಲವು ವರ್ಷಗಳಿಂದ ವಿದ್ಯಾರ್ಥಿಗಳನ್ನು ಕರೆತರಲು ಬಾಡಿಗೆಯ ವಾಹನವನ್ನು ಅವಲಂಬಿಸಿದ್ದ ಈ ಹಿನ್ನಲೆಯಲ್ಲಿ ಸಾಲಿಗ್ರಾಮ ಶ್ರೀ ಗುರುನರಸಿಂಹ ದೇಗುಲದ ಮಾಜಿ ಅಧ್ಯಕ್ಷ ಪ್ರಸ್ತುತ ಸದಸ್ಯರಾಗಿರುವ ಕೆ. ಅನಂತಪದ್ಮನಾಭ ಐತಾಳ್ ಇವರ ಮನವಿಯ ಮೇರೆಗೆ ಕರ್ಣಾಟಕ ಬ್ಯಾಂಕ್‌ನಿಂದ ಸುಮಾರು 18 ಲಕ್ಷ ರೂ.ನ ಬಸ್‌ನ್ನು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನೀಡಲಿದೆ. ಶಾಲಾ ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದು, ಕೊಡುಗೆ ನೀಡಲಿರುವ ಕರ್ಣಾಟಕ ಬ್ಯಾಂಕ್ ಹಾಗೂ ದೇಗುಲದ ಟ್ರಸ್ಟಿ ಕೆ. ಅನಂತಪದ್ಮನಾಭ ಐತಾಳ್ ಅವರಿಗೆ ಕೃತಜ್ಞತೆ ಸಲ್ಲಿಸಿದೆ ಎಂದು ಶಾಲಾ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಸಿಐಎಸ್‌ಎಫ್ ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್‌ಗೆ ಸ್ವಾಗತಿಸಿ ಸೋನಿಯಾ ನಾರಂಗ್ ಹೇಳಿಕೆ

ಕರಾವಳಿಯ ಬಂದರು, ಕಂಪೆನಿಗಳಿಗೆ ಹೆಚ್ಚಿನ ಭದ್ರತೆಗೆ ಆದ್ಯತೆ

ಸುರತ್ಕಲ್/ಮುಲ್ಕಿ: ಗುಜರಾತ್‌ನ ಕಛ್‌ನಿಂದ ಕೇರಳದ ಎರ್ನಾಕುಲಂವರೆಗೆ 25 ದಿನಗಳಲ್ಲಿ ಪಶ್ಚಿಮ ಕರಾವಳಿಯಲ್ಲಿ 6552 ಕಿ.ಮೀ. ಕ್ರಮಿಸಲಿರುವ ಸಿಐಎಸ್‌ಎಫ್ ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್ ಬುಧವಾರ ಸಂಜೆ ಮುಲ್ಕಿ ಹಾಗೂ ಪಣಂಬೂರು ಬೀಚ್ ಬಳಿ ಆಗಮಿಸಿದಾಗ ಭವ್ಯವಾಗಿ ಸ್ವಾಗತಿಸಲಾಯಿತು.

ಬೀಚ್‌ನಲ್ಲಿ ಭರ್ಜರಿ ಸ್ವಾಗತ

ದೇಶದ ಬೃಹತ್ ಕರಾವಳಿ ಭಾಗದಲ್ಲಿ ಪ್ರಮುಖ ಬಂದರುಗಳ ಸಹಿತ ದೇಶದ ಆರ್ಥಿಕತೆಗೆ ಬಲ ತುಂಬುತ್ತಿರುವ ಕಂಪನಿಗಳ ಭದ್ರತೆ ರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕಾಗಿರುವುದು ಅಗತ್ಯ ಎಂದು ಸಿಐಎಸ್‌ಎಫ್ ತಂತಜ್ಞಾನ, ಪ್ರಾಧ್ಯಾಪಕ ವಿಭಾಗದ ಐಜಿ ಸೋನಿಯಾ ನಾರಂಗ್ ಹೇಳಿದರು.

ಸಿಐಎಸ್‌ಎಫ್ ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್ ತಂಡವು ಕರಾವಳಿ ಸಂಪರ್ಕ ಮತ್ತು ಜಾಗೃತಿ ಉಪಕ್ರಮದ ಭಾಗವಾಗಿ ಪಣಂಬೂರು ಬೀಚ್ ನಲ್ಲಿ ಸ್ವಾಗತಿಸಿ, ಮುಂದಿನ ಪ್ರಯಾಣಕ್ಕೆ ಚಾಲನೆ ನೀಡಿ, ಮಾತನಾಡಿದರು.





ಸೈಕ್ಲೋಥಾನ್ ಮೂಲಕ ಜಾಗೃತಿ ಮೂಡಿಸುವುದು ಹಾಗೂ ಸ್ಥಳೀಯರಲ್ಲಿ ಸಂಪರ್ಕ ಬೆಸೆಯುವು ದರೊಂದಿಗೆ ದೇಶದ ಕರಾವಳಿಯ ಭಾಗದ ಮಹತ್ವ ವನ್ನು ತಿಳಿಯಪಡಿಸುವುದು ಉದ್ದೇಶ ಎಂದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಎಡಿಜಿ ಸುಧೀರ್ ಕುಮಾರ್, ಸೋನಿಯಾ ನಾರಂಗ್, ಮತ್ತು ಸಿಐಎಸ್‌ಎಫ್‌ನ ಇತರ ಹಿರಿಯ ಅಧಿ ಕಾರಿಗಳು ಮತ್ತು ಅಧಿಕಾರಿಗಳು, ವಿವಿಧ ಕಂಪನಿಗಳ ಪ್ರಮುಖರು ಇದ್ದರು. ಸೈಕ್ಲೋಥಾನ್‌ಗೆ ಪಣಂಬೂರು ಬೀಚ್‌ನಿಂದ ಬುಧವಾರ ಔಪಚಾರಿಕವಾಗಿ ಚಾಲನೆ ನೀಡಲಾಯಿತು. ನಂತರ ಸೈಕ್ಲಿಂಗ್ ತಂಡವು ಪ್ರಯಾಣದ ಮುಂದಿನ ಹಂತಕ್ಕಾಗಿ ಕೊಚ್ಚಿನ್ ಕಡೆಗೆ ಸಾಗಿತು.

ಮುಲ್ಕಿಯಲ್ಲಿ ಸ್ವಾಗತ

ಮುಲ್ಕಿ ಜೈ ಶ್ರೀಕೃಷ್ಣ ಸುಧಾಮ ಫೌಂಡೇಶನ್ ನೇತೃತ್ವದಲ್ಲಿ ಮುಲ್ಕಿ ವಿಜಯಾ ಕಾಲೇಜು ಎನ್‌ಸಿಸಿ, ಸರಕಾರಿ ಪದವಿ ಪೂರ್ವ ಕಾಲೇಜು ಎನ್‌ಎಸ್‌ಎಸ್, ಶ್ರೀ ವ್ಯಾಸ ಮಹರ್ಷಿ ವಿದ್ಯಾಪೀಠ ಶಾಲಾ ಸೌಟ್ಸ್

ಜನರಲ್ಲಿ ಜಾಗೃತಿ

ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್ ಕರಾವಳಿ ಪ್ರದೇಶಗಳಲ್ಲಿ ರಾಷ್ಟ್ರೀಯ ಏಕತೆ, ಫಿಟ್‌ನೆಸ್ ಜಾಗೃತಿ ಮತ್ತು ಸಾರ್ವಜನಿಕ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

ಮತ್ತು ಗೈಡ್ಸ್ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಸಿಐಎಸ್‌ಎಫ್ ಸೈಕ್ಲೋಥಾನ್ ತಂಡವನ್ನು ಮುಲ್ಕಿ ಬಸ್ಸು ನಿಲ್ದಾಣದಲ್ಲಿ ಪುಷ್ಪವೃಷ್ಟಿಯೊಂದಿಗೆ ಸ್ವಾಗತಿ ಲಾಯಿತು. ಈ ಸಂದರ್ಭ ನಡೆಸಲಾದ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರ ಕೈಗಾರಿಕ ಭದ್ರತಾ ಪಡೆ (ಸಿಐಎಸ್‌ಎಫ್) ಡೆಪ್ಯುಟಿ ಕಮಾಂಡೆಂಟ್ ಸಂದೀಪ್ ಚಕ್ರವರ್ತಿ ಮಾತನಾಡಿದರು.ಜೈ ಶ್ರೀಕೃಷ್ಣ ಸುಧಾಮ ಫೌಂಡೇಶನ್ ಅಧ್ಯಕ್ಷ ಸುನಿಲ್ ಆಳ್ವ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ವಿದ್ಯಾರ್ಥಿಗಳಾದ ಕಾಮಾಕ್ಷಿ ಕಾಮತ್, ವೀರೇಶ್, ದಿವಿತ್, ಇಶಿಕಾ ರವರ ಪ್ರಶ್ನೆ ಹಾಗೂ ಸ್ಥಳೀಯರಾದ ಈಶ್ವರ್ ಕಟೀಲ್, ಮನ್ಸೂರ್ ಹಳೆಯಂಗಡಿ ,ಹರ್ಷರಾಜ್ ಶೆಟ್ಟಿಯವರ ಪ್ರಶ್ನೆಗಳಿಗೆ ಸಂದೀಪ್ ಚಕ್ರವರ್ತಿ ಉತ್ತರಿಸಿದರು.

ಸರಕಾರಿ ಪಪೂ ಕಾಲೇಜು ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ, ವ್ಯಾಸ ಮಹರ್ಷಿ ವಿದ್ಯಾಪೀಠ ಶಾಲಾ ಪ್ರಾಂಶುಪಾಲೆ ಕಾಮಾಕ್ಷಿ ನಾಯಕ್, ವಿಜಯಾ ಕಾಲೇಜು ಎನ್‌ಸಿಸಿ ಅಧಿಕಾರಿ ಲಾವಣ್ಯ ಲೋಕೇಶ್, ಸುಧಾಮ ಫೌಂಡೇಶನ್‌ನ ಸುಭಾಷ್ ಶೆಟ್ಟಿ ಸೈಲೇಶ್ ಕುಮಾರ್, ಕಸ್ತೂರಿ ಪಂಜ, ಸುಜಿತ್ ಸಾಲ್ಯಾನ್, ದಿನೇಶ್ ಹೆಗ್ಡೆ ವಿಶ್ವನಾಥ ಬಿ., ಪೂರ್ಣಿಮಾ ಹಳೆಯಂಗಡಿ, ಸವಿತಾ ಉದಯ್, ಕುಸುಮಾ ಚಂದ್ರಶೇಖರ್, ಸಿಐಎಸ್‌ಎಫ್ ಅಸಿಸ್ಟೆಂಟ್ ಕಮಾಂಡೆಂಟ್ ದುರ್ಗೇಶ್ ಕಲಾಲ್, ಶ್ಯಾಂಸುಂದರ್, ಪುರುಷೋತ್ತಮ ಬಡಗುಹಿತ್ಲು,ಪ್ರಾಣೇಶ್ ಹೆಜ್ಮಾಡಿ, ವಕೀಲ ರವೀಶ್ ಕಾಮತ್, ಕೃಷ್ಣರಾಜ್ ಬಪ್ಪನಾಡು, ಸಾಧು ಅಂಚನ್ ಮಟ್ಟು ಹಾಗೂ ಜವಾನರು ಉಪಸ್ಥಿತರಿದ್ದರು. ಈ ಸಂದರ್ಭ ಫೌಂಡೇಶನ್ ಅಧ್ಯಕ್ಷ ಸುನಿಲ್ ಆಳ್ವ ಮತ್ತು ಕರಾವಳಿ ತಟರಕ್ಷಣಾ ಪೊಲೀಸ್ ಇಲಾಖೆಯ ಗಿರೀಶ್ ಮೆಂಡನ್ ಅವರಿಗೆ ಸಿಐಎಸ್ ಎಫ್ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಕಲ್ಲಡ್ಕ ವಲಯ ಬಂಟರ ಸಂಘದ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ



ಬಂಟ್ವಾಳ: ಕಲ್ಲಡ್ಕ ವಲಯ ಬಂಟರ ಸಂಘದ ಯುವ ವಿಭಾಗದ ನೇತೃತ್ವದಲ್ಲಿ ಕಲ್ಲಡ್ಕ ವಲಯ ಬಂಟರ ಸಂಘ ಹಾಗೂ ಮಹಿಳಾ ವಿಭಾಗದ ಸಹಯೋಗದಲ್ಲಿ ವಲಯ ಮಟ್ಟದ ಪುರುಷರ ಬಂಟ್ಸ್ ಪ್ರೀಮಿಯರ್ ಲೀಗ್ 2026 ಸೀಸನ್ – 2 ಕ್ರಿಕೆಟ್ ಪಂದ್ಯಾಟ ಮತ್ತು ಮಹಿಳೆಯರ ಲಗೋರಿ ಪಂದ್ಯಾಟ ಪಾಣೆಮಂಗಳೂರು ಗ್ರಾಮದ ಬೊಂಡಾಲ ಕಾಪಿಕಾಡು ಕ್ರೀಡಾಂಗಣದಲ್ಲಿ ನಡೆಸಲಾಯಿತು.

ಕಲ್ಲಡ್ಕ ವಲಯ ಬಂಟರ ಸಂಘದ ಅಧ್ಯಕ್ಷ ಗಣೇಶ್ ಶೆಟ್ಟಿ ಗೋಳ್ತಮಜಲು ಪಂದ್ಯಾಟದ ಉದ್ಘಾಟಿಸಿದರು. ವಲಯ ಬಂಟರ ಸಂಘದ ಗೌರವಾಧ್ಯಕ್ಷ ಪದ್ಮನಾಭ ರೈ ಕಲ್ಲಡ್ಕ, ಬಂಟ್ವಾಳ ತಾಲೂಕು ಬಂಟರ ಸಂಘದ ಮಹಿಳಾ ವಿಭಾಗದ ಅಧ್ಯಕ್ಷೆ ಸುಜಾತ ಪಿ ರೈ, ಬಂಟ್ವಾಳ ತಾಲೂಕು ಬಂಟರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಬಾಲಕೃಷ್ಣ ಆಳ್ವ ಬೊಂಡಾಲ, ವಲಯ ಬಂಟರ ಸಂಘದ ಉಪಾಧ್ಯಕ್ಷ ದೇವಿಪ್ರಸಾದ್ ಶೆಟ್ಟಿ, ವಿವಿಧ ಗ್ರಾಮ ಸಮಿತಿ ಅಧ್ಯಕ್ಷ ರಾಮಣ್ಣ ಶೆಟ್ಟಿ ಸುಧೆಕ್ಕಾರು, ಸಂದೀಪ್ ಶೆಟ್ಟಿ ಆರೆಬೆಟ್ಟು, ಅಶೋಕ್ ಆಳ್ವ ಕೊಳಕಿರು, ಪ್ರೀತೇಶ್ ಮಾಣ್ಯ ಬೊಂಡಾಲ ಗುತ್ತು, ಪೃಥ್ವಿರಾಜ್ ಆಳ್ವ ಅಥಿತಿಗಳಾಗಿ ಭಾಗವಹಿಸಿದರು.

ಬಿ.ಸಿ.ರೋಡ್ ಸಿಟಿ ರೋಟರಿ ಕ್ಲಬ್ ಅಧ್ಯಕ್ಷ ದಿವಾಕಾರ ಶೆಟ್ಟಿ ಕಾಂಪ್ರಬೈಲು ಬಹುಮಾನ ಅನಾವರಣಗೊಳಿಸಿದರು. ಉದ್ಘಾಟನಾ ಭಾಗವಾಗಿ ಹಿರಿಯರಿಗೆ ಲೆಜೆಂಡ್ಸ್ ಕ್ರಿಕೆಟ್ ಪಂದ್ಯಾಟವನ್ನು ನಡೆಸಲಾಯಿತು. ವಲಯ ಬಂಟರ ಸಂಘದ ಯುವ ವಿಭಾಗದ ಅಧ್ಯಕ್ಷ ರಾದ ಸುನಾದ್ ರಾಜ್ ಶೆಟ್ಟಿ ಸ್ವಾಗತಿಸಿ, ವಲಯ ಬಂಟರ ಸಂಘದ ಕಾರ್ಯದರ್ಶಿ ನಾಗೇಶ್ ಶೆಟ್ಟಿ ಬೊಂಡಾಲ ನಿರೂಪಿಸಿದರು. ನಂತರ ಲೀಗ್ ಮಾದರಿಯಲ್ಲಿ ಕ್ರಿಕೆಟ್ ಪಂದ್ಯಾಟ ನಡೆಯಿತು. ಮಹಿಳೆಯರ ಲಗೋರಿ ಪಂದ್ಯಾಟ ನಡೆಯಿತು.

ಬಂಟ್ವಾಳ ತಾಲೂಕು ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ ಬದಿಗುಡ್ಡೆ, ಕೋಶಾಧಿ ಕಾರಿ ಲೋಕೇಶ್ ಶೆಟ್ಟಿ ಕುಳ, ಕಾರ್ಯಕಾರಿ ಸಮಿತಿಯ ಸದಸ್ಯೆ ಪ್ರತಿಭಾ ಆತ್ಮರಂಜನ್ ರೈ, ತಾಲೂಕು ಯುವ ವಿಭಾಗದ ಅಧ್ಯಕ್ಷ ಗೋಕುಲ್ ಭಂಡಾರಿ, ಉದ್ಯಮಿಗಳಾದ ಸಚ್ಚಿದಾನಂದ ಶೆಟ್ಟಿ ಬೊಂಡಾಲ, ಸಂದೇಶ್ ಶೆಟ್ಟಿ ಆರೆಬೆಟ್ಟು, ತಾಲೂಕು ಮಹಿಳಾ ವಿಭಾಗದ ಮಾಜಿ ಅಧ್ಯಕ್ಷೆ ಆಶಾ ರೈ ಬಿ.ಸಿ.ರೋಡ್, ಕ್ರೀಡಾ ಕೂಟದ ಸಂಚಾಲಕ ಸಂತೋಷ್ ಶೆಟ್ಟಿ ಸೀನಾಜೆ ಉಪಸ್ಥಿತರಿದರು. ಕ್ರಿಕೆಟ್ ಪಂದ್ಯಾಟದಲ್ಲಿ ದಾಮೋದರ ಶೆಟ್ಟಿ ಸುಧೆಕ್ಕಾರು ನೇತೃತ್ವದ ಚಾಲೆಂಜರ್ಸ್ ತಂಡ ಪ್ರಥಮ, ರತ್ನಾಕರ ಶೆಟ್ಟಿ ನೇತೃತ್ವದ ಬಂಟ್ಸ್ ಟೈಗರ್ಸ್ ತಂಡ ದ್ವಿತೀಯ, ಸಂತೋಷ್ ಶೆಟ್ಟಿ ಪೆಲತಡ್ಕ ನೇತೃತ್ವದ ತೃತೀಯ ಹಾಗೂ ಸತೀಶ್ ಶೆಟ್ಟಿ ನೇತೃತ್ವದ ಅಟ್ಯಾಕರ್ಸ್ ತಂಡ ಚತುರ್ಥ ಸ್ಥಾನವನ್ನು ಪಡೆಯಿತು. ಮಹಿಳೆಯರ ಲಗೋರಿ ಪಂದ್ಯಾಟದಲ್ಲಿ ಪ್ರಜ್ಞಾ ಎಸ್. ರೈ ನೇತೃತ್ವದ ಸಪ್ತ ತಂಡ ಪ್ರಥಮ, ನೀನಾ ಉದಯ ರೈ ನೇತೃತ್ವದ ಶ್ರೇಷ್ಠ ತಂಡ ದ್ವಿತೀಯ ಸ್ಥಾನ ಪಡೆಯಿತು.

ನಾಳೆ ಲೇಖಕಿ ಬಿ.ಎಂ. ರೋಹಿಣಿಗೆ ‘ಆರೋಹಿಣಿ’ ಗ್ರಂಥ ಗೌರವ ಸಲ್ಲಿಕೆ

ಮಂಗಳೂರು: ಬಿ.ಎಂ. ರೋಹಿಣಿ ಅಭಿನಂದನಾ ಸಮಿತಿ ಮಂಗಳೂರು ಹಾಗೂ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಮಂಗಳಗಂಗೋತ್ರಿ ಸಹಯೋಗದಲ್ಲಿ ನಿವೃತ್ತ ಶಿಕ್ಷಕಿ, ಲೇಖಕಿ ಬಿ.ಎಂ. ರೋಹಿಣಿ ಅಭಿನಂದನೆ ಮತ್ತು ಗ್ರಂಥ ಗೌರವ ಸಮಾರಂಭ ಫೆ.21ಕ್ಕೆ ಬೆಳಗ್ಗೆ 10.30ಕ್ಕೆ ನಗರದ ಹಂಪನಕಟ್ಟೆ ಮಂಗಳೂರು ವಿವಿ ಕಾಲೇಜು ರವೀಂದ್ರ ಭವನದಲ್ಲಿ ನಡೆಯಲಿದೆ.

ಈ ವೇಳೆ ಬಿ.ಎಂ. ರೋಹಿಣಿ ಅವರಿಗೆ ‘ಆರೋಹಿಣಿ’ ಗ್ರಂಥ ಗೌರವ ಸಲ್ಲಿಸಲಾಗುವುದು. ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷ ಡಾ. ನಾಗಪ್ಪ ಗೌಡ ಆರ್. ಗ್ರಂಥ ಅನಾವರಣ ಮಾಡುವರು. ಹಿರಿಯ ಲೇಖಕಿ ಡಾ.ಎಚ್. ಎಸ್. ಅನುಪಮಾ ಗ್ರಂಥಾವಲೋಕನ ಮಾಡಲಿದ್ದಾರೆ. ಮಂಗಳೂರು ಕೆಥೋಲಿಕ್ ಧರ್ಮಪ್ರಾಂತ್ಯ ಸಂಪರ್ಕಾಧಿಕಾರಿ ರಾಯ್ ಕ್ಯಾಸ್ಟಲಿನೊ ಅಭಿನಂದನಾ ನುಡಿಗಳನ್ನಾಡುವರು. ಪ್ರಜ್ಞಾ ರೋಹನ್ ಕುಮಾರ್ ನೆಲ್ಲಿಂಗೇರಿ, ಮಂಗಳೂರಿನ ಜಿಲ್ಲಾ ಕೇಂದ್ರ ಗ್ರಂಥಾಲಯ ಗ್ರಂಥಪಾಲಕಿ ಪ್ರಣೀತಾ ಮೊಂತೆರೊ, ವಿವಿ ಕಾಲೇಜು ಪ್ರಾಂಶುಪಾಲ ಡಾ. ಗಣಪತಿ ಗೌಡ ಭಾಗವಹಿಸುವರು. ಅಭಿನಂದನಾ ಸಮಿತಿ ಹಾಗೂ ಕರಾವಳಿ ಲೇಖಕಿಯರ– ವಾಚಕಿಯರ ಸಂಘದ ಅಧ್ಯಕ್ಷೆ ಶಕುಂತಲಾ ಟಿ. ಶೆಟ್ಟಿ ಅಧ್ಯಕ್ಷತೆ ವಹಿಸುವರು ಎಂದು ಆರೋಹಿಣಿ ಸಂಪಾದಕಿ ಸಬಿಹಾ ಭೂಮಿಗೌಡ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿ.ಎಂ. ರೋಹಿಣಿ ಅವರು ಕಥೆ, ಮಹಿಳಾ ಚಿಂತನೆ, ಸಂಶೋಧನೆ, ವೈಚಾರಿಕ ಲೇಖನ ಒಳಗೊಂಡ 23 ಕೃತಿಗಳನ್ನು ರಚಿಸಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ 1963ರಲ್ಲಿ ವೃತ್ತಿ ಆರಂಭಿಸಿ, ನಡೆನುಡಿಯ ಮೂಲಕ ವ್ಯಕ್ತಿತ್ವವನ್ನು ‘ಆರೋಹಿಣಿ’ಯಾಗಿಸಿದವರು. ಅಪಾರ ಅಭಿಮಾನಿ ಬಳಗ, ಓದುಗ ವರ್ಗವನ್ನು ಗಳಿಸಿದ್ದಾರೆ. ಅವರು ಮುಂದಿನ ಏಪ್ರಿಲ್ 6ಕ್ಕೆ 83ನೇ ವರ್ಷಕ್ಕೆ ಕಾಲಿಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ಅವರ ಗೆಳತಿಯರು, ಅಭಿಮಾನಿಗಳು, ಕರಾವಳಿಯ ವಿದ್ವತ್ ವಲಯ, ಶಿಷ್ಯರು, ಸಹೋದ್ಯೋಗಿಗಳು, ಸಂಘ ಸಂಸ್ಥೆಗಳ ಸಹಿತ 12 ಸಂಘಟನೆಗಳು ಒಗ್ಗೂಡಿ ಪ್ರೀತಿ, ಅಭಿಮಾನ, ಗೌರವದ ಅಭಿವ್ಯಕ್ತಿಗಾಗಿ ‘ನಾಗರಿಕ ಸನ್ಮಾನ’ ಆಯೋಜಿಸಿದ್ದಾರೆ ಎಂದರು. ಅಭಿನಂದನಾ ಸಮಿತಿ ಕಾರ್ಯದರ್ಶಿ ಜ್ಯೋತಿ ಚೇಳಾಯರು, ಡೀಡ್ಸ್ ಸಂಸ್ಥೆ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ಬಿಲ್ಲವ ಮಹಿಳಾ ವೇದಿಕೆಯ ಸುಮಲತಾ ಸುವರ್ಣ, ಪಡಿ ಸಂಸ್ಥೆಯ ರೆನ್ನಿ ಡಿಸೋಜ, ಕರಾವಳಿ ಲೇಖಕಿಯರ – ವಾಚಕಿಯರ ಸಂಘದ ದೇವಿಕಾ ನಾಗೇಶ್ ಉಪಸ್ಥಿತರಿದ್ದರು.

ಕಡಬ–ಪಂಜ ರಸ್ತೆ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಕಡಬ: ಕಡಬ–ಪಂಜ ಮುಖ್ಯರಸ್ತೆಯ ರೂ.1 ಕೋಟಿ ವೆಚ್ಚದ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಕಡಬದ ಸರಸ್ವತೀ ವಿದ್ಯಾಲಯದ ಬಳಿ ತೆಂಗಿನ ಕಾಯಿ ಒಡೆಯುವ ಮೂಲಕ ಬುಧವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಒಟ್ಟು ರೂ.2 ಕೋಟಿ ಅನುದಾನದಲ್ಲಿ ಕಾಮಗಾರಿ ನಡೆಯಲಿದ್ದು, ಈಗಾಗಲೇ ರೂ.1 ಕೋಟಿ ವೆಚ್ಚದಲ್ಲಿ ಕಡಬ ಭಾಗ ದಿಂದ ಕಲ್ಲಂತಡ್ಕ ತನಕ ರಸ್ತೆ ಹೆಚ್ಚು ಹಾಳಾಗಿರುವ 3 ಕಡೆ ರಸ್ತೆ ಎತ್ತರಿಸಿ ಕಾಂಕ್ರೀಟ್ ಹಾಕಲಾಗಿದೆ. ಕೆಲವು ಕಡೆ ಡಾಮರು ಹಾಕುವ ಕೆಲಸ ಮಾಡಲಾಗಿದೆ. ಉಳಿದಂತೆ ರೂ.1 ಕೋಟಿ ಅನುದಾನದ ಕಾಮಗಾರಿಗೆ ಈಗ ಚಾಲನೆ ನೀಡಲಾಗಿದೆ. ಈ ತಿಂಗಳ ಕೊನೆ ವೇಳೆಗೆ ಕಡಬದಿಂದ ಕೋಡಿಂಬಾಳದ ಓಂತ್ರಡ್ಕದ ತನಕ ರಸ್ತೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಸುಳ್ಯ ಲೋಕೋಪಯೋಗಿ ಇಲಾಖಾ ಎಇಇ ಗೋಪಾಲ್ ಕಾಮಗಾರಿಯ ಕುರಿತು ಪೂರಕ ಮಾಹಿತಿ ನೀಡಿದರು.

ಸುಳ್ಯ ಮಂಡಲ ಅಧ್ಯಕ್ಷ ವೆಂಕಟ್ ವಳಲಂಬೆ, ಪ್ರಮುಖರಾದ ಕೃಷ್ಣ ಶೆಟ್ಟಿ ಕಡಬ, ಪ್ರಸನ್ನ ಮಾರ್ತ, ರಾಕೇಶ್ ರೈ ಕೆಡೆಂಜಿ, ಹರೀಶ್ ಕಂಜಿಪಿಲಿ, ವೆಂಕಟ್ ದಂಬೆಕೋಡಿ, ಪ್ರದೀಪ್ ರೈ ಮನವಳಿಕೆ, ವಿನಯ ಕುಮಾರ್ ಕಂದಡ್ಕ, ಪ್ರಕಾಶ್ ಎನ್.ಕೆ., ಅಶೋಕ್ ಕುಮಾರ್ ಪಿ., ರಾಜೇಶ್ ಎನ್.ಎಸ್. ಸುಬ್ರಹ್ಮಣ್ಯ, ಗಿರೀಶ್ ಎ.ಪಿ., ದಯಾನಂದ ಪೊಯ್ಯೆತಡ್ಕ, ರಘುರಾಮ ನ್ಯಾಕ್ ಕುಕ್ಕೆಕರೆಬೆಟ್ಟು, ಶಿವಪ್ರಸಾದ್ ರೈ ಮೈಲೇರಿ, ರವಿರಾಜ್ ಶೆಟ್ಟಿ ಕಡಬ, ಉಮೇಶ್ ಶೆಟ್ಟಿ ಸಾಯಿರಾಂ, ಸವಿತಾ ಭಟ್ ಪಾಜೋವು, ಧನಂಜಯ ಕೊಡಂಗೆ, ಗುತ್ತಿಗೆದಾರ ಗಿರೀಶ್ ಬೆಳ್ತಂಗಡಿ ಮತ್ತಿರರು ಉಪಸ್ಥಿತರಿದ್ದರು.

ಪುತ್ತೂರು ಶಾಸಕರ ‘ನರಸಣ್ಣ’ ಪದ ಬಳಕೆಗೆ ಬಿಜೆಪಿಯಿಂದ ತೀವ್ರ ಖಂಡನೆ

ಮಂಗಳೂರು: ಪುತ್ತೂರು ಕಾಂಗ್ರೆಸ್ ಶಾಸಕ ಅಶೋಕ್ ರೈ ಅವರು ರಾಜಕೀಯ ಹೇಳಿಕೆಯಲ್ಲಿ ಮನೆ ಮನೆಗೆ ತೆರಳಿ ಭವಿಷ್ಯ ಹಾಗೂ ಶುಭ ಶಕುನ ನುಡಿಯುವ ಸಮುದಾಯದ ಜನರನ್ನು ಅವಮಾನ ಮಾಡಿ, ಏಕವಚನದಲ್ಲಿ ಸಂಬೋಧಿಸಿರುವುದು ಅಕ್ಷಮ್ಯ ಅಪರಾಧ. ಶ್ರಮಜೀವಿ ಸಮುದಾಯದ ಬಗ್ಗೆ ಇಂತಹ ಕೀಳುಮಟ್ಟದ ಪದಬಳಕೆ ಮಾಡಿರುವ ಶಾಸಕರ ದರ್ಪವನ್ನು ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಉಗ್ರವಾಗಿ ಖಂಡಿಸುತ್ತದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಮಹೇಶ್ ಜೋಗಿ ಹೇಳಿದ್ದಾರೆ.

ಸಮಾಜದ ಕಟ್ಟಕಡೆಯ ವ್ಯಕ್ತಿಯ ಬದುಕನ್ನು ಗೌರವಿಸಬೇಕಾದ ಶಾಸಕರು, ಸಾರ್ವಜನಿಕವಾಗಿ ‘ನರಸಣ್ಣ’ ಎಂದು ಲೇವಡಿ ಮಾಡುವ ಮೂಲಕ ಅವರ ಆತ್ಮಗೌರವಕ್ಕೆ ಧಕ್ಕೆ ತಂದಿದ್ದಾರೆ. ಬಡವರ ನಂಬಿಕೆ ಮತ್ತು ಕಸುಬನ್ನು ಈ ರೀತಿ ಅಣಕಿಸುವುದು ಅವರ ಶ್ರೀಮಂತಿಕೆಯ ಅಹಂಕಾರವನ್ನು ಪ್ರದರ್ಶಿಸುತ್ತದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋದಲ್ಲಿ ಶಾಸಕ ಅಶೋಕ್ ರೈ ಅವರು ಅತ್ಯಂತ ಹಗುರವಾಗಿ ಮಾತನಾಡಿರುವುದು ಸ್ಪಷ್ಟವಾಗಿ ದಾಖಲಾಗಿದೆ. ಇದು ಕೇವಲ ಒಂದು ಸಮುದಾಯಕ್ಕೆ ಮಾತ್ರವಲ್ಲ, ಇಡೀ ಹಿಂದುಳಿದ ವರ್ಗಕ್ಕೆ ಮಾಡಿದ ಅವಮಾನವಾಗಿದೆ ಎಂದು ಹೇಳಿದ್ದಾರೆ. ಶಾಸಕರು ಬಹಿರಂಗವಾಗಿ ಕ್ಷಮೆಯಾಚಿಸದಿದ್ದರೆ, ಜಿಲ್ಲಾದ್ಯಂತ ಇರುವ ಹಿಂದುಳಿದ ವರ್ಗಗಳ ಜನರನ್ನು ಸಂಘಟಿಸಿ ಅವರ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಮಹೇಶ್ ಜೋಗಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಬ್ರಹ್ಮರಕೂಟ್ಲು ಟೋಲ್ ತೆರವಿಗೆ ಒತ್ತಾಯ: ಮಾ.3ಕ್ಕೆ ಸಾಮೂಹಿಕ ಧರಣಿ



ಬಂಟ್ವಾಳ: ಮಂಗಳೂರು– ಬೆಂಗಳೂರು ರಾ.ಹೆ.ಯ ಬ್ರಹ್ಮರಕೂಟ್ಲು ಟೋಲ್ ಗೇಟ್ ತೆರವಿಗೆ ಆಗ್ರಹಿಸಿ ಮಾರ್ಚ್ 3 ರಂದು ಸಾಮೂಹಿಕ ಧರಣಿ ನಡೆಸಲು ಸಮಾನ ಮನಸ್ಕ ಸಂಘಟನೆಗಳು ನಿರ್ಧರಿಸಿದ್ದು, ಈ ನಿಟ್ಟಿನಲ್ಲಿ ಹೋರಾಟ ಸಮಿತಿ ರಚಿಸಲಾಗಿದೆ.

ಮಾಜಿ ಸಚಿವ ಬಿ ರಮಾನಾಥ ರೈ ಅಧ್ಯಕ್ಷತೆಯಲ್ಲಿ ಬಿ.ಸಿ.ರೋಡಿನಲ್ಲಿ ಗುರುವಾರ ನಡೆದ ಸಮಾನ ಮನಸ್ಕ ವಿವಿಧ ಸಂಘಟನೆಗಳು, ಪಕ್ಷಗಳಿಗೆ ಸೇರಿದ ಪ್ರತಿನಿಧಿಗಳ ಸಮಾಲೋಚನಾ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದ್ದು, ಇದೇ ವೇಳೆ ಹೋರಾಟ ಸಮಿತಿ ಅಸ್ತಿತ್ವಕ್ಕೆ ತರಲಾಯಿತು.

ಅಂದು ಬೆಳಿಗ್ಗೆ9 ರಿಂದಮಧ್ಯಾಹ್ನ12ರವರಗೆ ಬ್ರಹ್ಮರಕೂಟ್ಲು ಟೋಲ್ ಗೇಟ್ ಸಮೀಪ ಸಾಮೂಹಿಕ ಧರಣಿ ನಡೆಸುವುದೆಂದು ಸಭೆ ತೀರ್ಮಾನಿಸಿದ್ದು, ಮುಂದಿನ ಹಂತದಲ್ಲಿ ಮತ್ತಷ್ಟು ತೀವ್ರತರವಾದ ಹೋರಾಟ ಸಂಘಟಿಸುವುದು, ಟೋಲ್ ಗೇಟ್ ತೆರವುಗೊಳಿಸಿಯೇ ವಿಶ್ರಮಿಸುವುದು ಎಂದು ಸಭೆಯಲ್ಲಿ ಘೋಷಿಸಲಾಯಿತು. ಸುರತ್ಕಲ್ ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿಯ ಸಂಚಾಲಕರಾದ ಮುನೀರ್ ಕಾಟಿಪಳ್ಳ ಟೋಲ್ ಗೇಟ್ ತೆರವಿಗೆ ನಡೆಸಬೇಕಾದ ಮುಂದಿನ ಹೋರಾಟಗಳ ಕುರಿತು ಮಾರ್ಗದರ್ಶನ ನೀಡಿದರು.

ಮಾಜಿ ಸಚಿವ ಬಿ ರಮಾನಾಥ ರೈ ಗೌರವಾಧ್ಯಕ್ಷತೆ, ಬಿ ಶೇಖರ್ ಹಾಗೂ ಮೋಹನ್ ಶೆಟ್ಟಿ ಅವರನ್ನು ಸಂಚಾಲಕತ್ವದಲ್ಲಿ ಹೋರಾಟ ಸಮಿತಿ ರಚಿಸಲಾಗಿದ್ದು, ಮುಂದಿನ ದಿನದಲ್ಲಿ ಸಮಾನ ಮನಸ್ಕರಾದ ಎಲ್ಲರನ್ನು ಒಳಗೊಂಡ ಸಮಾವೇಶ ನಡೆಸಿ ಪೂರ್ಣಪ್ರಮಾಣದ ಸಮಿತಿ ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸಭೆಯಲ್ಲಿ ವಿವಿಧ ಸಂಘಟನೆಗಳ ಪ್ರಮುಖರು, ಸ್ಥಳೀಯ ಜನಪ್ರತಿನಿಧಿಗಳು, ಸಮಾನ ಮನಸ್ಕ ಸಂಘಟನೆಗಳ ಸಮನ್ವಯ ಸಮಿತಿ ಬಂಟ್ವಾಳದ ಪ್ರಮುಖರು ಉಪಸ್ಥಿತರಿದ್ದರು.

ಪೈವಳಿಕೆ ಗ್ರಾಮ ಪಂಚಾಯತ್: ಅಭಿವೃದ್ಧಿ ಕುರಿತು ವಿಚಾರ ಸಂಕಿರಣ



ಉಪ್ಪಳ: ಗ್ರಾಮ ಸಭೆ, ಊರು ಕೂಟ, ಅಭಿವೃದ್ಧಿ ಸೆಮಿನಾರ್ ಮುಂತಾದ ಕಾರ್ಯಕ್ರಮಗಳು ಯಶಸ್ವಿಯಾದಾಗ ಮಾತ್ರ ಜನಪರ ಯೋಜನೆಗಳು ಫಲಾನುಭವಿಗಳಿಗೆ ತಲಪಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ಗ್ರಾಮ ಪಂಚಾಯತ್ ಜನಪ್ರತಿನಿಧಿಗಳಿಗೆ ಹೆಚ್ಚು ಜವಾಬ್ದಾರಿಯಿದೆ ಎಂದು ಮಂಜೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸೈಫುಲ್ಲಾ ತಂಙಳ್ ಹೇಳಿದ್ದಾರೆ.

ಪೈವಳಿಕೆ ಗ್ರಾ.ಪಂ.ನ 2026–27ನೇ ವರ್ಷದ ಅಭಿವೃದ್ಧಿ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಪೈವಳಿಕೆ ಗ್ರಾ.ಪಂ. ಅಧ್ಯಕ್ಷೆ ಬದ್ರುನ್ನೀಸಾ ಸಲೀಂ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದರು. 2026–27ನೇ ವರ್ಷದ ಕರಡು ಯೋಜನೆಗಳನ್ನು ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಸುನೀನಾ ಝುಡ್.ಎ.ಕಯ್ಯಾರು ಮಂಡಿಸಿದರು. ಬ್ಲಾಕ್ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಮೋಹನ ರೈ ಕಯ್ಯಾರು, ಬ್ಲಾಕ್ ಪಂಚಾಯಿತ್ ಸದಸ್ಯರಾದ ಅಬ್ದುಲ್ ರಜಾಕ್ ಚಿಪ್ಪಾರು, ಚಂದ್ರಾವತಿ ಶೆಟ್ಟಿ, ಗ್ರಾಮ ಪಂಚಾಯತ್ ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಶ್ರೀನಿವಾಸ ಕೆ.ಎಚ್., ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಸುಮನಾ ಜಿ.ಭಟ್ ಹಾಗೂ ಗ್ರಾಮ ಪಂಚಾಯತ್ ಸದಸ್ಯರು ಶುಭಹಾರೈಸಿದರು.

ವಿವಿಧ ವಿಷಯಗಳನ್ನಾಧರಿಸಿ ನಡೆದ ಚರ್ಚೆಯಲ್ಲಿ ರೂಪಿಸಿದ ಯೋಜನೆಗಳನ್ನು ಅಂಗೀಕರಿಸಲಾಯಿತು. ವಿವಿಧ ಇಲಾಖಾ ಅಧಿಕಾರಿಗಳು ರಾಜಕೀಯ ಪಕ್ಷಗಳ ನಾಯಕರು, ಕುಟುಂಬಶ್ರೀ ಸದಸ್ಯೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ವರ್ಕಿಂಗ್ ಗ್ರೂಪ್ ಸದಸ್ಯರು ಭಾಗವಹಿಸಿದ್ದರು. ಗ್ರಾ.ಪಂ. ಉಪಾಧ್ಯಕ್ಷ ಟಿ.ರಾಘವೇಂದ್ರ ಭಟ್ ಸ್ವಾಗತಿಸಿ, ಕಾರ್ಯದರ್ಶಿ ಜಿಜಿ ನಿರೂಪಿಸಿ, ಧನ್ಯವಾದವಿತ್ತರು.

ಗ್ರಾಮ ವಾಸ್ತವ್ಯಕ್ಕೆ ಚಾಲನೆ ನೀಡಿ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಕರೆ

ಶಿಕ್ಷಣದ ಮೂಲಕ ಕೊರಗ ಸಮಾಜ ಮುಖ್ಯವಾಹಿನಿಗೆ ಬರಲಿ

ಕುಂದಾಪುರ: ಕೊರಗ ಸಮುದಾಯದ ಮನೆಯಲ್ಲಿ ವಾಸ್ತವ್ಯ ಹೂಡಿರುವುದು, ಅವರೊಂದಿಗೆ ಸಂವಾದ ನಡೆಸಿರುವುದು ನಿಜಕ್ಕೂ ಒಂದು ಅವಿಸ್ಮರಣೀಯ ಕ್ಷಣಗಳಲ್ಲಿ ಒಂದು. ಕೊರಗ ಸಮುದಾಯವು ಅತ್ಯಂತ ಮೃದು ಹಾಗೂ ನಿರ್ಲಕ್ಷಿತ ಸಮಾಜವಾಗಿದೆ ಎಂಬ ಭಾವನೆ ಇದೆ. ಆದರೆ ಈ ಇಲ್ಲಾ ಅಡೆ ತಡೆಗಳನ್ನು ಮೆಟ್ಟಿ ನಿಂತು ಸಮುದಾಯದ ಎಲ್ಲರೂ ಸುಶಿಕ್ಷಿತರಾಗುವುದರೊಂದಿಗೆ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಅವರು ಕರೆ ನೀಡಿದರು.

ಹರ್ಕೂರು ಗ್ರಾಮದ ನಾರ್ಕಳಿ ಮದುಕೊಡ್ಲು ಪರಿಸರದಲ್ಲಿ ಕೊರಗ ಸಮುದಾಯದವರೊಂದಿಗೆ ಗ್ರಾಮ ವಾಸ್ತವ್ಯ ಕೈಗೊಂಡಿದ್ದ ಅವರು ಕೊರಗ ಸಮುದಾಯದ ಸ್ಥಳೀಯ ಮುತ್ತೈದೆಯರಿಗೆ



ಬಾಗಿನ ನೀಡುವ ಮೂಲಕ ಕಾರ್ಯಕ್ರಮದೊಂದಿಗೆ ಗ್ರಾಮ ವಾಸ್ತವ್ಯಕ್ಕೆ ಚಾಲನೆ ನೀಡಿದರು.

ಸಮಾಜದ ಮುಖ್ಯವಾಹಿನಿಗೆ ತೆರೆದುಕೊಳ್ಳುತ್ತಿರುವ ಕೊರಗ ಸಮಾಜವನ್ನು ಹಿಂದು ಸಮಾಜ ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದೆ. ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿರುವ ಕೊರಗ ಸಮುದಾಯದ ಮನೆಯಲ್ಲಿ ವಾಸ್ತವ್ಯ ಹೊಸ ಪ್ರೇರಣೆಯನ್ನು ನೀಡಿದೆ ಮಾತ್ರವಲ್ಲದೆ ಅವರ ನೋವು ನಲಿವುಗಳನ್ನು ಅರಿತುಕೊಳ್ಳಲು ಅವಕಾಶ ಮಾಡಿಕೊಟ್ಟಿದೆ ಎಂದು ಅವರು ತಿಳಿಸಿದ್ದಾರೆ.

ಭೋಜನ ಸವಿದ ಶಾಸಕರು

ಇದೇ ಸಂದರ್ಭ ಕೊರಗ ಸಮುದಾಯದ ಪ್ರಮುಖರ ಜೊತೆ ಸಂವಾದ ನಡೆಸಿದ ಶಾಸಕರು, ಗ್ರಾಮದಲ್ಲಿನ ಕೊರಗ ಸಮಾಜದ ಸಾಮಾಜಿಕ ಹಾಗೂ ಇನ್ನಿತರ ವಿಚಾರಗಳ ಬಗ್ಗೆ ಚರ್ಚೆ ನಡೆಸಿ ಪರಿಹಾರೋಪಾಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು. ಸಮುದಾಯ ಬಂಧುಗಳ ಜೊತೆ ಭೋಜನ ಸವಿದರು. ಕೊರಗ ಸಮುದಾಯ ಸುರೇಂದ್ರ ಅವರ ಮನೆಯಲ್ಲಿ ಇತರರೊಂದಿಗೆ ರಾತ್ರಿ ಗ್ರಾಮ ವಾಸ್ತವ್ಯ ಕೈಗೊಂಡರು. ಗ್ರಾಮ ವಾಸ್ತವ್ಯ ಹಾಗೂ ಸಂವಾದದಲ್ಲಿ ಕೊರಗ ಸಮುದಾಯದ ವಕೀಲ, ಸಾಮಾಜಿಕ ಕಾರ್ಯಕರ್ತ ಸತೀಶ್ ಕಾಳಾವರ್ಕರ್, ಬಿಜೆಪಿ ಬೈಂದೂರು ಮಂಡಲ ಅಧ್ಯಕ್ಷೆ ಅನಿತಾ ಆರ್.ಕೆ., ರವಿ ಶೆಟ್ಟಿ ಆಲೂರು, ಬಿಜೆಪಿ ಮುಖಂಡರು, ಕೊರಗ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಪೈಚಾರ್‌ನಲ್ಲಿ ಕಾಂಗ್ರೆಸ್ ಮುಖಂಡರಿಂದ ಸ್ವಾಗತ

ಸಂಸದ ಎಂ.ಕೆ. ರಾಘವನ್ ಭೇಟಿ

ಸುಳ್ಯ: ಕೇರಳ ಕ್ಯಾಲಿಕಟ್ ಲೋಕಸಭಾ ಕ್ಷೇತ್ರದ ಸದಸ್ಯ ಎಂ.ಕೆ. ರಾಘವನ್ ಬುಧವಾರ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ತೆರಳುವ ಸಂದರ್ಭದಲ್ಲಿ ಪೈಚಾರ್ ಜಂಕ್ಷನ್ ನಲ್ಲಿ ಸುಳ್ಯದ ಕಾಂಗ್ರೆಸ್ ಮುಖಂಡರು ಸ್ವಾಗತಿಸಿದರು.

ಚುನಾವಣಾ ಹೊಸ್ತಿಲಲ್ಲಿ ಕೇರಳ ಕೈ ನಾಯಕ ಕುಕ್ಕೆ ಸುಬ್ರಹ್ಮಣ್ಯ ದೇಗುಲಕ್ಕೆ ತೆರಳುವ ಮಾರ್ಗ ಮಧ್ಯದಲ್ಲಿ ಮುಖಂಡರು ಸುಳ್ಯಕ್ಕೆ ಸ್ವಾಗತಿಸಿ ಕುಕ್ಕೆ ದೇಗುಲಕ್ಕೆ ಬೀಳ್ಕೊಟ್ಟರು. ಈ ಸಂದರ್ಭ ಕರ್ನಾಟಕ ರಾಜ್ಯ ಕಾರ್ಮಿಕ ಕನಿಷ್ಠ ವೇತನ ಸಲಹಾ



ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್, ಪ್ರಮುಖರಾದ ಕೆ. ಗೋಕುಲ್ ದಾಸ್ ಸುಳ್ಯ, ಭವಾನಿಶಂಕರ್ ಕಲ್ಮಡ್ಕ, ಶಶಿಧರ್ ಎಂ.ಜೆ., ನಂದರಾಜ್ ಸಂಕೇಶ್, ಮೋಹಿತ್ ಹರ್ಲಡ್ಕ, ಸುರೇಶ್ ಕಂದಡ್ಕ, ಭೋಜಪ್ಪ ನಾಯ್ಕ, ಆರ್.ಬಿ. ಬಶೀರ್, ಶರೀಫ್ ಕಂಠಿ, ಪದ್ಮನಾಭ ಹರ್ಲಡ್ಕ, ಅಬ್ದುಲ್ ರಜಾಕ್, ಮಂಜುನಾಥ ಮಡ್ತಿಲ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ಟಯರ್ ಪಂಚರ್: ಕೋಲ್ನಾಡ್ ಬಳಿ ಅಡ್ಡಾದಿಡ್ಡಿ ಚಲಿಸಿದ ಕಾರು

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ –ಕೋಲ್ನಾಡ್ ಬಳಿ ಕಾರಿನ ಟಯರ್ ಪಂಚರ್ ಆಗಿ ಅಡ್ಡಾದಿಡ್ಡಿ ಚಲಿಸಿದ್ದು, ಹೆದ್ದಾರಿ ಬದಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿಯೊಬ್ಬರು ತೋಡಿಗೆ ಹಾರಿ ಸಣ್ಣ ಪುಟ್ಟ ಗಾಯಗಳೊಂದಿಗೆ ಪವಾಡ ಸದೃಶ ಪಾರಾಗಿದ್ದಾರೆ. ಮಂಗಳೂರು ಕಡೆಯಿಂದ ಉಡುಪಿ ಕಡೆಗೆ ಬರುತ್ತಿದ್ದ ಕಾರು ಕೋಲ್ನಾಡ್ ಭಾರತ್ ಬೆಂಜ್ ಶೋ ರೂಮ್ನ ಬದಿಯಲ್ಲಿ ಟಯರ್ ಪಂಚರ್ ಆಗಿ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಬದಿ ನಡೆದುಕೊಂಡು ಹೋಗುತ್ತಿದ್ದ ಪಾದಾಚಾರಿಗೆ ಡಿಕ್ಕಿ ಹೊಡೆಯಲು ಹತ್ತಿರ ಬಂದಾಗ ಅವರು ಸಮೀಪದ ತೋಡಿಗೆ ಹಾರಿ ಪ್ರಾಣಪಾಯದಿಂದ ಪಾರಾಗಿದ್ದಾರೆ ಬಳಿಕ ಕಾರು ಸಮೀಪದಲ್ಲೇ ಅಪಘಾತ ನಿಯಂತ್ರಣಕ್ಕೆ ಇರಿಸಿದ್ದ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದಿದ್ದು, ಬಾರಿ ಶಬ್ದ ಉಂಟಾಗಿ ಸ್ಥಳೀಯರು ಭಯಬೀತರಾಗಿದ್ದರು. ಬಳಿಕ ಕಾರು ಸ್ವಲ್ಪ ದೂರ ಹೋಗಿ ಹೆದ್ದಾರಿ ಬದಿ ತನ್ನಿಂತಾನೇ ನಿಂತಿದ್ದು ಕೂಡಲೇ ಸ್ಥಳೀಯರು ದಾವಿಸಿ, ಚಾಲಕನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಚಾಲಕ ಕಾರು ಸಮೇತ ಪಲಾಯನ ಮಾಡದಂತೆ ಕಾರಿನ ಟಯರ್ ಗಾಳಿ ತೆಗೆದಿದ್ದಾರೆ. ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಅಪೌಷ್ಟಿಕ ಮಕ್ಕಳ ಆರೋಗ್ಯ ತಪಾಸಣೆ

ಬೆಳ್ತಂಗಡಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಬೆನಕ ಆಸ್ಪತ್ರೆ ಉಜಿರೆ ಹಾಗೂ ಸ್ತ್ರೀ ಶಕ್ತಿ ಬ್ಲಾಕ್ ಸೊಸೈಟಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಪೌಷ್ಟಿಕ ಮಕ್ಕಳ ಆರೋಗ್ಯ ತಪಾಸಣೆ ಮತ್ತು ಪೋಷಕರಿಗೆ ಮಾಹಿತಿ ಕಾರ್ಯಕ್ರಮ ಫೆ.18ಕ್ಕೆ ಬೆಳ್ತಂಗಡಿಯ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಿತು. ಕಾರ್ಯಕ್ರಮವನ್ನು ಬೆನಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಭಾರತಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ತಾಲೂಕು ಆರೋಗ್ಯಾಧಿಕಾರಿ ಡಾ. ಸಂಜಾತ್ ವಹಿಸಿದ್ದರು. ಯೋಜನಾಧಿಕಾರಿ ಫ್ರಿಯಾ ಆಗ್ನೆಸ್ ಅವರು ಮಕ್ಕಳ ಆರೋಗ್ಯ ಹಾಗೂ ಪೋಷಣೆ ಬಗ್ಗೆ ಪೋಷಕರಿಗೆ ಮಾಹಿತಿ ನೀಡಿದರು. ಮಕ್ಕಳ ತಜ್ಞ ಡಾ. ಆಶಾ ಅಪೌಷ್ಟಿಕತೆಯಿಂದ ಆಗುವ ದುಷ್ಪರಿಣಾಮಗಳು ಮತ್ತು ಮತ್ತು ತಡೆಗಟ್ಟುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಮಕ್ಕಳ ಮಕ್ಕಳ ತಜ್ಞ ಡಾ. ಆಶಾ ಹಾಗೂ ಡಾ. ದೀಕ್ಷಿತ ಇವರು ಬಂದಿರುವಂತಹ ಮಕ್ಕಳ ಆರೋಗ್ಯ ತಪಾಸಣೆ ಮಾಡಿದರು. ಈ ಸಂದರ್ಭ ಬೆನಕ ಆಸ್ಪತ್ರೆ ವತಿಯಿಂದ ಮಕ್ಕಳಿಗೆ ಪ್ರೋಟೀನ್ ಪೌಡರ್‌ನ್ನು ವಿತರಿಸಲಾಯಿತು. ಅನ್ನಪೂರ್ಣ ಸ್ವಾಗತಿಸಿ, ವಾಣಿಶ್ರೀ ವಂದಿಸಿದರು. ಕಾತ್ಯಾಯಿನಿ ಕಾರ್ಯಕ್ರಮ ನಿರ್ವಹಿಸಿದರು. ಬೆಳ್ತಂಗಡಿ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯ 36 ಕಡಿಮೆ ತೂಕದ ಮಕ್ಕಳು ಹಾಗೂ ಮಕ್ಕಳ ಪೋಷಕರು ಹಾಜರಿದ್ದರು. ಇದೇ ವೇಳೆ ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಯಿತು.

ಕಲ್ಲಮದಲ್ಲಿ ಪರಿಶಿಷ್ಟ ಪಂಗಡದ 12 ಮನೆಗಳಿಗೆ ರಸ್ತೆಗಾಗಿ ಒತ್ತಾಯ

ಪುತ್ತೂರು: ಮುಂಡೂರು ಗ್ರಾಮದ ಕಲ್ಲಮದಲ್ಲಿ ಪರಿಶಿಷ್ಟ ಪಂಗಡದ 12 ಮನೆಗಳಿಗೆ ಮತ್ತು ಇತರೆ 4 ಮನೆಗಳಿಗೆ ರಸ್ತೆ ನಿರ್ಮಾಣ ಮಾಡಿಕೊಡುವಂತೆ ರಾಜಕೀಯ ನೇತಾರರು, ಶಾಸಕರು, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಮನವಿ ನೀಡಲಾಗಿದ್ದು, ಯಾವುದೇ ಸ್ಪಂದನೆ ಇಲ್ಲ, ಹಾಗಾಗಿ ಮಾ.25ಕ್ಕೆ ಎಸಿ ಕಚೇರಿ ಎದುರು ಪ್ರತಿಭಟನೆ ನಡೆಸುತ್ತೇವೆ. ಮತ್ತೂ ಸ್ಪಂದನೆ ಸಿಗದಿದ್ದರೆ ಮಾ.30ರೊಳಗೆ ಅಂಬೇಡ್ಕರ್ ತತ್ವ ರಕ್ಷಣಾ ವೇದಿಕೆಯಿಂದ ರಸ್ತೆ ನಿರ್ಮಾಣ ಮಾಡಿ ಕೊಡಲಾಗುವುದು ಎಂದು ಕರ್ನಾಟಕ ಅಂಬೇಡ್ಕರ್ ತತ್ವ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಗಿರಿಧರ ನಾಯ್ಕ ತಿಳಿಸಿದ್ದಾರೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಲಮ ಪರಿಶಿಷ್ಟ ಪಂಗಡಕ್ಕೆ ಸೇರಿದ 12 ಮನೆಗಳು ಮತ್ತು ಇತರ 4 ಮನೆಗಳಿಗೆ ಕರೆಮನೆ ಕಟ್ಟೆಯಿಂದ 300 ಮೀಟರ್ ಸಂಪರ್ಕ ರಸ್ತೆ ಬೇಕಾಗಿದೆ. ಹಲವು ದಶಕಗಳಿಂದ ಇಲ್ಲಿ ವಾಸವಿರುವವರು ರಸ್ತೆ ವ್ಯವಸ್ಥೆ ಇಲ್ಲದ ಕಾರಣಕ್ಕೆ ನಿತ್ಯ ಸಂಕಷ್ಟ ಅನುಭವಿಸುತ್ತಿದ್ದಾರೆ. ಅನಾರೋಗ್ಯಪೀಡಿತರನ್ನು ಎತ್ತಿಕೊಂಡೇ ಹೋಗಬೇಕಾದ ಅನಿವಾರ್ಯತೆ ಇದೆ ಎಂದರು. ಈ ಕುರಿತು ಸಹಾಯಕ ಕಮಿಷನರ್, ಜಿಲ್ಲಾಧಿಕಾರಿ ಮತ್ತು ರಾಜಕೀಯ ನಾಯಕರು, ಜನಪ್ರತಿನಿಧಿಗಳಿಗೆ ಮನವಿ ನೀಡಲಾಗಿದೆ. ಸ್ಪಂದನೆಯಿಲ್ಲ, ಫೆ.30ರ ನಂತರ ರಸ್ತೆ ನಿರ್ಮಾಣ ಮಾಡಲಾಗುವುದು. ಅಹಿತಕರ ಘಟನೆ ನಡೆದಲ್ಲಿ ರಾಜಕೀಯ ನಾಯಕರು, ಅಧಿಕಾರಿಗಳು ಹೊಣೆ ಎಂದು ಗಿರಿಧರ್ ನಾಯ್ಕ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರಸ್ತೆ ಫಲಾನುಭವಿಗಳಾದ ಕೊರಗಪ್ಪ ನಾಯ್ಕ ಕಲ್ಲಮ, ಜಗದೀಶ್, ಜಯಶ್ರೀ, ಲಕ್ಷ್ಮೀ ಉಪಸ್ಥಿತರಿದ್ದರು.

ಮುಡಿಪು, ಕಡಬದಲ್ಲಿ ಬಿಜೆಪಿಯಿಂದ ಕಾಲ್ನಡಿಗೆ ಜಾಥಾ, ಜನಜಾಗೃತಿ ಸಭೆ | ಸಂಸದ ಕೋಟ ಹೇಳಿಕೆ

'ಉದ್ಯೋಗ ಖಾತ್ರಿ' ಪಾರದರ್ಶಕತೆಗೆ ವಿಬಿ ಜಿ ರಾಮ್ ಜಿ ಜಾರಿ

ಕೊಣಾಜೆ/ಕಡಬ: ಬಿಜೆಪಿ ಸುಳ್ಯ ಮಂಡಲದ ವತಿಯಿಂದ ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ಮತ್ತು ವಿಬಿ ಜಿ ರಾಮ್ ಜಿ ಯೋಜನೆಯ ಕುರಿತು ಜನಜಾಗೃತಿಗಾಗಿ ಹೊಸಮಠದಿಂದ ಕಡಬದವರೆಗೆ ನಡೆದ ಬೃಹತ್ ಪಾದಯಾತ್ರೆ ಮತ್ತು ಮಂಗಳೂರು ಮಂಡಲದ ವತಿಯಿಂದ 'ವಿಕಸಿತ ಮುಡಿಪು ಕಾಯರ್ ಗೋಳಿ ಜಂಕ್ಷನ್ ನಿಂದ ಮುಡಿಪು ಜಂಕ್ಷನ್ ವರೆಗೆ 'ಕಾಲ್ನಡಿಗೆ ಜಾಥಾ' ಹಾಗೂ ಜಾಗೃತಿ ಸಭೆಯು ಬುಧವಾರ ನಡೆಯಿತು.





ಜಾಥಾದ ಬಳಿಕ ಕಡಬದಲ್ಲಿ ಜರಗಿದ ಸಭೆಯಲ್ಲಿ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಪ್ರಧಾನ ಭಾಷಣ ಮಾಡಿದರು. ಈ ಹಿಂದೆ ಭ್ರಷ್ಟಾಚಾರ ನಡೆಯುತ್ತಿರುವುದನ್ನು ಮನಗಂಡು ಉದ್ಯೋಗ ಖಾತ್ರಿ ಯೋಜನೆಯನ್ನು ಪಾರದರ್ಶಕವಾಗಿ ನಡೆಸಬೇಕೆನ್ನುವ ಉದ್ದೇಶದಿಂದ ಯೋಜನೆಗೆ ಹೊಸರೂಪ ನೀಡಲಾಗಿದೆ. ಅದರಲ್ಲಿ ಭ್ರಷ್ಟಾಚಾರ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಕಾಂಗ್ರೆಸ್ ವಿಬಿ ಜಿ ರಾಮ್ ಜಿ ಯೋಜನೆಯ ಕುರಿತು ವೃಥಾ ಅಪಪ್ರಚಾರ ಮಾಡುತ್ತಿದೆ ಎಂದರು.

ಯುಪಿಎ ಒಕ್ಕೂಟದ ಪಶ್ಚಿಮ ಬಂಗಾಳ ಸರಕಾರ ಉದ್ಯೋಗ ಖಾತ್ರಿ ಯೋಜನೆಯಲ್ಲಿ ರೂ.22.50 ಸಾವಿರ ಕೋಟಿ ಭ್ರಷ್ಟಾಚಾರ ಮಾಡಿದೆ. ಮಾತ್ರವಲ್ಲ ಈ ಯೋಜನೆಯ ಹೆಸರನ್ನು ಕರ್ಮಶ್ರೀ ಎಂದು ಬದಲಾಯಿಸಿದ್ದ ಸರ್ಕಾರ ಈಗ ಗಾಂಧಿ ಹೆಸರು ಹೆಸರಿಡಬೇಕು ಎಂದು ಹೇಳುತ್ತಿದೆ ಎಂದರು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ಕಾಂಗ್ರೆಸ್ ಅಮಾಯಕ ಜನರಿಗೆ ತಪ್ಪು ಸಂದೇಶ ನೀಡುತ್ತಿದೆ. ಹೊಸ ಯೋಜನೆಯಲ್ಲಿ ಹಿಂದೆ 100 ದಿನ ಇದ್ದ ಕೆಲಸವನ್ನು 125 ದಿನಕ್ಕೆ ಏರಿಸಲಾಗಿದೆ, ರೂ.175 ಸಂಬಳವನ್ನು ರೂ.375 ಮಾಡಿದ್ದಾರೆ. ಆ ಯೋಜನೆಯ ಹೆಸರನ್ನು ಈ ಹಿಂದೆ ಕೂಡ ಬದಲಾವಣೆ ಮಾಡಿದ್ದಾರೆ. ಗ್ರಾಮಕ್ಕೆ ಜೀವ ತುಂಬುವ ಶಕ್ತಿ ನೀಡುವ ಯೋಜನೆ ಎನ್ನುವ ಅರ್ಥ ಕೊಡುವ ಮುಖಾಂತರ ವಿಬಿಜಿ ರಾಮ್ ಜಿ ಹೆಸರನ್ನಿಡಲಾಗಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಸುಳ್ಯ ವಿಧಾನ ಸಭಾ ಕ್ಷೇತ್ರ ಪ್ರಭಾರಿ ಪ್ರಸನ್ನ ಕುಮಾರ್ ಮಾರ್ತ ಮಾತನಾಡಿದರು. ಸುಳ್ಯ ಮಂಡಲ ಅಧ್ಯಕ್ಷ ವೆಂಕಟ್ ವಳಲಂಬೆ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಪಾಧ್ಯಕ್ಷ ರಾಕೇಶ್ ರೈ ಕೆಡೆಂಜಿ, ಜಿ.ಪಂ. ಮಾಜಿ ಸದಸ್ಯ ಹರೀಶ್ ಕಂಜಿಪಿಲಿ ಉಪಸ್ಥಿತರಿದ್ದರು. ಜಿ.ಪಂ.ಮಾಜಿ ಸದಸ್ಯ ಕೃಷ್ಣ ಶೆಟ್ಟಿ ಕಡಬ ಸ್ವಾಗತಿಸಿ, ಬಿಜೆಪಿ ಸುಳ್ಯ ಮಂಡಲ ಪ್ರಧಾನ ಕಾರ್ಯದರ್ಶಿ ಪ್ರದೀಪ್ ರೈ ಮನವಳಿಕೆ ವಂದಿಸಿದರು. ವಿನಯ ಕಂದಡ್ಕ ನಿರ್ವಹಿಸಿದರು.

ಮುಡಿಪಿನಲ್ಲಿ ಜಾಗೃತಿ ಸಭೆ

ಮುಡಿಪು ಜಂಕ್ಷನ್‌ವರೆಗೆ ಕಾಲ್ನಡಿಗೆ ಜಾಥಾ ಬಳಿಕ ನಡೆದ ಜಾಗೃತಿ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಮಾತನಾಡಿ, ಕಾಂಗ್ರೆಸ್‌ನವರು ಎಂಜಿ ನರೇಗ ಯೋಜನೆಯ ಮೂಲಕ ಹಣವನ್ನು ಲೂಟಿ ಮಾಡುತ್ತಿದ್ದರು. ಸತ್ತವರ ಹೆಸರಲ್ಲಿ, ವಿದೇಶದವರ ಹೆಸರಲ್ಲಿ ಹಣ ಪಡೆಯುವ ಮೂಲಕ ಭ್ರಷ್ಟಾಚಾರಗಳು ನಡೆಯುತ್ತಿತ್ತು. ಅದಕ್ಕಾಗಿ ಮೋದಿಜಿಯವರು ಇದನ್ನು ತಡೆಯುವುದಕ್ಕಾಗಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೆ ತಂದಿದ್ದಾರೆ ಎಂದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷೆ ಪೂಜಾ ಪೈ ಮಾತನಾಡಿದರು. ಮುಖಂಡರಾದ ರವೀಂದ್ರ ಶೆಟ್ಟಿ ಉಳಿದೊಟ್ಟು, ಸಂತೋಷ್ ಕುಮಾರ್ ರೈ ಬೋಳಿಯಾರ್, ಚಂದ್ರಶೇಖರ್ ಉಚ್ಚಿಲ, ಚಂದ್ರಹಾಸ್ ಪಂಡಿತ್ ಹೌಸ್, ಧನಲಕ್ಷ್ಮೀ ಗಟ್ಟಿ ಹೇಮಂತ್ ಶೆಟ್ಟಿ ಸೀತಾರಾಮ ಬಂಗೇರ, ದಿವ್ಯ ಸತೀಶ್ ಶೆಟ್ಟಿ ಇದ್ದರು. ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ದಯಾನಂದ ತೊಕ್ಕೊಟ್ಟು ವಂದಿಸಿದರು. ಉಪಾಧ್ಯಕ್ಷರಾದ ರವಿಶಂಕರ್ ಸೋಮೇಶ್ವರ ನಿರೂಪಿಸಿದರು.

ಬಂಟಕಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಟಿಯು ವಿಶೇಷ ಮಾಹಿತಿ ಕಾರ್ಯಾಗಾರ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಕೇಂದ್ರ ಗ್ರಂಥಾಲಯ ವಿಭಾಗವು ಐಇಇಇ ವಿದ್ಯಾರ್ಥಿ ಘಟಕದ ಸಹಯೋಗದೊಂದಿಗೆ ಎಬ್‌ಸ್ಕೊ ಎಂಡ್ ಐಇಇಇ ಎಕ್ಸ್‌ಪ್ಲೋರ್ ವಿಟಿಯು ಕನ್ಸೋರ್ಟಿಯಂ ರಿಸೋರ್ಸಸ್ ವಿಷಯದ ಕುರಿತು ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಿತು.

ಎಬ್ಸ್ಕೊ ಐಇಇಇ ಎಕ್ಸ್‌ಪ್ಲೋರ್ ಸಂಸ್ಥೆಗಳ ತರಬೇತಿ ವ್ಯವಸ್ಥಾಪಕ ಎಂ.ಎಸ್. ಶ್ರೀನಿವಾಸ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ. ವಿಶ್ವವಿದ್ಯಾನಿಲಯದ ಕನ್ಸೋರ್ಟಿಯಮ್ ಮೂಲಕ ಲಭ್ಯವಿರುವ ಡಿಜಿಟಲ್ ಶೈಕ್ಷಣಿಕ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸುವ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು. ಹುಡುಕಾಟ ತಂತ್ರಜ್ಞಾನಗಳು, ಸಂಶೋಧನಾ ಕ್ಷೇತ್ರದ ಉಲ್ಲೇಖ, ಉಪಕರಣಗಳ ಬಳಕೆ ಹಾಗೂ ಸಾಹಿತ್ಯ ಸಮೀಕ್ಷೆ ನಡೆಸುವ ಉತ್ತಮ ಕ್ರಮಗಳ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಸಂಶೋಧನಾ ಲೇಖನಗಳನ್ನು ಹೇಗೆ ಹುಡುಕುವುದು ಮತ್ತು ಪ್ರಾಜೆಕ್ಟ್‌ಗಳು, ಪ್ರಕಟಣೆಗಳು ಹಾಗೂ ಉನ್ನತ ಶಿಕ್ಷಣ ಸಿದ್ಧತೆಗೆ ಪ್ರವೇಶ ತಯಾರಿ ಎಂಬುದರ ಬಗ್ಗೆ ಮಾರ್ಗದರ್ಶನ ನೀಡಲಾಯಿತು.

ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಲ್ಲಿ ಸಂಶೋಧನಾಕ್ಷೇತ್ರದಲ್ಲಿಅಗತ್ಯವಿರುವಜರ್ನಲ್‌ಗಳು, ಮಾಹಿತಿಗಳು, ಇ–ಪುಸ್ತಕಗಳು, ಸಮ್ಮೇಳನ ವರದಿಗಳು ಹಾಗೂ ಇತರ ಇ–ಲರ್ನಿಂಗ್ ಸಂಪನ್ಮೂಲಗಳ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಂಶುಪಾಲರು, ಡೀನ್‌ಗಳು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಂಡರು. ಕಾಲೇಜಿನ ಗ್ರಂಥಪಾಲಕರಾದ ದೀಪಕ್ ಎಸ್ ಮತ್ತು ಗ್ರಂಥಾಲಯ ಸಂಯೋಜಕಿ ಸೌಂದರ್ಯ, ಐಇಇಇ ಘಟಕದ ಸಂಯೋಜಕ ಡಾ. ನಾಗರಾಜ ರಾವ್ ಸಂಯೋಜಿಸಿದರು.

ಸಾಲಿಗ್ರಾಮ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಆನವಟ್ಟಿ ಪ.ಪಂ. ತಂಡ ಭೇಟಿ



ಕೋಟ: ಶಿವಮೊಗ್ಗ ಜಿಲ್ಲೆಯ ಆನವಟ್ಟಿ ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿ ಶಂಕರ್ ಎಲ್., ಆರೋಗ್ಯ ನಿರೀಕ್ಷಕರಾದ ಪ್ರಭು ಸಿ, ಕಿರಿಯ ಅಭಿಯಂತರ ಕಿರಣ್ ಕುಮಾರ್ ಆರ್ ಮತ್ತು ಅಧಿಕಾರಿ,ಸಿಬ್ಬಂದಿ, ಪೌರಕಾರ್ಮಿಕರು ಒಟ್ಟು 35 ಜನರ ತಂಡ ಇಲ್ಲಿನ ಸಾಲಿಗ್ರಾಮ ಪ.ಪಂ.ನ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಅಧ್ಯಯನ ಪ್ರವಾಸಕ್ಕಾಗಿ ಇತ್ತೀಚಿಗೆ ಭೇಟಿ ನೀಡಿದರು.

ಸಾಲಿಗ್ರಾಮ ಪ.ಪಂ.ನ ಪಾರಂಪಳ್ಳಿ ಹಾಗೂ ಕಾರ್ಕಡ ಗ್ರಾಮದಲ್ಲಿನ ಘನತ್ಯಾಜ್ಯ ನಿರ್ವಹಣೆಗೆ ಲಭ್ಯವಿರುವ ಕಡಿಮೆ ಜಾಗದಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ವೈಜ್ಞಾನಿಕವಾಗಿ ಘನತ್ಯಾಜ್ಯವನ್ನು ನಿರ್ವಹಿಸುತ್ತಿರುವ ಕುರಿತು ಮತ್ತು ಸಾಲಿಗ್ರಾಮ ಪಟ್ಟಣ ಪಂಚಾಯುತ್ zero leagacy waste ಬಗ್ಗೆ ಹೊಸನಗರ ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿ ಮೆಚ್ಚುಗೆ ವ್ಯಕ್ತಪಡಿಸಿದರು. ಸಾಲಿಗ್ರಾಮದಲ್ಲಿನ ಘನತ್ಯಾಜ್ಯ ನಿರ್ವಹಣೆಯ ಕೆಲವು ಮಾದರಿಯನ್ನು ಮುಂದಿನ ದಿನಗಳಲ್ಲಿ ಆನವಟ್ಟಿ ಪ.ಪಂ. ನಲ್ಲಿ ಅಳವಡಿಸುವುದಾಗಿ ಆನವಟ್ಟಿ ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿ ಶಂಕರ್.ಎಲ್ ತಿಳಿಸಿದರು. ಸಾಲಿಗ್ರಾಮ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಅಜಯ್ ಭಂಡಾರ್ಕರ್ ಅವರು ಪ್ರಸ್ತಾವನೆಗೈದು ಸಾಲಿಗ್ರಾಮ ಘನತ್ಯಾಜ್ಯ zero waste management ಸಾಧಕ ಭಾದಕರ ಬಗ್ಗೆ ಕೂಲಂಕುಷವಾಗಿ ವಿವರಿಸಿದರು. ಹಾಗೂ ಕಿರಿಯ ಆರೋಗ್ಯ ನಿರೀಕ್ಷಕಿ ಮಮತಾ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ನೀಡಿದರು. ಕಂದಾಯ ನಿರೀಕ್ಷಕರಾದ (ಪ್ರಬಾರ) ಚಂದ್ರಶೇಖರ ಸೋಮಯಾಜಿ ಸ್ವಾಗತಿಸಿ ಪರಿಚಯಿಸಿ ಧನ್ಯವಾದಗೈದರು. ಆನವಟ್ಟಿ ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿ ಶಂಕರ್ ಎಲ್ ಇವರನ್ನು ಸಾಲಿಗ್ರಾಮ ಪ.ಪಂ. ವತಿಯಿಂದ ಗೌರವಿಸಲಾಯಿತು. ಪಟ್ಟಣ ಪಂಚಾಯತ್‌ನ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಿ: ಡಾ. ಹರಿಕೃಷ್ಣ ಪುನರೂರು



ಮುಲ್ಕಿ: ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಹೇಳಿದರು.

ಅವರು ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಪಂಚಮಹಲ್ ಶ್ರೀ ಸದಾಶಿವ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಉತ್ಸವದ ಪ್ರಯುಕ್ತ ಭಜನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭ ಕ್ಷೇತ್ರದ ಅರ್ಚಕ ಶ್ರೀನಾಥ್ ಭಟ್ ,ರಮೇಶ್ ಮಯ್ಯ, ಮುಂಬೈ ಉದ್ಯಮಿ ಕಿಶೋರ್ ಶೆಟ್ಟಿ, ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ, ನಿವೃತ್ತ ಬ್ಯಾಂಕ್ ಪ್ರಬಂಧಕ ಸತೀಶ್ ಭಂಡಾರಿ, ರಾಘವೇಂದ್ರ ಭಟ್ ಬಪ್ಪನಾಡು, ರಾಮದಾಸ್ ಕಾಮತ್, ನಯನ ತಾರನಾಥ್ ದೇವಾಡಿಗ, ವಿನೋದ ಹರೀಶ್ ದೇವಾಡಿಗ, ಲಕ್ಷ್ಮಿಕಾಂತ್ ಭಟ್ ಮತ್ತಿತರರು ಉಪಸ್ಥಿತರಿದ್ದರು

ಬಳಿಕ ವಿವಿಧ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮ, ಶ್ರೀ ದೇವರಿಗೆ ಪುಷ್ಪಾಲಂಕಾರ, ಹೂವಿನ ಪೂಜೆ, ಮಹಾಪೂಜೆ, ಅರ್ಘ್ಯ ಪ್ರಧಾನ, ಪ್ರಸಾದ ವಿತರಣೆ ನಡೆಯಿತು. ಮಹಾಶಿವರಾತ್ರಿ ಉತ್ಸವದ ಅಂಗವಾಗಿ ಬೆಳಿಗ್ಗೆ ಕ್ಷೇತ್ರದ ಅರ್ಚಕರಾದ ಶ್ರೀನಾಥ್ ಭಟ್ ನೇತೃತ್ವದಲ್ಲಿ ಪ್ರಾತಃ ಕಾಲ ವಿಶೇಷ ಪ್ರಾರ್ಥನೆ, ಶ್ರೀ ದೇವರಿಗೆ ಕ್ಷೀರಾಭಿಷೇಕ, ಬಿಲ್ವಾರ್ಚನೆ ರುದ್ರಪಾರಾಯಣ, ಏಕಾದಶ ರುದ್ರಾಭಿಷೇಕ, ಕಲ್ಪೋಕ್ತ ಪೂಜೆ, ಕಲಶಾಭಿಷೇಕ ಮಧ್ಯಾಹ್ನ ಮಹಾಪೂಜೆ, ಮಹಾ ಅನ್ನ ಸಂತರ್ಪಣೆ ನಡೆಯಿತು.

ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ಪೋಷಕರ ಸಭೆ



ಪುತ್ತೂರು: ನಾನು, ನನ್ನದು ಎನ್ನುವುದನ್ನು ಬಿಟ್ಟು ನಾವು, ನಮ್ಮದು ಎಂಬ ಭಾವ ಮೂಡಿದರೆ ಎಲ್ಲಾ ಕೆಲಸವೂ ಸುಗಮವಾಗುತ್ತದೆ. ತಪ್ಪನ್ನು ತಿದ್ದಿಕೊಳ್ಳುವ ಮನಸ್ಸನ್ನು ಪ್ರತಿಯೊಬ್ಬರೂ ಹೊಂದಿರಬೇಕಾದದ್ದು ಅತ್ಯಂತ ಅಗತ್ಯ. ಹೆತ್ತವರು ಮಕ್ಕಳಿಗೆ ಒತ್ತಡ ಹಾಕುವ ಬದಲು ಮಕ್ಕಳಿಗೆ ಇಷ್ಟವಾದ ಕ್ಷೇತ್ರಕ್ಕೆ ಕಳಿಸಿ ಅವರನ್ನು ಪ್ರೋತ್ಸಾಹಿಸಬೇಕು ಎಂದು ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯ ರಕ್ಷಕ–ಶಿಕ್ಷಕ ಸಂಘದ ಅಧ್ಯಕ್ಷ ಚಂದ್ರಕಾಂತ್ ಹೇಳಿದರು.

ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತಅಂಬಿಕಾವಿದ್ಯಾಲಯಸಿಬಿಎಸ್‌ಇ ಸಂಸ್ಥೆಯಲ್ಲಿ ಪೋಷಕರ ಸಭೆಯಲ್ಲಿ ಅವರು ಮಾತನಾಡಿ ಮಾರ್ಗದರ್ಶನ ನೀಡಿದರು. ಶಾಲೆಯ ಪ್ರಾಂಶುಪಾಲೆ ಮಾಲತಿ ಡಿ. ಮಾತನಾಡಿದರು.

ಶಾಲೆಯ ಉಪ ಪ್ರಾಂಶುಪಾಲೆ ಸುಜನಿ ಬೋರ್ಕರ್ ಮಾತನಾಡಿ, ಪ್ರತಿಯೊಬ್ಬರೂ ತಪ್ಪನ್ನು ಮಾಡುತ್ತಾರೆ. ತಪ್ಪಿನಿಂದಲೇ ಕಲಿಕೆ ಸಾಧ್ಯ. ಹಾಗಾಗಿ ಮಕ್ಕಳು ತಪ್ಪು ಮಾಡುವುದು ಸಹಜ. ಅವರನ್ನು ನಿತ್ಯವೂ ಗಮನಿಸಿ ಪ್ರೀತಿಯಿಂದ ತಿದ್ದಿ ಬೆಳೆಸಬೇಕು. ಮನೆಯ ಕಲಿಕೆಯೇ ಮುಂದಿನ ಕಲಿಕೆಗೆ ಅಡಿಪಾಯ ಆಗುತ್ತದೆ. ಆದ್ದರಿಂದ ಮಕ್ಕಳನ್ನು ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು ಎಂದು ತಿಳಿಸಿದರು.

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಮಾತನಾಡಿ, ಧಾರ್ಮಿಕ ಶಿಕ್ಷಣವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿಷ್ಣು ಸಹಸ್ರನಾಮವನ್ನು ಕಂಠಪಾಠ ಮಾಡಿದ ವಿದ್ಯಾರ್ಥಿಗಳಿಗೆ ಒಂದು ಸಾವಿರ ನಗುದ ಬಹುಮಾನವನ್ನು ನೀಡಲಾಗುವುದು ಎಂದು ಘೋಷಿಸಿದರು. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ರಾಜಶ್ರೀ ಎಸ್. ನಟ್ಟೋಜ ಇದ್ದರು. ಶಿಕ್ಷಕಿ ದೀಪ್ತಿ ನಿರ್ವಹಿಸಿದರು.

ಗುರುಪುರ–ಕೈಕಂಬ: ಅಂಡರ್ ಪಾಸ್‌ಗಾಗಿ ಪ್ರತಿಭಟನೆ ತಾತ್ಕಾಲಿಕ ಸ್ಥಗಿತ



ಕೈಕಂಬ: ಮಂಗಳೂರು–ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ–ಕೈಕಂಬದಲ್ಲಿ ಹೆದ್ದಾರಿ ಚತುಷ್ಪಥ ಕಾಮಗಾರಿ ನಡೆಯುತ್ತಿದ್ದು, ಇಲ್ಲಿನ ಪೊಂಪೈ ದ್ವಾರದ ಬಳಿ ಪಿಲ್ಲರ್ ಅಳವಡಿಸಿ ಅಂಡರ್ ಪಾಸ್ ನಿರ್ಮಿಸಬೇಕೆಂದು ಆಗ್ರಹಿಸಿ ಕಳೆದ 3 ದಿನಗಳಿಂದ ಗುರುಪುರ–ಕೈಕಂಬದಲ್ಲಿ ನಾಗರಿಕ ಹೋರಾಟ ಸಮಿತಿಯು ನಡೆಸುತ್ತಿದ್ದ ಪ್ರತಿಭಟನೆಯನ್ನು ಬುಧವಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಬಜಪೆ ಪೊಲೀಸ್ ಠಾಣಾಧಿಕಾರಿ ಬಾಲಕೃಷ್ಣ ಅವರು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರೊಂದಿಗೆ ಮಾತನಾಡಿ, ಎನ್‌ಎಚ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವ ಭರವಸೆ ನೀಡಿ ಪ್ರತಿಭಟನೆ ಕೈಬಿಡಬೇಕು ಎಂದು ಮನವಿ ಮಾಡಿದರು. ಸಮಿತಿಯ ಮುಂಚೂಣಿಯಲ್ಲಿದ್ದ ವಿಜಯಾ ಜಿ. ಸುವರ್ಣ ಮಾತನಾಡಿ, ಪೊಲೀಸ್ ವೃತ್ತ ನಿರೀಕ್ಷಕರ ಮನವಿಗೆ ಬೆಲೆಕೊಟ್ಟು ತಾತ್ಕಾಲಿಕವಾಗಿ ಪ್ರತಿಭಟನೆ ಹಿಂಪಡೆಯುತ್ತಿದ್ದೇವೆ ಎಂದರು.

ಕೈಕಂಬ ಪೇಟೆಯ ಮಧ್ಯ ಭಾಗದಲ್ಲಿ ಎತ್ತರದ ಹೆದ್ದಾರಿಯು ಜಂಕ್ಷನ್‌ನಲ್ಲಿ ನಿರ್ಮಿಸಲಾಗುತ್ತಿರುವ ಫ್ಲೈ ಓವರ್ ಸಂಪರ್ಕಿಸುತ್ತದೆ. ಹೆದ್ದಾರಿಯ ಎರಡೂ ಪಾರ್ಶ್ವದಲ್ಲಿ ಸರ್ವಿಸ್ ರೋಡ್ ಇದೆ. ಆದರೆ ಪೊಂಪೈ ದ್ವಾರದ ಬಳಿ ಮೇಲ್ಭಾಗದಲ್ಲಿ ಹಾದು ಹೋಗುವ ಹೆದ್ದಾರಿ ಸಂಪೂರ್ಣ ಮುಚ್ಚಲ್ಪಟ್ಟರೆ ಕಂದಾವರ ಮತ್ತು ಇತರ ಪ್ರದೇಶಗಳ ಸಂಪರ್ಕ ಕಡಿದು ಹೋಗಿ ಸಾರ್ವಜನಿಕರು ತೀವ್ರ ಸಮಸ್ಯೆ ಎದುರಿಸಬೇಕಾಗುತ್ತದೆ.

ಪ್ರತಿಭಟನೆಯಲ್ಲಿ ಪ್ರಮುಖರಾದ ವಿಜಯಾ ಜಿ. ಸುವರ್ಣ, ಹರೀಶ್ ಮಟ್ಟಿ, ಸುರೇಶ್ ಬೆಲ್ಚಡ್, ರಿಯಾಝ್ ಅಡ್ಡೂರು, ಜುಲೆಟ್ ಸೆರವೋ, ಗ್ಲಾಡಿಸ್ ಕ್ವಾಡ್ರಸ್, ಸಾಹಿಕ್ ಅಡ್ಡೂರು, ವೀಣಾ ಡಿ'ಸೋಜ, ಪ್ರವೀಣ್ ಡಿ'ಸಿಲ್ವ, ಆನಂದ ಬಂಗೇರ, ಶೈಲಾ ಕುಟಿನ್ಹೋ, ಐಡಾ ಕುಟಿನ್ಹೋ, ಗ್ರೇಸ್ ಫೆರ್ನಾಂಡಿಸ್, ಜಾರ್ಜ್ ಸೆರವೋ, ಅಜ್ಮ ಕಂದಾವರ, ದಿನೇಶ್ ಕುವೆಲ್ಲೋ, ಸುಜಿತ್ ಡಿ'ಸೋಜ ಮತ್ತಿತರರು ಇದ್ದರು.



ಅಭಿರುಚಿ ಜೋಡುಮಾರ್ಗ ಮತ್ತು ಬಿ.ವಿ. ಕಾರಂತ ರಂಗಭೂಮಿಕಾ ಟ್ರಸ್ಟ್ ಮಂಚಿ ಸಹಯೋಗದಲ್ಲಿ ನಟಮಿತ್ರರು ಹವ್ಯಾಸಿ ಕಲಾಸಂಘ ತೀರ್ಥಹಳ್ಳಿ ಅಭಿನಯಿಸುವ 'ಆ ಊರು – ಈ ಊರು' ನಾಟಕ ಬಂಟ್ವಾಳ ಸ್ಪರ್ಶಾ ಕಲಾಮಂದಿರದಲ್ಲಿ ಪ್ರದರ್ಶನಗೊಂಡಿತು. ಅಭಿರುಚಿ ಅಧ್ಯಕ್ಷ ದಾಮೋದರ ರಾಮಕುಂಜ, ಬಿ.ವಿ.ಕಾರಂತ ರಂಗಭೂಮಿಕಾ ಟ್ರಸ್ಟ್ ಅಧ್ಯಕ್ಷ ಕಜೆ ರಾಮಚಂದ್ರ ಭಟ್, ರಾಧೇಶ ತೋಳ್ಪಾಡಿ ಹಾಜರಿದ್ದರು. ಈ ನಾಟಕವನ್ನು ಜಿ. ಬಿ. ಜೋಷಿ ರಚಿಸಿದ್ದು ಪ್ರಸಿದ್ಧ ರಂಗಕರ್ಮಿ ಹುಲುಗಪ್ಪ ಕಟ್ಟೀಮನಿ ನಿರ್ದೇಶಿಸಿದ್ದಾರೆ.



ಅಪಘಾತದಲ್ಲಿ ಕಾಲನ್ನು ಕಳೆದುಕೊಂಡ ಮಂಚಿ ಕೋಡಿಬೈಲು ನಿವಾಸಿ ಭೋಜ ಕೊಟ್ಟಾರಿ ಅವರಿಗೆ ಶಾಸಕ ರಾಜೇಶ್ ನ್ಯಾಕ್ ಅವರ ಶಾಸಕರ ನಿಧಿಯಿಂದ ಮಂಜೂರಾದ ಕೃತಕ ಕಾಲನ್ನು ಶಾಸಕರ ಕಚೇರಿಯಲ್ಲಿ ಹಸ್ತಾಂತರಿಸಲಾಯಿತು. ಶಾಸಕರ ಆಪ್ತ ಸಹಾಯಕರು, ಕೊಳ್ನಾಡು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕೇಶವ ರಾವ್ ನೂಜಿಪ್ಪಾಡಿ, ಬೂತ್ ಸಮಿತಿ ಅಧ್ಯಕ್ಷ ದಿನೇಶ್ ಉದ್ದೋಟು, ಪ್ರಮುಖರಾದ ರಮೇಶ್ ರಾವ್ ಪತ್ತುಮುಡಿ, ಜಯ ಕಿಶೋರ್ ಭಂಡಾರಿ, ವಿಜಿತ್ ಕುಮಾರ್ ಮಂಚಿ ಬಾವ, ಉಲ್ಲಾಸ್ ಮಂಚಿ ಬಾವ ಉಪಸ್ಥಿತರಿದ್ದರು.

ಶಾಸಕರ ಮನವಿಗೆ ಸ್ಪಂದಿಸಿದ ಕಂಕನಾಡಿ ಫಾದರ್ ಮುಲ್ಲರ್ ಆಡಳಿತ ಮಂಡಳಿ

ರಸ್ತೆ ಅಗಲೀಕರಣಕ್ಕೆ ಜಾಗ ಬಿಟ್ಟುಕೊಡಲು ಒಪ್ಪಿಗೆ

ಮಂಗಳೂರು: ನಗರದ ಪಂಪ್‌ವೆಲ್‌ನಿಂದ ಕಂಕನಾಡಿ ಹಳೆ ಪೋಸ್ಟ್ ಆಫೀಸ್‌ವರೆಗಿನ ರಸ್ತೆ ಅಗಲೀಕರಣದ ಬಗ್ಗೆ ಶಾಸಕ ವೇದವ್ಯಾಸ ಕಾಮತ್ ಕಂಕನಾಡಿಯ ಫಾದರ್ ಮುಲ್ಲರ್ ಆಡಳಿತ ಮಂಡಳಿಯ ಪ್ರಮುಖರೊಂದಿಗೆ ನಡೆಸಿದ ಸಭೆ ಫಲಪ್ರದವಾಗಿದೆ.

ಸಭೆಯಲ್ಲಿ ಮಾತನಾಡಿದ ಶಾಸಕರು, ಇಲ್ಲಿನ ರಸ್ತೆ ಅಗಲೀಕರಣವು ಮಂಗಳೂರಿನ ನಾಗರಿಕರ ಹಲವಾರು ವರ್ಷಗಳ ಬೇಡಿಕೆಯಾಗಿದ್ದು ಪಾಲಿಕೆಯಲ್ಲಿ ಬಿಜೆಪಿ ಆಡಳಿತವಿದ್ದಾಗ ಪ್ರೀಮಿಯರ್ ಎಫ್ ಎಆರ್‌ನಲ್ಲಿ ಸುಮಾರು 4 ಕೋಟಿ ಅನುದಾನವನ್ನು ಮಂಜೂರುಗೊಳಿಸಲಾಗಿತ್ತು. ನಗರದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಫಾದರ್ ಮುಲ್ಲರ್ ಆಸ್ಪತ್ರೆಯವರು ಸುಮಾರು 20 ಸೆನ್ಸ್‌ಗೂ ಅಧಿಕ ಜಾಗ ಬಿಟ್ಟು ಕೊಡುವುದು ಅನಿವಾರ್ಯವಾಗಿದ್ದು



ಟಿ.ಡಿ.ಆರ್ ಮೂಲಕ ಪ್ರಕ್ರಿಯೆ ಪೂರ್ಣಗೊಳಿಸುವಂತೆ ನಾವು ಮಾಡಿದ ಮನವಿಗೆ ಒಪ್ಪಿಕೊಂಡಿರುವುದಕ್ಕೆ ಆಡಳಿತ ಮಂಡಳಿಗೆ ಧನ್ಯವಾದಗಳು ಎಂದರು.

ಇಲ್ಲಿಗೆ ಸರ್ಕಾರಿ ನಿಯಮದಂತೆ ಎಲ್ಲಾ ಪರಿಹಾರ ಸಹಿತ ಶೀಘ್ರದಲ್ಲಿ ಕಂಪೌಂಡ್ ಕಟ್ಟಿ ಕೊಡುವ ಕೆಲಸದ ಜೊತೆಗೆ ಹಿಂದೆ ಮಂಜೂರಾದ ಅನುದಾನದಿಂದ ರಸ್ತೆ ಅಗಲೀಕರಣ ಕಾರ್ಯ ಸಾಕಾರಗೊಳ್ಳಲಿದೆ ಎಂದರು.

ಫಾದರ್ ಮುಲ್ಲರ್ ಆಡಳಿತ ಮಂಡಳಿ ನಿರ್ದೇಶಕ, ಧರ್ಮಗುರು ವಂ. ಫಾ. ಫಾಸ್ಟಿನ್ ಲುಕಾಸ್ ಲೋಬೋ, ಧರ್ಮಗುರು ಜೀವನ್, ಧರ್ಮಗುರು ಮೈಕಲ್, ಗಿರಿಯಪ್ಪ, ನಿಕಟ ಪೂರ್ವ ಪಾಲಿಕೆ ಸದಸ್ಯ ಸಂದೀಪ್ ಗರೋಡಿ, ನವೀನ್ ಡಿಸೋಜ, ಜೆ.ಇ ಭವ್ಯ, ನಗರ ಯೋಜನಾಧಿಕಾರಿ ಶರತ್ ಗೌಡ, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್ ಮತ್ತಿತರಿದ್ದರು.

ಪ್ರಚಾರಕ್ಕೆ ಸೀಮಿತವಾದ ಕಾಂಗ್ರೆಸ್ ಆಡಳಿತ: ವೀರಾಜಪೇಟೆ ಬಿಜೆಪಿ ಆರೋಪ

ಭ್ರಷ್ಟಾಚಾರದ ನಿಯಂತ್ರಣಕ್ಕೆ ಶಾಸಕರು ವಿಫಲ

ಮಡಿಕೇರಿ: ರಾಜ್ಯದ ಕಾಂಗ್ರೆಸ್ ನೇತೃತ್ವದ ಆಡಳಿತ ಕೇವಲ ಪ್ರಚಾರಕಷ್ಟೇ ಸೀಮಿತವಾಗಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ, ಕೊಡಗಿನಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಶಾಸಕರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಆರೋಪಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು ಅಭಿವೃದ್ಧಿ ಕಾರ್ಯಗಳ ಕುರಿತು ಸರಕಾರ ಹಾಗೂ ಶಾಸಕರು ಸುಳ್ಳು ಹೇಳುತ್ತಾ ಕಾಲಹರಣ ಮಾಡುತ್ತಿದ್ದಾರೆ. ಹಗರಣಗಳಲ್ಲಿ ಮುಳುಗಿರುವ ಸರಕಾರದ ಬಣ್ಣವನ್ನು ಇತ್ತೀಚೆಗೆ ಗುತ್ತಿಗೆದಾರರ ಸಂಘ ಬಯಲು ಮಾಡಿದ್ದು, ಭ್ರಷ್ಟಾಚಾರದ ಪ್ರಮಾಣ ಹೆಚ್ಚಾಗಿರುವ ಕುರಿತು ಆರೋಪ ಮಾಡಿದೆ. ಪೂರ್ಣಗೊಂಡ ಕಾಮಗಾರಿಗಳ ಹಣವನ್ನು ಗುತ್ತಿಗೆದಾರರಿಗೆ ನೀಡಲಾಗದೆ ಪರದಾಡುತ್ತಿರುವ ಸರಕಾರ ಅಭಿವೃದ್ಧಿ ವಿಚಾರದಲ್ಲಿ ಸುಳ್ಳು ಪ್ರಚಾರ ಮಾಡಿ ಜನರ ಹಾದಿ ತಪ್ಪಿಸುತ್ತಿದೆ ಎಂದು ಟೀಕಿಸಿದ್ದಾರೆ.

ಕೊಡಗು ಜಿಲ್ಲೆಯ ಜನ ಬದಲಾವಣೆ ಬಯಸಿ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರನ್ನು ಆಯ್ಕೆ ಮಾಡಿದ್ದಾರೆ. ಆದರೆ ಜನರ ನಿರೀಕ್ಷೆ ಹುಸಿಯಾಗಿದ್ದು, ಅಭಿವೃದ್ಧಿ ಕಾರ್ಯಗಳು ಶೂನ್ಯವಾಗಿದೆ. ವಿರಾಜಪೇಟೆ ಕ್ಷೇತ್ರದ ಶಾಸಕರು ಸಾವಿರಾರು ಕೋಟಿ ರೂ.ಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಯಾವ ಅಭಿವೃದ್ಧಿಯೂ ಕಣ್ಣ ಮುಂದೆ ಕಾಣುತ್ತಿಲ್ಲ, 100 ಮೀಟರ್ ರಸ್ತೆ ಮಾಡಿ 100 ಕಿ.ಮೀ ರಸ್ತೆ ನಿರ್ಮಾಣ ಮಾಡಿದಷ್ಟು ಪ್ರಚಾರ ಗಿಟ್ಟಿಸಿಕೊಳ್ಳಲಾಗುತ್ತಿದೆ. ಪೊನ್ನಂಪೇಟೆ ಮತ್ತು ವಿರಾಜಪೇಟೆ ತಾಲ್ಲೂಕಿನ ಸರಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ರಾಜಾರೋಷವಾಗಿ ನಡೆಯುತ್ತಿದೆ, ಅರ್ಜಿ ವಿಲೇವಾರಿಯಾಗುತ್ತಿಲ್ಲವೆಂದು ಜನ ಅಳಲು ತೋಡಿಕೊಂಡರು ಯಾವುದೇ ಪ್ರಯೋಜನವಾಗುತ್ತಿಲ್ಲ, ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗವಾಗಿರುವ ಅನುದಾನದ ಕುರಿತು ಶ್ವೇತಪತ್ರ ಹೊರಡಿಸಲಿ, ಜಮ್ಮಾಬಾಣೆ ಸಮಸ್ಯೆಗೆ ಸಂಬಂಧಿಸಿದಂತೆ ಬಹಿರಂಗ ಚರ್ಚೆಗೆ ಬರಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಪ್ರಚಾರ ಮಾಡಿ ಜನರ ಹಾದಿ ತಪ್ಪಿಸುವುದನ್ನು ನಿಲ್ಲಿಸಲಿ ಎಂದು ರಾಕೇಶ್ ದೇವಯ್ಯ ಒತ್ತಾಯಿಸಿದ್ದಾರೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QR ಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸದಿಗಂತ ಸಂಗಮ 5

ಶುಕ್ರವಾರ 20, ಫೆಬ್ರವರಿ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತಮುತ್ತ

ಫೆ.22ರಂದು ವರ್ಕಾಡಿ ಪಂಚಾಯತ್ ಮಟ್ಟದ ಹಿಂದು ಮಹಾಸಂಗಮ

ಮಂಜೇಶ್ವರ: ವರ್ಕಾಡಿ ಪಂಚಾಯತ್ ಮಟ್ಟದ ಹಿಂದು ಮಹಾಸಂಗಮ ಕಾರ್ಯಕ್ರಮವು ಫೆ.22ರಂದು ಮುರತ್ತಣೆ ಶ್ರೀಕೃಷ್ಣ ಮೈದಾನದಲ್ಲಿ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಅಪರಾಹ್ನ 2.30ಕ್ಕೆ ಸುಂಕದಕಟ್ಟೆ ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂದಿರದ ಪರಿಸರದಿಂದ ಭವ್ಯ ಶೋಭಾಯಾತ್ರೆ ಜರಗಲಿದೆ. ಈ ವೇಳೆ ಗೋಪೂಜೆ, ವಂದೇ ಮಾತರಂ ಹಾಗೂ ನಾಟ್ಯ ವೈಭವ ಕಾರ್ಯಕ್ರಮ ನಡೆಯಲಿದೆ. ಸಂಜೆ ಜರಗುವ ಸಭಾ ಕಾರ್ಯಕ್ರಮದಲ್ಲಿ ದಿನಕರ ಕೋಟ್ಯಾನ್ ಅಧ್ಯಕ್ಷತೆ ವಹಿಸುವರು. ಸಾಮಾಜಿಕ ಕಾರ್ಯಕರ್ತ ಪ್ರಕಾಶ್ ಮಲ್ಪೆ ಪ್ರಧಾನ ಭಾಷಣ ಮಾಡುವರು.

ಫೆ.22ರಂದು ಪೆರ್ಲದಲ್ಲಿ ಬೃಹತ್ ಹಿಂದು ಸಂಗಮ

ಪೆರ್ಲ: ಹಿಂದೂ ಸಂಗಮ ಆಯೋಜನಾ ಸಮಿತಿ ಎಣ್ಮಕಜೆ ಪಂಚಾಯಿತಿಸಮಿತಿ ಆಶ್ರಯದಲ್ಲಿ ಫೆ. 22ರಂದು ಪೆರ್ಲ ಪೇಟೆ ವಠಾರದಲ್ಲಿ ಬೃಹತ್ ಹಿಂದು ಸಂಗಮ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಅಂದು ಮಧ್ಯಾಹ್ನ 2.30ಕ್ಕೆ ಪೆರ್ಲ ಸನಿಹದ ಇಡಿಯಡ್ಕ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ವಠಾರದಿಂದ ಬೃಹತ್ ಸಾಂಸ್ಕೃತಿಕ ಶೋಭಾಯಾತ್ರೆ ಆರಂಭಗೊಳ್ಳಲಿದೆ. ಕುಣಿತ ಭಜನೆ, ಮಕ್ಕಳಿಂದ ವಿವಿಧ ವೇಷಗಳು, ಚೆಂಡೆಮೇಳ, ಮೊದಲಾದ ವೈವಿಧ್ಯತೆಯೊಂದಿಗೆ ಶೋಭಾ ಯಾತ್ರೆ ಪೆರ್ಲದ ಸಮಾರಂಭ ಸ್ಥಳಕ್ಕೆ ತಲುಪಲಿದೆ. 3.30ಕ್ಕೆ ಆರಂಭಗೊಳ್ಳಲಿರುವ ಹಿಂದು ಸಂಗಮದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಒಡಿಯೂರಿನ ಸಾಧ್ವಿ ಶ್ರೀ ಮಾತಾನಂದಮಯಿ ಆಶೀರ್ವಚನ ನೀಡಲಿರುವರು. ಕೇರಳ ಹಿಂದು ಐಕ್ಯವೇದಿಯ ಕಾರ್ಯಾಧ್ಯಕ್ಷ ವಲ್ಸನ್ ತಿಲ್ಲಂಗೇರಿ ದಿಕ್ಸೂಚಿ ಭಾಷಣ ಮಾಡುವರು. ಹಿಂದು ಸಂಗಮ ಆಯೋಜನಾ ಸಮಿತಿಯ ಅಧ್ಯಕ್ಷ ಸುಬ್ಬಪಾಟಾಳಿ ಕುತ್ತಾಜೆ ಅಧ್ಯಕ್ಷತೆ ವಹಿಸುವರು. ಕವಯಿತ್ರಿ ಕುಮಾರಿ ಸುಜಯ ಸಜಂಗದ್ದೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ಕಲರ್ಸ್ ಕನ್ನಡ ಖ್ಯಾತಿಯ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ತುಳುನಾಡ ಗಾನ ಗಂಧರ್ವ ಬಿರುದಾಂಕಿತ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದವರಿಂದ ಭಕ್ತಿಗೀತೆ, ಜಾನಪದ ಗೀತೆ ಹಾಗೂ ರಾಷ್ಟ್ರ ಭಕ್ತಿಗೀತೆಗಳನ್ನೊಳಗೊಂಡ ಗಾನ ಸಂಭ್ರಮ ಎಂಬ ವಿಶಿಷ್ಟ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹಿಳಾ ರಕ್ಷಣಾ ಕಚೇರಿಯಿಂದ ಮಾನಸಿಕ ಆರೋಗ್ಯಕ್ಕೆ ಬೆಂಬಲ

ಕಾಸರಗೋಡು: ಜಿಲ್ಲಾ ಮಹಿಳಾ ರಕ್ಷಣಾ ಕಚೇರಿಯ ನೇತೃತ್ವದಲ್ಲಿ ಸಾಮಾಜಿಕ ಕಳಂಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಇರುವ ಭಯವನ್ನು ಹೋಗಲಾಡಿಸಲು ಮಾದರಿ ಯೋಜನೆ ಆರಂಭಿಸಲಾಗಿದೆ. 2022ರಿಂದ ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿ ಉಚಿತ ಮನೋವೈದ್ಯರು ಮತ್ತು ಮನಶಾಸ್ತ್ರಜ್ಞರ ಸೇವೆಗಳನ್ನು ಒದಗಿಸಲಾಗುತ್ತಿದೆ. ನೇರವಾಗಿ ಆಸ್ಪತ್ರೆಗಳಿಗೆ ಹೋಗಲು ಹಿಂಜರಿಯುವವರಿಗೆ ಸ್ನೇಹಪರ ವಾತಾವರಣದಲ್ಲಿ ಚಿಕಿತ್ಸೆ ಮತ್ತು ಸಮಾಲೋಚನೆ ಒದಗಿಸುವ ಗುರಿಯನ್ನು ಈ ಮಹತ್ವದ ಯೋಜನೆ ಹೊಂದಿದೆ. ಇತ್ತೀಚೆಗಿನ ವರ್ಷಗಳಲ್ಲಿ ಜಾಹೀರಾತುಗಳ ಮೂಲಕ ಮಾಹಿತಿ ತಿಳಿದುಕೊಂಡು ನೇರವಾಗಿ ಸೇವೆಗೆ ಬರುವ ಸಾಮಾನ್ಯ ಜನರ ಸಂಖ್ಯೆ ಹೆಚ್ಚುತ್ತಿದೆ. ಇದಲ್ಲದೆ ವಿವಿಧ ಪ್ರಕರಣಗಳಲ್ಲಿ ಸಿಲುಕಿರುವ ಬಲಿಪಶುಗಳಿಗೆ ಇಲ್ಲಿಂದ ಅಗತ್ಯವಾದ ಮಾನಸಿಕ ಬೆಂಬಲ ಮತ್ತು ಸಮಾಲೋಚನೆಯನ್ನು ಸಹ ನೀಡಲಾಗುತ್ತದೆ. ಪ್ರತಿ ತಿಂಗಳ ಮೂರನೇ ವಾರದಲ್ಲಿ ತಜ್ಞ ವೈದ್ಯರ ಸೇವೆ ಲಭ್ಯವಿದೆ. ಪರೀಕ್ಷೆ ಮತ್ತು ಸಮಾಲೋಚನೆ ಸಂಪೂರ್ಣವಾಗಿ ಉಚಿತವಾಗಿದ್ದು, ಇಲ್ಲಿ ನೀಡಲಾದ ಪ್ರಿಸ್ಕ್ರಿಪ್ಷನ್ ಬಳಸಿ ಅಗತ್ಯ ಔಷಧಿಗಳನ್ನು ಕಾಸರಗೋಡು ಜನರಲ್ ಆಸ್ಪತ್ರೆಯಿಂದ ಉಚಿತವಾಗಿ ಪಡೆಯಬಹುದು. ಈ ಯೋಜನೆ ಆರಂಭವಾದಾಗಿನಿಂದ 500ಕ್ಕೂ ಹೆಚ್ಚು ಜನರು ಈಗಾಗಲೇ ಸೇವೆಗಳನ್ನು ಪಡೆದಿದ್ದಾರೆ. ಈ ಚಿಕಿತ್ಸೆಯು ಅನೇಕ ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತಂದಿದೆ ಮತ್ತು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸಾಮಾಜಿಕ ತಾರತಮ್ಯವನ್ನು ಕಡಿಮೆ ಮಾಡಲು ಸಹಾಯ ಮಾಡಿದೆ ಎಂದು ಕಾಸರಗೋಡು ಜಿಲ್ಲಾ ಮಹಿಳಾ ರಕ್ಷಣಾ ಅಧಿಕಾರಿ ಪಿ.ಜಿ.ಸವಿತಾ ಹೇಳಿದ್ದಾರೆ. ಸಿವಿಲ್ ಸ್ಟೇಷನ್‌ನಲ್ಲಿರುವ ಈ ಚಿಕಿತ್ಸಾಲಯವು ಮಾನಸಿಕ ಒತ್ತಡ ಅನುಭವಿಸುವವರು ಯಾವುದೇ ಚಿಂತೆಯಿಲ್ಲದೆ ಸಂಪರ್ಕಿಸಬಹುದಾದ ವಿಶ್ವಾಸಾರ್ಹ ಸ್ಥಳವಾಗಿದೆ.

ಕಾಸರಗೋಡು ಜಿಲ್ಲಾ ಮಟ್ಟದ ನಾಯಕತ್ವ ತರಬೇತಿ ಶಿಬಿರ ಉದ್ಘಾಟಿಸಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ವಿಶ್ವಾಸ

ಕೇರಳ ಬಿಜೆಪಿಯ ಬಗ್ಗೆ ರಾಷ್ಟ್ರೀಯ ನಾಯಕತ್ವಕ್ಕೆ ಗರಿಷ್ಠ ಭರವಸೆ

ಕಾಸರಗೋಡು: ಅಭಿವೃದ್ಧಿ ಕುಂಠಿತ, ಶೈಕ್ಷಣಿಕ ಸಮಸ್ಯೆ, ನಿರುದ್ಯೋಗ ಮತ್ತು ಆರ್ಥಿಕ ಬಿಕ್ಕಟ್ಟಿನಿಂದ ಸಂಕಷ್ಟದಲ್ಲಿರುವ ಕೇರಳದಲ್ಲಿ ಅಗತ್ಯದ ರಾಜಕೀಯ ಬದಲಾವಣೆ ತರಬಲ್ಲವರು ಬಿಜೆಪಿ ಜನಪ್ರತಿನಿಧಿಗಳೆಂದು ಪಕ್ಷದ ರಾಷ್ಟ್ರೀಯ ನೇತೃತ್ವ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಭಾವಿಸುತ್ತಾರೆ. ಮಾತ್ರವಲ್ಲದೆ ರಾಜ್ಯದ ಜನಪ್ರತಿನಿಧಿಗಳ ಮೇಲೆ ಅವರಿಗೆ ಹೆಚ್ಚಿನ ಭರವಸೆಯಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.



ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿಯ ಆಶ್ರಯ ದಲ್ಲಿ ಜಿಲ್ಲಾ ಕಚೇರಿಯಾದ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಮಂದಿರದಲ್ಲಿ ಗುರುವಾರ ಆಯೋಜಿಸಲಾದ ನಾಯಕತ್ವ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಹೊಸದಿಲ್ಲಿಯಲ್ಲಿ ಬಿಜೆಪಿ ರಾಷ್ಟ್ರೀಯ ನಾಯಕತ್ವವು ಚುನಾಯಿತ ಪ್ರತಿನಿಧಿಗಳಿಗೆ ಇತ್ತೀಚೆಗೆ ನೀಡಿದ ಸ್ವಾಗತ ಕಾರ್ಯಕ್ರಮವು ಕೇರಳದಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣಾ ಗೆಲುವನ್ನು ಅವರು ಹೆಚ್ಚಿನ ನಿರೀಕ್ಷೆಗಳೊಂದಿಗೆ ಎದುರು ನೋಡುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ಜನಪ್ರತಿನಿಧಿಗಳು ಸಿದ್ಧರಾಗಿರಬೇಕು ಎಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ಬಿಜೆಪಿ ಪ್ರಬಲವಾಗಿ ಬೆಳವಣಿಗೆಯಾಗುತ್ತಿದೆ. ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳಲ್ಲಿ ನಕಲಿ ಮತ, ಅಪವಿತ್ರ ಮೈತ್ರಿಯಿಂದ ಕಳೆದ ಕೆಲವು ಚುನಾವಣೆಗಳಲ್ಲಿ ಐಕ್ಯ ರಂಗ ಒಕ್ಕೂಟಕ್ಕೆ ಗೆಲುವು ಲಭಿಸಿದೆ. ಆದರೆ ಇನ್ನು ಮುಂದೆ ಅಂತಹ ನಕಲಿ ಮತಗಳ ಚಲಾವಣೆಗೆ ಬಿಜೆಪಿ ಅವಕಾಶ ನೀಡದು. ಜಿಲ್ಲೆಯ ಸಮಗ್ರ ಅಭಿವೃದ್ಧಿ ಸಾಧಿಸಲಾಗದ ಎಡರಂಗ, ಐಕ್ಯರಂಗ ಒಕ್ಕೂಟಗಳಿಗೆ ಕೇಂದ್ರ ಸರಕಾರದ ಬಗ್ಗೆ ಹಾಗೂ ಬಿಜೆಪಿ ನಾಯಕತ್ವದ ಕುರಿತು ಮಾತನಾಡಲು ನೈತಿಕ ಹಕ್ಕಿಲ್ಲ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯದರ್ಶಿಗಳಾದ ಅಶೋಕನ್ ಕುಳನಡ ಮತ್ತು ಕೆ.ರಂಜಿತ್ ತರಗತಿ ನಡೆಸಿಕೊಟ್ಟರು. ಬಿಜೆಪಿ ರಾಜ್ಯ ಸಮಿತಿ ಸದಸ್ಯೆ ಪ್ರಮೀಳಾ ಸಿ.ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಕಲ್ಲಿಕ್ಕೋಟೆ ವಲಯ ಪ್ರಧಾನ ಕಾರ್ಯದರ್ಶಿ ಎಂ.ಸುಧಾಮ ಗೋಸಾಡ, ರಾಜ್ಯ ಸಮಿತಿ ಸದಸ್ಯ ಎಂ.ಪಿ.ರಾಮಪ್ಪ ಮಂಜೇಶ್ವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಜಿಲ್ಲಾ ಉಪಾಧ್ಯಕ್ಷೆ ಎಚ್.ಆರ್.ಸುಕನ್ಯಾ, ಜಿಲ್ಲಾ ಕಾರ್ಯದರ್ಶಿಗಳಾದ ಪುಷ್ಪಾ ಗೋಪಾಲನ್, ಮಹೇಶ್ ಗೋಪಾಲ್, ಅಶ್ವಿನಿ ಕೆ.ಎಂ., ಪ್ರಮೀಳಾ ಮಜಲ್, ಬದಿಯಡ್ಕ ಗ್ರಾ.ಪಂ. ಅಧ್ಯಕ್ಷ ಡಿ.ಶಂಕರ, ಮಧೂರು ಗ್ರಾ.ಪಂ. ಅಧ್ಯಕ್ಷೆ ಸುಜ್ಞಾನಿ ಎಸ್. ಶ್ಯಾನುಭೋಗ್ ಮುಂತಾದವರು ಮಾತನಾಡಿದರು.

ಜನಪ್ರತಿನಿಧಿಗಳಿಗೆ ಜವಾಬ್ದಾರಿ ಹೆಚ್ಚಿದೆ

ಜಿಲ್ಲೆಯಲ್ಲಿ ಬಿಜೆಪಿ ಜನಪ್ರತಿನಿಧಿಗಳಿಗೆ ಅಪಾರ ಹೊಣೆಗಾರಿಕೆಯಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ಅಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದರು. ಉಭಯ ರಂಗಗಳು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದು, ಆದಕಾರಣ ಪಕ್ಷದ ಜನಪ್ರತಿನಿಧಿಗಳು ಹಾಗೂ ಕಾರ್ಯಕರ್ತರು ಈ ನಿಟ್ಟಿನಲ್ಲಿ ಗಮನಹರಿಸಿ ಜಿಲ್ಲೆಯ ಸಮಗ್ರ ಪ್ರಗತಿಗೆ ವಿಪುಲವಾದ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು. ಆರ್ಥಿಕವಾಗಿ ಹಿಂದುಳಿದವರ ಕಲ್ಯಾಣಕ್ಕಾಗಿ ಹಾಗೂ ನಾಡಿನ ಸಮಗ್ರ ಪುನರುತ್ಥಾನಕ್ಕಾಗಿ ಗೆಲುವು ಸಾಧಿಸಿದ ಜನಪ್ರತಿನಿಧಿಗಳು ಆಯಾ ಊರಿನ ಜನರೊಂದಿಗೆ ಸಮಾಲೋಚನೆ ನಡೆಸಿಕೊಂಡು ವಿವಿಧ ಜನಪರ ಯೋಜನೆಗಳನ್ನು ರೂಪಿಸಿದಾಗ ಪಕ್ಷದ ತತ್ವ ಸಿದ್ಧಾಂತಗಳಿಗೆ ಮತ್ತಷ್ಟು ಶಕ್ತಿ ತುಂಬಿದಂತಾಗುತ್ತದೆ. ಜನರ ಆಶೋತ್ತರಗಳಿಗೆ ಸ್ಪಂದಿಸುವುದೇ ಪಕ್ಷದ ಜನಪ್ರತಿನಿಧಿಗಳ ಮತ್ತು ಕಾರ್ಯಕರ್ತರ ಧ್ಯೇಯವಾಗಿರಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಸಂಘಟಿತರಾಗಿ ದೃಢ ಸಂಕಲ್ಪ ಮಾಡೋಣ ಎಂದರು.

ಕಣ್ವತೀರ್ಥ ಶ್ರೀ ಬ್ರಹ್ಮೇಶ್ವರ ಕ್ಷೇತ್ರದಲ್ಲಿ ಸಾಮೂಹಿಕ ಏಕಾದಶ ಶಿವ ನಮಸ್ಕಾರ



ಮಂಜೇಶ್ವರ: ಎಸ್‌ಪಿವೈಎಸ್‌ಎಸ್ ಯೋಗ ಸಮಿತಿ ಕಾಸರಗೋಡು ನಗರದ ವತಿಯಿಂದ ಶಿವರಾತ್ರಿಯ ಪ್ರಯುಕ್ತ ಕಣ್ವ ತೀರ್ಥ ಶ್ರೀ ಬ್ರಹ್ಮೇಶ್ವರ ಕ್ಷೇತ್ರದಲ್ಲಿ ಶಿವಜಾಗರಣೆ, ಶಿವಧ್ಯಾನ, ಸಾಮೂಹಿಕ ಏಕಾದಶ ಶಿವ ನಮಸ್ಕಾರವನ್ನು ಮಾಡಲಾಯಿತು.

ಶ್ರೀ ಸೀತಾರಾಮ ಹಾಗೂ ಬ್ರಹ್ಮೇಶ್ವರ ದೇವಾಲಯದ ಪುರೋಹಿತರಾದ ರಮೇಶ್ ಉಪಾಧ್ಯಾಯರು ದೀಪ ಪ್ರಜ್ವಲನೆ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾಘ ಮಾಸದ ಚತುರ್ದಶಿಯಂದು ಶಿವಜಾಗರಣೆ, ಶಿವಧ್ಯಾನ ಮಾಡುವ ಎಲ್ಲರಿಗೂ ಶಿವ ಪಾರ್ವತಿಯ ಸಂಪೂರ್ಣ ಅನುಗ್ರಹ ಪ್ರಾಪ್ತಿಯಾಗಲಿ ಎಂದು ಹಾರೈಸಿ, ಭಾರತೀಯ ಸಂಸ್ಕೃತಿಯ ಪುನರ್ ಉದ್ಧಾರಕ್ಕಾಗಿ ಜನರಲ್ಲಿ ಸಂಸ್ಕಾರ, ಇಂತಹ ಸನಾತನ ಧರ್ಮದ ಪುಣ್ಯಕಾರ್ಯದಿಂದ ಸಮಿತಿಯು ಇನ್ನಷ್ಟು ಬೆಳಗಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಅರ್ಚಕ ವೆಂಕಟೇಶ್ ಭಟ್, ಕಾಸರಗೋಡು ನಗರ ಶಿಕ್ಷಣ ಪ್ರಮುಖ ಶೈಲೇಶ್, ಕಾರ್ಯಕ್ರಮದ ಸಂಚಾಲಕ ಉಮೇಶ್, ಶಶಿಕಲಾ ಇದ್ದರು.

ಭಾನುವಾರ ರಾತ್ರಿ 10ಕ್ಕೆ ಭಜನೆಯೊಂದಿಗೆ ಆರಂಭವಾದ ಶಿವಜಾಗರಣೆಯಲ್ಲಿ, ಶಿವ ಜಾಗರಣೆಯ ಮಹತ್ವದ ಭೌದ್ಧಿಕ್, 108 ಬಾರಿ ಮೃತ್ಯುಂಜಯ ಮಂತ್ರ ಪಠಣ, ಕುಣಿತ ಭಜನಾ, 1008 ಬಾರಿ ಶಿವ ಪಂಚಾಕ್ಷರಿ ಪಠಣ, ಪುಷ್ಪಾರ್ಚನೆಯೊಂದಿಗೆ ಶಿವ ಅಷ್ಟೋತ್ತರ ಶತ ನಾಮಾವಳಿ, ಪುರಾಣ ಕತೆಗಳು ಹಾಗೂ ಶ್ರೀ ಬ್ರಹ್ಮೇಶ್ವರ ಕ್ಷೇತ್ರಕ್ಕೆ ಏಕಾದಶ ಪ್ರದಕ್ಷಿಣೆಯೊಂದಿಗೆ ಶಿವ ಜಾಗರಣೆ ಸಂಪನ್ನಗೊಂಡಿತು.

ಈ ಸಂದರ್ಭದಲ್ಲಿ ವಲಯ ಸಂಯೋಜಕ ಜಯರಾಮಣ್ಣ, ಸದ್ಯೋಜಾತ, ಕಾಸರಗೋಡು ನಗರ ಸಂಚಾಲಕರು, ಹಾಗೂ ಕಾಸರಗೋಡು ನಗರ ಪ್ರಮುಖರು ಉಪಸ್ಥಿತರಿದ್ದರು. ಸುಮಾರು 125 ಮಂದಿ ಯೋಗ ಬಂಧುಗಳು ಭಾಗವಹಿಸಿದ್ದರು.

ಏತಡ್ಕ ಶ್ರೀ ಸದಾಶಿವ ದೇವಸ್ಥಾನದಲ್ಲಿ ಶಿವರಾತ್ರಿ, ಶುದ್ಧ ಭಸ್ಮ ತಯಾರಿ ಶಿಬಿರ



ಬದಿಯಡ್ಕ: ದೇವಾಲಯದಲ್ಲಿ ಮಹಿಳೆಯರು ಒಟ್ಟು ಸೇರಿ ಪ್ರಾಚೀನ ಪರಂಪರೆಯ ಚಿಂತನೆ ನಡೆಸಬೇಕು ಎಂದು ಸಾಮಾಜಿಕ ಚಿಂತಕಿ ಹಾಗೂ ಕಾಸರಗೋಡು ನಗರಸಭೆಯ ಮಾಜಿ ಸದಸ್ಯೆ ಸವಿತಾ ಟೀಚರ್ ಹೇಳಿದ್ದಾರೆ.

ಏತಡ್ಕ ಶ್ರೀ ಸದಾಶಿವ ಕ್ಷೇತ್ರದಲ್ಲಿ ಶಿವರಾತ್ರಿ ಪ್ರಯುಕ್ತ ಆಯೋಜಿಸಲಾಗಿದ್ದ ಶುದ್ಧ ವಿಭೂತಿ ತಯಾರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪಂಚಾಯತ್ ಚುನಾವಣೆಯಲ್ಲಿ ವಿಜೇತರಾದ ವಾಣಿನಗರ ವಾರ್ಡ್ ಸದಸ್ಯೆ ನಳಿನಾಕ್ಷಿ ಹಾಗೂ ಕುಂಬ್ಡಾಜೆ ಗ್ರಾ.ಪಂ. 4ನೇ ಏತಡ್ಕ ವಾರ್ಡ್ ಸದಸ್ಯೆ ನಯನಾ ಕಾನಕಜೆ ಅವರನ್ನು ಅಭಿನಂದಿಸಲಾಯಿತು. ದೇಶೀ ದನದ ಸೆಗಣಿಯಿಂದ ತಾನು ಸ್ವತಹ ಬೆರಣಿ ತಯಾರಿಸಿ ಅರ್ಪಿಸಿದ ಬದಿಯಡ್ಕದ ಬಾಲಕ ತನ್ಮಯಿಯನ್ನೂ ಪುರಸ್ಕರಿಸಲಾಯಿತು.

ಬೆಂಗಳೂರಿನ ವಕೀಲ ವೈ.ಎಚ್. ಗಣೇಶ ಕುಟುಂಬದವರು ಸಾಂಪ್ರದಾಯಿಕ ಭಸ್ಮ ಕರಂಡಕವನ್ನು ದೇವಸ್ಥಾನದಲ್ಲಿ ಬಳಕೆಗೆ ವಸ್ತುರೂಪದ ಸೇವೆಯಾಗಿ ನೀಡಿದರು. ಆಡಳಿತ ಮೊಕ್ತೇಸರ ಚಂದ್ರಶೇಖರ ಏತಡ್ಕ ಅಧ್ಯಕ್ಷತೆ ವಹಿಸಿದ್ದರು. ಆಡಳಿತ ಮೊಕ್ತೇಸರ ಡಾ.ಪ್ರಕಾಶ ವೈ.ಎಚ್., ಸುಬ್ರಹ್ಮಣ್ಯ ವೈ.ವಿ., ಭಕ್ತರ ಮಂಡಳಿ ಸದಸ್ಯ ಚಂದ್ರಶೇಖರ ಕಡೇಕಲ್ಲು ಇದ್ದರು. ಡಾ.ಸುರೇಶ್ ಕುಮಾರ್ ಎನ್‌ಆರ್ ಪುರ ಸ್ವಾಗತಿಸಿದರು. ಸುಧಾ ಮುರಳಿ ಮಾಣಿತ್ತೋಡಿ ನೇತೃತ್ವದಲ್ಲಿ ಪ್ರಾರ್ಥನೆ ನಡೆಯಿತು. ಡಾ.ವೈ.ವಿ.ಕೃಷ್ಣಮೂರ್ತಿ, ಹರಿಶರಣ ವೈ.ಪಿ., ಸುಹಾಸ ರಮಣ ವೈ. ಹಾಗೂ ಅಶ್ವಿನಿ ರಮಣ ಅವರು ದೇಶೀ ತಳಿಯ ಹಸುವಿನ ಬೆರಣಿಯಿಂದ ಶುದ್ಧ ಭಸ್ಮ ತಯಾರಿಯನ್ನು ಸಂಘಟಿಸಿ ಕಾರ್ಯಕ್ರಮ ನಿರೂಪಿಸಿದರು. ವೈ.ವಿ.ರಮೇಶ್ ಭಟ್ ವಂದಿಸಿದರು.

ಎಡನೀರು ಶ್ರೀ ವಿಷ್ಣುಮಂಗಲ ದೇವಸ್ಥಾನದ ಜಾತ್ರೆಯಲ್ಲಿ ಭಜನಾಮೃತ



ಕಾಸರಗೋಡು: ಎಡನೀರು ಮಠದ ಶ್ರೀ ವಿಷ್ಣುಮಂಗಲ ದೇವಳದ ವಾರ್ಷಿಕ ಜಾತ್ರೆ ಪ್ರಯುಕ್ತ ಭಜನಾಮೃತ ಕಾರ್ಯಕ್ರಮವನ್ನು ಡಾ.ವಾಣಿಶ್ರೀ ಕಾಸರಗೋಡು ನೇತೃತ್ವದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ವತಿಯಿಂದ ಸಂಭ್ರಮ ಸಡಗರಗಳೊಂದಿಗೆ ಹಮ್ಮಿಕೊಳ್ಳಲಾಯಿತು.

ಸಂಸ್ಥೆಯ 176ನೇ ಈ ಕಾರ್ಯಕ್ರಮ ದಲ್ಲಿ ದಿವಾಕರ ಕಾಸರಗೋಡು, ಸೀತಾರಾಮ ಮಲ್ಲ, ಮಧುಲತಾ ಪುತ್ತೂರು, ಅಮೃತ್ ಮೊದಲಾದ ಕಲಾವಿದರಿಂದ ಜರಗಿದ ಭಜನಾಮೃತ ಕಾರ್ಯಕ್ರಮ ಯಶಸ್ವಿಯಾಗಿದ್ದು, ಜನಮನ ಸೂರೆಗೊಂಡಿತು. ಹಾರ್ಮೋನಿಯಂನಲ್ಲಿ ನಳಿನಾಕ್ಷ ಮಣಿಯಾಣಿ ಸಹಕರಿಸಿದರು. ತಬಲಾ ದಲ್ಲಿ ಖ್ಯಾತ ತಬಲಾ ವಾದಕ ಹಾಗೂ ಸಂಗೀತ ಕಲಾವಿದ ಮೇಘರಾಜ್ ಪ್ರತಿಭೆ ಪ್ರದರ್ಶಿಸಿದರು. ಡಾ.ವಾಣಿಶ್ರೀ ಕಾಸರಗೋಡು ಅವರನ್ನು ಶ್ರೀ ಕ್ಷೇತ್ರದ ಆಡಳಿತ ಮಂಡಳಿ ವತಿಯಿಂದ ಶ್ರೀ ದೇವರ ಪ್ರಸಾದ ನೀಡಿ ಗೌರವಿಸಲಾಯಿತು. ಎಲ್ಲಾ ಕಲಾವಿದರಿಗೂ ಗೌರವಧನ ನೀಡಲಾಯಿತು. ಕಾರ್ಯಕ್ರಮದಲ್ಲಿ ವೆಂಕಟ ಭಟ್ ಎಡನೀರು, ಸೂರ್ಯ ಭಟ್ ಎಡನೀರು, ಉಮೇಶ್ ಮುಂತಾದವರು ಉಪಸ್ಥಿತರಿದ್ದರು.

ನೀರ್ಚಾಲು ಆಯುಷ್ ಆರೋಗ್ಯ ವಾಹನದ ಮೂಲಕ ವಿವಿಧೆಡೆ ಜನಜಾಗೃತಿ



ಬದಿಯಡ್ಕ: ರಾಜ್ಯ ಸರಕಾರದ ಆಯುಷ್ ವಿಭಾಗ, ನ್ಯಾಶನಲ್ ಆಯುಷ್ ಮಿಶನ್ ಕೇರಳ ನೇತೃತ್ವದಲ್ಲಿ ಬದಿಯಡ್ಕ ಗ್ರಾಮ ಪಂಚಾಯತ್ ಆಯುಷ್ ಆರೋಗ್ಯವಾಹನದ ಮೂಲಕ ವಿವಿಧ ಕೇಂದ್ರಗಳಲ್ಲಿ ಜನಜಾಗೃತಿ ಮೂಡಿಸಲಾಯಿತು.

ನೀರ್ಚಾಲು ಮೇಲಿನ ಪೇಟೆಯಲ್ಲಿ ಗುರುವಾರ ಬೆಳಗ್ಗೆ ನಡೆದ ಕಾರ್ಯಕ್ರಮವನ್ನು ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಉದ್ಘಾಟಿಸಿ, ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯನ್ನಿಟ್ಟು ನಿತ್ಯ ಜೀವನವನ್ನು ನಡೆಸಬೇಕು. ರೋಗ ಬಂದ ಮೇಲೆ ಚಿಕಿತ್ಸೆ ನಡೆಸುವುದಕ್ಕಿಂತ ರೋಗ ಬಾರದಂತೆ ತಡೆಯುವುದು ಬಹುಮುಖ್ಯ. ನಿರಂತರ ಆರೋಗ್ಯ ತಪಾಸಣೆ ಮಾಡುವಲ್ಲಿ ಯಾರೂ ನಿರಾಸಕ್ತಿಯನ್ನು ತೋರಿಸಬಾರದು ಎಂದರು.

ನೀರ್ಚಾಲು ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಜಯಶ್ರೀ ನಾಗರಾಜ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಆರೋಗ್ಯ ಮತ್ತು ವಿದ್ಯಾಭ್ಯಾಸ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ., ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ರಜನಿ ಸಂದೀಪ್, ಗ್ರಾಮ ಪಂಚಾಯತ್ ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಕೆ., ಉಷಾ ಕೆ., ಮಧುಸೂದನ ಕಂಗಿಲ, ಶ್ಯಾಮಪ್ರಸಾದ ಸರಳಿ, ಸಾಮಾಜಿಕ ಕಾರ್ಯಕರ್ತ ಹಮೀದ್ ಬದಿಯಡ್ಕ ಪಾಲ್ಗೊಂಡಿದ್ದರು.

ಮಂಜೇಶ್ವರ ಶಾಸಕರ ಹೇಳಿಕೆ ಮುಸ್ಲಿಂ ಮತಗಳ ಕ್ರೋಢೀಕರಣಕ್ಕಾಗಿ: ಬಿಜೆಪಿ

ಮಂಜೇಶ್ವರ: ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರು ಮುಸ್ಲಿಂ ಸಮುದಾಯ ಮತಗಳ ಕ್ರೋಢೀಕರಣಕ್ಕಾಗಿ ಬೇಜವಾಬ್ದಾರಿ ಹಾಗೂ ಅನಗತ್ಯ ಹೇಳಿಕೆಗಳನ್ನು ನೀಡಿ ಸಮಾಜದಲ್ಲಿ ಕೋಮು ಭಾವನೆ ಕೆರಳಿಸಿ ತನ್ನ ಮತ ಬ್ಯಾಂಕ್ ಭದ್ರಪಡಿಸಲು ಕಪಟ ನಾಟಕ ಮಾಡುತ್ತಿದ್ದಾರೆ ಎಂದು ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ. ಆರೋಪಿಸಿದ್ದಾರೆ.

ಇತ್ತೀಚೆಗೆ ಜಾನುವಾರುಗಳನ್ನು ಸಾಗಿಸುವ ಕಂಟೈನರ್ ಲಾರಿಯ ಚಾಲಕ ಹಾಗೂ ಆಟೋರಿಕ್ಷಾ ಪ್ರಯಾಣಿಕರ ಮಧ್ಯೆ ರಾತ್ರಿ ವೇಳೆಯಲ್ಲಿ ರಸ್ತೆಯಲ್ಲೇ ಉಂಟಾದ ವೈಯಕ್ತಿಕ ವಿಚಾರದ ಗಲಾಟೆಯನ್ನು ಕೋಮು ಗಲಭೆ ಎಂದು ಹೇಳಿ ಮಂಜೇಶ್ವರದಲ್ಲಿ ಉತ್ತರ ಭಾರತ ಮಾಡೆಲ್ ಎಂದೆಲ್ಲಾ ಡೈಲಾಗ್ ಬಿಟ್ಟು ಜನರ ಧಾರ್ಮಿಕ ಭಾವನೆಯ ಜೊತೆ ಚೆಲ್ಲಾಟವಾಡಿ ತನ್ನ ಮತ ಬ್ಯಾಂಕ್ ಭದ್ರಪಡಿಸಲು ಕೀಳು ಮಟ್ಟದ ರಾಜಕೀಯ ಮಾಡುತ್ತಿದ್ದಾರೆ ಎಂದು ಬಿಜೆಪಿ ಮಂಡಲಾಧ್ಯಕ್ಷರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಗೋವುಗಳ ಸಾಗಾಟ ವಾಹನ ಚಾಲಕ ಹಾಗೂ ಆಟೋರಿಕ್ಷಾ ಪ್ರಯಾಣಿಕರ ನಡುವೆ ಸಂಭವಿಸಿದ ಗಲಾಟೆಯಲ್ಲಿ ಪೊಲೀಸ್ ಇಲಾಖೆಯು 6 ಜನರನ್ನು ಬಂಧಿಸಿ 4 ಮಂದಿಯ ಹೆಸರನ್ನು ಮಾತ್ರ ಮಾಧ್ಯಮಗಳಿಗೆ ನೀಡಿದೆ. ಉಳಿದ ಇಬ್ಬರನ್ನು ಪ್ರಾಯಪೂರ್ತಿ ಆಗದವರು ಎಂದು ಹೆಸರು ಪ್ರಕಟಿಸಿಲ್ಲ. ಆದರೆ ಪ್ರಕರಣದ ಎಲ್ಲಾ ಆರೋಪಿಗಳ ಹೆಸರುಗಳನ್ನು ಬಹಿರಂಗಪಡಿಸಲು ಬಿಜೆಪಿ ಆಗ್ರಹಿಸುತ್ತಿದೆ. ಯಾಕೆಂದರೆ ಹೆಸರು ಪ್ರಕಟಿಸದ ಪ್ರಾಯಪೂರ್ತಿ ಆಗದವರ ಹೆಸರು ಬಹಿರಂಗವಾದರೆ ಈ ಪ್ರಕರಣದ ಸತ್ಯಾಸತ್ಯತೆ ಹೊರಬರುತ್ತದೆ ಎಂದು ಅವರು ಹೇಳಿದ್ದಾರೆ.

ಅಲ್ಲದೆ ಮಂಜೇಶ್ವರ ಶಾಸಕರು ಹಿಂದು ಭೀಕರತೆ ಎಂದು ಬಿಂಬಿಸಲು ಹೊರಟ ಕಪಟ ನಾಟಕವು ಕೂಡಾ ಜನಸಾಮಾನ್ಯರಿಗೆ ಅರಿವಿಗೆ ಬರಬಹುದು. ಕೋಮುಭಾವನೆಯಂತಹ ಸೂಕ್ಷ್ಮ ವಿಚಾರಗಳನ್ನು ನಿಯಂತ್ರಣ ಮಾಡಬೇಕಾದ ಜವಾಬ್ದಾರಿಯುತ ಶಾಸಕರು ಸಮಾಜದಲ್ಲಿ ಕೋಮುಭಾವನೆ ಕೆರಳಿಸಿ ಗಲಭೆಯನ್ನು ವೀಕ್ಷಿಸುವುದಲ್ಲ ಎಂದು ಬಿಜೆಪಿ ಮಂಜೇಶ್ವರ ಮಂಡಲ ಸಮಿತಿ ಅಧ್ಯಕ್ಷರು ಮಾರ್ಮಿಕವಾಗಿ ನುಡಿದಿದ್ದು, ಮಂಜೇಶ್ವರ ಶಾಸಕರ ಕೀಳು ಮಟ್ಟದ ರಾಜಕೀಯವನ್ನು ಕಟು ಶಬ್ದಗಳಲ್ಲಿ ಖಂಡಿಸಿದ್ದಾರೆ.

ಬಾಯಾರು-ಕನಿಯಾಲ ರಸ್ತೆ ಬದಿ ತುಂಬಿಕೊಂಡಿದೆ ಕಾಡುಪೊದೆಗಳು

ಉಪ್ಪಳ: ಪೈವಳಿಕೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಾಯಾರು – ಸರ್ಕುತ್ತಿ – ಕನಿಯಾಲ ರಸ್ತೆಯ ಇಕ್ಕೆಲಗಳಲ್ಲಿ ಕಾಡುಪೊದೆಗಳು ಬೆಳೆದು ರಸ್ತೆಗೆ ಬಾಗಿಕೊಂಡಿವೆ. ಇದರಿಂದಾಗಿ ಬಸ್ ಸಹಿತ ವಿವಿಧ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವುದಾಗಿ ದೂರಲಾಗಿದೆ.

ಕಾಡುಪೊದೆಗಳು ತುಂಬಿಕೊಂಡಿರುವುದರಿಂದ ವಾಹನಗಳಿಗೆ ಸೈಡ್ ನೀಡಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ರಸ್ತೆಯಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿರುವುದಾಗಿ ವಾಹನ ಚಾಲಕರು ತಿಳಿಸಿದ್ದಾರೆ.



ಬಾಯಾರು – ಕನಿಯಾಲ ರಸ್ತೆಯಲ್ಲಿ ದಿನಂಪ್ರತಿ ಹಲವಾರು ವಾಹನಗಳು ಸಂಚರಿಸುತ್ತಿದ್ದು, ಗ್ರಾಮೀಣ ಪ್ರದೇಶದ ಮುಖ್ಯ ರಸ್ತೆ ಇದಾಗಿದೆ. ಈ ರಸ್ತೆಯಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ದಿನನಿತ್ಯ ಅನೇಕ ಮಂದಿ ಪ್ರಯಾಣಿಸುತ್ತಿರುತ್ತಾರೆ. ಸಂಬಂಧಪಟ್ಟ ಪಂಚಾಯತ್ ಅಧಿಕಾರಿಗಳು ಈ ರಸ್ತೆಯುದ್ದಕ್ಕೂ ತುಂಬಿಕೊಂಡಿರುವ ಕಾಡುಪೊದೆಗಳನ್ನು ಕಡಿದು ತೆರವುಗೊಳಿಸಿ ಸುಗಮ ವಾಹನ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಶ್ರೀ ವಾಣಿ ವಿಜಯ ಶಾಲೆಗೆ ರಾಜ್ಯ ಪುರಸ್ಕಾರ

ಮಂಜೇಶ್ವರ: ಕೇರಳ ಸ್ಟೇಟ್ ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ನಡೆಸುವ 2025-26ನೇ ಸಾಲಿನ ರಾಜ್ಯ ಪುರಸ್ಕಾರ ಟೆಸ್ಟಿಂಗ್ ಕ್ಯಾಂಪ್‌ನಲ್ಲಿ ಭಾಗವಹಿಸಿ, ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದ ಕೊಡ್ಲಮೊಗರು ಶ್ರೀ ವಾಣಿ ವಿಜಯ ಹೈಸ್ಕೂಲ್‌ನ ವಿದ್ಯಾರ್ಥಿಗಳಾದ ಸೃಜನ್ ಎಂ.ಬಿ., ತನುಷ್ ಎನ್.ನಾಯಕ್, ಕಾರ್ತಿಕ್, ತೌಶಿಕ್, ಧನುಷ್, ಪ್ರತೀಕ್, ಗೈಡ್ಸ್ ವಿದ್ಯಾರ್ಥಿನಿಯರಾದ ನಿಶ್ಮಿತಾ, ಶರಣ್ಯ, ಹಿತಾಶ್ರೀ, ಅಕ್ಷದಾ ಶ್ಯಾಮ್, ಕೀರ್ತನ, ಶ್ರಾವ್ಯಶ್ರೀ ಈ ವಿದ್ಯಾರ್ಥಿಗಳಿಗೆ ಸ್ಕೌಟ್ ಮಾಸ್ಟರ್ ಸತ್ಯಶಂಕರ್ ಭಟ್ ಹಾಗೂ ವಿದ್ಯಾರ್ಥಿನಿಯರಿಗೆ ಗೈಡ್ ಕ್ಯಾಪ್ಟನ್ ಸುಜಯಶ್ರೀ ಐಲ್ ತರಬೇತಿ ನೀಡಿದ್ದು, ಶಾಲಾ ಪ್ರಬಂಧಕ ರಾದ ಶಂಕರ್ ಮೋಹನ್ ಪೂಂಜ, ಮುಖ್ಯ ಶಿಕ್ಷಕಿ ಕೃಷ್ಣವೇಣಿ ಹಾಗೂ ರಕ್ಷಕ ಶಿಕ್ಷಕ ಸಂಘ ಅಭಿನಂದಿಸಿದೆ.

ಮಾ.1ಕ್ಕೆ ಮಂಗಲ್ಪಾಡಿ ಪಂಚಾಯತ್ ಮಟ್ಟದ ಹಿಂದೂ ಸಮಾಜೋತ್ಸವ

ಪೂರ್ವಭಾವಿಯಾಗಿ ಪ್ರತಾಪನಗರದಲ್ಲಿ ಮಾತೃ ಸಂಗಮ

ಉಪ್ಪಳ: ಮಂಗಲ್ಪಾಡಿ ಪಂಚಾಯತ್ ಮಟ್ಟದ ಹಿಂದು ಸಮಾಜೋತ್ಸವವು ಮಾರ್ಚ್ 1ರಂದು ಪ್ರತಾಪನಗರದ ಶಿವಶಕ್ತಿ ಮೈದಾನದಲ್ಲಿ ನಡೆಯಲಿದ್ದು, ಇದರ ಪೂರ್ವಭಾವಿಯಾಗಿ ಪ್ರತಾಪನಗರ ಗ್ರಾಮದ ಮಾತೃ ಸಂಗಮ ಕಾರ್ಯಕ್ರಮ ಬುಧವಾರ ಸಂಜೆ ಪ್ರತಾಪನಗರ ಶ್ರೀ ಗಣೇಶ ಮಂದಿರದಲ್ಲಿ ಜರಗಿತು.

ಮಂಗಲ್ಪಾಡಿ ಪಂಚಾಯತ್ ಸಮಿತಿಯ ಮಾತೃ ಮಂಡಳಿ ಅಧ್ಯಕ್ಷೆ ಪದ್ಮಾ ಮೋಹನ್‌ದಾಸ್ ಐಲ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಂಜೇಶ್ವರ ತಾಲೂಕು ಸಹ ಕಾರ್ಯವಾಹ ಪವನ್ ಮುಟ್ಟಂ ಅವರು ಹಿಂದು ಸಮಾಜೋತ್ಸವದ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಅಲ್ಲದೆ ಪಂಚಾಯತ್ ಮಟ್ಟದ ಹಿಂದು ಸಮಾಜೋತ್ಸವದ ಯಶಸ್ಸಿಗೆ ಸಮರ್ಥ ಕಾರ್ಯಯೋಜನೆ ಸಿದ್ಧಪಡಿಸಲಾಯಿತು.



ಹಿಂದು ಸಮಾಜೋತ್ಸವದ ಪ್ರತಾಪನಗರ ಸ್ಥಾನೀಯ ಸಮಿತಿ ಅಧ್ಯಕ್ಷ ರಮೇಶ್ ಆಳ್ವ ತಿಂಬರ, ಮಂಗಲ್ಪಾಡಿ ಗ್ರಾಮ ಪಂಚಾಯತ್ ಸದಸ್ಯ ವಸಂತಕುಮಾರ್ ಮಯ್ಯ, ಶ್ರೀ ಗಣೇಶ ಮಂದಿರ ಸಮಿತಿ ಅಧ್ಯಕ್ಷ ನಾರಾಯಣ ಮಣಿಯಾಣಿ ಉಪಸ್ಥಿತರಿದರು. ಸಭೆಯಲ್ಲಿ ನೂರಾರು ಮಂದಿ ಮಾತೆಯರು ಹಾಗೂ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವೀಣಾ ಹರಿಶ್ಚಂದ್ರ ಬಲ್ಲಾಳ್ ಸ್ವಾಗತಿಸಿದರು. ಗ್ರಾಮ ಸಮಿತಿಯ ವ್ಯವಸ್ಥಾ ಪ್ರಮುಖ್ ಪ್ರವೀಣ ವಂದಿಸಿದರು.

ನೀಲೇಶ್ವರ ಬ್ಲಾಕ್ ಪಂಚಾಯತ್ | 84.44 ಲಕ್ಷ ರೂ. ಮಿಗತೆ ಮುಂಗಡ ಪತ್ರ

ಆಹಾರ ಸ್ವಾವಲಂಬನೆ, ನಾಗರಿಕರ ಆರೋಗ್ಯ ರಕ್ಷಣೆಗೆ ಒತ್ತು

ಕಾಸರಗೋಡು: ನೀಲೇಶ್ವರ ಬ್ಲಾಕ್ ಪಂಚಾಯತ್ ಆಹಾರ ಸ್ವಾವಲಂಬನೆ ಮತ್ತು ಹೈನುಗಾರಿಕೆ ಅಭಿವೃದ್ಧಿಗೆ ಒತ್ತು ನೀಡಿ ತನ್ನ ಮುಂಗಡಪತ್ರವನ್ನು ಮಂಡಿಸಿತು. ಬ್ಲಾಕ್ ಪಂಚಾಯತ್ ಉಪಾಧ್ಯಕ್ಷ ಕೆ.ರಾಜು ಬಜೆಟ್ ಮಂಡಿಸಿದರು. ನಿರೀಕ್ಷಿತ ಆದಾಯ 20.56 ಕೋಟಿ ರೂ., ಖರ್ಚು 19. 72 ಕೋಟಿ ರೂ. ಮತ್ತು 84.44 ಲಕ್ಷ ರೂ. ಮಿಗತೆ ಬಜೆಟ್ ಇದಾಗಿದೆ ಎಂದು ಅವರು ತಿಳಿಸಿದರು.



ಅಧ್ಯಕ್ಷೆ ಸಿ.ಎಂ.ಮೀನಾಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕೆ ಸ್ಮಾರ್ಟ್ ಮೂಲಕ ಬಜೆಟ್ ಮಂಡಿಸಿದ ರಾಜ್ಯದ ಮೊದಲ ಬ್ಲಾಕ್ ಪಂಚಾಯತ್ ಮತ್ತು ಎರಡನೇ ಸ್ಥಳೀಯಾಡಳಿತ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತೃಕ್ಕರೀಪ್ಪುರ ಗ್ರಾ.ಪಂ. ಅಧ್ಯಕ್ಷೆ ಸಜಿತಾ ಸಫರುಲ್ಲಾ, ಕಯ್ಯೂರು ಚೀಮೇನಿ ಗ್ರಾ.ಪಂ. ಅಧ್ಯಕ್ಷೆ ಎಂ.ಪಿ.ವಿ.ಜಾನಕಿ, ಪಡನ್ನ ಗ್ರಾ.ಪಂ. ಅಧ್ಯಕ್ಷೆ ಪಿ.ಸಿ.ಸುಬೈದಾ, ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಪಿ.ಬಿ.ಶೀಬಾ, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಟಿ.ಕೆ.ಪ್ರದೀಶ್, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಕೆ.ಪೂಮಣಿ, ಬ್ಲಾಕ್ ಸದಸ್ಯರಾದ ಪಿ.ಸುಕುಮಾರನ್, ಸನಲ್, ಅಶ್ರಫ್, ಎಂ.ಕೆ.ಶ್ರೀಲತಾ, ಸಿ.ಟಿ.ಮುಹಮ್ಮದಲಿ, ಎ.ಪಿ.ಸುನೀರ, ವಿ.ಪಿ.ಶಾಹಿನಾ, ಎಂ.ಟಿ.ಪಿ.ಸಿಂಧು, ಕೆ.ಪಿ.ರವೀಂದ್ರನ್, ಯೋಜನಾ ಉಪಾಧ್ಯಕ್ಷ ಎ.ಎಂ. ಬಾಲಕೃಷ್ಣನ್ ಮಾತನಾಡಿದರು. ಬ್ಲಾಕ್ ಪಂಚಾಯತ್ ಕಾರ್ಯದರ್ಶಿ ಟಿ.ರಾಗೇಶ್ ಸ್ವಾಗತಿಸಿ, ಮುಖ್ಯ ಅಧಿಕಾರಿ ವಾಸುದೇವನ್ ಎರುವತ್ ವಂದಿಸಿದರು.

ಸುತ್ತ ಮುತ್ತ

ಸಹಾಯಧನ ವಿತರಣೆ

ಕುಂದಾಪುರ: ಜನತಾ ಪಿಯು ಕಾಲೇಜ್ ಹೆಮ್ಮಾಡಿ, ಕುಲಾಲ ಸಮಾಜ ಸುಧಾರಕ ಸಂಘ ಕುಂದಾಪುರ, ಜೇಸಿಐ ಕುಂದಾಪುರ ಸಿಟಿ, ಪ್ರಗತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ಹೆಮ್ಮಾಡಿ ಮತ್ತು ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಕುಂದಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಟೀಮ್ ಈಶ್ವರ ಮಲ್ಪೆ ಸಹಯೋಗದೊಂದಿಗೆ ಉಚಿತ ಕಿವಿಯ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ಹೆಮ್ಮಾಡಿಯ ಜನತಾ ಪದವಿಪೂರ್ವ ಕಾಲೇಜಿನ ವಠಾರದಲ್ಲಿ ಫೆ.20ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ನಡೆಯಲಿದೆ ಎಂದು ಸಂಘಟಕರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಫೆ. 23: ಜಮಾಬಂದಿ

ಕುಂದಾಪುರ: ಕುಂದಾಪುರ ತಾಲೂಕು ಪಂಚಾಯತ್‌ನ 2024-25ನೇ ಸಾಲಿನ ಜಮಾಬಂದಿ ಕಾರ್ಯಕ್ರಮ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಫೆ.23ರಂದು ಬೆಳಿಗ್ಗೆ 10.30ರಿಂದ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮೊದಲನೇ ಪುಟದಿಂದ

ವಿಷಪ್ರಾಶ

ಕೇವಲ ಐದು ದಿನಗಳಲ್ಲಿ ಈ ಆಘಾತಕಾರಿ ಸತ್ಯ ಬಹಿರಂಗಗೊಂಡಿದೆ. ಈ ಮೊದಲು ಈ ವಿಷಕಾರಿ ತ್ಯಾಜ್ಯಗಳು ನೇರವಾಗಿ ಸಮುದ್ರಕ್ಕೆ ಸೇರುತ್ತಿದ್ದವು. ಈ ಕೃತ್ಯವು ಭಾರತೀಯ ನ್ಯಾಯ ಸಂಹಿತೆ 2023ರ ವಿವಿಧ ಸೆಕ್ಷನ್‌ಗಳ ಉಲ್ಲಂಘನೆಯಾಗಿದ್ದು, ನಾಗರಿಕರ ಮೂಲಭೂತ ಹಕ್ಕಿನ ಹರಣವಾಗಿದೆ. ಈ ಗಂಭೀರ ಪರಿಸ್ಥಿತಿಯ ಕುರಿತು 'ಸುರಾಜ್ಯ ಅಭಿಯಾನ'ವು ಜಿಲ್ಲಾಧಿಕಾರಿ ಅವರಿಗೆ ಅಪರ ಜಿಲ್ಲಾಧಿಕಾರಿ ರಾಜು ಕೆ. ಅವರ ಮೂಲಕ ಮನವಿ ಸಲ್ಲಿಸಿ ತಕ್ಷಣದ ಕ್ರಮಕ್ಕೆ ಆಗ್ರಹಿಸಿದೆ. ಮಾಲಿನ್ಯದ ಮೂಲ ಪತ್ತೆಹಚ್ಚಿ ತಪ್ಪಿತಸ್ಥ ಕೈಗಾರಿಕೆಗಳ ಪರವಾನಗಿ ರದ್ದುಗೊಳಿಸಬೇಕು, ನದಿ ನೀರನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಬೇಕು ಮತ್ತು ಬಾಧಿತ ಜನರಿಗಾಗಿ ತಕ್ಷಣ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಬೇಕು ಎಂದು ಪ್ರಶಾಂತ್ ಕಾಂಚನ್ ಅವರು ಒತ್ತಾಯಿಸಿದ್ದಾರೆ. ವಿಳಂಬ ಧೋರಣೆಯು ಪರಿಸರಕ್ಕೆ ಮತ್ತಷ್ಟು ಹಾನಿ ಉಂಟುಮಾಡಲಿದ್ದು, ಜಿಲ್ಲಾಡಳಿತವು ತಕ್ಷಣ ಕಾರ್ಯಪ್ರವೃತ್ತರಾಗಬೇಕು ಎಂದು ವಿನಂತಿಸಲಾಗಿದೆ.

ಉದ್ಯಮಿಗಳಾದ ಎಂ. ಜೆ. ಶೆಟ್ಟಿ, ಭಾಸ್ಕರ್ ಕೋಲ್ನಾಡ್, ಅಮರನಾಥ್ ಶೆಟ್ಟಿ, ರಾಯಿಕಟ್ಟೆ ನಿವಾಸಿಗಳಾದ ತುಳಸಿದಾಸ್ ಕೂಳೂರು, ಅವರೆಲ್, ವಕೀಲರಾದ ಸುಷ್ಮಾ, ಈಶ್ವರ್ ಕೊಟ್ಟಾರಿ, ಜಲಜಾಕ್ಷಿ, ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ದಿನಕರ ಪೂಜಾರಿ ಉಪಸ್ಥಿತರಿದ್ದರು.

ಪ್ರತ್ಯೇಕ ಕೌಂಟರ್

ಅದಕ್ಕೆ ತಹಸೀಲ್ದಾರರು ಸಮ್ಮತಿಯನ್ನು ಸೂಚಿಸಿದ್ದರು. ನಿರ್ಣಯವನ್ನೂ ಮಾಡಲಾಗಿತ್ತು. ಆದರೆ ಜನಸ್ಪಂದನ ಆಗಿ ತಿಂಗಳುಗಳೇ ಕಳೆದಿದ್ದರೂ ಪ್ರತ್ಯೇಕ ಕೌಂಟರಿನ ವ್ಯವಸ್ಥೆ ಅನುಷ್ಠಾನಗೊಂಡಿರಲಿಲ್ಲ. ಕೊಯ್ಯೂರಿನ ಹಿರಿಯ ನಾಗರಿಕ ಜಿ.ಕೆ. ಶರ್ಮಾ ಅವರು ಕೂಡಲೇ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದರು. ಆದರೆ ಅಲ್ಲಿನ ವ್ಯವಸ್ಥೆ ಮಾತ್ರ ಜಪ್ಪಯ್ಯ ಅಂದರೂ ಕಿವಿಗೊಡುತ್ತಿರಲಿಲ್ಲ. ಆದರೆ ಗುರುವಾರ ಶರ್ಮಾ ಅವರ ತೀವ್ರ ಒತ್ತಡದ ಮೇರೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಯಿತು. ಉಳಿದ ಇಲಾಖೆಗಳಲ್ಲಿ ಯಾವಾಗ ಆಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಕುಖ್ಯಾತಿ ಖಚಿತ

ಶೋಧ ಕಾರ್ಯಗಳಿಗೆ ಜಿಲ್ಲಾಡಳಿತದಿಂದ ನಡೆಸುವ ಲಕ್ಷಾಂತರ ರೂಪಾಯಿ ಖರ್ಚಿನ ಹೊರೆಯನ್ನು ಉಳಿಸಿ, ಆತ್ಮಹತ್ಯೆ ನಡೆಸದಂತೆ ಮನಪರಿವರ್ತಿಸುವ ಸಲುವಾಗಿ ಕಳೆದ ಐದು ವರುಷಗಳ ಹಿಂದೆ ಮಂಗಳೂರು ನಗರಾಭಿವೃದ್ಧಿ ಇಲಾಖೆಯ 63 ಲಕ್ಷ ರೂಪಾಯಿ ಅನುದಾನದಿಂದ ನೇತ್ರಾವತಿ ಸೇತುವೆಯುದ್ದಕ್ಕೂ ಫೆನ್ಸಿಂಗ್ ಮತ್ತು ಸಿಸಿಟಿವಿಯನ್ನು ಅಳವಡಿಸಲಾಗಿತ್ತು. ಕಳೆದ ಐದು ವರುಷಗಳಲ್ಲಿ ಇಬ್ಬರು ಮಾತ್ರ ಸೇತುವೆ ಆವರಣ ಗೋಡೆಗೆ ಅಳವಡಿಸಿದ ಪೈಪ್‌ಲೈನ್ ಮೂಲಕ ಹಾದು ಹೋಗಿ ಪ್ರಯಾಸ ಪಟ್ಟು ನದಿಗೆ ಜಿಗಿದು ಆತ್ಮಹತ್ಯೆಗೈದದ್ದು ಬಿಟ್ಟರೆ ಫೆನ್ಸಿಂಗ್ ಅಳವಡಿಕೆಯ ಯೋಜನೆಯು ಬಹುತೇಕ ಫಲಶ್ರುತಿ ಕಂಡಿತ್ತು.

ಶ್ವಾನ ದಾಳಿ

ಮಗುವಿನ ಚೀರಾಟ ಕೇಳಿ ಸ್ಥಳೀಯ ಮನೆಯವರು ಬಂದು ನಾಯಿಯಿಂದ ಮಗುವನ್ನು ರಕ್ಷಿಸಿ ಮಂಗಳೂರು ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದ್ದಾರೆಂದುತಿಳಿದು ಬಂದಿದೆ.

ಒಂದೇ ವಾರದಲ್ಲಿ ಬಂಟ್ವಾಳ ತಾಲೂಕಿನಲ್ಲಿ ಬೀದಿ ನಾಯಿ ದಾಳಿಯ ಎರಡನೇ ಪ್ರಕರಣ ಇದಾಗಿದೆ. ಬೀದಿ ನಾಯಿಗಳ ಬಗ್ಗೆ ಸ್ಥಳೀಯಾಡಳಿತ ಸಂಸ್ಥೆ ಯಾವುದೇ ಸೂಕ್ತ ಕ್ರಮ ತೆಗೆದುಕೊಳ್ಳದಿರುವುದರಿಂದ ಇಂತಹ ಪ್ರಕರಣಗಳು ಮರುಕಳಿಸುತ್ತಲೆ ಇದೆ.

ಗ್ರಾಮೀಣ ಭಾಗದಲ್ಲಿ ಮಾತ್ರವಲ್ಲ ನಗರ ಪ್ರದೇಶದಲ್ಲು ಬೀದಿ ನಾಯಿಗಳ ಉಪಟಳ ಅತೀಯಾಗಿದೆ.ವಿಚಿತ್ರವೆಂದರೆ ಬಿ.ಸಿ.ರೋಡಿನ ಆಡಳಿತಸೌಧದ ಮುಂಭಾಗದಲ್ಲೇ ಬೀದಿ ನಾಯಿಗಳು ಬೀಡುಬಿಟ್ಟಿವೆ.ಬಂಟ್ವಾಳ ನಗರದಲ್ಲಂತು ದ್ವಿಚಕ್ರ,ಕಾರುಗಳನ್ನು ಬೆನ್ನಟ್ಟಿ ಆತಂಕವನ್ನು ಸೃಷ್ಟಿಸುವ ಬೀದಿ ನಾಯಿಗಳ ಹಾವಳಿಗೆ ಪುರಸಭೆಯಿಂದ ಇನ್ನು ಕಡಿವಾಣ ಹಾಕಲು ಸಾಧ್ಯವಾಗಿಲ್ಲ

ಕಾಯಬೇಕು!

ಇಂತಹ ರಸ್ತೆಗೆ ಅಡ್ಡಲಾಗಿ ಗೇಟ್‌ಗಳ ಬಳಿ ಕಿ.ಮೀ ಗಟ್ಟಲೆ ವಾಹನ ಜಮಾವಣೆಯಾಗುತ್ತದೆ. ಅದರಲ್ಲಿ ಅತ್ಯಂತ ಜನನಿಬಿಡ ಪ್ರದೇಶವಾದ ಹಡವಿನಕೋಣೆ ರಸ್ತೆಯಲ್ಲಿ ರೈಲ್ವೆ ಗೇಟ್‌ನಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗಿ ಪರಿಣಮಿಸುತ್ತಿದೆ. ಮೊದಲಿನ ದಿನಕ್ಕೆ ಒಂದೆರಡು ರೈಲುಗಳು ಮಾತ್ರ ಸಂಚರಿಸುತ್ತಿದ್ದು, ಅಷ್ಟೇನೂ ಸಮಸ್ಯೆಗಳಿರಲಿಲ್ಲ. ಆದರೆ ಪ್ರಸ್ತುತ ಹತ್ತಾರು ರೈಲುಗಳು ಸಂಚರಿಸುವ ಕಾರಣ ಗಂಟೆಗಟ್ಟಲೆ ಕಾಯಬೇಕಾಗುತ್ತದೆ.

ಸಂಜೀವಿನಿ ಗೋಧಾಮದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ | ಋತ್ವಿಜರ ಆಗಮನ

ಇಂದು, ನಾಳೆ ಮುನಿಯಾಲು ಏಕಪವಿತ್ರ ಶ್ರೀಮನ್ನಾಗಮಂಡಲ

ಕಾರ್ಕಳ: ಕೃಷಿಲೋಕ ಮುನಿಯಾಲಿನ ಗೋಧಾಮವನ್ನು ಕಂಡು ಯುವಕರು ಕೃಷಿಯಲ್ಲಿ ತೊಡಗಿ ಸುಂದರ ಬದುಕು ಕಟ್ಟಿಕೊಳ್ಳಬೇಕು ಎಂದು ಪ್ರಕೃತಿಯಿಂದ ಪ್ರಕೃತಿಗೆ ಎಂಬ ವಿನೂತನ ಪರಿಕಲ್ಪನೆಯಲ್ಲಿ ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಫೆ. 21ರ ತನಕ ನಡೆಯುವ ಪಾರಂಪರಿಕ ಸಂಪ್ರದಾಯದಂತೆ ದೊಂದಿ ಬೆಳಕಿನಲ್ಲಿ ನಡೆಯುವ ಭಕ್ತಿಭಾವಪೂರ್ಣ ಏಕಪವಿತ್ರ ಶ್ರೀಮನ್ನಾಗಮಂಡಲಕ್ಕೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಗುರುವಾರ ಭಕ್ತಿ ವೈಭವದ ಚಾಲನೆ ನೀಡಲಾಯಿತು.

ಮುನಿಯಾಲು ಸಂಜೀವಿನಿ ಗೋಧಾಮದ ಸಂಸ್ಥಾಪಕ ಡಾ.ಜಿ. ರಾಮಕೃಷ್ಣ ಆಚಾರ್ ಮತ್ತು ಕುಟುಂಬಸ್ಥರು ವಿದ್ವಾನ್ ಕೊರಂಗ್ರಪಾಡಿ ಕುಮಾರಗುರು ತಂತ್ರಿಗಳ ಸಹಿತ ಋತ್ವಿಜರನ್ನು ಸ್ವಾಗತಿಸಿದರು. 6 ಕಾಯಿ ಗಣಯಾಗ, ಉಗ್ರಾಣ ಮುಹೂರ್ತ, ಅನ್ನಾರಾಧನ ಮುಹೂರ್ತ ಸಹಿತ ವಿವಿಧ ಧಾರ್ಮಿಕ ವಿಧಿವಿಧಾನಗಳು ವಿದ್ವಾನ್ ಕೊರಂಗ್ರಪಾಡಿ ಕುಮಾರಗುರು ತಂತ್ರಿಗಳ ನೇತೃತ್ವದಲ್ಲಿ ವಾಸುದೇವ ಭಟ್ ಸಹಕಾರದಲ್ಲಿ ನಡೆಯಿತು. ಮುನಿಯಾಲು ಸಂಜೀವಿನಿ ಗೋಧಾಮ ಸಂಸ್ಥಾಪಕ ಡಾ.ಜಿ. ರಾಮಕೃಷ್ಣ ಆಚಾರ್, ಸವಿತಾ ಆರ್. ಆಚಾರ್, ಅನುಷಾ ಆಚಾರ್, ಪ್ರಜ್ವಲ್, ಆಚಾರ್, ಪೂಜಾ ಆಚಾರ್, ತೇಜಸ್ ಆಚಾರ್, ರಕ್ಷಿತ್ ಆಚಾರ್, ಕುಟುಂಬಸ್ಥರು, ಶ್ರೀಮನ್ನಾಗಮಂಡಲ ಸೇವಾ ಸಮಿತಿ ಅಧ್ಯಕ್ಷ ದೇವಿಪ್ರಸಾದ ಶೆಟ್ಟಿ ಸಾಣೂರುಗುತ್ತು, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಕಾಂತ ಶೆಟ್ಟಿ ಕಾರ್ಕಳ, ದಾಮೋಧರ ಶರ್ಮ ಬಾರ್ಕೂರು, ಅರವಿಂದ ಆಚಾರ್ಯ ಬೆಳುವಾಯಿ, ಪ್ರಭಾಕರ ಆಚಾರ್ಯ ಗುಡ್ಡೆಯಂಗಡಿ, ಮಾರ್ಗದರ್ಶಕರಾದ ಸುಕೇಶ ಹೆಗ್ಡೆ ಕಡ್ತಲ, ಮುನಿಯಾಲು ದಿನೇಶ ಪೈ, ಸಂತೋಷ ಅಮೀನ್, ಜ್ಯೋತಿ ಹರೀಶ್, ನಾಗಪ್ಪಯ್ಯ ಆಚಾರ್ಯ ಗುಜ್ಜಾಡಿ, ಪ್ರಮುಖರಾದ ಡಾ. ಹರೀಶ ಆಚಾರ್ಯ ಜಲಕದಕಟ್ಟೆ ಮಂಗಳೂರು, ಉಪೇಂದ್ರ ಆಚಾರ್ಯ ಪೆರ್ಡೂರು, ಡಾ.ಕೆ. ಸುದರ್ಶನ್ ಹೆಬ್ಬಾರ್ ಮುನಿಯಾಲು, ಗೋಪಿನಾಥ ಭಟ್ ಮುನಿಯಾಲು, ಬೆಳುವಾಯಿ ಸೀತಾರಾಮ ಆಚಾರ್ಯ ಭಾಗವಹಿಸಿದ್ದರು.



ಸಕಲ ಸಿದ್ಧತೆ

ಸಕಲ ಸಿದ್ಧತೆ ಶ್ರೀಮನ್ನಾಗಮಂಡಲದ ಯಶಸ್ಸಿಗೆ ಸಕಲ ಸಿದ್ಧತೆಗಳು ಭರದಿಂದ ನಡೆಯುತ್ತಿದೆ. ಡಾ.ಜಿ.ರಾಮಕೃಷ್ಣ ಆಚಾರ್ ಮಾರ್ಗದರ್ಶನದಲ್ಲಿ ಅಧ್ಯಕ್ಷ ದೇವಿಪ್ರಸಾದ ಶೆಟ್ಟಿ ಸಾಣೂರುಗುತ್ತು, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಕಾಂತ ಶೆಟ್ಟಿ ಕಾರ್ಕಳ ಮತ್ತು ದಾಮೋಧರ ಶರ್ಮ ಬಾರ್ಕೂರು ಹಾಗೂ ಪ್ರಧಾನ ಸಮಿತಿಯ ಗೌರವಾಧ್ಯಕ್ಷರು, ಜೊತೆಕಾರ್ಯದರ್ಶಿಗಳು, ಮಾರ್ಗದರ್ಶಕರು ಮತ್ತು ವಿವಿಧ ಉಪಸಮಿತಿಗಳು ಅಭೂತಪೂರ್ವ ಮುನಿಯಾಲು ಶ್ರೀಮನ್ನಾಗಮಂಡಲದ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ.

ಇಂದಿನ ಕಾರ್ಯಕ್ರಮ

ಫೆ. 20ರಂದು ಶ್ರೀಮನ್ನಾಗಮಂಡಲದಲ್ಲಿ ಸಂಜೆ ಶ್ರೀನಿವಾಸ ಸಭಾಮಂಟಪದಲ್ಲಿ ಭತ್ತದ ತಳಿಗಳ ಸಂರಕ್ಷಕ, ಕೃಷಿಕ ಋಷಿ ಬಿ.ಕೆ. ದೇವರಾಯ ಮಿತ್ತಬಾಗಿಲು ಮೂಡಬಿದರೆ ಎಸ್‌ಕೆಎಫ್ ಸಂಸ್ಥೆ ನೀಡುವ ನೂತನ ಪ್ರಥಮ ರೈತಪೀಠ ಪ್ರಶಸ್ತಿಯನ್ನು ಸ್ವೀಕರಿಸುವರು. 'ರೈತಪೀಠ-ಇದು ಈ ನೆಲದ ಜ್ಞಾನಪೀಠ' ಕೃತಿ ಬಿಡುಗಡೆಗೊಳ್ಳಲಿದೆ. ಮಹಾರಾಷ್ಟ್ರ ಕೊಲ್ಲಾಪುರ ಸಿದ್ದಗಿರಿ ಮಠದ ಪೂಜ್ಯಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿ, ಬೆಳಗಾವಿ ನಿಡಸೋಸಿ ಶ್ರೀ ದುರದುಂಡೀಶ್ವರ ಸಿದ್ದಸಂಸ್ಥಾನದ ಪೂಜ್ಯಶ್ರೀ ನಿಜಲಿಂಗೇಶ್ವರ ಸ್ವಾಮೀಜಿ ಸಾನಿಧ್ಯದಲ್ಲಿ ಅಧ್ಯಕ್ಷತೆಯನ್ನು ಮೂಡುಬಿದರೆ ಆಳ್ವಾಸ್ ಎಜುಕೇಶನ್ ಫೌಂಡೇಶನ್ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ವಹಿಸಲಿದ್ದಾರೆ. ಕಾರ್ಕಳದ ಕಾಂಗ್ರೆಸ್ ನಾಯಕ ಮುನಿಯಾಲು ಉದಯಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಉದಯಕುಮಾರ್ ಶೆಟ್ಟಿ, ಮಂಗಳೂರು ವಿಶ್ವಕರ್ಮ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಹರೀಶ ಆಚಾರ್ಯ ಜಲಕದಕಟ್ಟೆ, ಮಂಗಳೂರು ಎಸ್‌ಕೆಜಿಐ ಕೋಆಪರೇಟಿವ್ ಸೊಸೈಟಿ ಅಧ್ಯಕ್ಷ ಪೆರ್ಡೂರು ಉಪೇಂದ್ರ ಆಚಾರ್ಯ ಉಪಸ್ಥಿತರಿರುವರು.

ಸನಾತನ ಸಂಸ್ಥೆ ರಾಮನಾಥಿ ಆಶ್ರಮಕ್ಕೆ ಶ್ರೀಮದ್ ವಿದ್ಯಾಧೀಶತೀರ್ಥರು ಭೇಟಿ



ಉಡುಪಿ: ಸನಾತನ ಸಂಸ್ಥೆಯು ರಾಮರಾಜ್ಯ ನಿರ್ಮಾಣಕ್ಕಾಗಿ ಕಾರ್ಯಪ್ರವೃತ್ತವಾಗಿರುವುದು ಶ್ಲಾಘನೀಯ ವಿಷಯ ವಾಗಿದೆ. ಪ್ರತಿಯೊಬ್ಬರೂ ಮನೆಯಲ್ಲಿ ರಾಮರಾಜ್ಯ ನಿರ್ಮಿಸಿದರೆ, ದೇಶದಲ್ಲಿ ರಾಮರಾಜ್ಯ ನಿರ್ಮಾಣವಾಗಲು ಹೆಚ್ಚು ಸಮಯ ಹಿಡಿಯುವುದಿಲ್ಲ ಎಂದು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಸ್ವಾಮೀಜಿ ಪ್ರತಿಪಾದಿಸಿದರು.

ಗೋವಾದ ಫೋಂಡಾದ ರಾಮನಾಥಿಯಲ್ಲಿರುವ ಸನಾತನ ಸಂಸ್ಥೆಯ ಮುಖ್ಯ ಆಶ್ರಮಕ್ಕೆ ಅವರು ಭೇಟಿ ನೀಡಿ ಮಾತನಾಡಿದರು.

ಸನಾತನದ ಸಂತ ಪೃಥ್ವಿರಾಜ್ ಹಜಾರೆ ಸ್ವಾಮೀಜಿ ಅವರನ್ನು ಭಕ್ತಿಪೂರ್ವಕವಾಗಿ ಸ್ವಾಗತಿಸಿದರು. ರಾಷ್ಟ್ರೀಯ ವಕ್ತಾರರಾದ ಚೇತನ್ ರಾಜಹಂಸ, ಸನಾತನದ ಸಾಧಕ ನಿಷಾದ್ ದೇಶಮುಖ್ ಅವರು ಸ್ವಾಮೀಜಿಗೆ ಆಶ್ರಮ ದರ್ಶನ ಮಾಡಿಸಿದರು. ಶ್ರೀ ರಾಮನಾಥ ದೇವಸ್ಥಾನ ಸಮಿತಿ ಅಧ್ಯಕ್ಷ ವಲ್ಲಭಕುಂಕಳ್ಳಿಕ್ಕರ್, ನ್ಯಾಯವಾದಿ ರಾಜೇಶ್ ತಳವಲಿಕರ್, ಸಮಿತಿ ಸದಸ್ಯ ಸಂಜೀವ್ ಬಾಲೆ, ರುದ್ರ ಕಾಪಡಿ, ಪರ್ತಗಾಳಿ ಮಠದ ಪುರೋಹಿತರಾದ ಸಂತೋಷ್ ಆಚಾರ್ಯ, ವಸಂತ ಆಚಾರ್ಯ ಇದ್ದರು.

> **ಈಶ್ವರ ಸೇವೆ**
> ಇತರರ ಜೀವನ ಆನಂದಮಯವಾಗಿಸಿ ಅದರ ಮೂಲಕ ಸ್ವತಃ ಆನಂದ ಪಡೆಯುವುದು ಎಂಬ ತತ್ವದ ಮೇಲೆ ಸನಾತನ ಸಂಸ್ಥೆ ನಡೆಯುತ್ತಿದೆ. ಎಲ್ಲರನ್ನು ಸಂಘಟಿಸಿ ಅವರಲ್ಲಿ ಈಶ್ವರನ ಸೇವೆ ಮೂಲಕ ಧರ್ಮ ಜಾಗೃತಿ ಮೂಡಿಸುತ್ತಿದೆ.
> • ವಿದ್ಯಾಧೀಶ ತೀರ್ಥ ಸ್ವಾಮೀಜಿ

ಕಾರ್ಕಳ ಜ್ಞಾನಸುಧಾ ಕಾಲೇಜಿನಲ್ಲಿ ಜೆಇಇ ಮೈನ್ ಸಾಧಕರಿಗೆ ಸನ್ಮಾನ



ಕಾರ್ಕಳ: ವಿದ್ಯಾರ್ಥಿ ಜೀವನದಲ್ಲಿ ಶಿಸ್ತುಬದ್ಧವಾದ ನಡೆ-ನಡವಳಿಕೆ ಇಟ್ಟುಕೊಂಡವನು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧಕನಾಗಿ ಹೊರಹೊಮ್ಮಲು ಸಾಧ್ಯ. ಇದಕ್ಕೆ ಪೂರಕವಾದ ವಾತಾವರಣವು ಜ್ಞಾನಸುಧಾದಲ್ಲಿದೆ ಎಂದು ಜ್ಞಾನಸುಧಾದ ಪೂರ್ವ ವಿದ್ಯಾರ್ಥಿ ಕಾಲೇಜಿನ ಪೂರ್ವ ವಿದ್ಯಾರ್ಥಿ, ಕ್ವಾಲಕಮ್ ಸಂಸ್ಥೆ ಇಂಜಿನಿಯರ್ ಮನ್ವಿತ್ ಪ್ರಭು ನುಡಿದರು.

ಅವರು ಕಾರ್ಕಳ ಜ್ಞಾನಸುಧಾದ ಪ್ರಾಂಗಣದಲ್ಲಿ ಜೆಇಇ ಮೈನ್ (ಬಿ.ಟೆಕ್) - 2026ರ ಮೊದಲ ಹಂತದ ಫಲಿತಾಂಶದಲ್ಲಿ ಕಾಲೇಜಿನ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು. ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸುಧಾಕರ ಶೆಟ್ಟಿ ಮಾತನಾಡಿದರು.

ಸಾಧರಿಗೆ ಸನ್ಮಾನ

ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ವತಿಯಿಂದ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಜೆ.ಇ.ಇ ಮೈನ್ (ಬಿ.ಟೆಕ್) - 2026ರ ಮೊದಲ ಹಂತದ ಫಲಿತಾಂಶದಲ್ಲಿ 97ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿದ ಸಾಧಕ ವಿದ್ಯಾರ್ಥಿಗಳಿಗೆ ಒಟ್ಟು 1.74 ಲಕ್ಷವನ್ನು ಪ್ರೋತ್ಸಾಹ ಧನ ವಿತರಿಸಲಾಯಿತು. ಟ್ರಸ್ಟಿಗಳಾದ ವಿದ್ಯಾವತಿ ಸುಧಾಕರ್ ಶೆಟ್ಟಿ, ಅನಿಲ್ ಕುಮಾರ್ ಜೈನ್, ಗಣಪತಿ ಪೈ, ಹಿತೈಷಿಗಳಾದ ದೇವೇಂದ್ರ ನಾಯಕ್, ತ್ರಿವಿಕ್ರಮ ಕಿಣಿ, ಸಿಇಒ ದಿನೇಶ್ ಎಂ. ಕೊಡವೂರ್, ಪಿ.ಆರ್.ಒ ಜ್ಯೋತಿ ಪದ್ಮನಾಭ ಭಂಡಿ, ಉಪಪ್ರಾಂಶುಪಾಲೆ ಸಾಹಿತ್ಯ ಹಾಗೂ ಉಷಾ ರಾವ್ ಯು, ಡೀನ್ ಅಕಾಡೆಮಿಕ್ಸ್ ಡಾ. ಮಿಥುನ್ ಯು., ಜ್ಞಾನಸುಧಾ ಎಂಟ್ರೆನ್ಸ್ ಅಕಾಡೆಮಿಯ ಸಂಯೋಜಕ ಸಂದೀಪ, ಡಿನ್ ಸ್ಟೂಡೆಂಟ್ಸ್ ಅಫೈರ್ ಶಕುಂತಲಾ ಎಂ ಸುವರ್ಣ ಇದ್ದರು. ಸಂಗೀತಾ ಕುಲಾಲ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಸಾಲಿಗ್ರಾಮ: 4 ಗ್ರಾಮಗಳ ನವೀಕೃತ ಗ್ರಾಮಾಡಳಿತ ಕಚೇರಿಯ ಉದ್ಘಾಟನೆ



ಕೋಟ: ಸಾಲಿಗ್ರಾಮ ಪಟ್ಟಣ ಪಂಚಾಯತ್ ಅನುದಾನದಲ್ಲಿ ಸಾಲಿಗ್ರಾಮದ ಕಾರ್ಕಡ- ಗುಂಡ್ಮಿ, ಚಿತ್ರಪಾಡಿ -ಪಾರಂಪಳ್ಳಿ ಗ್ರಾಮದ ನವೀಕೃತಗೊಂಡ ಗ್ರಾಮ ಆಡಳಿತ ಕಚೇರಿ ಉದ್ಘಾಟನಾ ಸಮಾರಂಭ ಗುರುವಾರ ಜರಗಿತು.

ಕುಂದಾಪುರ ಸಹಾಯಕ ಕಮಿಷನರ್ ರಶ್ಮಿ ಎಸ್. ನವೀಕೃತ ಕಟ್ಟವನ್ನು ಉದ್ಘಾಟನೆಗೈದರು. ಬ್ರಹ್ಮಾವರ ತಹಶೀಲ್ದಾರ್ ಶ್ರೀಕಾಂತ್ ಹೆಗ್ಡೆ, ಗ್ರೇಡ್ 2 ತಹಶೀಲ್ದಾರ್ ಅಶೋಕ್ ಭಟ್, ಕೋಟ ಆರ್.ಐ. ಮಂಜು ಬಿಲ್ಲವ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಅಜಯ್ ಭಂಡಾರ್ಕರ್, ಕಿರಿಯ ಆರೋಗ್ಯಧಿಕಾರಿ ಮಮತಾ, ಗ್ರಾಮ ಆಡಳಿತ ಅಧಿಕಾರಿ ಹರೀಶ್ ಎನ್.ಪಿ., ಅರುಣ್ ಎಂ.ಕೆ., ರಾಘವೇಂದ್ರ, ಗ್ರಾಮ ಸಹಾಯಕರಾದ ಕೆ ಮಂಜುನಾಥ ನಾಯರಿ, ಪ್ರದೀಪ್, ಸಿಬ್ಬಂದಿ ಅಶ್ವಿನಿ, ವೇದಮೂರ್ತಿ ಪಾರಂಪಳ್ಳಿ ಜನಾರ್ದನ ಅಡಿಗ, ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷರು, ಮಾಜಿ ಸದಸ್ಯರು,ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರು, ಪಟ್ಟಣ ಪಂಚಾಯತ್ ಸಿಬ್ಬಂದಿ ಉಪಸ್ಥಿತರಿದ್ದರು.

ಶ್ರೀ ಗುರುರಾಘವೇಂದ್ರ ಸ್ವಾಮಿ ಮಠದ ಸ್ವಾಗತ ಮಹಾದ್ವಾರ ಕಾಮಗಾರಿಗೆ ಶಿಲಾನ್ಯಾಸ



ಉಪ್ಪುಂದ: ಸನಾತನ ಧರ್ಮದ ಉಳಿವಿಗೆ ದೇವಾಲಯಗಳ ಪಾತ್ರ ಹಿರಿದು. ದೇವಾಲಯಗಳು ಸಗುಣೋಪಾಸನೆ ಮಾಡುವ ಪವಿತ್ರಸ್ಥಳ. ವಿಭಿನ್ನಹೆಸರುಗಳಿಂದ ಗುರುತಿಸುವ ದೇವರು ಎಲ್ಲವನ್ನು ಮೀರಿದ ಶಕ್ತಿ. ದೇವರ ನಾಮಸ್ಮರಣೆಯಿಂದ ಒಳಿತಾಗುತ್ತದೆ ಎಂದು ಯುಬಿಎಸ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಯು. ಬಿ. ಶೆಟ್ಟಿ ಹೇಳಿದರು.

ವತ್ತಿನೆಣೆ ಶ್ರೀ ಗುರುರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಗುರುವಾರ ತಮ್ಮ ಯುಬಿಎಸ್ ಟ್ರಸ್ಟಿನ ವತಿಯಿಂದ ಸೇವಾರ್ಥವಾಗಿ ನಿರ್ಮಿಸಿಕೊಡುವ ನೂತನ ಸ್ವಾಗತ ಮಹಾದ್ವಾರದ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು. ಚಾರಿತ್ರಿಕ ಇತಿಹಾಸವುಳ್ಳ ಶ್ರೀ ಗುರುರಾಘವೇಂದ್ರ ಸ್ವಾಮಿ ಮಠ ಪ್ರಸ್ತುತ ಗತ ವೈಭವಕ್ಕೆ ಮರಳಿದೆ. ಯಾವುದೇ ಕಾರ್ಯಗಳನ್ನುಮಾಡುವಾಗಸಾಕಷ್ಟು ಅಡ್ಡಿ, ಆತಂಕಗಳು ಬರುವುದು ಸಹಜ. ಆದರೆ ಎಲ್ಲರ ದುಖಃಗಳನ್ನು ದೂರ ಮಾಡುವ ಗುರುರಾಯರು, ಭಕ್ತರ ಪ್ರಾರ್ಥನೆಯಂತೆ ಹಾಗೂ ಸಮಿತಿಯವರ ಆಶಯದಂತೆ ಎಲ್ಲಾ ಅಡಚಣೆಗಳನ್ನು ದೂರಮಾಡಿ ದೇವಳದ ಎದುರು ಸುಂದರವಾದ ರಾಜಗೋಪುರ ನಿರ್ಮಾಣವಾಗಲಿದೆ ಎಂದರು.

ವಿವಿಧ ಪೂಜಾ, ವಿಧಿವಿಧಾನ

ಬೆಳಿಗ್ಗೆ ರಾಯರ ಸನ್ನಿಧಿಯಲ್ಲಿ ರಾಘವೇಂದ್ರ ಸ್ವಾಮಿ ಮಠದ ಅರ್ಚಕರಾದ ಸುಬ್ರಾಯ ನಾವಡ ಹಾಗೂ ಮುರುಳಿ ನಾವಡ ಇವರ ನೇತೃತ್ವದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳು ನಡೆಯಿತು. ಶ್ರೀ ಗುರುರಾಘವೇಂದ್ರ ಸ್ವಾಮಿ ಮಠ ಟ್ರಸ್ಟ್ ಅಧ್ಯಕ್ಷ ಸೂಲಿಯಣ್ಣ ಶೆಟ್ಟಿ, ಉಪಾಧ್ಯಕ್ಷ ಎಸ್. ರಾಜು ಪೂಜಾರಿ, ಕಾರ್ಯದರ್ಶಿ ಮಂಜುನಾಥ ಶೆಟ್ಟಿ ಎಸ್. ನಾಗಯ್ಯ ಶೆಟ್ಟಿ ಹೊಸ್ಮನೆ, ಸೇವಾ ಸಮಿತಿ ಸದಸ್ಯರು ಹಾಗೂ ಭಕ್ತಾದಿಗಳು ಹಾಜರಿದ್ದರು.

ಐರೋಡಿ: ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ



ಕೋಟ: ಐರೋಡಿ ಗ್ರಾಮ ಪಂಚಾಯತ ವ್ಯಾಪ್ತಿಯ ಬಾಳ್ಕುದ್ರು ಮತ್ತು ಐರೋಡಿ ಗ್ರಾಮದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆ, ವಿವಿಧ ಸವಲತ್ತು ಮಾಹಿತಿ, ಆರೋಗ್ಯ ಹಾಗೂ ಕಾನೂನು ಮಾಹಿತಿ ಕುರಿತು ವಿಶೇಷ ಸಭೆಯು ಇತ್ತೀಚೆಗೆ ಪಂಚಾಯತ್ ಸಭಾಂಗಣದಲ್ಲಿ ಜರಗಿತು.

ಗ್ರಾಮ ಪಂಚಾಯತ ಉಪಾಧ್ಯಕ್ಷೆ ಗೀತಾ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಬಿ.ಮೋಹನಚಂದ್ರ ಕಾಳಾವರಕರ್ ಕಾನೂನು ಹಾಗೂ ಸರಕಾರದ ಸವಲತ್ತುಗಳ ಕುರಿತು ಮಾಹಿತಿ ನೀಡಿದರು. ಪ್ರಾಥಮಿಕ ಆರೋಗ್ಯ ಕೇಂದ್ರ ಸಾಸ್ತಾನ ಇದರ ವೈದ್ಯಾಧಿಕಾರಿ ಡಾ.ರಾಘವೇಂದ್ರ ರಾವ್ ಆರೋಗ್ಯದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ನವೀನ ಕಾರಂತ , ಸುಬ್ರಹ್ಮಣ್ಯ ಆಚಾರ್ಯ, ಸುಧಾಕರ ಪೂಜಾರಿ, ಶೇಖರ ಪೂಜಾರಿ,ಸುಲೋಚನಾ, ಗ್ರಾಮ ಪಂಚಾಯತ್ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಪುನರ್ವಸತಿ ಕಾರ್ಯಕರ್ತರು, ಗ್ರಂಥಾಲಯ ಮೇಲ್ವಿಚಾರಕಿ, ಸಂಜೀವಿನಿ ಒಕ್ಕೂಟದವರು ಪರಿಶಿಷ್ಟ ಜಾತಿ ಮತ್ತು ಪಂಗಡದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಪಿಡಿಒ ಪ್ರಶಾಂತ ಸ್ವಾಗತಿಸಿ, ಲೆಕ್ಕ ಸಹಾಯಕಿ ಪೂರ್ಣಿಮಾ ವಂದಿಸಿದರು. ಕಾರ್ಯದರ್ಶಿ ವಿಜಯಾ ಭಂಡಾರಿ ನಿರೂಪಿಸಿದರು.

> **41 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ**
> ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ವತಿಯಿಂದ 41 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ಎಸ್‌ಕೆಪಿಎ ಕುಂದಾಪುರ-ಬೈಂದೂರು ವಲಯ ಪದಾಧಿಕಾರಿಗಳ ಪದಪ್ರದಾನ



ಕುಂದಾಪುರ: ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ (ಎಸ್‌ಕೆಪಿಎ) ದ.ಕ.-ಉಡುಪಿ ಜಿಲ್ಲೆ, ಕುಂದಾಪುರ-ಬೈಂದೂರು ವಲಯದ 2025-27 ನೇ ಸಾಲಿನ ಪದಪ್ರದಾನ ಸಮಾರಂಭ ವಂಡ್ಸೆಯ ಶ್ರಿಯಾ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಿತು.

ಸೌತ್ ಕೆನರಾ ಫೋಟೋಗ್ರಾರ್ಸ್ ಅಸೋಸಿಯೇಶನ್ ದ.ಕ.-ಉಡುಪಿ ಜಿಲ್ಲೆ ಜಿಲಾಧ್ಯಕ್ಷ ನವೀನ್ ರೈ ಪಂಜಳ ಅಧ್ಯಕ್ಷತೆ ವಹಿಸಿದ್ದರು. ಹೊಟೇಲ್ ಉದ್ಯಮಿ ಜೆ. ರತ್ನಾಕರ ಶೆಟ್ಟಿ, ಕುಂದಾಪುರ ವಕೀಲ ಕೆ. ರಾಜಾರಾಮ್ ಶೆಟ್ಟಿ, ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಜಿಲ್ಲಾ ಸಂಚಾಲಕ ಗೋಪಾಲ ಸುಳ್ಯ, ಉಡುಪಿ ಜಿಲ್ಲಾ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಕಟ್ಟಡ ಸಮಿತಿ ಅಧ್ಯಕ್ಷ ಆನಂದ ಎನ್. ಬಂಟ್ವಾಳ್, ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ವಾಸುದೇವ ರಾವ್, ಉಡುಪಿ ಜಿಲ್ಲಾ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಪ್ರಧಾನ ಕಾರ್ಯದರ್ಶಿ ಅಜಯ್ ಕುಮಾರ್, ಕುಂದಾಪುರ ಛಾಯಾಚಿತ್ರಗ್ರಾಹಕರ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಗಿರೀಶ್ ಜಿ.ಕೆ., ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ವಿವಿಧೋದ್ದೇಶ ಸಹಕಾರಿ ಸಂಘದ ನಿರ್ದೇಶಕ ಗಣೇಶ್ ಬೆನಕ, ಉಡುಪಿ ಜಿಲ್ಲಾ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಜೊತೆ ಕಾರ್ಯದರ್ಶಿ ಅಮೃತ್ ಬೀಜಾಡಿ, ಕುಂದಾಪುರ-ಬೈಂದೂರು ವಲಯದ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಸಲಹಾ ಸಮಿತಿ ಅಧ್ಯಕ್ಷ ನಾಗರಾಜ ರಾಯಪ್ಪನಮಠ, ಕುಂದಾಪುರ- ಬೈಂದೂರು ವಲಯದ ಸೌತ್ ಕೆನರಾ ಫೋಟೋ ಗ್ರಾಫರ್ಸ್ ಅಸೋಸಿಯೇಶನ್ ಗೌರವಾಧ್ಯಕ್ಷ ಸುರೇಶ್ ಸುರಭಿ, ದಿವಾಕರ ಶೆಟ್ಟಿ, ದಿನೇಶ್ ರಾಯಪ್ಪನಮಠ, ಹರೀಶ್ ಪೂಜಾರಿ ಹಂಗಳೂರು, ಉಪಾಧ್ಯಕ್ಷರಾದ ಚಂದ್ರಕಾಂತ್, ಪ್ರಸಾದ್ ನೇರಳಕಟ್ಟೆ, ರಮೇಶ್ ಹೆಂಗವಳ್ಳಿ ಇದ್ದರು.

ಅಕ್ಷಯ ಹೆಗ್ಡೆ ಮೊಳಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ನೂತನ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಉಡುಪಿ ಸರ್ಕಾರಿ ಬಾಲಕಿಯರ ಪ್ರೌಢಶಾಲಾ ಸಭಾಂಗಣದಲ್ಲಿ ಜಿಲ್ಲಾಡಳಿತ ವತಿಯಿಂದ ಛತ್ರಪತಿ ಶಿವಾಜಿ ಜಯಂತಿ

ಶಿವಾಜಿ ಆಡಳಿತ ವ್ಯವಸ್ಥೆ ಕೌಶಲ್ಯಗಳು ದೂರದೃಷ್ಟಿ ನಾಯಕತ್ವಕ್ಕೆ ಸಾಕ್ಷಿ: ಎಂ.ಎ.ಗಫೂರ್

ಉಡುಪಿ: ಧೈರ್ಯ, ಶೌರ್ಯ ಹಾಗೂ ಧೀಮಂತ ವ್ಯಕ್ತಿತ್ವಕ್ಕೆ ಹೆಸರುವಾಸಿಯಾಗಿದ್ದ ಛತ್ರಪತಿ ಶಿವಾಜಿಯು ತನ್ನ ಆಡಳಿತ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿದ್ದ ಕೌಶಲ್ಯಗಳು ಅವರ ದೂರದೃಷ್ಟಿ ನಾಯಕತ್ವಕ್ಕೆ ಸಾಕ್ಷಿಯಾಗಿದೆ ಎಂದು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ ಗಫೂರ್ ಹೇಳಿದರು.

ಸರ್ಕಾರಿ ಬಾಲಕಿಯರ ಪ್ರೌಢಶಾಲಾ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್ತುಮತ್ತು ಛತ್ರಪತಿ ಶಿವಾಜಿ ವಿವಿಧೋದ್ದೇಶ ಸಹಕಾರ ಸಂಘ ಉಡುಪಿ ಸಹಯೋಗದಲ್ಲಿ ನಡೆದ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.



ಚಿಕ್ಕ ವಯಸಿನಲ್ಲಿಯೇ ಅಸಾಧಾರಣ ನಾಯಕತ್ವ ಗುಣಗಳನ್ನು ಹೊಂದಿದ್ದ ಶಿವಾಜಿಯು, ಆರಂಭಿಕ ವರ್ಷಗಳಲ್ಲಿ ತಾಯಿಯ ಪ್ರೇರಣೆಯಿಂದ ಉತ್ತಮ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು ಸ್ತ್ರೀಯರ ಮೇಲೆ ಅಪಾರ ಗೌರವವನ್ನು ಹೊಂದಿದ್ದರು ಎಂದರು.

ಛತ್ರಪತಿ ಶಿವಾಜಿಯ ಆಡಳಿತವು ಪ್ರಗತಿಪರ ನೀತಿ ಹಾಗೂ ದಕ್ಷ ಆಡಳಿತದಿಂದ ಗುರುತಿಸಲಟ್ಟಿದ್ದು, ಆಡಳಿತದ ಅವಧಿಯಲ್ಲಿ ಜನರ ಭಾವನೆಗಳನ್ನು ಅರ್ಥೈಸಿಕೊಂಡು ಅವರು, ಅಂದಿನ ದಿನಗಳಲ್ಲಿಯೇ ಸಂವಿಧಾನದ ಅಡಿಯಲ್ಲಿ ಬದುಕಲು ಅವಕಾಶ ಮಾಡಿಕೊಟ್ಟಿದ್ದರು. ವೈರಿಗಳಿಂದ ಕರಾವಳಿಯನ್ನು ರಕ್ಷಿಸಲು ಸಮುದ್ರದಲ್ಲಿ ಬಲಿಷ್ಠ ನೌಕಾಪಡೆಯನ್ನು ಸನ್ನದ್ಧಗೊಳಿಸಿದ್ದರು. ಜಾತಿ, ಧರ್ಮ, ಭೇಧಗಳನ್ನು ಮೀರಿ ನೌಕಾ ಪಡೆಯಲ್ಲಿ ಅರ್ಹತೆಯ ಮೇಲೆ ಸಿಬ್ಬಂದಿ ನೇಮಿಸುವ ಮೂಲಕ ಸಮಗ್ರ ಆಡಳಿತಕ್ಕೆ ಉತ್ತೇಜನ ನೀಡಿದ್ದರು ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು ಮಾತನಾಡಿ, ಈ ಹಿಂದೆ ನಾಡು, ನುಡಿಗೆ ಸೇವೆ ಸಲ್ಲಿಸಿದ ಸಾಧಕರನ್ನು ಮುಂದೆಯೂ ಮರೆಯಬಾರದೆಂಬ ನೆಲೆಯಲ್ಲಿ ಹಾಗೂ ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಸರ್ಕಾರದ ವತಿಯಿಂದ ಜಯಂತಿ ಕಾರ್ಯಕ್ರಮಗಳನ್ನು ಆಚರಿಸಲಾಗುತ್ತಿದೆ ಎಂದರು. ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್ತು ಜಿಲ್ಲಾ ಅಧ್ಯಕ್ಷ ಪ್ರಕಾಶ್ ರಾವ್, ಛತ್ರಪತಿ ಶಿವಾಜಿ ವಿವಿಧೋದ್ದೇಶ ಸಹಕಾರ ಸಂಘದ ಜಿಲ್ಲಾ ಅಧ್ಯಕ್ಷ ದಿನೇಶ್ ನಾಯಕ್ ಉಪಸ್ಥಿತರಿದ್ದರು.

ಉಪನ್ಯಾಸ, ಸನ್ಮಾನ

ಎಂಐಟಿ ಮಣಿಪಾಲದ ನಿವೃತ್ತ ಡಾ. ನಾರಾಯಣ ಶೆಣೈ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಮರಾಠ ಸಮುದಾಯದ ಪವರ್‌ಲಿಫ್ಟಿಂಗ್‌ನಲ್ಲಿ ಸಾಧನೆಗೈದ ಪ್ರತಿಕ್ಷಾ ನಾಯಕ್ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿ, ಬಸ್ರೂರು ಶಾರದಾ ಕಾಲೇಜು ಉಪನ್ಯಾಸಕ ಅಕ್ಷಯ್ ಹೆಗ್ಡೆ ಮೊಳಹಳ್ಳಿ ಕಾರ್ಯಕ್ರಮ ನಿರೂಪಿಸಿ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಇಂದಿರಾ ಬಿ ವಂದಿಸಿದರು.